₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಶನಿವಾರ 07.12.2024 ಸಂಪುಟ:67 ಸಂಚಿಕೆ:212 ಪುಟಗಳು:12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಸ್ಟಾರ್ಕ್ ದಾಳಿಗೆ ಭಾರತ ತತ್ತರ

ಎರಡನೇ ಟೆಸ್ಟ್‌ನ ಮೊದಲ ಇನ್ನಿಂಗ್ಸ್‌ನಲ್ಲಿ 180 ರನ್‌ಗಳಿಗೆ ಭಾರತ ಆಲ್ ಔಟ್. ಮಿಚೆಲ್ ಸ್ಟಾರ್ಕ್‌ಗೆ ಆರು ವಿಕೆಟ್.

ಪುಟ ತೆರೆದಂತೆ...

ಇವರು ಜಾರ್ಜ್ ಸೊರೋಸ್ ಪ್ರತಿರೂಪ
ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ
ಸಂ.ಪುಟ | 6

ಆಯುರ್ವೇದವು ಮಾಂಸಾಹಾರದ ವಿರೋಧಿಯೇ?
ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ
ಸಂ.ಗಮ | 7

ಮಾತಂದ್ರೆ ಮಾತು

ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಮಹಾನ್ ದೇಶಭಕ್ತರು. ಸಂವಿಧಾನದ ಪ್ರತಿಯನ್ನು ಅವರು ಹಿಡಿದು ದೇಶಾದ್ಯಂತ ಭಾರಿ ಅಭಿಯಾನ ನಡೆಸಿದ್ದಾರೆ. ಅವರ ಧೋರಣೆಯನ್ನು ಎಲ್ಲರೂ ಸರಿಯಾಗಿ ಅರ್ಥಮಾಡಿಕೊಳ್ಳಬೇಕು.ರಾಹುಲ್‌ರನ್ನು ದೇಶದ್ರೋಹಿ ಎಂದು ಟೀಕಿಸುವವರೇ ದೇಶದ್ರೋಹಿಗಳು.

ಸಿದ್ದರಾಮಯ್ಯ
ಮುಖ್ಯಮಂತ್ರಿ

ದಾರಿದೀಪೋಕ್ತಿ

ನಮ್ಮ ಸ್ನೇಹಿತರು ಬದಲಾದರೆ ಅದಕ್ಕೆ ಅವರೊಂದೇ ಕಾರಣ ಅಲ್ಲ, ನಾವೂ ಕಾರಣ. ಆದರೆ ಅನೇಕರು ಇದಕ್ಕೆ ಸ್ನೇಹಿತರನ್ನು ದೂರುತ್ತಾರೆ. ಸ್ನೇಹಿತರ ಧೋರಣೆಗಳಿಗೆ ನಮ್ಮ ವರ್ತನೆಯೂ ಕಾರಣವಾಗಿರುತ್ತದೆ. ಯಾವತ್ತೂ ಸ್ನೇಹವನ್ನು ಒಬ್ಬರೇ ಪೊರೆಯಲು ಸಾಧ್ಯವಿಲ್ಲ.

ವಕ್ರತುಂಡೋಕ್ತಿ

ಶಾಪಿಂಗ್ ಮಾಡುವಾಗ ತಿರುಗಿ ತಿರುಗಿ ಸುಸ್ತಾಗಿ ಕಾಲು ನೋವಾದರೆ, ಶೂ ಅಂಗಡಿಯಲ್ಲಿ ಶಾಪಿಂಗ್ ಮಾಡಬಹುದು.

ಗಣಿ ಒತ್ತುವರಿದಾರರಿಂದ ದಂಡ ಸಹಿತ 6105 ಕೋಟಿ ರು. ರಾಯಲ್ಟಿ ವಸೂಲಿಗೆ ಸಂಪುಟ ನಿರ್ಧಾರ

ಗಣಿ ಭೂಮಿ ಮಾಲೀಕರಿಗೂ ಸುಂಕ | ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳಲ್ಲಿ ಕೋಟಾ ಮಿತಿ ಹೆಚ್ಚಳ

ಬೊಕ್ಕಸಕ್ಕೆ ಗಣಿ ರಾಜಧನ



ಬೆಂಗಳೂರು: ಅಕ್ರಮ ಕಲ್ಲು ಗಣಿಗಾರಿಕೆಯಿಂದ ಬಾಕಿ ಇರುವ ರಾಜಧನ ಸಂಗ್ರಹಣೆ ಹಾಗೂ ಖನಿಜಗಳನ್ನು ಹೊಂದಿರುವ ಭೂಮಿಗೆ ತೆರಿಗೆ ವಿಧಿಸಲು ರಾಜ್ಯ ಸಚಿವ ಸಂಪುಟ ನಿರ್ಧರಿಸಿದೆ.

ವಿಧಾನಸೌಧದಲ್ಲಿ ಸಿಎಂ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ಮಾಹಿತಿ ನೀಡಿದರು.

ಕಲ್ಲುಗಣಿ ಗುತ್ತಿಗೆ ಪ್ರದೇಶಗಳಲ್ಲಿ ಸಂಚಿತ ಆಡಿಟ್ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ಉಪಖನಿಜ ತೆಗೆದು ರಾಜಧನ ಪಾವತಿಸದೆ ಸಾಗಾಣಿಕೆ ಮಾಡಿರುವ ಹಾಗೂ ಗುತ್ತಿಗೆ ಪ್ರದೇಶಕ್ಕೆ ಹೊಂದಿಕೊಂಡಂತೆ ಒತ್ತುವರಿ ಮಾಡಿರುವ ಸಂಬಂಧ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ವಿಧಿಸಿರುವ ಒನ್ ಟೈಂ ಸೆಟಲ್‌ಮೆಂಟ್ ಮೂಲಕ ದಂಡ ಶುಲ್ಕ ಪಾವತಿಗೆ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ. ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು 2024ಕ್ಕೆ ಅನುಮೋದನೆ ನೀಡಲಾಗಿದೆ. ಅಕ್ರಮ ಕಲ್ಲು ಗಣಿಗಾರಿಕೆ ವಿಚಾರದ ಬಗ್ಗೆ ಚರ್ಚೆಯಾಗಿದೆ. ರಾಜಧನ(ರಾಯಲ್ಟಿ) ಪರಿಷ್ಕರಣೆ ಮಾಡಲು ಸಂಪುಟ ಸಭೆ ಒಪ್ಪಿಗೆ ನೀಡಿದೆ. ಇದರಿಂದ ಸರಕಾರ ಆದಾಯ ಹೆಚ್ಚಳವಾಗುತ್ತದೆ. ಗ್ಯಾರಂಟಿಗಳಿಗೆ ಹಣದ ಕೊರತೆಯಿಲ್ಲ. ಆದರೆ, ಅಭಿವೃದ್ಧಿ ಕೆಲಸಗಳು ಆಗಬೇಕಲ್ಲ, ಹಾಗಾಗಿ ರಾಜಧನ ತೆರಿಗೆ ಹಾಕಲಾಗಿದೆ ಎಂದು ತಿಳಿಸಿದರು.

ಕಟ್ಟಡ ಕಲ್ಲು, ಮೈನಿಂಗ್ ಕಲ್ಲು ಪ್ರತಿಟನ್‌ಗೆ 80 ರು. ರಾಜಧನ ನಿಗದಿಪಡಿಸಲಾಗಿದೆ. ಈ ಹಿಂದೆ ಟನ್‌ಗೆ 70 ರು. ಇತ್ತು. ರಾಯಲ್ಟಿ ಪಾವತಿಸದೆ ಖನಿಜ ಸಾಗಣೆ ಮಾಡಿದರೆ ದಂಡ ವಸೂಲಿಗೆ ತೀರ್ಮಾನಿಸಲಾಗಿದೆ. ಗಣಿಗಾರಿಕೆ ಮಾಲೀಕರು ಕಳೆದ ಆರೇಳು ವರ್ಷಗಳಿಂದ ದಂಡ ವಸೂಲಿಯಾಗದೆ 6,105 ಕೋಟಿ ರು. ಬಾಕಿ ಉಳಿದಿದೆ. ಡಿಜಿಟಲ್ ಮಾಡಿದ ಮೇಲೆ ಒತ್ತುವರಿ ಸಾಧ್ಯವಾಗುತ್ತಿಲ್ಲ. ಹೀಗಾಗಿ ಒನ್ ಟೈಮ್ ಸೆಟ್ಲಮೆಂಟ್‌ಗೆ ಅವಕಾಶ ಕಲ್ಪಿಸಲಾಗಿದೆ. ಇನ್ನು 1221 ಕೋಟಿ ರೂ. ರಾಯಲ್ಟಿ ಎಂದು ಪರಿಗಣಿಸಲಾಗಿದೆ ಎಂದರು.

ಜಮೀನು ಮಾಲೀಕರಿಂದಲೂ ತೆರಿಗೆ ಸಂಗ್ರಹ: ಖನಿಜಗಳನ್ನು ಹೊಂದಿರುವ ಭೂಮಿಗೆ ತೆರಿಗೆ ವಿಧಿಸಲು ಸರ್ಕಾರ ನಿರ್ಧರಿಸಿದೆ. ಯಾವುದೇ ಖನಿಜಗಳನ್ನು ಹೊಂದಿರುವ ಭೂಮಾಲೀಕರು ತೆರಿಗೆ ಪಾವತಿಸಬೇಕಾಗುತ್ತದೆ. ಬಾಕ್ಸೈಟ್, ಕ್ರೋಮ್ ಮತ್ತಿತರ ಖನಿಜ ಇರುವ ಭೂಮಿ ಒಂದು ಟನ್‌ಗೆ 100 ರೂ. ರಾಯಲ್ಟಿ ಹಾಕಲಾಗುವುದು. ಈ ತೆರಿಗೆ ಭೂ ಮಾಲೀಕರು ಕಟ್ಟಬೇಕಿದೆ. ರಾಜಧನ ಪರಿಷ್ಕರಣೆಯಿಂದ ಪ್ರತಿವರ್ಷ 311 ಕೋಟಿ ರು. ಹೆಚ್ಚುವರಿ ಆದಾಯ ನಿರೀಕ್ಷೆ ಇಟ್ಟುಕೊಳ್ಳಲಾಗಿದೆ. ಆ ಖನಿಜದ ಹಕ್ಕುಗಳು ಭೂಮಾಲೀಕರಿಗೆ ಸೇರುತ್ತವೆ. ಈವರೆಗೆ ಖನಿಜ ಹೊಂದಿರುವ ಭೂಮಿಗಳಲ್ಲಿ ಗಣಿಗಾರಿಕೆ ಮಾಡುತ್ತಿರುವ ಗುತ್ತಿಗೆದಾರರು ತೆರಿಗೆ, ರಾಜಧನ ಪಾವತಿ ಮಾಡುತ್ತಿದ್ದರು. ಇದೀಗ ಹೊಸ ದಾಗಿ ಖನಿಜ ಹಕ್ಕುಗಳ ತೆರಿಗೆ ತಿದ್ದುಪಡಿ ವಿಧೇಯಕ-2024 ಪ್ರಸ್ತಾಪಿಸಲಾಗಿದೆ. ವಿವಿಧ ಅದಿರು ನಿಕ್ಷೇಪ ಹೊಂದಿದ್ದು ಗಣಿಗಾರಿಕೆಗೆ ಅವಕಾಶ ನೀಡಿರುವ ಮಾಲೀಕರು ಜಮೀನಿನಿಂದ ಹೊರತೆಗೆದ ಪ್ರತಿ ಟನ್ ಅದಿರಿಗೆ 100 ರು. ಗಳಂತೆ ಏಕರೂಪದ ತೆರಿಗೆ ದರ ಪ್ರಸ್ತಾಪ ಮಾಡಲಾಗಿದೆ.

ಸಂಪುಟ ಇತರ ತೀರ್ಮಾನಗಳು

- ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಮತ್ತು ಸಂರಕ್ಷಣೆ ವಿಧೇಯಕಕ್ಕೆ ಅನುಮೋದನೆ ನೀಡಲು ಒಪ್ಪಿಗೆ
- ವಿಶ್ವಬ್ಯಾಂಕ್ ನೆರವಿನೊಂದಿಗೆ 2500 ಕೋಟಿ ವೆಚ್ಚದಲ್ಲಿ ಸರಕಾರಿ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಬಲವರ್ಧನೆಗೊಳಿಸುವ ಕ್ರಮ
- ಬಿಬಿಎಂಪಿ ವ್ಯಾಪ್ತಿಯ ಮುಖ್ಯ ಮತ್ತು ಉಪ ಮುಖ್ಯರಸ್ತೆಗಳ ಅಭಿವೃದ್ಧಿಗೆ ಕಾಮಗಾರಿಗಳ 694 ಕೋಟಿ ರುಗಳ ಘಟನೋತ್ತರ ಅನುಮೋದನೆ.
- ರಾಜ್ಯ ಸರಕಾರದ ಅಂತರ್ ನಿಗಮ ಠೇವಣಿಗಳಿಗೆ ಅಸ್ತು
- ಎಸ್‌ಸಿಪಿ/ಟಿಎಸ್‌ಪಿ ಯೋಜನೆಯಡಿ ಕಲ್ಯಾಣ ಕರ್ನಾಟಕ ಭಾಗದ ಸರಕಾರಿ ಶಾಲೆಗಳ ಪರಿಕರಕ್ಕಾಗಿ 4266.38 ಲಕ್ಷ ರು.ಅನುಮೋದನೆ.

ಔಷಧ ನಿಯಂತ್ರಣ, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ವಿಲೀನ

ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಹಾಗೂ ಔಷಧ ನಿಯಂತ್ರಣ ಇಲಾಖೆಗಳನ್ನು ವಿಲೀನಗೊಳಿಸಿ ಆಯುಕ್ತರು ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಎಂದು ಪದನಾಮೀಕರಿಸಲು ಸಭೆ ಒಪ್ಪಿಗೆ ನೀಡಿದೆ. ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇವರ ಆಡಳಿತಾತ್ಮಕ ನಿಯಂತ್ರಣ ದಡಿಯಲ್ಲಿ ಎರಡು ಇಲಾಖೆಗಳ ಎಲ್ಲ ಅಧಿಕಾರಿ ಹಾಗೂ ಸಿಬ್ಬಂದಿ ಕಾರ್ಯನಿರ್ವಹಿಸಲು ಅನುಮೋದನೆ ನೀಡಲಾಗಿದೆ. ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಹಾಗೂ ಔಷಧ ನಿಯಂತ್ರಣ ಇಲಾಖೆಯ ಕಾರ್ಯವೈಖರಿಗಳು ಬಹುತೇಕ ಒಂದೇ ರೀತಿಯಲ್ಲಿರುವುದರಿಂದ ಈ ಎರಡು ಇಲಾಖೆಗಳನ್ನು ವಿಲೀನಗೊಳಿಸಿ, ಆಯುಕ್ತರು, ಆಹಾರ ಸುರಕ್ಷತೆ ಮತ್ತು ಔಷಧ ನಿಯಂತ್ರಣ ಇಲಾಖೆ ಎಂದು ಮರು ಪದನಾಮೀಕರಿಸುವುದರಿಂದ ಇಲಾಖೆಯ ಕಾರ್ಯಗಳನ್ನು ಸುಗಮ ಹಾಗೂ ಪರಿಣಾಮಕಾರಿಯಾಗಿ ನಿರ್ವಹಿಸಲು ಸಾಧ್ಯವಾಗುತ್ತದೆ ಎಂದರು.

ಆರೋಗ್ಯ ಪ್ರಯೋಗಶಾಲೆಗಳ ಪರಿಕರ ಖರೀದಿಗೆ ಅನುಮೋದನೆ

ರಾಷ್ಟ್ರೀಯ ಉಚಿತ ರೋಗಪತ್ತೆ ಹಾಗೂ ಉಚಿತ ಔಷಧ ಸೇವೆಗಳ ಕಾರ್ಯಕ್ರಮದಡಿ ಉಪಕೇಂದ್ರಗಳ ಮಟ್ಟದಲ್ಲಿ 14 ಪ್ರಯೋಗಶಾಲಾ ಪರೀಕ್ಷೆಗಳು, ಗ್ರಾಮಾಂತರ ಹಾಗೂ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮಟ್ಟದಲ್ಲಿ 63 ಪ್ರಯೋಗಶಾಲಾ ಪರೀಕ್ಷೆಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳ ಮಟ್ಟದಲ್ಲಿ 97 ಪ್ರಯೋಗಶಾಲಾ ಪರೀಕ್ಷೆಗಳು, ತಾಯಿ ಮತ್ತು ಮಕ್ಕಳ ಆಸ್ಪತ್ರೆ ಹಾಗೂ ತಾಲೂಕು ಆಸ್ಪತ್ರೆಮಟ್ಟದಲ್ಲಿ 111 ಪ್ರಯೋಗಶಾಲಾ ಪರೀಕ್ಷೆಗಳು, ರಾಜ್ಯ ಮತ್ತು ಜಿಲ್ಲಾಮಟ್ಟದಲ್ಲಿ 134 ಪ್ರಯೋಗಶಾಲಾ ಪರೀಕ್ಷೆಗಳನ್ನು ಒದಗಿಸಬೇಕಾಗಿದೆ. ಪ್ರಯೋಗಾಲಯದ ಉಪಕರಣಗಳಿಗೆ 19.70 ಕೋಟಿ ರು. ಅನುದಾನ ನೀಡಲು ಸಂಪುಟ ಒಪ್ಪಿಗೆ ನೀಡಿದೆ ಎಂದು ತಿಳಿಸಿದರು.

ತಪ್ಪೆಸಗಿದ್ದರೆ ರಾಜೀನಾಮೆ ಸಚಿವ ದಿನೇಶ್ ಸವಾಲು

ಬಾಣಂತಿಯರ ಸಾವು: ಮುಗಿಯದ ತಲ್ಲಣ | ತನಿಖೆ ಬಳಿಕ ತಪ್ಪಿತಸ್ಥರ ಮೇಲೆ ಕ್ರಮ: ಸಿಎಂ | ಕೇಂದ್ರ, ರಾಜ್ಯ ಭಿನ್ನ ವರದಿ

ಬೆಂಗಳೂರು: ಬಾಣಂತಿಯರ ಸರಣಿ ಸಾವಿಗೆ ಕಾರಣವೆಂದಿದ್ದ ದ್ರಾವಣ ಸರಿಯಾಗಿದೆ ಎನ್ನುವ ವರದಿಯನ್ನು ಕೇಂದ್ರ ಪ್ರಯೋ ಗಾಲಯ ನೀಡಿದ ಬೆನ್ನಲ್ಲೇ, ಪ್ರಕರಣ ಮತ್ತೆ ಮುನ್ನಲೆಗೆ ಬಂದಿದೆ. ಈ ನಡುವೆ ಬಿಜೆಪಿ ಯವರು ಆರೋಗ್ಯ ಸಚಿವರ ರಾಜೀನಾಮೆ ಆಗ್ರಹಿಸಿದ್ದು, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು, 'ನನ್ನ ರಾಜೀನಾಮೆ ಯಿಂದ ಎಲ್ಲವೂ ಸರಿಹೋಗುವುದಿದ್ದರೆ ರಾಜೀನಾಮೆ ನೀಡಲು ಸಿದ್ಧ ಎನ್ನುವ ಮೂಲಕ ತಿರುಗೇಟು ನೀಡಿದ್ದಾರೆ.

ಸರಣಿ ಸಾವಿನ ಬೆನ್ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ತುರ್ತು ಸಭೆ ನಡೆಸಿ, ಡ್ರಗ್ ಕಂಟ್ರೋಲರ್ ಅನ್ನು ಅಮಾನತು ಮಾಡುವುದರೊಂದಿಗೆ ಸಮಗ್ರ ತನಿಖೆಗೆ ಆದೇಶ ನೀಡಲಾಗಿತ್ತು. ಆರಂಭದಲ್ಲಿ ಬಳ್ಳಾರಿ ಜಿಲ್ಲಾಸ್ಪತ್ರೆಯಲ್ಲಿ ಬಳಸಲಾದ ಐವಿ ದ್ರಾವಣದ ಸಮಸ್ಯೆ ಎಂದು ರಾಜ್ಯ ಪ್ರಯೋಗಾಲಯ ವರದಿ ನೀಡಿತ್ತು. ಆದರೆ ಇದೀಗ ಕೇಂದ್ರ ಸರಕಾರದ ಪ್ರಯೋಗಾಲಯದಲ್ಲಿ ದ್ರಾವಣ ಸರಿಯಿದೆ ಎನ್ನುವ ಅಂಶ ಬಂದಿರುವುದು ವಿವಾದವನ್ನು ಇನ್ನಷ್ಟು ದೊಡ್ಡದಾಗಿಸಿದೆ.

ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ ತನಿಖೆಗೆ ಆದೇಶಿಸಲಾಗಿದೆ. ತನಿಖೆಯ ವರದಿಯ ಬಳಿಕ ಕ್ರಮವಹಿಸು ವುದಾಗಿ ಹೇಳಿದರು.

ಇನ್ನೊಂದೆಡೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, ಔಷಧ ತಯಾರಿಸಿದ ಕಂಪನಿ ಮೇಲೆ ಕ್ರಮ ಕೈಗೊಳ್ಳುತ್ತಿದ್ದೇವೆ. ಮೃತ ಬಾಣಂತಿಯರ ಕುಟುಂಬಸ್ಥರಿಗೆ ಪರಿಹಾರ ಘೋಷಿಸಿದ್ದೇವೆ. ನಾವು ಪರೀಕ್ಷಿಸಿರುವ ದ್ರಾವಣವನ್ನು ಕೇಂದ್ರ ಲ್ಯಾಬ್ ಸರಿಯಿದೆ ಎಂದು ಹೇಳಿದೆ. ನ್ಯಾಯಾಲಯಕ್ಕೆ ಹೋದರೆ, ಕೇಂದ್ರದ ಲ್ಯಾಬ್ ಹೇಳಿದ್ದನ್ನು ಅದು ಒಪ್ಪುತ್ತದೆ. ಹಾಗಾಗಿ, ಇದರಲ್ಲಿ ತಾಂತ್ರಿಕ ಗೊಂದಲಗಳಿವೆ. ನಾವು ಯಾವುದನ್ನೂ ಮುಚ್ಚಿಹಾಕಲ್ಲ. ಟೆಂಡರ್ ಪ್ರಕ್ರಿಯೆ ಪರಿಶೀ ಲನೆ ಮಾಡಬೇಕು. ಒಳ್ಳೆಯ ಕಂಪನಿಗಳು ಟೆಂಡರ್‌ನಲ್ಲಿ ಭಾಗವಹಿಸಬೇಕು ಎಂದರು.

→ 4

> ನಾವು ಎಲ್ಲಿ ಎಡವಿದ್ದೇವು ಎಂಬ ಬಗ್ಗೆ ಪರಿಶೀಲಿಸುತ್ತೇವೆ. ಉಮಾ ಮಹದೇವನ್ ನೇತೃತ್ವದಲ್ಲಿ ಸಮಿತಿ ಮಾಡಿದ್ದೇವು. ಡ್ರಗ್ ಕಂಟ್ರೋಲರ್ ಅವರನ್ನು ಸಸ್ಪೆಂಡ್ ಮಾಡಿದ್ದೇವು. ಫಾರ್ಮಾ ಕಂಪನಿ ರಕ್ಷಿಸುವ ಕಾನೂನುಗಳಿವೆ. ಅವರಿಗೆ ಶಿಕ್ಷೆ ಕೊಡುವ ನಿಯಮ ಇಲ್ಲ. ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಲು ಆಗುತ್ತಿಲ್ಲ.
> – **ದಿನೇಶ್ ಗುಂಡೂರಾವ್**, ಆರೋಗ್ಯ ಸಚಿವ

> ಬಾಣಂತಿಯರ ಸಾವಿಗೆ ಸಂಬಂಧಿಸಿದಂತೆ ಈಗಾಗಲೇ ಸಭೆ ನಡೆಸಿ, ಡ್ರಗ್ ಕಂಟ್ರೋಲರ್ ಅವರನ್ನು ಅಮಾನತು ಮಾಡಲಾಗಿದೆ. ಮೃತ ಕುಟುಂಬಗಳಿಗೆ ಪರಿಹಾರ ನೀಡಲಾಗಿದೆ. ಮುಂದಿನ ದಿನದಲ್ಲಿ ತನಿಖೆಯ ವರದಿ ಕೈಸೇರಿದ ಬಳಿಕ ತಪ್ಪಿತಸ್ಥರ ವಿರುದ್ಧ ಕ್ರಮವಹಿಸಲಾಗುವುದು.
> – **ಸಿದ್ದರಾಮಯ್ಯ**, ಮುಖ್ಯಮಂತ್ರಿ

> ಬ್ಲ್ಯಾಕ್ ಲಿಸ್ಟ್ ಆದ ಕಂಪನಿಯಿಂದ ಐವಿ ಗ್ಲುಕೋಸ್ ಖರೀದಿಸಿದ್ದರು. ಬಳ್ಳಾರಿ ಸರಕಾರಿ ಮೆಡಿಕಲ್ ಕಾಲೇಜು ಆಸ್ಪತ್ರೆಯ ದುರ್ಘಟನೆಯಲ್ಲಿ 7 ಜನ ಬಾಣಂತಿಯರು ಮತ್ತು ಮಗು ಸಾವನ್ನಪ್ಪಿದ್ದಾರೆ. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ್ ಪಾಟೀಲ್ ಅಲ್ಲಿಗೆ ಭೇಟಿ ಕೊಟ್ಟಿಲ್ಲ.
> – **ಬಿ.ವೈ. ವಿಜಯೇಂದ್ರ**, ಬಿಜೆಪಿ ರಾಜ್ಯಾಧ್ಯಕ್ಷ

ಅಪಘಾತದಲ್ಲಿ ಐವರ ಸಾವು

ವಿಜಯಪುರ : ತಾಳಿಕೋಟೆಯ ಬಿಳೇಬಾವಿ ಕ್ರಾಸ್ ಬಳಿ ಕಾರು ಮತ್ತು ತೊಗರಿ ಕಟಾವು ವಾಹನದ ನಡುವೆ ಮುಖಾಮುಖಿ ಡಿಕ್ಕಿಯಾಗಿ ಕಾರಲ್ಲಿದ್ದ ಐವರು ಸ್ಥಳದಲ್ಲೇ ದುರ್ಮರಣಕ್ಕೀಡಾಗಿದ್ದಾರೆ. ಸತ್ತವರಲ್ಲಿ ಇಬ್ಬರು ಮಹಿಳೆಯರು ಮತ್ತು ಮೂವರು ಪುರುಷರು ಸೇರಿದ್ದಾರೆ. ಮೃತಪಟ್ಟವರನ್ನು ವಿಜಯಪುರ ತಾಲ್ಲೂಕಿನ ಅಲಿಯಾಬಾದ್‌ನ ನಿಂಗಪ್ಪಾ ಪಾಟೀಲ್ (55) ಶಾಂತವ್ವ ಶಂಕರ ಪಾಟೀಲ್ (45) ಭೀಮಶಿ ಸಂಕನಾಳ (65) ಶಶಿಕಲಾ ಜೈನಾಪುರ (50) ಮತ್ತು ದಿಲೀಪ್ ಪಾಟೀಲ್ (45) ಎಂದು ಗುರುತಿಸಲಾಗಿದೆ. ಕ್ರೂಸರ್ ವಾಹನವನ್ನು ಹಿಂದಿಕ್ಕುವ ಭರದಲ್ಲಿ ಕಾರು ತೊಗರಿ ಕಟಾವು ವಾಹನಕ್ಕೆ ಡಿಕ್ಕಿಯಾಗಿದೆ.

ರೈತರ ದಿಲ್ಲಿ ಚಲೋ ತಾತ್ಕಾಲಿಕ ಸ್ಥಗಿತ

ಅಂಬಾಲಾ(ಹರಿಯಾಣ): ಕನಿಷ್ಠ ಬೆಂಬಲ ಬೆಲೆಗೆ ಆಗ್ರಹಿಸಿ ದೆಹಲಿ ಚಲೋಗೆ ಕರೆ ನೀಡಿರುವ ಪಂಜಾಬ್ ರೈತರು, ಭಾನುವಾರದವರೆಗೆ ಪ್ರತಿಭಟನೆ ಮುಂದೂಡಿದ್ದಾರೆ. ಪೊಲೀಸರು ಅಶ್ರುವಾಯು ಸಿಡಿಸಿದ್ದರಿಂದ ಅನೇಕ ರೈತರು ಗಾಯಗೊಂಡಿದ್ದಾರೆ. ಹೀಗಾಗಿ ಪ್ರತಿಭಟನೆಯನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ ಎಂದು ತಿಳಿಸಿದ್ದಾರೆ. ಕೇಂದ್ರ ಸರ್ಕಾರದೊಂದಿಗೆ ಶನಿವಾರ ಮಾತುಕತೆ ನಡೆಸಲು ನಮ್ಮ ಒಪ್ಪಿಗೆ ಇದೆ ಎಂದು ರೈತ ಮುಖಂಡ ಶರ್ವಾನ್ ಸಿಂಗ್ ಪಂಧೇರ್ ಹೇಳಿದ್ದಾರೆ.

ಎಲ್ಲ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ

ರಾಜ್ಯಸಭೆಗೆ ಸಚಿವ ಚೌಹಾಣ್ ಮಾಹಿತಿ | ಪ್ರತಿಪಕ್ಷಗಳ ಧೋರಣೆಗೆ ತರಾಟೆ

ದೆಹಲಿ: ದೇಶದಲ್ಲಿ ಎಲ್ಲ ಕೃಷಿ ಉತ್ಪನ್ನಗಳನ್ನು ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ)ಯಲ್ಲಿ ಖರೀದಿಸಲಾಗುವುದು ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಶುಕ್ರವಾರ ರಾಜ್ಯಸಭೆಗೆ ಮಾಹಿತಿ ನೀಡಿದ್ದಾರೆ. ಎಲ್ಲ ಬೆಳೆಗಳಿಗೆ ಎಂಎಸ್‌ಪಿ ಜಾರಿಗೆ ಕೇಂದ್ರವನ್ನು ಒತ್ತಾಯಿಸಲು ರೈತರು ಕೈಗೊಂಡಿರುವ ಪ್ರತಿಭಟನೆ ತೀವ್ರಗೊಳ್ಳುತ್ತಿದ್ದಂತೆಯೇ ಕೇಂದ್ರ ಈ ನಿರ್ಧಾರ ಕೈಗೊಂಡಿರುವುದು ಗಮನಾರ್ಹ.

ರಾಜ್ಯಸಭೆಯ ಪ್ರಶ್ನೋತ್ತರ ಕಲಾಪದ ವೇಳೆ ಮಾತನಾಡಿದ ಶಿವರಾಜ ಸಿಂಗ್ ಚೌಹಾನ್, ರೈತರಿಗೆ ಎಂಎಸ್‌ಪಿ ಸಮಸ್ಯೆ ಕುರಿತ ಪ್ರಶ್ನೆಗಳಿಗೆ ಉತ್ತರವಾಗಿ ಈ ಭರವಸೆ ನೀಡಿದರು. ಕೇಂದ್ರ ಸರಕಾರವು ಎಲ್ಲ ಕೃಷಿ ಉತ್ಪನ್ನಗಳನ್ನು ಕನಿಷ್ಠ ಬೆಂಬಲ ಬೆಲೆಯಲ್ಲಿ ಖರೀದಿಸಲಿದೆ ಎಂದು ಭರವಸೆ ನೀಡುತ್ತೇನೆ ಎಂದು ದೃಢಪಡಿಸಿದರು.

ಮೋದಿ ಸರಕಾರದ ಭರವಸೆ: ಇದು ಮೋದಿ ಸರ್ಕಾರ ಮತ್ತು ಮೋದಿಯವರ ಭರವಸೆ ಎಂದ ಚೌಹಾಣ್, ಇದೇ ವೇಳೆ ಪ್ರತಿಪಕ್ಷದ ಸದಸ್ಯರನ್ನು ತರಾಟೆಗೆ ತೆಗೆದುಕೊಂಡರು. ಪ್ರತಿಪಕ್ಷದವರು ಅಧಿಕಾರದಲ್ಲಿದ್ದಾಗ, ಅವರು ಎಂಎಸ್ ಸ್ವಾಮಿನಾಥನ್ ಆಯೋಗದ ಶಿಫಾರಸುಗಳನ್ನು ಒಪ್ಪಲು ಸಾಧ್ಯವಿಲ್ಲ ಎಂದು ಷರಾ ಬರೆದಿದ್ದರು ಎಂದು ಟೀಕಿಸಿದರು. ತಮ್ಮ ಹೇಳಿಕೆಯಲ್ಲಿ ಕೇಂದ್ರ ಸಚಿವರು ಮಾಜಿ ಕೃಷಿ ಸಚಿವರಾದ ಕಾಂತಿಲಾಲ್ ಭೂರಿಯಾ, ಶರದ್ ಪವಾರ್ ಮತ್ತು ಕೆ.ವಿ ಥಾಮಸ್ ಅವರ ಹೆಸರನ್ನು ಪ್ರಸ್ತಾಪಿಸಿದರು.

ಪ್ರತಿಪಕ್ಷಗಳಿಂದ ರೈತರಿಗೆ ಅನ್ಯಾಯ: ಪ್ರತಿಪಕ್ಷಗಳು ಎಂದಿಗೂ ರೈತರನ್ನು ಗೌರವಿಸಿಲ್ಲ ಮತ್ತು ಲಾಭದಾಯಕ ಬೆಲೆಗಾಗಿ ರೈತರ ಬೇಡಿಕೆಗಳನ್ನು ಎಂದಿಗೂ ಗಂಭೀರವಾಗಿ ಪರಿಗಣಿಸಿಲ್ಲ ಎಂದು ಚೌಹಾಣ್ ದೂರಿದರು. 2019 ರಿಂದ ರೈತರಿಗೆ ಉತ್ಪಾದನಾ ವೆಚ್ಚದ ಮೇಲೆ ಶೇ. 50ರಷ್ಟು ಲಾಭವನ್ನು ನೀಡುವ ಮೂಲಕ ಕನಿಷ್ಠ ಬೆಂಬಲ ಬೆಲೆಯನ್ನು ಲೆಕ್ಕಹಾಕಲು ಪ್ರಧಾನಿ ನರೇಂದ್ರ ಮೋದಿ ನಿರ್ಧರಿಸಿದ್ದಾರೆ. ನಮ್ಮ ಸರ್ಕಾರವು ರೈತರಿಗೆ ಲಾಭದಾಯಕ ಬೆಲೆಗಳನ್ನು ನೀಡುತ್ತಿದೆ. ಕಳೆದ 3 ವರ್ಷಗಳಿಂದ ಭತ್ತ, ಜೋಳ, ಗೋಧಿ ಮತ್ತು ಸೋಯಾಬೀನ್ ಅನ್ನು ಉತ್ಪಾದನಾ ವೆಚ್ಚಕ್ಕಿಂತ 50 ಪ್ರತಿಶತದಷ್ಟು ಹೆಚ್ಚು ಖರೀದಿಸಲಾಗಿದೆ ಎಂದು ವಿವರಣೆ ನೀಡಿದರು.

ಸಿಆರ್‌ಆರ್ ಶೇ.4.50 ರಿಂದ 4ಕ್ಕೆ ಇಳಿಕೆ, ಬ್ಯಾಂಕ್‌ಗಳಿಗೆ ನಿರಾಳ

ರೆಪೋ ದರ ಮತ್ತೆ ಯಥಾಸ್ಥಿತಿಯಲ್ಲಿ



ಮುಂಬೈ: ರೆಪೋ ದರದ ಯಥಾಸ್ಥಿತಿ ಕಾಯ್ದುಕೊಳ್ಳಲು ನಿರ್ಧರಿಸಿರುವ ಭಾರತೀಯ ರಿಸರ್ವ್ ಬ್ಯಾಂಕ್, ಪ್ರಸಕ್ತ ಹಣಕಾಸು ವರ್ಷದ ಅಂದಾಜು ಆರ್ಥಿಕ ಉತ್ಪನ್ನದ ದರ(ಜಿಡಿಪಿ)ವನ್ನು ಶೇ. 7.2 ರಿಂದ 6.6ಕ್ಕೆ ಇಳಿಸಿದೆ.ಸತತ 11ನೇ ಬಾರಿ ಬಡ್ಡಿದರದಲ್ಲಿ ಬದಲಾವಣೆಯಾಗಿಲ್ಲ.

ಮುಂಬೈನಲ್ಲಿ ನಡೆದ ಹಣಕಾಸು ನೀತಿಗಳ ಕುರಿತ ಸಭೆಯ ನಂತರ ಸುದ್ದಿಗೋಷ್ಠಿ ನಡೆಸಿದ ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್, ತಟಸ್ಥ ಹಣಕಾಸು ನೀತಿಯ ನಿಲುವನ್ನು ಮುಂದುವರಿಸಲು ನಿರ್ಧರಿಸಲಾಗಿದೆ ಎಂದು ಸ್ಪಷ್ಟಪಡಿಸಿದರು. ವಿಕಸನಗೊಳ್ಳುತ್ತಿರುವ ಸ್ಥೂಲ ಆರ್ಥಿಕತೆ ಮತ್ತು ಹಣಕಾಸಿನ ಬೆಳವಣಿಗೆಗಳ ಬಗ್ಗೆ ಸುದೀರ್ಘ ಮೌಲ್ಯಮಾಪನದ ನಂತರ ಸತತ 11 ನೇ ಅವಧಿಗೂ ರೆಪೊ ದರ ಶೇ. 6.5 ಕ್ಕೆ ಬದಲಾಯಿಸದೆ ಮುಂದುವರಿಸಲು 4:2ರ ಬಹುಮತದಿಂದ ನಿರ್ಧರಿಸಲಾಗಿದೆ ಎಂದು ದಾಸ್ ತಿಳಿಸಿದರು.

ಎಸ್‌ಡಿಎಫ್ ಶೇ. 6.25: ರೆಪೋ ದರ ಯಥಾಸ್ಥಿತಿಯಿಂದಾಗಿ ಸ್ಟಾಂಡರ್ಡ್ ಠೇವಣಿ ಸೌಲಭ್ಯ(ಎಸ್‌ಡಿಎಫ್)ದ ದರ ಶೇ. 6.25 ರಲ್ಲೇ ಉಳಿದಿದ್ದು, ಮಾರ್ಜಿನರಿ ಸ್ಟ್ಯಾಂಡಿಂಗ್ ಫೆಸಿಲಿಟಿ(ಎಂಎಸ್‌ಎಫ್) ದರ ಶೇ. 6.75 ರಷ್ಟಿದೆ ಎಂದು ಆರ್‌ಬಿಐ ಗವರ್ನರ್ ವಿವರಿಸಿದರು. ಜಾಗತಿಕ ಅರ್ಥಿಕತೆ ವಿಕಸನಗೊಳ್ಳುತ್ತಿರುವ ಈ ಸಮಯದಲ್ಲಿ ಭಾರತದ ಆರ್ಥಿಕತೆಯೂ ಉತ್ತಮ ಸ್ಥಾನದಲ್ಲಿದೆ. ಎಂದು ಬಣ್ಣಿಸಿದ ಅವರು,ಹಣದುಬ್ಬರ ಸಮತೋಲನದ ಮರುಸ್ಥಾಪನೆಗೆ ಎಂಪಿಸಿ ಬದ್ಧವಾಗಿದೆ ಎಂದರು.

ಸಿಆರ್‌ಆರ್ ಇಳಿಕೆ: ಇದೇ ವೇಳೆ, ಆರ್ಥಿಕ ಚಟುವಟಿಕೆಗಳನ್ನು ಉತ್ತೇಜಿಸಲು ಬ್ಯಾಂಕುಗಳ ಬಳಿ ಸಾಲ ನೀಡಲು ಹೆಚ್ಚಿನ ಹಣಕಾಸು ಲಭ್ಯವಾಗುವಂತೆ ಮಾಡಲು ನಗದು ಮೀಸಲು ಅನುಪಾತ (ಸಿಆರ್‌ಆರ್)ವನ್ನು ಶೇ. 4.5 ರಿಂದ ಶೇ.4ಕ್ಕೆ ಇಳಿಸಿದೆ. ಇದರಿಂದ ಬ್ಯಾಂಕುಗಳಿಗೆ 1.16 ಲಕ್ಷ ಕೋಟಿ ರು. ಬಿಡುಗಡೆ ಮಾಡಲು ಮತ್ತು ಸಾಲನೀಡುವ ಸಾಮರ್ಥ್ಯ ಸುಧಾರಿಸಲು ಅನುಕೂಲವಾಗುತ್ತದೆ ಎಂದು ಶಕ್ತಿಕಾಂತ್ ದಾಸ್ ವಿವರಿಸಿದರು.

ಚಿಲಿ ಮಾಜಿ ಅಧ್ಯಕ್ಷೆಗೆ ಇಂದಿರಾ ಶಾಂತಿ ಪ್ರಶಸ್ತಿ



ದೆಹಲಿ: ಚಿಲಿ ದೇಶದ ಮಾಜಿ ಅಧ್ಯಕ್ಷೆ ಮತ್ತು ಜಾಗತಿಕ ಮಾನವ ಹಕ್ಕುಗಳ ಪ್ರತಿಪಾದಕಿ ಮಿಶೆಲ್ ಬಾಕ ಲೆಟ್‌ಗೆ 2024ರ ಇಂದಿರಾ ಗಾಂಧಿ ಶಾಂತಿ ಪ್ರಶಸ್ತಿ ಘೋಷಿಸಲಾಗಿದೆ. ಮಾಜಿ ರಾಷ್ಟ್ರೀಯ ಭದ್ರತಾ ಸಲಹೆಗಾರ ಮತ್ತು ವಿದೇಶಾಂಗ ಕಾರ್ಯದರ್ಶಿ ಶಿವಶಂಕರ್ ಮೆನನ್ ನೇತೃತ್ವದ ತೀರ್ಪುಗಾರರ ಸಮಿತಿ ಈ ಪ್ರತಿಷ್ಠಿತ ಪ್ರಶಸ್ತಿ ಯನ್ನು ಶುಕ್ರವಾರ ಪ್ರಕಟಿಸಿದೆ. ಜಾಗತಿಕ ಶಾಂತಿ, ಸಮಾನತೆ, ಮಾನವ ಹಕ್ಕುಗಳ ರಕ್ಷಣೆಗೆ ಬಾಕಲೆಟ್ ನೀಡಿದ ಕೊಡುಗೆಯನ್ನು ಪರಿಗಣಿಸಿ ಇಂದಿರಾಗಾಂಧಿ ಸ್ಮಾರಕ ಟ್ರಸ್ಟ್ ಶಾಂತಿ ಪ್ರಶಸ್ತಿ ನೀಡಲಿದೆ.

ಸುನೀತಾ ಅಂತರಿಕ್ಷ ವಾಸಕ್ಕೆ 6 ತಿಂಗಳು

ವಾಷಿಂಗ್ಟನ್: ಬೋಯಿಂಗ್ ಸ್ಟಾರ್ ಲೈನರ್ ಮೂಲಕ ಬಾಹ್ಯಾಕಾಶ ಯಾತ್ರೆ ಕೈಗೊಂಡ ಸುನೀತಾ ವಿಲಿಯಮ್ಸ್ ರ ಅಂತಾರಾಷ್ಟ್ರೀಯ ಬಾಹ್ಯಕಾಶ ನಿಲ್ದಾಣದ ವಾಸ್ತವ್ಯಕ್ಕೆ ಆರು ತಿಂಗಳು ಪೂರ್ಣಗೊಂಡಿದೆ. ತಾಂತ್ರಿಕ ಸಮಸ್ಯೆಯಿಂದ ಅವರನ್ನು ಭೂಮಿಗೆ ಕರೆತರುವ ನಾಸಾ ಪ್ರಯತ್ನಗಳಿಗೆ ತೊಡಕುಂಟಾಗಿದ್ದು, ಶೀಘ್ರವೇ ಅವರು ವಾಪಸಾಗಲಿದ್ದಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದೆ.

ಸಿಂಘ್ವಿ ಸೀಟಿನಲ್ಲಿ ನಗದು ಪತ್ತೆ: ತನಿಖೆಗೆ ಆದೇಶ

ದೆಹಲಿ: ರಾಜ್ಯಸಭೆಯ ಆಸನ ಸಂಖ್ಯೆ 222ರ ಕೆಳಗೆ ಶುಕ್ರವಾರ 50 ಸಾವಿರ ರು. ನಗದು ಪತ್ತೆ ಯಾಗಿ ಎಲ್ಲರನ್ನೂ ಅಚ್ಚರಿ ಗೊಳಿಸಿದೆ. ಈ ಆಸನವನ್ನು ಕಾಂಗ್ರೆಸ್‌ನ ರಾಜ್ಯಸಭಾ ಸದಸ್ಯ ಅಭಿಷೇಕ್ ಮನು ಸಿಂಘ್ವಿಗೆ ಹಂಚಿಕೆಯಾಗಿರುವುದು ಗಮ ನಾರ್ಹ. ಬೆಳಗ್ಗೆ ತಪಾಸಣೆ ವೇಳೆ ಈ ನಗದು ಪತ್ತೆಯಾಗಿದೆ. ವಿಷಯ ತಿಳಿಯುತ್ತಲೇ ಈ ಬಗ್ಗೆ ತನಿಖೆ ನಡೆಸುವಂತೆ ರಾಜ್ಯಸಭೆಯ ಸಭಾಪತಿ ಜಗದೀಪ್ ಧನಕರ್ ಆದೇಶಿಸಿದ್ದಾರೆ. ಈ ಮಧ್ಯೆ, 50 ಸಾವಿರ ರು. ನಗದು ಇಟ್ಟುಕೊಂಡಿರುವುದು ಅಪರಾಧವೇನಲ್ಲ ಎಂದು ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ಅವರು ಸಿಂಘ್ವಿ ಸ್ಥಾನದ ಕೆಳಗೆ ಹಣ ಪತ್ತೆಯಾಗಿದ್ದನ್ನು ಸಮರ್ಥಿಸಿಕೊಂಡಿದ್ದಾರೆ.

ದರ್ಶನ್ ಜಾಮೀನು ವಜಾಗೆ ಮನವಿ: ವಿಚಾರಣೆ ಡಿ.9ಕ್ಕೆ

ಬೆಂಗಳೂರು: ರೇಣುಕಾಸ್ವಾಮಿ ಹತ್ಯೆ ಪ್ರಕರಣದ ಆರೋಪಿ ದರ್ಶನ್‌ಗೆ ಜಾಮೀನು ಸಿಗುವ ವಿಚಾರದಲ್ಲಿ ಮತ್ತೆ ನಿರಾಸೆಯಾಗಿದೆ. ಜಾಮೀನು ಅರ್ಜಿ ವಿಚಾರಣೆ ಹೈಕೋರ್ಟ್ ಡಿ.9ಕ್ಕೆ ಮುಂದೂಡಿದೆ. ಕೊಲೆ ಆರೋಪಿ ದರ್ಶನ್, ಪವಿತ್ರಾ ಗೌಡ ಸೇರಿದಂತೆ ಇತರ ಆರೋಪಿಗಳ ಜಾಮೀನು ಅರ್ಜಿ ಹೈಕೋರ್ಟ್‌ನಲ್ಲಿ ವಿಚಾರಣೆ ನಡೆಸಲಾಯಿತು. ಎಸ್‌ಪಿಪಿ ಪ್ರಸನ್ನ ಕುಮಾರ್ ಆಕ್ಷೇಪಣಾ ವಾದ ಮಂಡಿಸಿ, ಮಧ್ಯಂತರ ಜಾಮೀನಿಗೆ ಆಕ್ಷೇಪ ವ್ಯಕ್ತಪಡಿದರು. ದರ್ಶನ್‌ಗೆ ತಕ್ಷಣವೇ ಜಾಮೀನು ಬೇಕೆಂದು ಪಡೆದರು. ಇಲ್ಲದೇ ಹೋದರೆ ಲಕ್ವ ಹೊಡೆಯುತ್ತೆ ಅಂದರು. ಆದರೆ ಇನ್ನೂ ಶಸ್ತ್ರ ಚಿಕಿತ್ಸೆ ಆಗಿಲ್ಲ. ಹೀಗಾಗಿ ವಜಾಮಾಡಬೇಕೆಂದು ಒತ್ತಾಯಿಸಿದರು.

ಹೆದ್ದಾರಿ ಮತ್ತು ಎಕ್ಸ್‌ಪ್ರೆಸ್ ವೇ ಟೋಲ್ ಸಂಗ್ರಹ ದುಪ್ಪಟ್ಟು

ದೆಹಲಿ: ಕಳೆದ ಐದು ವರ್ಷಗಳಲ್ಲಿ ರಾಷ್ಟ್ರೀಯ ಹೆದ್ದಾರಿ ಮತ್ತು ಎಕ್ಸ್‌ಪ್ರೆಸ್ ವೇಗಳಲ್ಲಿ ಟೋಲ್ ಸಂಗ್ರಹ ಪ್ರಮಾಣ ದುಪ್ಪಟ್ಟಾಗಿದೆ ಎಂದು ಕೇಂದ್ರ ಹೆದ್ದಾರಿ-ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ರಾಜ್ಯಸಭೆಗೆ ಶುಕ್ರವಾರ ತಿಳಿಸಿದ್ದಾರೆ. ಹೆದ್ದಾರಿ ಶುಲ್ಕ ಸಂಗ್ರಹದ ವಾರ್ಷಿಕ ಆದಾಯ ಕುರಿತ ಪ್ರಶ್ನೆಗಳಿಗೆ ಉತ್ತರಿಸಿದ ಅವರು, 2019-20ರ ಹಣಕಾಸು ವರ್ಷದಲ್ಲಿ 27,503 ಕೋಟಿ ರು.ಗಳಷ್ಟಿದ್ದ ಶುಲ್ಕ ಸಂಗ್ರಹ ಪ್ರಮಾಣ, 2023-24ರ ವೇಳೆಗೆ 56,882 ಕೋಟಿ ರು.ಗಳಿಗೆ ಹೆಚ್ಚಳವಾಗಿದೆ ಎಂದು ಮಾಹಿತಿ ನೀಡಿದರು. ದೇಶದ 1.50 ಲಕ್ಷ ಕಿ.ಮೀ. ಉದ್ದದ ಹೆದ್ದಾರಿಗಳಲ್ಲಿ 70 ಸಾವಿರ ಕಿ.ಮೀ. ರಾಷ್ಟ್ರೀಯ ಹೆದ್ದಾರಿಗಳ ನಿರ್ವಹಣೆಯನ್ನು ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದಡಿ ಬರುವ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ನಡೆಸುತ್ತದೆ.

ಮಂಡ್ಯದಲ್ಲಿ ಎಚ್‌ಡಿಕೆ ಸನ್ಮಾನ ಕಾರ್ಯಕ್ರಮಕ್ಕೆ ಚಿಂತನೆ | ಮೈತ್ರಿ ನಾಯಕರನ್ನೂ ಆಹ್ವಾನಿಸಲು ಜೆಡಿಎಸ್ ಸಿದ್ಧತೆ

ಕೈ ಸಮಾವೇಶಕ್ಕೆ ಸಡ್ಡು ಹೊಡೆಯಲು ತೆನೆ ಸಜ್ಜು

ಬೆಂಗಳೂರು: ತನ್ನ ಭದ್ರಕೋಟೆಯಲ್ಲಿ ಕಾಂಗ್ರೆಸ್ಸಿಗರು ನಡೆಸಿದ ಬೃಹತ್ ಸಮಾವೇಶಕ್ಕೆ ಠಕ್ಕರ್ ಕೊಡಲು ಜೆಡಿಎಸ್ ಸಜ್ಜಾಗಿದ್ದು, ಕಾಂಗ್ರೆಸ್‌ನ ಜನಕಲ್ಯಾಣ ಸಮಾವೇಶಕ್ಕೆ ಪ್ರತಿಯಾಗಿ ಮಂಡ್ಯದಲ್ಲಿ ಬೃಹತ್ ಸಮಾವೇಶದ ಮೂಲಕ 'ಒಕ್ಕಲಿಗ ಬೆಲ್ಟ್'ನಲ್ಲಿ ಈಗಲೂ ತಾನೇ ಬಲಿಷ್ಠ ಎನ್ನುವ ಸಂದೇಶ ನೀಡಲು ಜೆಡಿಎಸ್ ಸಿದ್ಧತೆ ನಡೆಸಿದೆ.

ದೇವೇಗೌಡರ ತವರಿನಲ್ಲಿ ಕಾಂಗ್ರೆಸ್ ನಡೆಸಿದ ಸಮಾವೇಶಕ್ಕೆ ಪ್ರತಿಯಾಗಿ ಬೃಹತ್ ಸಮಾವೇಶದ ಮೂಲಕ ತನ್ನ ಅಸ್ತಿತ್ವವನ್ನು ಪ್ರದರ್ಶನ ಮಾಡಬೇಕು ಎನ್ನುವ ಕಾರಣಕ್ಕೆ ಜೆಡಿಎಸ್ ನಾಯಕರು, ಇದೀಗ ಮಂಡ್ಯದಲ್ಲಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರಿಗೆ 'ಅಭಿನಂದನಾ ಕಾರ್ಯಕ್ರಮ' ಹಮ್ಮಿಕೊಂಡಿದೆ.

ಕೇಂದ್ರ ಸಚಿವರಾಗಿ ಕುಮಾರಸ್ವಾಮಿ ಅಧಿಕಾರ ಸ್ವೀಕರಿಸಿ ಆರು ತಿಂಗಳು ಕಳೆದಿವೆ. ಆದರೆ ಕಾಂಗ್ರೆಸ್ ಮುಂದೆ ತಮ್ಮ ಶಕ್ತಿ ಪ್ರದರ್ಶಿಸ ಬೇಕೆಂಬ ಕಾರಣಕ್ಕೆ, ಅಭಿನಂದನಾ ಕಾರ್ಯಕ್ರಮ ಹಮ್ಮಿಕೊಳ್ಳಲು ತೀರ್ಮಾನಿಸಲಾಗಿದೆ. ಆದ್ದರಿಂದ ಡಿ.15ರಂದು ಮಂಡ್ಯದಲ್ಲಿ ಬೃಹತ್ ಸಮಾವೇಶ ನಡೆಸಲು ಸಜ್ಜಾಗಿದ್ದಾರೆ ಎಂದು ತಿಳಿದುಬಂದಿದೆ.

ಮಂಡ್ಯದಲ್ಲೇ ಏಕೆ..?: ಹಾಸನದಲ್ಲಿ ಕಾಂಗ್ರೆಸ್ ನಡೆಸಿದ ಸಮಾವೇಶಕ್ಕೆ ಪ್ರತಿಯಾಗಿ ಜೆಡಿಎಸ್ ಮಂಡ್ಯದಲ್ಲಿ ಬೃಹತ್ ಸಮಾವೇಶ ನಡೆಸಲು ಉದ್ದೇಶಿಸಿರುವುದಕ್ಕೆ ಪ್ರಮುಖ ಕಾರಣವಿದೆ. ಜೆಡಿಎಸ್ ಭದ್ರಕೋಟೆಯಲ್ಲಿ ಕಾಂಗ್ರೆಸ್ ಬಲ ಪ್ರದರ್ಶನ ಮಾಡಿದಂತೆ, ಕಾಂಗ್ರೆಸ್ ಶಾಸಕರೇ ಇರುವ ಮಂಡ್ಯ ಜಿಲ್ಲೆಯಲ್ಲಿ ನಡೆಸುವ ಮೂಲಕ ಶಕ್ತಿ ಪ್ರದರ್ಶನಕ್ಕೆ ಮುಂದಾಗಿದೆ. ಮಂಡ್ಯದ ಸರ್. ಎಂ. ವಿಶ್ವೇಶ್ವರಯ್ಯ ಮೈದಾನದಲ್ಲಿ ಜೆಡಿಎಸ್‌ನಲ್ಲಿ ಸಮಾವೇಶ ನಡೆಸಲು ತೀರ್ಮಾನಿಸಿದೆ ಎಂದು ತಿಳಿದುಬಂದಿದೆ.

ಮೈತ್ರಿ ನಾಯಕರಿಗೂ ಆಹ್ವಾನ

ಈ ಕಾರ್ಯಕ್ರಮವನ್ನು ಕೇವಲ ಜೆಡಿಎಸ್‌ಗೆ ಸೀಮಿತಗೊಳಿಸದೆ, ಸಮಾವೇಶಕ್ಕೆ ಬಿಜೆಪಿ ನಾಯಕರನ್ನು ಆಹ್ವಾನಿಸಲು ತೀರ್ಮಾನಿಸಲಾಗಿದೆ. ಕಾರ್ಯಕ್ರಮದಲ್ಲಿ ಜೆಡಿಎಸ್ ವರಿಷ್ಠ ದೇವೇಗೌಡ ರೊಂದಿಗೆ, ಬಿಜೆಪಿಯ ಯಡಿಯೂರಪ್ಪ, ವಿಜಯೇಂದ್ರ ಸೇರಿದಂತೆ ಪ್ರಮುಖ ನಾಯಕರನ್ನು ಸೇರಿಸುವ ಲೆಕ್ಕಾಚಾರಗಳಿವೆ. ಈ ಮೂಲಕ ಮೈತ್ರಿಯ ಶಕ್ತಿ ಪ್ರದರ್ಶನ ಹಾಗೂ ಉಪಚುನಾವಣೆಯ ಬಳಿಕ ಮಂಕಾಗಿರುವ ಸಂಘಟನೆಗೆ ಮರುಚಾಲನೆ ನೀಡುವ ಆಲೋಚನೆ ಯಲ್ಲಿ ಜೆಡಿಎಸ್ ನಾಯಕರಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಚನ್ನಪಟ್ಟಣ ಸೇರಿದಂತೆ ಮೂರು ಉಪಚುನಾವಣೆಯ ಸೋಲಿನಿಂದ ಸ್ವಲ್ಪಮಟ್ಟಿಗೆ ಉತ್ಸಾಹ ಕಳೆದುಕೊಂಡಿರುವ ಜೆಡಿಎಸ್ ಕಾರ್ಯಕರ್ತರಿಗೆ ಶಕ್ತಿ ತುಂಬುವ ಜತೆಗೆ ಜೆಡಿಎಸ್‌ನ ಭದ್ರ ಕೋಟೆಯಾಗಿರುವ ಹಳೇ ಮೈಸೂರು ಭಾಗವನ್ನು ಕಬ್ಜಾ ಮಾಡಲು ಕಾಂಗ್ರೆಸ್ ನಡೆಸಿರುವ ಪ್ರಯತ್ನಗಳಿಗೆ ಕೌಂಟರ್ ಜೆಡಿಎಸ್ ಸಜ್ಜಾಗಿದೆ. ಈ ಸಮಾವೇಶಕ್ಕೆ ಒಂದು ಲಕ್ಷಕ್ಕೂ ಹೆಚ್ಚು ಜನರನ್ನು ಸೇರಿಸುವ ಲೆಕ್ಕಾಚಾರದಲ್ಲಿ ಜೆಡಿಎಸ್ ನಾಯಕರಿದ್ದಾರೆ ಎಂದು ತಿಳಿದುಬಂದಿದೆ.

ಈ ಸಮಾವೇಶದ ರೂಪುರೇಷೆ ಸಂಬಂಧ ದೆಹಲಿಯಲ್ಲಿ ಜೆಡಿಎಸ್ ನಾಯಕರು ಚರ್ಚೆ ನಡೆಸಿದ್ದಾರೆ. ರಾಜ್ಯಸಭಾ ಕಲಾಪದಲ್ಲಿ ದೇವೇಗೌಡರು ಭಾಗವಹಿಸಿರುವ ಕಾರಣಕ್ಕೆ, ಪಕ್ಷದ ಪ್ರಮುಖ ನಾಯಕರು ದೆಹಲಿಗೆ ತೆರಳಿದ್ದು, ಅಲ್ಲಿಯೇ ದೇವೇಗೌಡರೊಂದಿಗೆ ಚರ್ಚಿಸಿ ಸಮಾವೇಶಕ್ಕೆ ಸಿದ್ಧತೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ.

ಅಮೆರಿಕದಲ್ಲಿ ತೀವ್ರ ಭೂಕಂಪ: ತಪ್ಪಿದ ಸುನಾಮಿ ಅಪಾಯ

ವಾಷಿಂಗ್ಟನ್: ಅಮೆರಿಕದ ಉತ್ತರ ಕ್ಯಾಲಿಫೋರ್ನಿಯಾದಲ್ಲಿ ಪ್ರಬಲ ಭೂಕಂಪ ಸಂಭವಿಸಿದ್ದು, ಯಾವುದೇ ಸಾವು-ನೋವಿನ ವರದಿಯಾಗಿಲ್ಲ. ರಿಕ್ಟರ್ ಮಾಪಕದಲ್ಲಿ 7.0 ರಷ್ಟಿದ್ದ ಈ ತೀವ್ರ ಸ್ವರೂಪದ ಭೂಕಂಪದಿಂದ ಉತ್ತರ ಕ್ಯಾಲಿಫೋರ್ನಿಯಾ ಮತ್ತು ಉತ್ತರ ಒರೆಗಾಂವ್‌ನ ಕರಾವಳಿಯಲ್ಲಿ ಸುನಾಮಿ ಭೀತಿ ಉಂಟಾಗಿತ್ತು. ಕ್ಯಾಲಿಫೋರ್ನಿಯಾದ ವಸತಿ ಪ್ರದೇಶಗಳು ತಲ್ಲಣಗೊಂಡಿದ್ದವು. ಹಲವು ಮಳಿಗೆಗಳಲ್ಲಿ ಕಂಪನದಿಂದ ವಸ್ತುಗಳು ಚೆಲ್ಲಾಪಿಲ್ಲಿಯಾಗಿದ್ದು, ಅಲ್ಲಲ್ಲಿ ರಸ್ತೆಗಳೂ ಬಿರುಕು ಬಿಟ್ಟಿದ್ದವು. ಶಾಲೆಗಳಲ್ಲಿ ಮಕ್ಕಳು ಭಯದಿಂದ ತರಗತಿಗಳ ಡೆಸ್ಕ್ ಕೆಳಗೆ ಅಡಗಿಕೊಂಡರು.

ಫನ್‌ತರಂಗ

– ರಘುಪತಿ ಶೃಂಗೇರಿ –

ಸಂಸತ್ ಅಧಿವೇಶನ: ಕಾಂಗ್ರೆಸ್ ಸಂಸದರ ಸೀಟಿನಡಿ ಕಂತೆ ಕಂತೆ ನೋಟು ಪತ್ತೆ

ಸುದ್ದಿ



ಸಮಾಚಾರ ಸಣ್ಣದಲ್ಲ

ವಾಣಿಜ್ಯ ಮಳಿಗೆಯಲ್ಲಿ ಅಗ್ನಿ ಅವಘಡ

ಕಾರವಾರ: ಬಸ್ ನಿಲ್ದಾಣದ ಎದುರಿನ ವಾಣಿಜ್ಯ ಸಂಕೀರ್ಣದ ಅಂಗಡಿ ಯೊಂದಕ್ಕೆ ಆಕಸ್ಮಿಕವಾಗಿ ಬೆಂಕಿ ತಗಲಿ ರುವ ಘಟನೆ ನಡೆದಿದೆ. ಕಾರವಾರದ ಶಿವಕ್ಕ ವಡ್ಡರ ಎಂಬುವವರಿಗೆ ಸೇರಿದ ಬನಶಂಕರಿ ಖಾನಾವಳಿಯೊಳಗಿಂದ ಹೊಗೆ ಮಿಶ್ರಿತ ಬೆಂಕಿ ಕಾಣಿಸಿಕೊಂಡಿತ್ತು ಎನ್ನಲಾಗಿದೆ. ಘಟನೆ ನಡೆದ ಬೆನ್ನಲ್ಲೇ ರೆಫ್ರಿಜರೇಟ ರಿನಲ್ಲಿ ಇಟ್ಟಿದ್ದ ಸೋಡಾ ಬಾಟಲಿಗಳು ಸ್ಫೋಟಗೊಂಡಿದ್ದವು. ಸ್ಥಳಕ್ಕಾಗಮಿಸಿದ ಅಗ್ನಿ ಶಾಮಕ ದಳದವರು ಬೆಂಕಿ ನಂದಿಸಲು ಹರಸಾಹಸ ಪಟ್ಟರು. ಸುಮಾರು ಒಂದು ಗಂಟೆಯವರೆಗೆ ನಡೆದ ಕಾರ್ಯಾಚರಣೆಯೊಂದಿಗೆ ಬೆಂಕಿಯನ್ನು ನಂದಿಸಲಾಗಿದೆ. ಅಗ್ನಿ ಆಕಸ್ಮಿಕದಿಂದ ಹಾನಿಗೀಡಾಗಿರುವ ವಸ್ತುಗಳ ವಿವರ ಈವರೆಗೂ ಸರಿಯಾಗಿ ತಿಳಿದು ಬಂದಿಲ್ಲ.

ಉದ್ಯೋಗ ಖಾತರಿ ನಡಿಗೆ ಸಬಲತೆಯೆಡೆಗೆ ಅಭಿಯಾನ

ಕಾರವಾರ: ಮುಂಡಗೋಡ ತಾಲೂಕಿನ ಕೋಡಂಬಿ ಗ್ರಾಮ ಪಂಚಾಯತಿ ವ್ಯಾಪ್ತಿಯ ರಾಮಾಪುರ ಗ್ರಾಮ ಹಾಗೂ ಕೋಡಂಬಿ ಗ್ರಾಮದ ಎಡದಂಡೆ ಸಾರ್ವಜನಿಕ ಕಾಲುವೆ ಹೂಳೆತ್ತುವ ಕಾಮಗಾರಿ ಸ್ಥಳದಲ್ಲಿ ಉದ್ಯೋಗ ಖಾತರಿ ನಡಿಗೆ ಸಬಲತೆಯಡೆಗೆ ಅಭಿಯಾನ, ರೋಜಗಾರ ದಿವಸ ಆಚರಣೆ, ಮನೆ-ಮನೆ ಭೇಟಿ ಕಾರ್ಯ ಶುಕ್ರವಾರ ನಡೆಯಿತು. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ 2025- 26ನೇ ಸಾಲಿನ ಕಾರ್ಮಿಕ ಆಯವ್ಯಯ ತಯಾರಿಕೆಗಾಗಿ ಹಾಗೂ 2024-25ನೇ ಸಾಲಿನಲ್ಲಿ ನರೇಗಾದಡಿ ನೀಡಲಾದ ನಿಗದಿತ ಮಾನವ ದಿನಗಳ ಸೃಜನೆ ಸಾಧಿಸಲು ಪೂರಕವಾಗಿ ಐಇಸಿ ಚಟುವಟಿಕೆಗಳಡಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ವೈಯಕ್ತಿಕ ಕಾಮಗಾರಿಗಳು ಲಭ್ಯವಿದ್ದು, ಹಳ್ಳಿಗಾಡಿನ ಜನಸಾಮಾನ್ಯರು ಕೂಲಿ ಕೆಲಸಕ್ಕಾಗಿ ನಗರ, ಪಟ್ಟಣ ಸೇರಿದಂತೆ ಬೇರೆಡೆಗೆ ವಲಸೆ ಹೋಗುವುದ ಬದಲಾಗಿ ಗ್ರಾಮ ಪಂಚಾಯತಿಗೆ ನರೇಗಾದಡಿ ಕೂಲಿ ಮತ್ತು ವೈಯಕ್ತಿಕ ಕಾಮಗಾರಿ ಬೇಡಿಕೆ ಸಲ್ಲಿಸುವ ಮೂಲಕ ಸ್ವಂತ ಊರಲ್ಲೇ ಕೆಲಸ ಹಾಗೂ ಆರ್ಥಿಕ ಅಭಿವೃದ್ಧಿ ಕಾಮಗಾರಿ ಪಡೆದುಕೊಂಡು ಸಬಲರಾಗುವಂತೆ ತಾಲ್ಲೂಕಾ ಐಇಸಿ ಸಂಯೋಜಕರಾದ ಫಕೀರಪ್ಪ ತುಮ್ಮಣ್ಣನವರ ಅವರು ಜನರಲ್ಲಿ ಮನವಿ ಮಾಡಿದರು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಸದಸ್ಯರಾದ ಅಶೋಕ ಅರಳೇಶ್ವರ, ತಿಮ್ಮಕ್ಕ ಬೋವಿವಡ್ಡರ, ಗ್ರಾಮ ಕಾಯಕ ಮಿತ್ರರಾದ ಸುಧಾ ಅಣ್ಣಪ್ಪ ವಡ್ಡರ, ಮೇಟ್‌ಗಳಾದ ಕೃಷ್ಣಪ್ಪ ಬಾಳೇರ, ಕೃಷ್ಣಾ ಕ್ಯಾರಕಟ್ಟಿ, ಗ್ರಾಮಸ್ಥರಾದ ಹಾಲಪ್ಪ ಕೊಡಣ್ಣನವರ, ಹನುಮಂತ ಪೂಜಾರ, ಸಿದ್ದಪ್ಪ ಕ್ಯಾರಕಟ್ಟಿ ಸೇರಿದಂತೆ ಕೋಡಂಬಿ ಹಾಗೂ ರಾಮಾಪುರ ಗ್ರಾಮಸ್ಥರು ಉಪಸ್ಥಿತರಿದ್ದರು.

ಹಣಕಾಸು ಆಯೋಗದಿಂದ ಗುಳ್ಳಾಪುರ ಸೇತುವೆ ವೀಕ್ಷಣೆ

ಯಲ್ಲಾಪುರ: ರಾಜ್ಯದ 5ನೇ ಹಣಕಾಸು ಆಯೋಗದ ಅಧ್ಯಕ್ಷ ಡಾ. ಸಿ ನಾರಾಯಣ ಸ್ವಾಮಿ, ಆಯೋಗದ ಸದಸ್ಯ ಮೊಹಮ್ಮದ್ ಸನಾವುಲ್ಲಾ, ಆರ್.ಎಸ್.ಪೊಂಡೆ ತಂಡವು ಶುಕ್ರವಾರ ಗುಳ್ಳಾಪುರದ ಕುಸಿದ ಸೇತುವೆಯನ್ನು ಪರಿಶೀಲಿಸಿ ಸ್ಥಳಿಕರಿಂದ ವರದಿ ಪಡೆದುಕೊಂಡರು. ಸ್ಥಳೀಯರು ಸೇತುವೆ ಕುಸಿತದಿಂದಾದ ಸಮಸ್ಯೆಗಳನ್ನು ಅಧ್ಯಕ್ಷರ ಬಳಿ ನಿವೇದಿಸಿಕೊಂಡರು. ಪರಿಸ್ಥಿತಿಯನ್ನು ಅವಲೋಕಿಸಿದ ತಂಡ ಸೇತುವೆ ನಿರ್ಮಾಣದ ಬಗ್ಗೆ ಯಾವುದೇ ಪ್ರಕ್ರಿಯೆ ನಡೆಯದೇ ಇರುವ ಬಗ್ಗೆ ಖೇಧ ವ್ಯಕ್ತಪಡಿಸಿದರು. ತಾವು ಈ ಕುರಿತು ರಾಜ್ಯಪಾಲರಿಗೆ ವರದಿ ಸಲ್ಲಿಸುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ಇಡಗುಂದಿ ಗ್ರಾ.ಪಂ ಅಧ್ಯಕ್ಷ ಶ್ರೀಕಾಂತ ಶೆಟ್ಟಿ, ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಪ್ರಮೋದ ಹೆಗಡೆ, ಸ್ಥಳಿಕರಾದ ಜಿ.ಆರ್.ಭಟ್ಟ ಗುಳ್ಳಾಪುರ ಸುತ್ತಲಿನ ಸಾರ್ವಜನಿಕರು ಮುಂತಾದವರು ಇದ್ದರು. ಕಳೆದ ವರ್ಷದಿಂದ ಜನ ವಂತಿಗೆ ಹಾಕಿ ತಾತ್ಕಾಲಿಕ ಸೇತುವೆಯನ್ನು ಬೇಸಿಗೆ ಕಾಲಕ್ಕೆ ಮಾತ್ರ ಸಿಮೀತವಾಗುವಂತೆ ಮಾಡುತ್ತ ಬಂದಿದ್ದಾರೆ. ಈ ವರ್ಷವೂ ಈಗಾಗಲೇ ತಾತ್ಕಾಲಿಕ ಸೇತುವೆ ಮಾಡಿದ್ದಾರೆ. ಈ ತಾತ್ಕಾಲಿಕ ಸೇತುವೆಯ ಕಾರಣದಿಂದ ಜನರಿಗೆ ಸಮಸ್ಯೆಯ ಅರಿವು ಅಷ್ಟೊಂದು ಆಗಲಿಲ್ಲ. ಸೇತುವೆ ಮಂಜೂರಿ ಸಂಗತಿಯೂ ನೆನೆಗುದಿಗೆ ಬೀಳುವಂತಾಯಿತು.

ತಾತ್ಕಾಲಿಕ ಸೇತುವೆಯನ್ನು ಅವಘಡವಾಗದ ರೀತಿಯಲ್ಲಿ ನಿರ್ಮಿಸುವುದು ಸುಲಭವಲ್ಲ. ಈ ತಾತ್ಕಾಲಿಕ ಸೇತುವೆಯ ಮೇಲೆ ಸಂಚಾರದ ಕಸರತ್ತು ಮಾಡುವಂತಿಲ್ಲ. ಮೊನ್ನೆಯಷ್ಟೇ ಈ ತಾತ್ಕಾಲಿಕ ಸೇತುವೆ ಮೇಲೆ ಸಾಗುತ್ತಿರುವಾಗ ಬೈಕ್ ಸ್ಕಿಡ್ ಆಗಿ ಇಬ್ಬರು ನದಿಪಾಲಾಗುವ ಪರಿಸ್ಥಿತಿ ಉಂಟಾಗಿತ್ತು. ಆದರೆ ನೀರಿನ ಸೆಳವು ಇಲ್ಲದ ಕಾರಣ ಬದುಕಿ ಬಂದಿದ್ದಾರೆ.

ಶಾಶ್ವತವಾದ ಸೇತುವೆ ಈ ದಿಶೆಯಲ್ಲಿ ಬಹುಮುಖ್ಯವಾಗಿದೆ ಮತ್ತು ಬೇಗ ಆಗಬೇಕಿದೆ ಎಂದು ಸ್ಥಳೀಯರಾದ ಗಣಪತಿ ಭಟ್ಟ ಮಾಹಿತಿ ನೀಡಿದರು.

ಆರೋಗ್ಯ ಇಲಾಖೆ ಐಸಿಯುನಲ್ಲಿದೆ: ಬೊಮ್ಮಾಯಿ

ಹಾವೇರಿಯಲ್ಲಿ ಸಂಸದ ಬಸವರಾಜ ಬೊಮ್ಮಾಯಿಯವರ ಜನ ಸಂಪರ್ಕ ಕಾರ್ಯಾಲಯ ಉದ್ಘಾಟನೆ

ಜನ ಸಂಪರ್ಕ ಕಾರ್ಯಾಲಯ ಉದ್ಘಾಟಿಸಿದ ಹುಕ್ಕೇರಿ ಮಠದ ಸದಾಶಿವ ಶ್ರೀಗಳು.

ಹಾವೇರಿ: ತಾಲೂಕು ಪಂಚಾಯಿತಿ ಕಚೇರಿ ಬಳಿ ಹಾವೇರಿ-ಗದಗ ಲೋಕಸಭಾ ಕ್ಷೇತ್ರದ ಸಂಸದ ಬಸವರಾಜ ಬೊಮ್ಮಾಯಿ ಜನ ಸಂಪರ್ಕ ಕಾರ್ಯಾಲಯವನ್ನು ಹಾವೇರಿ ಹುಕ್ಕೇರಿಮಠದ ಸದಾಶಿವ ಸ್ವಾಮಿಗಳು ಉದ್ಘಾಟನೆ ಮಾಡಿದರು.

ಜನ ಸಂಪರ್ಕ ಕಾರ್ಯಾಲಯದ ಉದ್ಘಾಟನೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸದ ಬಸವರಾಜ ಬೊಮ್ಮಾಯಿ, ಸಾರ್ವಜನಿಕರ ಅಹವಾಲು ಹಾಗೂ ಅವುಗಳ ಸೂಕ್ತ ಪರಿಹಾರಕ್ಕಾಗಿ ಜನ ಸಂಪರ್ಕ ಕಾರ್ಯಾಲಯ ಮಾಡಿದ್ದೇನೆ. ಸಾರ್ವಜನಿಕರು ತಮ್ಮ ಸಮಸ್ಯೆಗಳು, ಕೆಲಸ ಕಾರ್ಯಗಳಿಗೆ ಅಹವಾಲು ತೆಗೆದುಕೊಂಡು ಬರುತ್ತಾರೆ. ನಮ್ಮ ಕಚೇರಿಯಿಂದ ಬಂದಂತ ಪತ್ರಗಳು ಹಾಗೂ ಸಮಸ್ಯೆಗಳ ಬಗ್ಗೆ ಜಿಲ್ಲಾಡಳಿತ, ರಾಜ್ಯ ಸರ್ಕಾರ ಸಕಾರಾತ್ಮಕ ಸ್ಪಂದನೆ ನೀಡಬೇಕು.

ಈ ಕಚೇರಿಯಲ್ಲಿ ಹಲವು ಸಭೆ ಮಾಡಬೇಕಾಗುತ್ತದೆ. ಪ್ರತಿ ಗುರುವಾರ ಹಾವೇರಿ ಜಿಲ್ಲೆಗೆ ಮೀಸಲಿಡುತ್ತೇನೆ, ಶುಕ್ರವಾರ ಗದಗ ಜಿಲ್ಲೆಗೆ ಮೀಸಲಿಡುತ್ತೇನೆ. ಬೆಳಗ್ಗೆ 11 ರಿಂದ 5 ಗಂಟೆವರೆಗೆ ಲಭ್ಯ ಇರುವೆ. ಈ ಕಚೇರಿ ಬಹಳ ಮುಕ್ತವಾಗಿರುತ್ತದೆ ಎಂದು ಹೇಳಿದರು.

ಆರೋಗ್ಯ ಇಲಾಖೆಯೇ ರೋಗಗ್ರಸ್ಥ ರಾಜ್ಯದ ಆರೋಗ್ಯ ಇಲಾಖೆ ಐ.ಸಿಯುನಲ್ಲಿದೆ ಆರೋಗ್ಯ ಇಲಾಖೆಗೆ ಸರ್ಜರಿ ಮಾಡುವ ಅವಶ್ಯಕತೆ ಇದೆ ಸರಿಯಾಗಿ ಔಷಧ ಸಿಗುತ್ತಿಲ್ಲ. ಔಷಧಕ್ಕೆ ಪ್ರತಿ ತಿಂಗಳು ಇಂಡೆಂಟ್ ಹಾಕುತ್ತಿದ್ದಾರೆ. ಪ್ರಮುಖ ಔಷಧ ಯಾಕೆ ಸ್ಟಾಕ್ ಇಡುತ್ತಿಲ್ಲ, ಸರಕಾರದ ಹಣಕಾಸಿನ ದಿವಾಳಿಗೆ ತನ್ನ ಕುರುಹು ಬಿಡಲು ಪ್ರಾರಂಭಿಸಿದೆ. ಸಾರ್ವಜನಿಕ ಆಸ್ಪತ್ರೆ ದರ ಹೆಚ್ಚಿಸಿದ್ದಾರೆ. ಬಳ್ಳಾರಿಯಲ್ಲಿ ಬಾಣಂತಿಯರ ಸಾವಾಗಿದೆ. ಅವರ ಸಾವಿಗೆ ಎಷ್ಟೇ ದುಡ್ಡು ಕೊಟ್ಟರೂ ಪರಿಹಾರ ಸಿಕ್ಕಂತಾಗುವುದಿಲ್ಲ. ಕಾಂಗ್ರೆಸ್ ನವರು ಪ್ರತಿಪಕ್ಷದಲ್ಲಿದ್ದಾಗ ಎಷ್ಟು ಮಾತನಾಡುತ್ತಿದ್ದರು.

ಈ ಕಡೆಗೆ ಸಿಎಂ ಯಾಕೆ ಗಮನ ಹರಿಸಲು ಆಗಿಲ್ಲ. ಈ ವಿಷಯಕ್ಕೆ ಸಂಬಂಧಿಸಿದಂತೆ ಇದುವರೆಗೂ ಒಂದು ತಲೆ ದಂಡ ಆಗಿಲ್ಲ. ಇದುವರೆಗೂ ಆರೋಗ್ಯ ಇಲಾಖೆ ಕಾರ್ಯದರ್ಶಿ ಭೇಟಿ ಕೊಟ್ಟಿಲ್ಲ. ಯಾರನ್ನ ರಕ್ಷಣೆ ಮಾಡಲು ಹೊರಟಿದ್ದಾರೆ. ಅಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ. ಭ್ರಷ್ಟರ ರಕ್ಷಣೆಗೆ ಸಾಮಾನ್ಯ ಜನರ ಜೀವ ಬಲಿ ಪಡೆಯುತ್ತಿದ್ದಾರೆ. ಇದು ಅಕ್ಷಮ್ಯ ಅಪರಾಧ. ಆರೋಗ್ಯ ಇಲಾಖೆಯೇ ರೋಗ ಗ್ರಸ್ಥ ಆಗಿದೆ. ಶಾಲೆ, ಆಸ್ಪತ್ರೆ ಯಾವುದೂ ಸರಿ ಇಲ್ಲ ಎಂದು ವಾಗ್ದಾಳಿ ನಡೆಸಿದರು.

ಸರ್ಕಾರಿ ಆಸ್ಪತ್ರೆಗಳಿಗೆ ಪೂರ್ಣ ಪ್ರಮಾಣದ ವೈದ್ಯರನ್ನು ನೇಮಕ ಮಾಡಬೇಕು. ಗುತ್ತಿಗೆ ಆಧಾರದಲ್ಲಿ ವೈದ್ಯರನ್ನು ನೇಮಕ ಮಾಡಿದರೆ, ಅವರು ಸರ್ಕಾರಿ ಆಸ್ಪತ್ರೆಗೆ ಬರಲು ನಿರಾಕರಿಸುತ್ತಾರೆ. ಜಾನುವಾರುಗಳ ಸಾವಾಗುತ್ತಿದೆ. ಅವುಗಳಿಗೆ ಚಿಕಿತ್ಸೆ ನೀಡಲಾಗುತ್ತಿಲ್ಲ. ನಾವು ಅಧಿಕಾರದಲ್ಲಿದ್ದಾಗ ಸುಮಾರು 14 ಕೋಟಿ ರು. ಬಿಡುಗಡೆ ಮಾಡಿ, ಎಲ್ಲ ಜಾನುವಾರುಗಳಿಗೆ ಲಸಿಕೆ ಹಾಕಿಸಲು ಸೂಚಿಸಿದ್ದೆವು, ಸರ್ಕಾರ ಜೀವಂತ ಇದ್ದರೆ ಇವೆಲ್ಲ ಮಾಡಲು, ಸಾಧ್ಯ, ಈ ಸರ್ಕಾರ ಜೀವಂತ ಇಲ್ಲ ಎಂದು ಆರೋಪಿಸಿದರು.

ರಾಷ್ಟ್ರೀಯ ಹೆದ್ದಾರಿಗಳ ದುರಸ್ತಿ ಹಾಗೂ ಸರ್ವಿಸ್ ರಸ್ತೆಗಳ ನಿರ್ಮಾಣ ಮಾಡುವ ಕುರಿತು ಅಧಿಕಾರಿಗಳ ಜೊತೆ ಸಭೆ ನಡೆಸಿದ್ದೇವೆ. ರೈಲ್ವೆ ಯೋಜನೆಗಳ ಕುರಿತಂತೆಯೂ ಹುಬ್ಬಳ್ಳಿಯ ನೈರುತ್ಯ ವಲಯ ಅಧಿಕಾರಿಗಳ ಜೊತೆ ಸಭೆ ಮಾಡಿ ಬ್ಯಾಡಗಿ ರೈಲ್ವೆ ನಿಲ್ದಾಣ, ಶಿವಮೊಗ್ಗ ರಾಣೆಬೆನ್ನೂರು ಲೈನ್ ಆರಂಭಕ್ಕೆ ಸಮಸ್ಯೆಗಳಿಗೆ ಅತಿ ಬೇಗ ಪರಿಹಾರ ಕಂಡುಕೊಳ್ಳಲಾಗುವುದು. ಹಾವೇರಿಯಲ್ಲಿ ವಂದೇ ಭಾರತ ರೈಲು ನಿಲುಗಡೆ ರೈಲ್ವೆ ಸಚಿವರಾದ ಅಶ್ವಿನಿ ವೈಷ್ಣವ್ ಹಾಗೂ ವಿ. ಸೋಮಣ್ಣ ಅವರಿಗೆ ಮಾಡಿದ್ದೇನೆ. ರೈಲ್ವೆ ಮಂಡಳಿಗೆ ಪ್ರಸ್ತಾವನೆ ಹೋಗಿದೆ. ಆದಷ್ಟು ಬೇಗ ತೀರ್ಮಾನ ಆಗಲಿದೆ ಎಂದು ಹೇಳಿದರು.

ಗ್ರಾಮೀಣ ಪ್ರದೇಶದಲ್ಲಿ ಅಭಿವೃದ್ಧಿಗೆ ನರೇಗಾ ಯೋಜನೆ ಅತ್ಯಂತ ಉಪಯುಕ್ತವಾಗಿದ್ದು, ಒಂದು ಕಡೆ ಉದ್ಯೋಗ ಸೃಷ್ಟಿ ಇನ್ನೊಂದೆಡೆ ಆಸ್ತಿ ನಿರ್ಮಾಣ ಕಾರ್ಯ ಮಾಡಲಾಗುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಸಿಸಿ ರಸ್ತೆಗಳ ನಿರ್ಮಾಣ ಆಗುತ್ತಿದೆ. ಅಲ್ಲಿ ಡ್ರೈನೇಜ್ ಸರಿಯಾಗಿ ಆಗುತ್ತಿಲ್ಲ. ಅದನ್ನು ವ್ಯವಸ್ಥಿತವಾಗಿ ಮಾಡಬೇಕು. ರಾಜ್ಯ ಸರ್ಕಾರ ಅನುಷ್ಠಾನ ಮಾಡುವ ಕಾರ್ಯ ಮಾಡಬೇಕು ಎಂದರು. ಮಾಜಿ ಶಾಸಕ ಶಿವರಾಜ ಸಜ್ಜನರ, ಬಿಜೆಪಿ ಜಿಲ್ಲಾಧ್ಯಕ್ಷ ಅರುಣಕುಮಾರ ಪೂಜಾರ ಹುಕ್ಕೇರಿ ಮಠದ ಸದಾಶಿವ ಶ್ರೀಗಳು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಅಕ್ರಮ ಲೇ ಔಟ್ ತಡೆಯಬೇಕು

ಹಾವೇರಿಯಲ್ಲಿ ಅಕ್ರಮ ಲೇಔಟ್ ಗಳನ್ನು ತಡೆಯಲು ಜಿಲ್ಲಾಧಿಕಾರಿಗಳು ತಕ್ಷಣ ಕ್ರಮ ಕೈಗೊಳ್ಳಬೇಕು. ಯಾವುದೇ ರಾಜಕೀಯ ಒತ್ತಡಕ್ಕೆ ಮಣಿಯಬಾರದು. ಅಧಿಕೃತ ಲೇಔಟ್ ಗಳಿಗೆ ಅಭಿವೃದ್ಧಿ ಮಾಡಲು ಸಾಧ್ಯವಾಗುತ್ತಿಲ್ಲ. ಇನ್ನು ಅನಧಿಕೃತ ಲೇಔಟ್ ಗಳನ್ನು ಮಾಡಿದರೆ ಕಷ್ಟವಾಗಲಿದೆ. ಜಿಲ್ಲಾಧಿಕಾರಿಗಳು ಯಾವುದೇ ರಾಜಕೀಯ ಒತ್ತಡಕ್ಕೆ ಮಣಿಯಬಾರದು ಸಂಸದ ಬೊಮ್ಮಾಯಿ ಎಂದು ಹೇಳಿದರು.

ನಾನು ಬಿಜೆಪಿ ಬಣದಲ್ಲಿದ್ದೇನೆ. ವಕ್ಫ್ ಆದೇಶದಿಂದ ರೈತರಿಗೆ ಸಾಕಷ್ಟು ಸಮಸ್ಯೆಯಾಗಿದೆ, ಮಠಗಳು, ಕೆರೆಗಳು, ಆಸ್ಪತ್ರೆ, ಶಾಲೆಗಳು ಎಲ್ಲದಕ್ಕೂ ಸಮಸ್ಯೆಯಾಗಿದೆ. ಅದರ ವಿರುದ್ದ ಎಲ್ಲರೂ ತೀವ್ರವಾಗಿ ಹೋರಾಟ ಮಾಡಬೇಕಿದೆ. ಆ ಕೆಲಸವನ್ನು ನಾವೆಲ್ಲರೂ ಮಾಡುತ್ತಿದ್ದೇವೆ.

-ಬಸವರಾಜ ಬೊಮ್ಮಾಯಿ, ಸಂಸದ

ನಿಗಧಿತ ಅವಧಿಯೊಳಗೆ ಕಾಮಗಾರಿ ಪೂರ್ಣಗೊಳಿಸಿ

ಹಾವೇರಿ: ಜಿಲ್ಲೆಯಲ್ಲಿ ಜಲ ಜೀವನ ಮಿಷನ್ ಅಡಿಯಲ್ಲಿ ಬ್ಯಾಡಗಿ, ರಾಣೇಬೆನ್ನೂರ, ಹಾವೇರಿ ಹಾಗೂ ಹಿರೇಕೆರೂರ ತಾಲೂಕಿನ ವಿವಿಧ ಗ್ರಾಮಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ಆಣೂರು ಬಹು ಗ್ರಾಮ ನದಿ ನೀರು ಯೋಜನೆಯ ಜಾಕ್ ವೆಲ್ ಮತ್ತು ನೀರು ಶುದ್ಧಿಕರಣ ಘಟಕ ಹಾಗೂ ಹಂಸಬಾವಿ ಬಹುಗ್ರಾಮ ನದಿ ನೀರು ಯೋಜನೆಯ ಜಾಕ್ವೆಲ್ ಮತ್ತು ನೀರು ಶುದ್ದಿಕರಣ ಘಟಕಗಳ ಕಾಮಗಾರಿ ಪ್ರಗತಿಯನ್ನು ಜಿಲ್ಲಾಧಿಕಾರಿ ವಿಜಯ ಮಹಾಂತೇಶ್ ದಾನಮ್ಮನವರ ಪರಿಶೀಲಿಸಿದರು.

ಜಿಲ್ಲೆಗೆ ಹಂಚಿಕೆಯಾಗಿರುವ ಬಹು ಗ್ರಾಮ ಕುಡಿಯುವ ನೀರಾವರಿ ಯೋಜನೆಯ ಕಾಮಗಾರಿಗಳನ್ನು ನಿಗದಿಪಡಿಸಿದ ಅವಧಿಯೊಳಗೆ ಪೂರ್ಣಗೊಳಿಸಲು ಸಂಬಂಧಪಟ್ಟ ಗುತ್ತಿಗೆದಾರರು ಕ್ರಮ ವಹಿಸಬೇಕು ಎಂದರು.

ನೀರಾವರಿ ಕಾಮಗಾರಿಗಳ ಅನಗತ್ಯ ವಿಳಂಬವನ್ನು ಯಾವುದೇ ಕಾರಣಕ್ಕೂ ಸಹಿಸಲಾಗುವುದಿಲ್ಲ ಗೊತ್ತುಪಡಿಸಿದ ಅವಧಿಯಲ್ಲಿ ಜಿಲ್ಲೆಗೆ ಹಂಚಿಕೆಯಾಗಿರುವ ಬಹು ಗ್ರಾಮ ಕುಡಿಯುವ ನೀರಾವರಿ ಯೋಜನೆಗಳನ್ನು ಆದಷ್ಟು ಶೀಘ್ರ ಪೂರ್ಣಗೊಳಿಸಿ ಅದರ ಉಪಯುಕ್ತತೆ ಜನತೆಗೆ ತಲುಪುವಂತೆ ಮಾಡಬೇಕು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಕ್ಷಯ ಶ್ರೀಧರ್ ಹಾಗೂ ಇತರೆ ಅಧಿಕಾರಿಗಳು ಇದ್ದರು.

ಗೋವಾ ಮದ್ಯ ಸಾಗಾಟ ; ಮಾಲು ಸಹಿತ ಕಾರು ವಶಕ್ಕೆ

ಕಾರಿನಲ್ಲಿ ಸಾಗಿಸುತ್ತಿದ್ದ ಅಕ್ರಮ ಗೋವಾ ಮದ್ಯವನ್ನು ವಶಕ್ಕೆ ಪಡೆದ ಪೊಲೀಸರು.

ಹೊನ್ನಾವರ: ತಾಲೂಕಿನ ರಾಮತೀರ್ಥ ಕ್ರಾಸ್‌ನಿಂದ ಹೋಗುವ ರಸ್ತೆ ಎಡಬದಿಯಲ್ಲಿರುವ ಚಂದ್ರಾಣಿ ಕೆರೆಯ ಪಕ್ಕದಲ್ಲಿ ಅಬಕಾರಿ ದಾಳಿ ನಡೆಸಿ ಕಾರಿನಲ್ಲಿ ಸಾಗಿಸುತ್ತಿದ್ದ ಅಕ್ರಮ ಗೋವಾ ಮದ್ಯವನ್ನು ವಶಕ್ಕೆ ಪಡೆಯಲಾಗಿದೆ.

ಗೋವಾ ರಾಜ್ಯದ ಮದ್ಯವನ್ನು ಮಾರಾಟ ಮಾಡುವ ಉದ್ದೇಶದಿಂದ ಸಾಗಾಟ ಮಾಡುತ್ತಿರುವುದನ್ನು ಪತ್ತೆ ಹಚ್ಚಿ 35.46 ಲೀಟರಷ್ಟು ಗೋವಾ ರಾಜ್ಯದ ಮದ್ಯವನ್ನು ಹಾಗೂ ಹುಂಡೈ ಕಂಪನಿಯ ಬಿಳಿಯ ಬಣ್ಣದ ವಾಹನವನ್ನು ವಶಕ್ಕೆ ಪಡೆಯಲಾಗಿದೆ. ಭದ್ರಾವತಿಯ ಆರೋಪಿತನಾದ ಸೋಮಶೇಖರ ಬಿ. ಇವರ ವಿರುದ್ಧ ಮೊಕದ್ದಮೆಯನ್ನು ದಾಖಲಿಸಲಾಗಿದೆ.

ಅಬಕಾರಿ ನಿರೀಕ್ಷಕರಾದ ಶ್ರೀಧರ ಹನುಮಂತ ಮಡಿವಾಳ ಹೊನ್ನಾವರ ರವರು ಪ್ರಕರಣವನ್ನು ದಾಖಲಿಸಿಕೊಂಡಿದ್ದಾರೆ. ಈ ದಾಳಿಯಲ್ಲಿ ಅಬಕಾರಿ ಪೇದೆಯವರಾದ ಶ್ರೀನಿವಾಸ ಗೌಡ ಮತ್ತು ಹಿರಿಯ ವಾಹನ ಚಾಲಕರಾದ ಸೈಯದ್ ಹಮೀದ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಪೊಲೀಸರಿಂದ ಸಮಾಜದಲ್ಲಿ ಶಾಂತಿ ನೆಮ್ಮದಿ

ಕ್ರೀಡಾಕೂಟ ಸಮಾರೋಪದಲ್ಲಿ ಸಿಸಿಎಫ್ ವಸಂತ ರೆಡ್ಡಿ ಅಭಿಪ್ರಾಯ

ಕಾರವಾರ: ಸಾರ್ವಜನಿಕರು ರಾತ್ರಿ ಹೊತ್ತು ನೆಮ್ಮದಿಯಾಗಿ ನಿದ್ರೆ ಮಾಡುತ್ತಿದ್ದಾರೆ ಎಂದರೆ ಅದಕ್ಕೆ ಪೊಲೀಸ್ ಇಲಾಖೆಯವರೇ ಮುಖ್ಯ ಕಾರಣ. ದಿನದ 24 ಗಂಟೆಯೂ ತಮ್ಮನ್ನು ತಾವು ಕರ್ತವ್ಯದಲ್ಲಿ ತೊಡಗಿಸಿಕೊಂಡು ಸಮಾಜವನ್ನು ಹಾಗೂ ನಮ್ಮನ್ನು ರಕ್ಷಣೆ ಮಾಡುವುದರಲ್ಲಿ ಪೊಲೀಸರ ಪಾತ್ರ ಅಪಾರವಾದುದು ಎಂದು ಶಿರಸಿ ಕೆನರಾ ವೃತ್ತದ ಅರಣ್ಯ ಇಲಾಖೆಯ ಉಪ ಅರಣ್ಯ ಸಂರಕ್ಷಣಾಧಿಕಾರಿ ವಸಂತ ರೆಡ್ಡಿ ಹೇಳಿದರು.

ಗುರುವಾರ ಕಾರವಾರದ ಪೊಲೀಸ್ ಕವಾಯತು ಮೈದಾನದಲ್ಲಿ ನಡೆದ ಉತ್ತರ ಕನ್ನಡ ಜಿಲ್ಲಾ ಪೊಲೀಸ್ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ವಿತರಿಸಿ ಅವರು ಮಾತನಾಡಿದರು.

ಶ್ರಮದ ಜೀವನ ನಡೆಸುತ್ತಿರುವ ಪೊಲೀಸ್ ಸಿಬ್ಬಂದಿಗೆ ಕ್ರೀಡೆ ಉತ್ತಮ ಆರೋಗ್ಯಕ್ಕೆ ಸಹಕಾರವಾಗಲಿದ್ದು, ಕ್ರೀಡೆಯಲ್ಲಿ ಸೋಲು ಗೆಲುವು ಮುಖ್ಯವಲ್ಲ ಸ್ಪರ್ಧಿಸುವುದು ಮುಖ್ಯ ಪ್ರತಿಯೊಬ್ಬರೂ ಕ್ರೀಡಾ ಮನೋಭಾವ ಬೆಳಸಿಕೊಳ್ಳಬೇಕು ಎಂದರು.

ಪೊಲೀಸ್ ವರಿಷ್ಠಾಧಿಕಾರಿ ನಾರಾಯಣ ಎಂ. ಸ್ವಾಗತಿಸಿ ಮಾತನಾಡಿ, ಪೊಲೀಸರು ಕ್ರೀಡಾಕೂಟದ ಸ್ಪರ್ಧೆಯಲ್ಲಿ ತೋರಿದ ಪ್ರಾವೀಣ್ಯತೆ, ಶಕ್ತಿ ಸಾಮರ್ಥ್ಯ, ಚಾತುರ್ಯತೆ, ಉತ್ಸಾಹವನ್ನು ಠಾಣೆಯಲ್ಲಿ ಹಾಗೂ ಜನ ಸಾಮಾನ್ಯರ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಮತ್ತು ಸಮಾಜದಲ್ಲಿನ ಘಾತಕ ಶಕ್ತಿಯ ವಿರುದ್ಧ ತೋರಿಸಬೇಕು. ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಉತ್ತರ ಕನ್ನಡ ಜಿಲ್ಲೆಯು ಇನ್ನಷ್ಟು ಹೆಸರು ತರಲು ಕಾರಣಕರ್ತರಾಗಿ ಎಂದರು.

ದಾಂಡೇಲಿಯ ವೆಸ್ಟ್ ಕೋಸ್ಟ್ ಪೇಪರ್ ಮಿಲ್ ಲಿಮಿಟೆಡ್ ಕಾರ್ಯನಿರ್ವಾಹಕ ನಿರ್ದೇಶಕ ರಾಜೇಂದ್ರ ಜೈನ್ ಮಾತನಾಡಿ, ಪೊಲೀಸ್ ಇಲಾಖೆ ಸೇವೆಯು ಅತ್ಯಂತ ಒತ್ತಡಕರವಾಗಿರುವುದರಿಂದ ಪೊಲೀಸರು ದೈಹಿಕವಾಗಿ ಸದೃಢರಾಗಿರಬೇಕು. ಮಾನಸಿಕ ಹಾಗೂ ದೈಹಿಕ ಆರೋಗ್ಯ ಕ್ಷಮತೆಗೆ ಕ್ರೀಡಾಕೂಟಗಳು ಸಹಾಯಕಾರಿಯಾಗಿವೆ ಎಂದರು.

ಕಾರ್ಯಕ್ರಮದಲ್ಲಿ ಕಾರವಾರದ ಗ್ರಾಸಿಮ್ ಕೆಮಿಕಲ್ಸ್ ಲಿಮಿಟೆಡ್‌ನ ಯೂನಿಟ್ ಹೆಡ್ ಕುಶ್ ಶರ್ಮಾ, ಕ್ರೀಡಾಪಟು, ಇನಾಯಿತ್ ವುಲ್ಲಾ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಜಗದೀಶ್ ಹಾಗೂ ಇಲಾಖೆ ಅಧಿಕಾರಿಗಳು ಸಿಬಂದ್ದಿಗಳು ಉಪಸ್ಥಿತರಿದ್ದರು.

ಗಮನ ಸೆಳೆದ ಸಿಡಿಮದ್ದು ಪ್ರದರ್ಶನ

ಸಭಾ ಕಾರ್ಯಕ್ರಮದ ಪೂರ್ವದಲ್ಲಿ ಪುರುಷ ಸಿಬ್ಬಂದಿಗೆ ಅಂತಿಮ 100 ಮೀಟರ್ ಓಟ, ಹಗ್ಗ ಜಗ್ಗಾಟ, 4X100 ಮೀಟರ್ ರಿಲೆ ಸ್ಪರ್ಧೆಗಳು ನಡೆದವು ಹಾಗೇ ಅತಿಥಿಗಳಿಗೆ ಕ್ರೀಡೆಯನ್ನು ಏರ್ಪಡಿಸಲಾಗಿತ್ತು. ಪೊಲೀಸ್ ಕವಾಯತು ತಂಡದಿಂದ ಪಥ ಸಂಚಲನ, ಸಿಡಿ ಮದ್ದುಗಳ ಪ್ರದರ್ಶನ ನಡೆಯಿತು.

ಜಿಲ್ಲೆ ಎರಡಾಗಲಿ, ಬನವಾಸಿ ತಾಲೂಕಾಗಲಿ

ಅಖಂಡತೆ ಬಯಸಿದರೆ ಶಿರಸಿಗೆ ಜಿಲ್ಲಾ ಕೇಂದ್ರ ತರಲು ಹೇಗೆ ಸಾಧ್ಯ ಹೋರಾಟಗಾರ ಅನಂತಮೂರ್ತಿ ಪ್ರಶ್ನೆ

ಶಿರಸಿ ಪ್ರತ್ಯೇಕ ಜಿಲ್ಲೆಗಾಗಿ ಹೋರಾಟನಿರತ ಗಣ್ಯರು.

ಶಿರಸಿ: ಉತ್ತರ ಕನ್ನಡ ಜಿಲ್ಲೆ ಅಖಂಡವಾಗಿರಬೇಕೆಂಬುದು ಒಂದಷ್ಟು ಜನರ ಆಶಯವಾಗಿದೆ. ತಪ್ಪಿಲ್ಲ, ಹಾಗಿದ್ದರೆ ಬಹುತೇಕರಿಗೆ ದೂರವಾಗಿರುವ ಜಿಲ್ಲಾ ಕೇಂದ್ರ ಕಾರವಾರದ ಬದಲು ಶಿರಸಿಯನ್ನು ಮಾಡಲು ಸಾಧ್ಯವಿದೆಯಾ? ಜಿಲ್ಲೆ ಅಖಂಡವಾಗಿರಬೇಕು ಎಂದು ನಮ್ಮ ವಿರುದ್ಧ ಮಾತನಾಡಿದವರಿಗೆ ಜಿಲ್ಲಾ ಮಧ್ಯಭಾಗವಾಗಿರುವ ಶಿರಸಿಗೆ ಜಿಲ್ಲಾ ಕೇಂದ್ರ ತರುವ ತಾಕತ್ತಿದೆಯಾ? ಇಲ್ಲ ತಾನೇ, ಹಾಗಾಗಿಯೇ ಪ್ರತ್ಯೇಕ ಜಿಲ್ಲಾ ಹೋರಾಟವನ್ನು ಕೈಗೆತ್ತಿಕೊಳ್ಳಲಾಗಿದೆ. ಅದೇ ರೀತಿ ಕದಂಬರು ಆಳಿದ, ಪಂಪ ಹಾಡಿರುವ ಬನವಾಸಿ ಕ್ಷೇತ್ರ ತಾಲೂಕು ಪ್ರದೇಶವಾಗಲಿ ಎಂದು ಕದಂಬ ಕನ್ನಡ ಜಿಲ್ಲೆ ರಚನೆ ಮತ್ತು ಹಿತರಕ್ಷಣಾ ಟ್ರಸ್ಟ್ ಅಧ್ಯಕ್ಷ ಅನಂತಮೂರ್ತಿ ಹೆಗಡೆ ಹೇಳಿದರು.

ಶುಕ್ರವಾರ ಬನವಾಸಿಯಲ್ಲಿ ಕದಂಬ ಜಿಲ್ಲೆ ಮತ್ತು ಬನವಾಸಿ ತಾಲೂಕು ರಚನೆಗಾಗಿ ಆಗ್ರಹಿಸಿ ನಡೆದ ಪ್ರತಿಭಟನಾ ಮೆರವಣಿಗೆಯ ನೇತೃತ್ವ ವಹಿಸಿ ಅವರು ಮಾತನಾಡಿದರು. ಜಿಲ್ಲಾಕೇಂದ್ರ ಕಾರವಾರ ಘಟ್ಟದ ಮೇಲಿನ ಎಲ್ಲ ತಾಲೂಕಿನವರಿಗೆ ದೂರವಾಗಿದೆ. ಬಡ ರೈತರಿಗೆ ಜಿಲ್ಲಾ ಕೇಂದ್ರ ಕಾರವಾರಕ್ಕೆ ಹೋಗಿ ಬರುವುದೆಂದರೆ ಕಷ್ಟಕರವಾಗಿದೆ. ಅದೇ ರೀತಿ ಪ್ರತ್ಯೇಕ ಜಿಲ್ಲಾ ಹೋರಾಟಕ್ಕೆ ಕ್ಷೇತ್ರದ ಶಾಸಕ ಶಿವರಾಮ ಹೆಬ್ಬಾರ ಬೆಂಬಲ ಸೂಚಿಸಿದ್ದಾರೆ. ಅದೇ ರೀತಿ ಶಾಸಕ ಭೀಮಣ್ಣನವರೂ ಸಹಕಾರ ನೀಡುವುದರ ಜೊತೆಗೆ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿಸುವ ಮಾತನ್ನು ಹೇಳಿದ್ದಾರೆ. ಮಾಜಿ ಸಚಿವ ಆರ್ .ವಿ.ದೇಶಪಾಂಡೆಯವರೂ ಪ್ರತ್ಯೇಕ ಜಿಲ್ಲೆಯಾದರೆ ನಮ್ಮದೇನೂ ಅಭ್ಯಂತರವಿಲ್ಲ ಎಂದಿದ್ದಾರೆ. ಹಾಲಿ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಶಿರಸಿಯನ್ನು ಶೈಕ್ಷಣಿಕ ಜಿಲ್ಲೆಯನ್ನಾಗಿಸುವ ಮೂಲಕ ಪ್ರತ್ಯೇಕ ಜಿಲ್ಲೆ ಹೋರಾಟಕ್ಕೆ ಅಡಿಪಾಯವನ್ನು ಹಾಕಿಕೊಟ್ಟಿದ್ದಾರೆ. ನಮಗೆ ಯಾರ ಬಗ್ಗೆಯೂ ವಯಕ್ತಿಕವಾಗಿ ವಿರೋಧ ಮಾಡಲು, ಟೀಕೆ ಮಾಡಲು ಇಷ್ಟವಿಲ್ಲ. ಪ್ರತ್ಯೇಕ ಜಿಲ್ಲೆಯಾಗುವುದರಿಂದ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಮೆಡಿಕಲ್ ಕಾಲೇಜು ದೊರೆಯುತ್ತದೆ. ಈ ವಿಷಯದಲ್ಲಿ ತಮಾಷೆ ಮಾಡುವುದು ಸರಿಯಲ್ಲ, ಪ್ರಚಾರದ ಹಂಬಲಿಗಾಗಿ ಸಖಾಸುಮ್ಮನೆ ಹೇಳಿಕೆ ಕೊಡುವುದು ಶೋಭೆಯಲ್ಲ ಎಂದರು.

ಮುಂಬರುವ ಡಿ.9 ರಂದು ಬೆಳಗಾವಿಯಲ್ಲಿ ನಡೆಯುವ ಅಧಿವೇಶನದಲ್ಲಿ ಕದಂಬ ಕನ್ನಡ ಪ್ರತ್ಯೇಕ ಜಿಲ್ಲೆ ಮತ್ತು ಬನವಾಸಿ ತಾಲೂಕು ರಚನೆಯ ಕೂಗು ಮುಟ್ಟಬೇಕಿದೆ. ಹಾಗಾಗಿ ನಾವು ವಿಳಂಬ ಮಾಡದೇ ಜನರನ್ನು ಜಾಗೃತಗೊಳಿಸಿ, ಜನರ ಧ್ವನಿಯನ್ನು ಸರಕಾರಕ್ಕೆ ತಲುಪಿಸುವ ಕೆಲಸ ನಡೆಯಲಿದೆ ಎಂದರು. ಅಕಾಲಿಕ ಮಳೆಯ ಕಾರಣಕ್ಕೆ ಅನ್ನದಾತನಾಗಿರುವ ರೈತರು ಸಂಕಷ್ಟದಲ್ಲಿದ್ದಾರೆ. ಅವರ ಹೊಲದಲ್ಲಿ ಭತ್ತಗಳು ಮಳೆಗೆ ಹಾಳಾಗುತ್ತಿದ್ದರೂ, ನಮ್ಮ ಕ್ಷೇತ್ರ ಅಭಿವೃದ್ಧಿ ಆಗಬೇಕು ಎಂಬ ಕಾರಣಕ್ಕೆ ಇಂದಿನ ಪ್ರತಿಭಟನೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪಾಲ್ಗೊಂಡಿರುವುದು ನಿಜಕ್ಕೂ ನಮಗೆ ಮೇಲ್ಪಂಕ್ತಿಯಾಗಿದೆ ಎಂದರು.

ಬನವಾಸಿ ತಾಲೂಕು ಹೋರಾಟ ಸಮಿತಿ ಅಧ್ಯಕ್ಷ ಉದಯಕುಮಾರ ಕಾನಳ್ಳಿ ಮಾತನಾಡಿ, ಬನವಾಸಿ ಬಗ್ಗೆ ಅಭಿಮಾನ ಎಲ್ಲ ಕಡೆಗಿದೆ. ಆದರೆ ಅಭಿವೃದ್ಧಿಯಲ್ಲಿ ಬನವಾಸಿಗೆ ಸ್ಥಾನವಿಲ್ಲದಿರುವುದು ಶೋಚನೀಯ. ಸಾಹಿತ್ಯ ಸಮ್ಮೇಳನದಲ್ಲಿ ಬನವಾಸಿ ಬಗ್ಗೆ ಸಾಕಷ್ಟು ಹೊಗಳಿಕೆಯ ಮಾತುಗಳು ಕೇಳಿ ಬಂದವು. ಆದರೆ ಬನವಾಸಿಯ ಅಭಿವೃದ್ಧಿ ಬಗ್ಗೆ ಕೇವಲ ಭಾಷಣಗಳಿಗಷ್ಟೇ ಸೀಮಿತವಾದುದು ದುರ್ದೈವದ ಸಂಗತಿ.

ನಮಗೆ ಕದಂಬ ಕನ್ನಡ ಜಿಲ್ಲೆ ಆಗಬೇಕು, ಜೊತೆಗೆ ಬನವಾಸಿಯನ್ನು ತಾಲೂಕಾಗಿ ಘೋಷಿಸಬೇಕು ಎಂದರು.

ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷ ವಿನಯ ಗೌಡ, ಬನವಾಸಿ ಗ್ರಾಪಂ ಅಧ್ಯಕ್ಷೆ ಬೀಬಿ, ರೈತ ಮುಖಂಡ ರಮೇಶ ನಾಯ್ಕ ಕುಪ್ಪಳ್ಳಿ, ಗುಡ್ನಾಪುರ ಗ್ರಾಪಂ ಅಧ್ಯಕ್ಷೆ ನಿರ್ಮಲಾ ನಾಯ್ಕ, ಅಂಡಗಿ ಪಂಚಾಯತ ಅಧ್ಯಕ್ಷ ಮಂಜುನಾಥ, ಧುರೀಣರಾದ ಗಣೇಶ ಸಣ್ಣಲಿಂಗಣ್ಣನವರ, ಸ್ಥಳೀಯ ಪ್ರಮುಖರಾದ ಜಯಶೀಲ ಗೌಡ, ನಾಡಿಗೇರ, ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಅಶೋಕ ನಾಯ್ಕ ಮಧುರವಳ್ಳಿ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಹಾಲಪ್ಪ ಜಕ್ಕಣ್ಣನವರ, ಎ.ಆರ್. ನಾಯ್ಕ, ಮಂಜುನಾಥ ಪಾಟೀಲ್, ಸಿಪಿಐ ಈರೇಶ, ಅನಿಲ ನಾಯಕ ಶಿರಸಿ, ಜಿ.ಎಸ್. ಹೆಗಡೆ ಹಲಸರಿಗೆ ಭಾಗಿಯಾಗಿದ್ದರು.

ಕಸಾಪ ಸಮ್ಮೇಳನಕ್ಕೆ ಧುಂಡಿಗೆ ಆಹ್ವಾನ

ಯಲ್ಲಾಪುರ: ಮಂಚಿಕೇರಿಯಲ್ಲಿ ಡಿ. 3ರಂದು ನಡೆಯಲಿರುವ ತಾಲೂಕಾ ಆರನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾದ ರಾಮಕೃಷ್ಣ ಭಟ್ಟ ಧುಂಡಿಯವರ ಮನೆಗೆ ತೆರಳಿ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಸನ್ಮಾನಿಸಿ, ಗೌರವಿಸಿ, ಸಮ್ಮೇಳನಕ್ಕೆ ಆತ್ಮೀಯವಾಗಿ ಆಮಂತ್ರಿಸಲಾಯಿತು.

ಕ.ಸಾ.ಪ.ತಾಲೂಕಾ ಘಟಕದ ಅಧ್ಯಕ್ಷ ಸುಬ್ರಹ್ಮಣ್ಯ ಭಟ್, ಕಾರ್ಯದರ್ಶಿ ಜಿ.ಎನ್.ಭಟ್ ತಟ್ಟಿಗದ್ದೆ, ಕೇಂದ್ರ ಸಮಿತಿ ಸದಸ್ಯ ವೇಣುಗೋಪಾಲ ಮದ್ಗುಣಿ, ಪ್ರಮುಖರಾದ ಬೀರಣ್ಣ ನಾಯಕ ಮೊಗಟಾ, ಸಾಹಿತಿ ಟಿ.ವಿ.ಕೋಮಾರ್, ಟಿ.ವಿ.ಹೆಗಡೆ, ಕೃಷ್ಣ ಭಟ್ಟ ನಾಯಕನಕೆರೆ, ನವೀನ ಹೆಗಡೆ, ಗುರು ಭಟ್ಟ ಹಾಸಣಗಿ, ಗ.ರಾ.ಭಟ್ಟ, ಗಣೇಶ ಹೆಗಡೆ ಶ್ರೀಮತಿ ಕೋಮಾರ ಮುಂತಾದವರು ಇದ್ದರು.

ಅಂಬೇಡ್ಕರ್ ಮಹಾಪರಿನಿರ್ವಾಣ ದಿನಾಚರಣೆ

ಹಾವೇರಿ: ಜಿಲ್ಲಾ ಪಂಚಾಯತ್ ಸಮಾಜ ಕಲ್ಯಾಣ ಇಲಾಖೆ, ನಗರಸಭೆ ಹಾವೇರಿ ಹಾಗೂ ವಿವಿಧ ದಲಿತ ಒಕ್ಕೂಟಗಳ ಸಂಯುಕ್ತ ಆಶ್ರಯದಲ್ಲಿ ಶುಕ್ರವಾರ ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ಆಯೋಜಿಸಲಾಗಿದ್ದ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ. ಬಿ ಆರ್ ಅಂಬೇಡ್ಕರ್ ಅವರ 68ನೇ ಮಹಾಪರಿನಿರ್ವಾಣ ದಿನಾಚರಣೆಯ ಕಾರ್ಯಕ್ರಮದಲ್ಲಿ ಡಾ. ಬಿ ಆರ್ ಅಂಬೇಡ್ಕರ್ ರವರ ಭಾವ ಚಿತ್ರಕ್ಕೆ ಜಿಲ್ಲಾಧಿಕಾರಿ ಡಾ. ವಿಜಯ ಮಹಾಂತೇಶ್ ದಾನಮ್ಮನವರ ಪುಷ್ಪ ನಮನ ಸಲ್ಲಿಸಿದರು.

ಇದಕ್ಕೂ ಮೊದಲು ನಗರದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿಗೆ ಜಿಲ್ಲಾಧಿಕಾರಿ ಡಾ. ವಿಜಯ ಮಹಾಂತೇಶ್ ದಾನಮ್ಮನವರ ಮಾಲಾರ್ಪಣೆ ಮಾಡಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಡಾ. ಎಲ್ ನಾಗರಾಜ್, ಉಪ ವಿಭಾಗಧಿಕಾರಿ ಚನ್ನಪ್ಪ, ತಹಸೀಲ್ದಾರ್ ಶರಣಮ್ಮ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಪ್ರಶಾಂತ ವರಗಪ್ಪನವರ ಉಡಚಪ್ಪ ಮಾಳಗಿ, ಪರಮೇಶ್ವರಪ್ಪ ಮೇಗಳಮನಿ ಉಪಸ್ಥಿತರಿದ್ದರು.

ವಿಶ್ವ ಮಣ್ಣು ಆರೋಗ್ಯ ದಿನಾಚರಣೆ ಕಾರ್ಯಕ್ರಮ

ಹಾವೇರಿ: ಹನುಮನಮಟ್ಟಿ ಕೃಷಿ ವಿಜ್ಞಾನಕೇಂದ್ರ, ಕೃಷಿ ಇಲಾಖೆ ಹಾಗೂ ಮೇವುಂಡಿಯ ಸರಕಾರಿ ಪ್ರೌಢಶಾಲೆ ಸಹಯೋಗದಲ್ಲಿ ವಿಶ್ವ ಮಣ್ಣು ಆರೋಗ್ಯ ದಿನಾಚರಣೆ ಕಾರ್ಯಕ್ರಮ ಗುರುವಾರ ಬಸವೇಶ್ವರ ದೇವಸ್ಥಾನದ ಪ್ರಾಂಗಣದಲ್ಲಿ ಜರುಗಿತು.

ಹನುಮನಮಟ್ಟಿ ಕೃಷಿ ವಿಜ್ಞಾನಕೇಂದ್ರದ ವಿಜ್ಞಾನಿ ಡಾ. ಕೃಷ್ಣ ನಾಯ್ಕ ಮಾತನಾಡಿ, ಮಣ್ಣು ಆರೋಗ್ಯ ಕಾರ್ಡ್ ಪರಿಶೀಲನೆ ಹಾಗೂ ತಮ್ಮ ಹೊಲಕ್ಕೆ ಯಾವರೀತಿ ಕ್ರಮ ಕೈಗೊಳ್ಳಬೇಕು ಎಂದು ವಿವರಿಸಿದರು.

ಗುತ್ತಲದ ಕೃಷಿ ಅಧಿಕಾರಿ ಧನುಷ್ ಕೆ ಎಸ್ ಅವರು ಮಣ್ಣಿನ ಆರೋಗ್ಯ ಮಹತ್ವ ಹಾಗೂ ಅದನ್ನು ಕಾಪಾಡಿಕೊಳ್ಳುವ ವಿಧಗಳನ್ನು ತಿಳಿಸುವುದರ ಜೊತೆಗೆ ಇಲಾಖೆಯಿಂದ ರೈತರಿಗೆ ಸಿಗುವ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು.

ನಬಾರ್ಡನ ಜಿಲ್ಲಾ ಅಭಿವೃದ್ಧಿ ಅಧಿಕಾರಿ ರಂಗನಾಥ ಎಸ್ ಅವರು ಮಕ್ಕಳೊಂದಿಗೆ ಮಣ್ಣಿನ ಆರೋಗ್ಯ ರಕ್ಷಣೆಯ ಕ್ರಮಗಳ ಕುರಿತು ಸಂವಾದ ನಡೆಸಿದರು. ವಿದ್ಯಾರ್ಥಿಗಳಾದ ಭುವನೇಶ್ವರಿ ಗೊರವರ, ಭಾಗ್ಯಲಕ್ಷ್ಮಿ ಹಿರೇಮಠ, ರಕ್ಷಿತಾ ದೇಶಗತ್ತಿ ಮಣ್ಣಿನ ಆರೋಗ್ಯದ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ಗ್ರಾ.ಪಂ. ಅಧ್ಯಕ್ಷೆ ಶರಿಫಾಬಿ ನದಾಫ್, ಎಸ್ ಡಿ ಎಂಸಿ ಅಧ್ಯಕ್ಷ ಪರಮೇಶಪ್ಪ ಕಿತ್ತೂರ, ಸದಸ್ಯ ಖಾದರಸಾಬ ನದಾಫ್, ಮಾಜಿ ಅಧ್ಯಕ್ಷೆ ಮಂಜುಳಾ ನಿಂ ಗೊರವರ, ಇಲಾಖೆಯ ತಾಂತ್ರಿಕ ಸಹಾಯಕ ಸುರೇಶ್‌ಎಸ್ ನಾಯ್ಕ, ಗ್ರಾ ಪಂ ಕಾರ್ಯದರ್ಶಿ ಸುರೇಶ್ ಕಡಕೋಳ, ಗ್ರಾಮದ ಮುಖಂಡರಾದ ಸಿದ್ದಪ್ಪ ಕರೆಮ್ಮನವರ, ಸುರೇಶ್ ಪೂಜಾರ, ಬಸವರಾಜ ಕರೆಮ್ಮನವರ, ಪರಶುರಾಮ, ಪ್ರೌಢಶಾಲೆಯ ಸವಿತಾ, ನೀಲಮ್ಮ ದ್ಯಾವನಗೌಡ್ರ, ಸಚಿನ್ ವಾಲ್ಮೀಕಿ, ಪ್ರದೀಪ್ ವಿಜಾಪೂರ ಮಂಜುನಾಥ ಉಪಸ್ಥಿತರಿದ್ದರು

ಸಮಾಚಾರ ಸಣ್ಣದಲ್ಲ

ಅಂಬೇಡ್ಕರ್ ಮಹಾ ಪರಿನಿರ್ವಾಣ ದಿನಾಚರಣೆ

ಧಾರವಾಡ: ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಮಹಾ ಪರಿನಿರ್ವಾಣ ದಿನಾಚರಣೆ ನಿಮಿತ್ತ, ನಗರದ ಕಲಾಭವನ ಎದುರಿಗೆ ಇರುವ ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆಗೆ ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಸೇರಿದಂತೆ ಗಣ್ಯರಿಂದ ಮಾಲಾರ್ಪಣೆ, ಪುಷ್ಪಾರ್ಪಣೆ ಕಾರ್ಯಕ್ರಮ ಜರುಗಿತು. ನಂತರ ಜಿಲ್ಲಾಧಿಕಾರಿಗಳ ಕಚೇರಿ ನೂತನ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪೂಜೆ, ಪುಷ್ಪಾರ್ಚಣೆ ಮಾಡಿ, ಅವರು ನಮಿಸಿದರು. ಈ ಸಂದರ್ಭದಲ್ಲಿ ಮಹಾನಗರ ಪೊಲೀಸ್ ಆಯುಕ್ತ ಎನ್. ಶಶಿಕುಮಾರ, ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ., ತಹಶೀಲ್ದಾರ ಡಿ.ಎಚ್.ಹೂಗಾರ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕಿ ಪಿ.ಶುಭ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಸಿಬ್ಬಂದಿ ಭಾಗವಹಿಸಿದ್ದರು.

ಮಹಾತ್ಮರ ಮೂರ್ತಿಗಳ ಅಂಬಾರಿ ಮೆರವಣಿಗೆ ನಾಳೆ

ಹುಬ್ಬಳ್ಳಿ: ಸಿದ್ಧಾರೂಢರು ಮತ್ತು ಸಮಕಾಲೀನ ಮಹಾತ್ಮರ ಅಂಬಾರಿ ಉತ್ಸವ ಹುಬ್ಬಳ್ಳಿಯಲ್ಲಿ ಡಿಸೆಂಬರ್ 8ರಂದು ಮುಕ್ತಾಯವಾಗಲಿದ್ದು, 5 ಆನೆಗಳ ಮೇಲೆ ಮಹಾತ್ಮರ ಮೂರ್ತಿಗಳ ಅಂಬಾರಿ ಮೆರವಣಿಗೆ ನಡೆಯಲಿದೆ ಎಂದು ಅಂಬಾರಿ ಉತ್ಸವ ಸೇವಾ ಟ್ರಸ್ಟ್ ಕಮಿಟಿ ಅಧ್ಯಕ್ಷ ಮನೋಜ ಕುಮಾರ ಗದಗಿನ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಗಮ ಯಾತ್ರೆಯೂ ನ. 15 ರಿಂದಲೇ ಪ್ರಾರಂಭ ಆಗಿದ್ದು, ಧಾರವಾಡ ಜಿಲ್ಲೆಯ ಎಲ್ಲ ಹಳ್ಳಿಗಳಿಗೂ ಈಗಾಗಲೇ ಭೇಟಿ ನೀಡಿದೆ ಎಂದರು. ಡಿ. 8ರಂದು ಬೆಳಗ್ಗೆ 8ಕ್ಕೆ ಮಠದ ಅಂಬಾರಿ ಹೊತ್ತ 5ಆನೆಗಳೊಂದಿಗೆ ಮೆರವಣಿಗೆ ಪ್ರಾರಂಭವಾಗಲಿದೆ. ಕೊಪ್ಪಿಕರ ರಸ್ತೆ, ತುಳಜಾಭವಾನಿ ಸರ್ಕಲ್, ಸಂಗೊಳ್ಳಿ ರಾಯಣ್ಣ ಸರ್ಕಲ್, ಚೆನ್ನಮ್ಮ ವೃತ್ತ, ಕಾರವಾರ ರಸ್ತೆ ಮೂಲಕ ಶ್ರೀಸಿದ್ಧಾರೂಢಮಠಕ್ಕೆ ಸಂಜೆ 4 ಗಂಟೆಗೆ ತಲುಪಲಿದೆ. ವಿವಿಧ ಕಲಾತಂಡಗಳು ಸಹ ಮೆರವಣಿಗೆಯಲ್ಲಿ ಭಾಗವಹಿಸಲಿದ್ದು, ಶಿರಹಟ್ಟಿಯ ಫಕೀರ ಸಿದ್ದರಾಮೇಶ್ವರ ಸ್ವಾಮೀಜಿ, ಸಚಿವ ಈಶ್ವರ ಖಂಡ್ರೆ ಸೇರಿದಂತೆ ಹಲವಾರು ಗಣ್ಯರು ಭಾಗವಹಿಸಲಿದ್ದಾರೆ ತಿಳಿಸಿದರು.

ಕುಸುಗಲ್ಲ ಗ್ರಾಮಕ್ಕೆ ಕಾಶಿ ಪೀಠದ ಜಗದ್ಗುರುಗಳ ಭೇಟಿ

ಹುಬ್ಬಳ್ಳಿ: ವೀರಶೈವ ಧರ್ಮದ ಪಂಚಪೀಠಗಳಲ್ಲಿ ಒಂದಾದ ಉತ್ತರಪ್ರದೇಶದ ವಾರಾಣಾಸಿ ನಗರದಲ್ಲಿರುವ ಕಾಶಿ ಜ್ಞಾನ ಪೀಠದ ಹಿರಿಯ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಹುಬ್ಬಳ್ಳಿಯ ತಾಲೂಕಿನ ಕುಸೂಗಲ್ಲ ಗ್ರಾಮಕ್ಕೆ ಭೇಟಿ ನೀಡಿ ಭಕ್ತರಿಗೆ ಆಶೀರ್ವದಿಸಿದರು. ಧರ್ಮ ಜಾಗೃತಿ ಕೈಂಕರ್ಯಕ್ಕಾಗಿ ಪ್ರಸ್ತುತ ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸಂಚಾರ ಕೈಕೊಂಡಿರುವ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು, ಭಕ್ತರ ಕೋರಿಕೆಯಂತೆ ಗುರುವಾರ ಕುಸೂಗಲ್ಲ ಗ್ರಾಮಕ್ಕೆ ಭೇಟಿ ನೀಡಿ ಭಕ್ತ ಸಮೂಹದ ಗೌರವ ಸ್ವೀಕರಿಸಿದರು. ಗ್ರಾಮದಲ್ಲಿ ಇಷ್ಟಲಿಂಗ ಮಹಾಪೂಜೆ ನೆರವೇರಿಸಿದರು. ಇದೇ ಸಂದರ್ಭದಲ್ಲಿ ಕುಸುಗಲ್ಲ ಗ್ರಾಮದ ಹಿರೇಮಠಕ್ಕೂ ಆಗಮಿಸಿ ಆಶೀರ್ವದಿಸಿದರು. ಹಿರೇಮಠದ ಲಿಂಗೈಕ್ಯ ಗುರುಸಿದ್ಧಯ್ಯಸ್ವಾಮಿ ಅವರು ರಂಭಾಪುರಿ ಪೀಠದ ಲಿಂಗೈಕ್ಯ ಜಗದ್ಗುರು ವೀರಗಂಗಾಧರ ಶಿವಾಚಾರ್ಯ ಭಗವತ್ಪಾದರ ಸೇವೆಗೈದ ವಿಚಾರಗಳನ್ನು ನೆನಪಿಸಿಕೊಂಡರು. ಗಿರಿಜಾದೇವಿ ಹಿರೇಮಠ, ಜಗದೀಶ ಹಿರೇಮಠ, ರಾಜೇಶ್ವರಿ ಹಿರೇಮಠ, ಶಿವಪ್ರಭಾ ಹಿರೇಮಠ ಮತ್ತು ಗಂಗಾಧರ ಸಂಕರಡ್ಡಿ ಇದ್ದರು.

ಗುರುವಂದನೆ, ಸ್ನೇಹ ಸಮ್ಮಿಲನ ನಾಳೆ

ಧಾರವಾಡ: ತಾಲೂಕಿನ ಅಮ್ಮಿನಬಾವಿ, ಕರಡಿಗುಡ್ಡ ಹಾಗೂ ಮರೇವಾಡ ಗ್ರಾಮದಲ್ಲಿಯ ಸರಕಾರಿ ಪ್ರಾಥಮಿಕ ಶಾಲೆಗಳು ಹಾಗೂ ಶ್ರೀಶಾಂತೇಶ್ವರ ಪ್ರೌಢ ಶಾಲೆಯಲ್ಲಿ 1996-97ನೆಯ ಶೈಕ್ಷಣಿಕ ವರ್ಷದಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಹಮ್ಮಿಕೊಂಡಿರುವ ಗುರುವಂದನೆ ಮತ್ತು ಸ್ನೇಹ ಸಮ್ಮಿಲನ ಸಮಾರಂಭವು ರವಿವಾರ ಡಿ.8 ರಂದು ಅಮ್ಮಿನಬಾವಿಯ ಶ್ರೀಶಾಂತೇಶ್ವರ ಪ್ರೌಢಶಾಲೆಯ ಸಭಾಭವನದಲ್ಲಿ ಮುಂಜಾನೆ 10ಗಂಟೆಗೆ ಜರುಗಲಿದೆ. ಅಮ್ಮಿನಬಾವಿ ಸಂಸ್ಥಾನ ಪಂಚಗೃಹ ಹಿರೇಮಠದ ಶ್ರೀಅಭಿನವ ಶಾಂತಲಿಂಗ ಶಿವಾಚಾರ್ಯ ಸ್ವಾಮಿಗಳು ಸಮಾರಂಭ ಉದ್ಘಾಟಿಸಲಿದ್ದು, ಶ್ರೀಶಾಂತೇಶ್ವರ ಪ್ರೌಢ ಶಾಲೆಯ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಎಂ.ವ್ಹಿ. ಹೊಸೂರ ಅಧ್ಯಕ್ಷತೆವಹಿಸುವರು. ಧಾರವಾಡ ಡಿಡಿಪಿಐ ಎಸ್.ಎಸ್. ಕೆಳದಿಮಠ ಮುಖ್ಯ ಅತಿಥಿಯಾಗಿ ಮತ್ತು ಶ್ರೀಶಾಂತೇಶ್ವರ ಪ್ರೌಢ ಶಾಲೆಯ ಮುಖ್ಯಾಧ್ಯಾಪಕ ಮೃತ್ಯುಂಜಯ ಅಂಗಡಿ ಅತಿಥಿಯಾಗಿ ಆಗಮಿಸುವರು. ಶ್ರೀಶಾಂತೇಶ್ವರ ಪ್ರೌಢ ಶಾಲೆಯ ಮತ್ತು ಎಲ್ಲ ಗ್ರಾಮಗಳ ಸರಕಾರಿ ಪ್ರಾಥಮಿಕ ಶಾಲೆಗಳ ಒಟ್ಟು 18ಜನ ಶಿಕ್ಷಕ-ಶಿಕ್ಷಕಿಯರುಗೆ ಗುರುವಂದನೆ ಸಲ್ಲಿಸಲಾಗುವುದು. ಇದೇ ಸಂದರ್ಭದಲ್ಲಿ ದೇಶಸೇವೆಯಲ್ಲಿರುವ ಸಹಪಾಠಿ ಸೈನಿಕರನ್ನು ಹಾಗೂ ಪಿ.ಎಸ್.ಐ. ಹುದ್ದೆಗೆ ನೇಮಕಗೊಂಡಿರುವ ಕವಿತಾ ಕರ್ಕಿ ಅವರನ್ನು ಗೌರವಿಸಲಾಗುತ್ತಿದೆ ಎಂದು ಹಳೆಯ ವಿದ್ಯಾರ್ಥಿಗಳು ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಲಕ್ಷ್ಮೇಶ್ವರದ ತಾ.ಪಂ. ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಶಾಸಕ ಡಾ.ಚಂದ್ರು ಲಮಾಣಿ ಮಾತನಾಡಿದರು. ತಹಸೀಲ್ದಾರ ವಾಸುದೇವ ಸ್ವಾಮಿ, ಎಂ.ವಿ.ಚಳಗೇರಿ, ಕೃಷ್ಣಪ್ಪ ಧರ್ಮರ ಇದ್ದರು.

ಅವ್ಯವಸ್ಥೆ ಸರಿಪಡಿಸದಿದ್ದರೆ ಕ್ರಮ

ಅಳ್ನಾವರ ಹಾಸ್ಟೆಲ್‌ಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಪಾಲಿಕೆ ಆಯುಕ್ತ ಉಳ್ಳಾಗಡ್ಡಿ

ಅಳ್ನಾವರ್: ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಆಯುಕ್ತರಾದ ಡಾಕ್ಟರ್ ಈಶ್ವರ ಉಳ್ಳಾಗಡ್ಡಿ ಅವರು, ನಗರಾಭಿವೃದ್ಧಿ ಇಲಾಖೆ ಬೆಂಗಳೂರಿಂದ ನೋಡಲ್ ಅಧಿಕಾರಿಯಾಗಿ ಅಳ್ನಾವರಕ್ಕೆ ನೇಮಕಗೊಂಡ ಹಿನ್ನೆಲೆಯಲ್ಲಿ, ಅಳ್ನಾವರ ವಸತಿ ನಿಲಯಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಅಳ್ನಾವರದಲ್ಲಿರುವ ಸರಕಾರಿ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ ಹಾಗೂ ದೇವರಾಜ್ ಅರಸು ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯಗಳಿಗೆ ದಿಢೀರನೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ನೀಡಲಾದ ಸೌಲಭ್ಯಗಳನ್ನು ಪರಿಶೀಲಿಸಿದರು.

ಮೊದಲು ಸರಕಾರಿ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯಕ್ಕೆ ಭೇಟಿ ನೀಡಿದ ಆಯುಕ್ತರು ಕುಡಿಯುವ ನೀರು, ಶೌಚಾಲಯ, ಅಡುಗೆ ಮನೆ , ಉಗ್ರಾಣ, ಬಿಸಿ ನೀರಿನ ವ್ಯವಸ್ಥೆ, ಸ್ವಚ್ಛತೆ ಹಾಗೂ ಇನ್ನಿತರ ಸೌಲಭ್ಯಗಳನ್ನು ಪರಿಶೀಲಿಸಿದ ಆಯುಕ್ತರು, ಬೇಳೆ ಕಾಳುಗಳ ಗುಣಮಟ್ಟವನ್ನು ಪರೀಕ್ಷಿಸಿದರು. ಬಾಲಕರಿಗೆ ನೀಡಲಾಗುತ್ತಿದ್ದ ಊಟದ ಗುಣಮಟ್ಟವನ್ನು ಪರೀಕ್ಷಿಸಿದರು ಹಾಗೂ ಹಾಸಿಗೆ ಕಡಿಮೆ ಇರುವ ಕುರಿತು ಬಾಲಕರ ದೂರಿನ ಮೇರೆಗೆ ಸ್ಥಳದಲ್ಲಿ ಹಾಜರಿದ್ದ ಅಳ್ನಾವರ ತಹಸೀಲ್ದಾರ್ ಬಸವರಾಜ ರವರಿಗೆ ಹಾಸಿಗೆಯನ್ನು ತಕ್ಷಣ ಪೂರೈಸುವಂತೆ ಆದೇಶಿಸಿದರು.

ವಸತಿ ಶಾಲೆಗಳಲ್ಲಿ ಟ್ಯೂಷನ್ ಶಿಕ್ಷಕರ ಅವಶ್ಯಕತೆ ಇದೆ ಎನ್ನುವ ಬಾಲಕರ ದೂರಿನ ಮೇರೆಗೆ ತಕ್ಷಣ ಶಿಕ್ಷಕರನ್ನು ನೇಮಿಸುವಂತೆ ಆದೇಶಿಸಿದರು. ಎಲ್ಲಾ ಮಕ್ಕಳಿಗೆ ಆರೋಗ್ಯದ ಕುರಿತು ವಿಚಾರಿಸಿ, ಊಟ ಮತ್ತು ಇಲ್ಲಿನ ವ್ಯವಸ್ಥೆಯ ಕುರಿತು ಕೇಳಿದಾಗ ಎಲ್ಲರಿಂದಲೂ ಉತ್ತಮ ಪ್ರತಿಕ್ರಿಯೆ ವ್ಯರ್ಥವಾಯಿತು. ಸರಕಾರಿ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯದ ವ್ಯವಸ್ಥೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ನಂತರ ಅಲ್ಲಿನ ಶೌಚಾಲಯದ ವ್ಯವಸ್ಥೆಯನ್ನು ಕಂಡು ವಾರ್ಡನ್ ಅವರನ್ನು ತರಾಟೆಗೆ ತೆಗೆದುಕೊಂಡರು.

ಶೌಚಾಲಯದ ವ್ಯವಸ್ಥೆ ತುಂಬಾ ಹದಗೆಟ್ಟಿದ್ದು, ಊಟದ ಕೋಣೆಯ ಸ್ವಚ್ಛತೆಯ ಬಗ್ಗೆ ಕಳವಳ ವ್ಯಕ್ತಪಡಿಸಿದರು. ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಿಲ್ಲದ ಕಾರಣ ವಾರ್ಡನ್ ಅವರಿಗೆ ತಕ್ಷಣ ನೋಟಿಸ್ ನೀಡಿ ಸರಕಾರಕ್ಕೆ ಮಾಹಿತಿ ನೀಡುವಂತೆ ತಹಸೀಲ್ದಾರರನ್ನು ಆದೇಶಿಸಿದರು. ಪ್ರತಿಯೊಂದು ಮಕ್ಕಳ ಆರೋಗ್ಯದ ಕುರಿತು ವಿಚಾರಿಸಿದರು.

ವಸತಿ ನಿಲಯ ಪರಿಶೀಲನೆ ಸಂದರ್ಭದಲ್ಲಿ ಪ್ರಕಾಶ್ ಮುಗದಮ ಮುಖ್ಯಾಧಿಕಾರಿಗಳು ಜಿಲ್ಲಾ ಪಂಚಾಯತ್ ಅಳ್ನಾವರ, ಬಸವರಾಜ್ ಬೆಣ್ಣಿಶಿರೂರ ತಹಸೀಲ್ದಾರರು ಅಳ್ನಾವರ, ಪ್ರಶಾಂತ್ ತುಕಾರಾಣಿ ಇದ್ದರು.

ವಿದ್ಯಾರ್ಥಿ ನಿಲಯಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದ ಪಾಲಿಕೆ ಆಯುಕ್ತ ಡಾ.ಈಶ್ವರ ಉಳ್ಳಾಗಡ್ಡಿ.

ವಸತಿ ನಿಲಯದ ಸುತ್ತಮುತ್ತಲು ಸ್ವಚ್ಛತೆಯನ್ನು ವಾರ್ಡನ್ ಸ್ವಲ್ಪ ಗಮನದಲ್ಲಿಟ್ಟು ನೋಡಿಕೊಳ್ಳಿ. ಇದು ಸಿಬ್ಬಂದಿಗೂ ಅನ್ವಯ. ವಿದ್ಯಾರ್ಥಿಗಳು ಯಾವುದೇ ರೀತಿಯ ತೊಂದರೆ ಉಂಟಾದಲ್ಲಿ ನನ್ನ ನಂಬರಿಗೆ ಫೋನ್ ಮಾಡಿ ತಿಳಿಸಬೇಕು. ಸ್ವಲ್ಪ ದಿನದಲ್ಲಿ ಇನ್ನೊಮ್ಮೆ ನಾನು ಭೇಟಿ ನೀಡುವವನಿದ್ದು, ಯಾವುದೇ ರೀತಿಯ ಅವ್ಯವಸ್ಥೆ ಕಂಡು ಬಂದಲ್ಲಿ ನಿಯಮಾನುಸಾರ ಕಾನೂನು ಕ್ರಮ ಕೈಗೊಳ್ಳುತ್ತೇನೆ.

-ಡಾ.ಈಶ್ವರ ಉಳ್ಳಾಗಡ್ಡಿ, ಪಾಲಿಕೆ ಆಯುಕ್ತ

ಅಂಬೇಡ್ಕರ್ ಆದರ್ಶ ನಮಗೆಲ್ಲರಿಗೂ ಸ್ಫೂರ್ತಿಯಾಗಲಿ: ಈರೇಶ ಅಂಚಟಗೇರಿ

ಧಾರವಾಡ: ಸಂವಿಧಾನ ಶಿಲ್ಪಿ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ 68ನೇ ಮಹಾಪರಿನಿರ್ವಾಣ ದಿನವನ್ನು ಧಾರವಾಡದಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು. ಧಾರವಾಡದ ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆಗೈದು ಪುಷ್ಪನಮನಗಳನ್ನು ಸಲ್ಲಿಸಿ, ಮಾಜಿ ಮೇಯರ್ ಈರೇಶ ಅಂಚಟಗೇರಿ ಮಾತನಾಡಿ, ಶೋಷಿತ ವರ್ಗಗಳ ಶಿಕ್ಷಣ, ಮಹಿಳೆಯರ ಸಬಲೀಕರಣ, ಅವರ ಏಳಿಗೆ ಹಾಗೂ ಬಡಜನರ ಆರ್ಥಿಕ ಸ್ಥಿತಿ ಸುಧಾರಿಸುವ ಸಲುವಾಗಿ ತಮ್ಮ ಇಡೀ ಜೀವನವನ್ನು ಮುಡಿಪಾಗಿಟ್ಟ ಸಾಮಾಜಿಕ ನ್ಯಾಯದ ಪ್ರವರ್ತಕರು, ನಮ್ಮ ಸಂವಿಧಾನದ ಶಿಲ್ಪಿ ಭಾರತ ರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರು.

ಮಹಾಪರಿನಿರ್ವಾಣ ದಿನ ಈ ವಿಶೇಷ ದಿನದಂದು ಅವರಿಗೆ ನನ್ನ ಭಾವಪೂರ್ಣ ನಮನಗಳು ಎಂದರು.

ಭಾರತದ ಇತಿಹಾಸ,ಸಂಸ್ಕೃತಿ,ಪರಂಪರೆ ಬಗ್ಗೆ ಅಗಾದ ಪಾಂಡಿತ್ಯ ಹಾಗೂ ಗೌರವ ಹೊಂದಿದ್ದ ವ್ಯಕ್ತಿತ್ವ ಡಾ.ಬಿ.ಆರ್.ಅಂಬೇಡ್ಕರ ಅವರದ್ದು, ಕಠಿಣ ಪರಿಶ್ರಮ, ಸಾಧನೆ, ತತ್ವ ಆದರ್ಶ ನಮಗೆಲ್ಲರಿಗೂ ಸ್ಫೂರ್ತಿಯಾಗಲಿ.

ಅವರು ಹಾಕಿ ಕೊಟ್ಟ ಹಾದಿಯಲ್ಲಿ ನಾವೆಲ್ಲರೂ ಸಾಗೋಣವೆಂದು ಮಾಜಿಮಹಾಪೌರರು ಹೇಳಿದರು.

ಈ ಸಂದರ್ಭದಲ್ಲಿ ಸುನೀಲ ಮೋರೆ ರಘು ತೇರದಾಳ, ಸುನೀಲ ಹೊಂಗಲ, ಪ್ರಕಾಶ ಮಲ್ಲಿಗವಾಡ, ಚಂದ್ರಕಲಾ ಕೊಟಬಾಗಿ, ರಮೇಶ ದೊಡವಾಡ, ಕಾಂಬಳೆ ಕದಂ , ಮಂಜು ಕಮ್ಮಾರ ಸುಣಗಾರ ಹಾಗು ಧಾರವಾಡದ ಗಣಮಾನ್ಯರು ಉಪಸ್ಥಿತರಿದ್ದರು.

ಗದಗ: ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 68ನೇ ಮಹಾಪರಿನಿರ್ವಾಣ ದಿನಾಚರಣೆ ನಿಮಿತ್ತ ಶುಕ್ರವಾರ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಜಿಲ್ಲಾಧಿಕಾರಿ ಗೋವಿಂದರೆಡ್ಡಿ ಅವರು ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಿ ಗೌರವ ನಮನ ಸಲ್ಲಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಭರತ್ ಎಸ್, ಜಿಲ್ಲಾ ಪೊಲೀಸ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ, ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು, ತಾಲೂಕು ಮಟ್ಟದ ಅಧಿಕಾರಿಗಳು, ಸಿಬ್ಬಂದಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಿಂದುಳಿದ ವರ್ಗ ಅಲ್ಪಸಂಖ್ಯಾತ ವರ್ಗಗಳ ಸಮಾಜ ಮುಖಂಡರು, ಸರ್ವಸದಸ್ಯರು, ಗಣ್ಯ ವ್ಯಕ್ತಿಗಳು, ಸಂಘ ಸಂಸ್ಥೆಯ ಪದಾಧಿಕಾರಿಗಳು ಹಾಜರಿದ್ದರು.

ಅಧಿವೇಶನದಲ್ಲಿ ಉ.ಕ ಸಮಸ್ಯೆಗಳ ಚರ್ಚೆಗೆ ಸಿದ್ದಣ್ಣ ತೇಜಿ ಆಗ್ರಹ

ಹುಬ್ಬಳ್ಳಿ: ಉತ್ತರ ಕರ್ನಾಟಕ ಭಾಗಕ್ಕೆ ಯಾವುದೇ ರಾಜ್ಯಸರಕಾರ ಬಂದರು ಸಹ, ಅಭಿವೃದ್ಧಿ ವಿಷಯದಲ್ಲಿ ತಾರತಮ್ಯ ನಡೆಯುತ್ತಿದೆ. ಉತ್ತರ ಕರ್ನಾಟಕದಲ್ಲಿ ಸುವರ್ಣಸೌಧ ಕಟ್ಟಿ ಹತ್ತಾರು ವರ್ಷ ಕಳೆದರೂ ಅಭಿವೃದ್ಧಿ ವಿಚಾರದಲ್ಲಿ ಸೊನ್ನೆಯಾಗಿದೆ. ಬರುವ ಚಳಿಗಾಲದ ಅಧಿವೇಶನ ಕೇವಲ ಹೋರಾಟಕ್ಕೆ ಸಿಮೀತವಾಗಿದೆ. ಅಭಿವೃದ್ಧಿ ವಿಷಯವಾಗಿ ಚರ್ಚೆ ನಡೆಯುತ್ತಿಲ್ಲ. ಈ ಬಾರಿಯ ಚಳಿಗಾಲ ಅಧಿವೇಶನದಲ್ಲಿ ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳ ಕುರಿತಾಗಿ ಸುದೀರ್ಘವಾಗಿ ಚರ್ಚೆ ನಡೆಸಿ, ಪರಿಹಾರ ಕಂಡುಕೊಳ್ಳಬೇಕೆಂದು ಉತ್ತರ ಕರ್ನಾಟಕ ಅಭಿವೃದ್ಧಿ ಹೋರಾಟ ಸಮಿತಿಯ ಸಂಚಾಲಕ ಸಿದ್ದಣ್ಣ ತೇಜಿ ಆಗ್ರಹಿಸಿದರು.

ಹುಬ್ಬಳ್ಳಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,ಅಧಿವೇಶನದಲ್ಲಿ ಉತ್ತರ ಕರ್ನಾಟಕ ಭಾಗದ ಪ್ರಮುಖ ನೀರಾವರಿ ವಿಷಯಗಳಾದ ಕೃಷ್ಣ ಮೇಲ್ದಂಡೆ ಯೋಜನೆ, ತುಂಗಭದ್ರ ಹೂಳೆತ್ತುವ ಕಾರ್ಯ ಹಾಗೂ ಕಾಲುವೆ ಅಭಿವೃದ್ಧಿ ವಿಷಯಗಳ ಚರ್ಚೆ ಆಗಲೇಬೇಕು. ಜೊತೆಗೆ ಕಳಸಾ ಬಂಡೂರಿ ಮಹದಾಯಿ ವಿಚಾರವಾಗಿ 4 ದಶಕಗಳಿಂದ ಕೇವಲ ಹೋರಾಟ ಚರ್ಚೆ ಇದಕ್ಕೆ ಕೇವಲ ಹೋರಾಟ ಚರ್ಚೆ ಇದಕ್ಕೆ ಮಾತ್ರ ಸೀಮಿತವಾಗಿದೆ. ಈ ಬಾರಿ ಗಂಭೀರವಾದಂತ ಚರ್ಚೆ ಮುಖಾಂತರ ಕಾಮಗಾರಿ ಪ್ರಾರಂಭಿಸಬೇಕು ಎಂದು ಒತ್ತಾಯಿಸಿದರು.

ಐಟಿ ಬಿಟಿ ವಿಚಾರವಾಗಿ ಹುಬ್ಬಳ್ಳಿಯಲ್ಲಿ ಇನ್ಫೋಸಿಸ್ ಫೌಂಡೇಶನ್ ಕೇವಲ ದೇಶಪಾಂಡೆ ನೆಪಮಾತ್ರಕ್ಕೆ ಮಾತ್ರ ಕಟ್ಟಡಗಳನ್ನ ಕಟ್ಟಿಬಿಟ್ಟಿದ್ದಾರೆ.ಉತ್ತರ ಕರ್ನಾಟಕದ ಜನತೆಗೆ ಐಟಿ ಉದ್ಯೋಗವು ಮರಚೀಕೆಯಾಗಿದೆ.

ಬೆಂಗಳೂರಿನಲ್ಲಿ ಎಲ್ಲಾ ಐಟಿಬಿಟಿ ಕಂಪನಿಗಳು ಬೆಂಗಳೂರಿಗೆ ಸೀಮಿತವಾಗಿದೆ. ಐಟಿ ಕಂಪನಿಗಳು ಹುಬ್ಬಳಿಗೆ ಸ್ಥಳಾಂತರಿಸಬೇಕು ಎಂದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಅಭಿವೃದ್ಧಿ ವಿಷಯದ ಸಮಯವನ್ನು ಹಾಳ ಮಾಡಬಾರದು. ಒಂದು ವೇಳೆ ಚರ್ಚೆಗಳು ನಡೆಯದೇ ಹೋದಲ್ಲಿ, ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯದ ಬೇಡಿಕೆ ಹೋರಾಟ ಮಾಡಬೇಕಾಗುತ್ತದೆ ಎಂದು ಒತ್ತಾಯಿಸಿದರು.

ಹಲವು ಬೇಡಿಕೆಗಳ ಈಡೇರಿಕೆಗೆ ಚಾಲಕರ ಪ್ರತಿಭಟನೆ

ಧಾರವಾಡ: ಹುಬ್ಬಳ್ಳಿ-ಧಾರವಾಡ ಅವಳಿನಗರದಲ್ಲಿ ಸುಮಾರು 17 ಸಾವಿರ ಆಟೋ ರಿಕ್ಷಾಗಳಿದ್ದು, ಆಟೋ ರಿಕ್ಷಾ ಚಾಲಕರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆಟೋ ಪಾಸಿಂಗ್ ಮತ್ತು ರಹದಾರಿ (ಪರ್ಮಿಟ್) ನವೀಕರಣ ಮಾಡಿಸಿಕೊಳ್ಳಲು ಆರ್.ಟಿ.ಓ ಕಛೇರಿಯಲ್ಲಿನ ದಂಡ ಕೈ ಬಿಡಬೇಕು ಎಂದು ಆಗ್ರಹಿಸಿ ಆಟೋ ಚಾಲಕರು ಧಾರವಾಡದ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ಪ್ರಮುಖವಾಗಿ ಆಟೋ ರಿಕ್ಷಾ ರಹದಾರಿ (ಪರ್ಮಿಟ್) ನವೀಕರಣ ಆಗದೆ ಇರುವ ಆಟೋ ಮಾಲೀಕರಿಗೆ ತಿಂಗಳಿಗೆ 50 ದಂಡ ವಿಧಿಸುವುದು ಹುಬ್ಬಳ್ಳಿ ಪೂರ್ವ ಧಾರವಾಡ, ಪಶ್ಚಿಮ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ಮಾತ್ರ ದಂಡ ವಿಧಿಸುವ (ಭರಿಸುವ) ಕಾನೂನು ತಂದಿದ್ದು, ಇಡೀ ರಾಜ್ಯದ ಇನ್ನಿತರೆ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ಯಾವುದೇ ರೀತಿ ಪರ್ಮಿಟ್‌ಗೆ ದಂಡ ಇಲ್ಲದೇ ಸರಕಾರದ ದರದಲ್ಲಿ ನವೀಕರಣವಾಗುತ್ತದೆ.

ಮತ್ತು ಪರ್ಮಿಟ್ ಡ್ಯೂ ಸುಮಾರು 7 ವರ್ಷ ಅಥವಾ 8 ವರ್ಷಗಳ ಪರ್ಮಿಟ್ ಡ್ಯೂ ಆದ ಪರ್ಮಿಟ್ ದಂಡದ ಜೊತೆ 5 ವರ್ಷಗಳಂತೆ ಎರಡು ಸಲ ಪರ್ಮಿಟ್ ನವೀಕರಣ ಮಾಡುವ ಪದ್ಧತಿ ನಮ್ಮ ಹುಬ್ಬಳ್ಳಿ ಧಾರವಾಡ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ನಡೆದಿದೆ. ಇದನ್ನು ಬಿಟ್ಟು ಯಾವಾಗ ಪರ್ಮಿಟ್ ನವೀಕರಣಕ್ಕೆ ಅರ್ಜಿ ಸಲ್ಲಿಸುತ್ತಾರೋ, ಸರಕಾರದ ದರದಲ್ಲಿ 5 ವರ್ಷ ಪರ್ಮಿಟ್‌ನ್ನು ನೀಡಬೇಕು. ಮಾರಾಟವಾಗಿರುವ ಆಟೋ ರಿಕ್ಷಾ ಮಾಲೀಕರು ಅಧಿಕೃತ ಟಿಓ ಫಾರ್ಮ್ ಮೇಲೆ ರುಜು (ಸಹಿ) ಮಾಡಿಕೊಟ್ಟಿರುತ್ತಾರೆ. ಅದರ ಮೇಲೆ ವರ್ಗಾವಣೆಯನ್ನು ಮಾಡಬೇಕು. ಇದನ್ನು ತಳ್ಳಿ ಹಾಕಿ ಎರಡು ಪಾರ್ಟಿಗಳು ಇದ್ದಾಗ ವರ್ಗಾವಣೆ ಮಾಡುವ ಪ್ರಕ್ರಿಯೆಯನ್ನು ಕೈಬಿಡಬೇಕು ಎಂದರು.

ಧಾರವಾಡ ಜಿಲ್ಲೆಯಲ್ಲಿ ಎರಡು ಪ್ರಾದೇಶಿಕ ಸಾರಿಗೆ ಕಚೇರಿಗಳು ಇದ್ದು, ಹುಬ್ಬಳ್ಳಿಯಿಂದ ಧಾರವಾಡಕ್ಕೆ, ಧಾರವಾಡದಿಂದ ಹುಬ್ಬಳ್ಳಿ ಆಟೋ ರಿಕ್ಷಾ ಮಾರಾಟವಾಗಿರುವ ಆಟೋ ರಿಕ್ಷಾಗಳಿಗೆ ಸಿ.ಸಿ. (ಎನ್.ಓ.ಸಿ.) ಕಡ್ಡಾಯ ರದ್ದುಗೊಳಿಸಬೇಕು.

ಒಂದೇ ಜಿಲ್ಲಾ ಆಗಿದ್ದರಿಂದ ಸಿ.ಸಿ. (ಎನ್ .ಓ.ಸಿ) ಅವಶ್ಯಕತೆ ಇರುವುದಿಲ್ಲ. ಆಟೋ ರಿಕ್ಷಾ ಚಾಲಕರಿಗೆ ಆರ್.ಟಿ.ಓ. ಕಛೇರಿಯಲ್ಲಿ ಸರಳವಾಗಿ ಕೆಲಸವಾಗುವಂತೆ ಮಾಡಬೇಕು. ಮತ್ತು ಆರ್.ಟಿ.ಓ. ಕಛೇರಿಯಲ್ಲಿ ದರದ ಪಟ್ಟಿ ಅಳವಡಿಸಬೇಕು ಎಂದು ಆಗ್ರಹಿಸಿದರು.

22-10-2018ರಂದು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ, ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಸಭೆಯಲ್ಲಿ ನಿರ್ಣಯಿಸಿ, ಆಟೋ ರಿಕ್ಷಾ ಪರವಾನಿಗೆಯನ್ನು (ಪರ್ಮಿಟ್) ನಿರ್ಬಂಧಿಸಲು ಪ್ರಾಧಿಕಾರದಲ್ಲಿ ನಿರ್ಣಯಿಸಲಾಗಿತ್ತು.

ಇದರ ಮುಂಚೆ ಸುಮಾರು ಆಟೋ ರಿಕ್ಷಾಗಳು ಹೊರಬಂದಿದ್ದವು ಅಂತ ಆಟೋಗಳಿಗೆ 2 ಎರಡು ತಿಂಗಳು ಅವಕಾಶ ನೀಡಲಾಗಿತ್ತು.

ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ಕೆಲಸ ವಿಳಂಬದಿಂದ ಕೆಲಸವನ್ನು ಮಾಡಿ ಕೊಟ್ಟಿರುವುದಿಲ್ಲ. ಸುಮಾರು ಆಟೋ 22-10-2018 ಆದೇಶ ಹೊರತುಪಡಿಸಿ, ಹೊಸ ಆಟೋ ರಿಕ್ಷಾಗಳ ಪರವಾನಿಗೆ ಏನಾದರೂ ನೀಡಿದ್ದರೆ ತಕ್ಷಣ ಪರವಾನಿಗೆಯನ್ನು ರದ್ದುಗೊಳಿಸಬೇಕು. 22,10,2018 ಆದೇಶ ಮುಂದುವರೆಸಬೇಕು ಎಂದರು

ರಾಸಾಯನಿಕ ಮುಕ್ತ ಕೃಷಿಗೆ ಒತ್ತು ನೀಡಿ: ಪಾಟೀಲ

ಜಾಗತಿಕ ಮಣ್ಣು ದಿನದ ಆಚರಣೆಯಲ್ಲಿ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ಕೃಷ್ಣಗೌಡ ಸಲಹೆ ಸಲಹೆ

ಗದಗ: ಯುವಕರು ಕೃಷಿಯತ್ತ ಮುಖ ಮಾಡಬೇಕು. ಅದೂ ರಾಸಾಯನಿಕ ಮುಕ್ತ ಸಾವಯವ ಕೃಷಿಯಲ್ಲಿ ತೊಡಗುವ ಮೂಲಕ ತಮ್ಮ ಕುಟುಂಬ ಹಾಗೂ ಸಮಾಜದ ಸ್ವಾಸ್ಥ ಕಾಪಾಡಬೇಕು ಎಂದು ಗದಗ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ, ಯುವ ಮುಖಂಡ ಕೃಷ್ಣಗೌಡ ಪಾಟೀಲ ಹೇಳಿದರು.

ಜಿಲ್ಲೆಯ ಬೆಳಧಡಿ ತಾಂಡಾದ ಶ್ರೀಶರಣ ಬಸವೇಶ್ವರ ದೇವಸ್ಥಾನದಲ್ಲಿ ಜಾಗತಿಕ ಮಣ್ಣು ದಿನದ ಆಚರಣೆ ಅಂಗವಾಗಿ ಸಂಕಲ್ಪ ಸಂಸ್ಥೆಯ ವತಿಯಿಂದ ಆಯೋಜಿಸಿದ್ದ ಅಜೀಂ ಪ್ರೇಮಜಿ ಫೌಂಡೇಶನ್ ಯೋಜನೆ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿ, ಜನರ ಒಗ್ಗಟ್ಟು ಮತ್ತು ಸಹಕಾರ ಇದ್ದರೆ ಇಂತಹ ಸಂಘ ಸಂಸ್ಥೆಗಳು ಸಾಕಷ್ಟು ಯೋಜನೆಗಳನ್ನು ತಂದು ಕೊಡುತ್ತವೆ ಮತ್ತು ಇಂತಹ ಸಂಸ್ಥೆಗಳೊಂದಿಗೆ ಯಾವುದೇ ರೀತಿಯ ರಾಜಕೀಯ ಮಾಡದೇ ಸಹಕಾರ ನೀಡಿದರೆ ನಿಮ್ಮ ಜೀವನಕ್ಕೆ ಬಹಳ ಅನುಕೂಲವಾಗುವುದು. ಆದ್ದರಿಂದ ಇದರ ಉಪಯೋಗವನ್ನು ಪಡೆದುಕೊಂಡು ಅಭಿವೃದ್ಧಿಯೊಂದಿಗೆ ಸಾಗುವ ಗುರಿಯನ್ನು ಹೊಂದಬೇಕು ಎಂದು ಸಲಹೆ ನೀಡಿದರು.

ಸಮಾರಂಭವನ್ನು ಉದ್ಘಾಟಿಸಿದ ಹುಲಕೋಟಿಯ ಕೆ.ಎಚ್. ಪಾಟೀಲ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿಗಳು ಸಲಹೆಗಾರರಾದ ಡಾ.ಎಲ್.ಎಚ್. ಹಿರೇಗೌಡ್ರ ಅವರು ಮಾತನಾಡಿ, ಸಂಕಲ್ಪ ಸಂಸ್ಥೆಯು ಗದಗ ಜಿಲ್ಲೆಯ ಮುಂಡರಗಿ ಭಾಗದಲ್ಲಿ ಕೃಷಿ ಹೊಂಡಗಳು ಮತ್ತು ದೊಡ್ಡ ಊರಿನ ಕೆರೆಗಳ ಹೂಳೆತ್ತುವ ಕೆಲಸವನ್ನು ಗ್ರಾಮ ಪಂಚಾಯತಿಯ ಸಹಕಾರದೊಂದಿಗೆ ಕೆಲವು ಅನ್ನದಾನದ ಸಹಾಯದಿಂದ ಆಯ್ದ ಕೆಲವು ಗ್ರಾಮ ಪಂಚಾಯಿತಿಗಳಲ್ಲಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದ್ದು ಇದರ ಹೆಗ್ಗುರುತಾಗಿದೆ. ಹಾಗಾಗಿ ಈ ವರ್ಷದಿಂದ ಮೂರು ವರ್ಷಗಳ ಕಾಲ ಸಂಕಲ್ಪ ಸಂಸ್ಥೆಯು ಗದಗ ತಾಲ್ಲೂಕಿನ 13 ಹಳ್ಳಿಗಳಲ್ಲಿ ಬೋರ್‌ವೆಲ್ ರೀಚಾರ್ಜ, ಕೃಷಿ ಹೊಂಡ, ಮತ್ತು ಸಾರ್ವಜನಿಕ ಕೆರೆಗಳ ಹೂಳೆತ್ತುವ ಯೋಜನೆಯನ್ನು ನಿರ್ವಹಿಸಲು ಸಿದ್ದವಾಗಿದೆ. ಆದ್ದರಿಂದ ತಾವುಗಳು ಸಹಕಾರ ನೀಡಬೇಕೆಂದು ಹೇಳಿದರು.

ಹುಲಕೋಟಿಯ ಕೆ.ಎಚ್. ಪಾಟೀಲ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಹಾಗೂ ಸಲಹೆಗಾರ ಡಾ. ಎನ್.ಎಚ್. ಬಂಡಿ ಅವರು ಮಾತನಾಡಿ, ಜಾಗತಿಕ ಮಣ್ಣು ದಿನದ ಆಚರಣೆ ಮಾಡುತ್ತಿದ್ದು ನಾವುಗಳು ಮಣ್ಣಿನ ಫಲವತ್ತತೆ ಮತ್ತು ತಂತ್ರಜ್ಞಾನದ ಅರಿವನ್ನು ಹೊಂದಿರಬೇಕು ಎಂದು ವಿವರವಾದ ಮಾಹಿತಿಯನ್ನು ಗ್ರಾಮಸ್ಥರ ಮನಮುಟ್ಟುವಂತೆ ತಿಳಿಸಿದರು.

ಸಂಕಲ್ಪ ರೂರಲ್ ಡೆವಲಪ್‌ಮೆಮಟ್ ಸೊಸೈಟಿಯ ಸಂಸ್ಥಾಪಕ ಸಿಕಂದರ ಮೀರಾನಾಯಕ ಅವರು ಮಾತನಾಡಿ, ಸಂಕಲ್ಪ ಸಂಸ್ಥೆಯು ನಡೆದುಕೊಂಡು ಬಂದದಾರಿಯನ್ನು ವಿಸ್ತಾರವಾಗಿ ತಿಳಿಸುತ್ತ, ನಮ್ಮ ಸಂಕಲ್ಪ ಸಂಸ್ಥೆ ಸದಾ ನಿಮ್ಮೊಂದಿಗೆ ಇರುತ್ತದೆ ಎಂದು ಹೇಳಿದರು.

ಬೆಳಧಡಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಶಂಕ್ರಪ್ಪ ಶಿವಪ್ಪ ಹೊಸಮನಿ ಅವರು ಅಧ್ಯಕ್ಷತೆವಹಿಸಿದ್ದರು. ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ಲಕ್ಷ್ಮವ್ವ ಮುತ್ತಪ್ಪ ಮುಂದಲಮನಿ ವೇದಿಕೆಯಲ್ಲಿದ್ದರು.

ಕಾರ್ಯಕ್ರಮದಲ್ಲಿ ಹನಮಂತ ದಾಸರ ಸೇರಿ ಗ್ರಾಮಸ್ಥರು, ಯುವಕರು ಮತ್ತು ಮಹಿಳೆಯರು ಭಾಗವಹಿಸಿದ್ದರು.

ಗದಗ ಜಿಲ್ಲೆಯ ಬೆಳಧಡಿ ತಾಂಡಾದ ಶ್ರೀ ಶರಣ ಬಸವೇಶ್ವರ ದೇವಸ್ಥಾನದಲ್ಲಿ ಜಾಗತಿಕ ಮಣ್ಣು ದಿನದ' ಆಚರಣೆ ಅಂಗವಾಗಿ ಸಂಕಲ್ಪ ಸಂಸ್ಥೆಯ ವತಿಯಿಂದ ಆಯೋಜಿಸಿದ್ದ ಅಜೀಂ ಪ್ರೇಮಜಿ ಫೌಂಡೇಶನ್ ಯೋಜನೆಯನ್ನು ಗದಗ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ, ಯುವ ಮುಖಂಡ ಕೃಷ್ಣಗೌಡ ಪಾಟೀಲ ಉದ್ಘಾಟಿಸಿದರು.

ಶಾಸಕರತ್ತ ಜನ ಬೊಟ್ಟು ಮಾಡುವಂತೆ ಮಾಡಬೇಡಿ: ಶಾಸಕ ಚಂದ್ರು ಲಮಾಣಿ

ಲಕ್ಷ್ಮೇಶ್ವರ: ಪಟ್ಟಣದ ತಾ.ಪಂ. ಸಭಾಂಗಣದಲ್ಲಿ ಶುಕ್ರವಾರ ಶಾಸಕ ಡಾ. ಚಂದ್ರು ಲಮಾಣಿ ಅವರ ಅಧ್ಯಕ್ಷತೆಯಲ್ಲಿ ಸಾಮಾನ್ಯ ಸಭೆ ಜರುಗಿ ವಿವಿಧ ವಿಷಯಗಳ ಕುರಿತು ಚರ್ಚೆ ನಡೆಯಿತು.

ಈ ಸಂದರ್ಭದಲ್ಲಿ ಶಾಸಕ ಡಾ.ಚಂದ್ರು ಲಮಾಣಿ ಮಾತನಾಡಿ, ಅಂಗನವಾಡಿ ಶಿಕ್ಷಕಿಯರು ಮತ್ತು ಸಹಾಯಕಿಯರ ನೇಮಕಾತಿಯ ಕುರಿತು ಪ್ರಕಟವಾದ ತಾತ್ಕಾಲಿಕ ಆಯ್ಕೆಪಟ್ಟಿ ತಡೆಹಿಡಿದು ಉಂಟಾಗಿರುವ ತಾಂತ್ರಿಕ ತೊಂದರೆ ಸರಿಪಡಿಸಿ ಬಳಿಕ ಆಯ್ಕೆಪಟ್ಟಿ ಮರುಪ್ರಕಟಿಸಬೇಕೆಂದು ಜಿಲಾಧಿಕಾರಿಗಳಿಗೆ ಮನವಿ ಮಾಡಿದರು. ಅಂಗನವಾಡಿ ಶಿಕ್ಷಕಿ ಮತ್ತು ಸಹಾಯಕಿಯರ ಹುದ್ದೆಗೆ ಜಿಲ್ಲೆಯಾದ್ಯಂತ 5008 ಅರ್ಜಿಗಳು ರಾಷ್ಟ್ರೀಯ ಮಾಹಿತಿ ಕೇಂದ್ರ(ಎನ್ ಐಸಿ)ದ ಮೂಲಕ ಸಲ್ಲಿಕೆಯಾಗಿದ್ದವು. ಆದರೆ ಇದರಲ್ಲಿ ಸ್ವೀಕೃತವಾದ 3346 ಅರ್ಜಿಗಳಲ್ಲಿ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸಿ ಆಯ್ಕೆಪಟ್ಟಿ ಪ್ರಕಟಿಸಲಾಗಿದೆ. ಉಳಿದ 1562 ಅರ್ಜಿಗಳ ಸ್ಥಿತಿಗತಿಗಳೇನಾಗಿವೆ? ಅರ್ಹರಿದ್ದವರ ಪರಿಸ್ಥಿತಿ ಏನು? ಅವರಿಗಾಗುವ ಅನ್ಯಾಯ ಸರಿಪಡಿಸಬೇಕು. ಇದರಿಂದ ಲಕ್ಷ್ಮೇಶ್ವರ ತಾಲೂಕಿನ 300 ಅರ್ಜಿದಾರರು ಅತಂತ್ರರಾಗಿದ್ದಾರೆ. ಎಲ್ಲವನ್ನೂ ಕೂಲಂಕುಷವಾಗಿ ಪರಿಶೀಲಿಸಿದ ಬಳಿಕವೇ ಆಯ್ಕೆಪಟ್ಟಿ ಪ್ರಕಟಿಸಬೇಕು ಎಂದು ತಾಲೂಕು ಮಟ್ಟದ ಅಧಿಕಾರಿಗಳ ಮೂಲಕ ಅಗ್ರಹಿಸಿದರು. ತಾಲೂಕಿನಲ್ಲಿ ರಸ್ತೆಗಳ ಸ್ಥಿತಿಗತಿ ಸಂಪೂರ್ಣ ಹದಗೆಟ್ಟಿದೆ ಇಂತಹ ಪರಿಸ್ಥಿತಿಯಲ್ಲಿ ಪಿಡಬ್ಲೂಡಿ, ಪಿಆರ್‌ಡಿ ಮತ್ತು ಸಾರಿಗೆ ಇಲಾಖೆಯ ಅಧಿಕಾರಿಗಳು ಸಮನ್ವಯತೆಯಿಂದ ಕೆಲಸ ಮಾಡಬೇಕು. ಎಲ್ಲವನ್ನೂ ಶಾಸಕರತ್ತ ಬೊಟ್ಟು ಮಾಡಿ ತೋರುಸುವ ಕೆಲಸ ಮಾಡಬೇಡಿ. ಆಗಬೇಕಾದ ಕೆಲಸಗಳ ಬಗ್ಗೆ ಆಯಾ ಇಲಾಖೆಗೆ ಮತ್ತು ನನಗೆ ಕ್ರಿಯಾಯೋಜನೆ ಮೂಲಕ ಮಾಹಿತಿ ಕೊಡಿ ಎಲ್ಲವನ್ನೂ ನಾನೇ ನಿಮಗೆ ಹೇಳುವಂತಾಗಿದೆ. ಅರಣ್ಯ ಇಲಾಖೆಯ ಅಧಿಕಾರಿಗಳು ಅರಣ್ಯ ಪ್ರದೇಶದಲ್ಲಿ ನಡೆಯುವ ಮರಳು ಅಕ್ರಮ ಮರಳು ಮತ್ತು ಕಲ್ಲು ಗಣಿಗಾರಿಕೆ ತಡೆಯಬೇಕು. ಸರ್ಕಾರದ ನಿಯಮಾವಳಿಯಂತೆ ಅರಣ್ಯದಂಚಿನ ಗ್ರಾಮಗಳ ಜನರಿಗೆ ಮೂಲಭೂತ ಸೌಲಭ್ಯ ಒದಗಿಸಲು 2.5 ಎಕರೆ ಜಮೀನು ಪಡೆಯಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಎಂದರು. ವಿದ್ಯಾರ್ಥಿಗಳಿಗೆ ಉಂಟಾಗುತ್ತಿರುವ ಬಸ್ಸಿನ ಸಮಸ್ಯೆ ಸರಿಪಡಿಸುವಲ್ಲಿ ಘಟಕ ವ್ಯವಸ್ಥಾಪಕರು ಗಮನ ಹರಿಸಬೇಕು ಎಂದರು. ತಾಪಂ ಆಡಳಿತಾಧಿಕಾರಿ ಎಂ.ವಿ ಚಳಗೇರಿ ಸಾಮಾನ್ಯ ಸಭೆಗೆ ಎಲ್ಲ ಅಧಿಕಾರಿಗಳು ತಪ್ಪದೇ ಅಗತ್ಯ ದಾಖಲೆಗೊಂದಿಗೆ ನಿಗಧಿತ ಅವಧಿಯೊಳಗೆ ಹಾಜರಾಗಬೇಕು. ನಿರ್ಲಕ್ಷಿಸಿದರೆ ನೋಟೀಸ್ ನೀಡಿ ಶಿಸ್ತು ಕ್ರಮಕ್ಕಾಗಿ ಸಿಇಓ ಅವರಿಗೆ ಪತ್ರ ಬರೆಯಲಾಗುವುದು ಎಂದರು. ತಹಸೀಲ್ದಾರ ವಾಸುದೇವ ಎಂ ಸ್ವಾಮಿ, ತಾಪಂ ಇಓ ಕೃಷ್ಣಪ್ಪ ಧರ್ಮರ ಅಧಿಕಾರಿಗಳಿಂದ ಮಾಹಿತಿ ಪಡೆದು ನಿಗದಿಯಾದ ಸಾಮಾನ್ಯ ಸಭೆಯ ದಿನಾಂಕದ 2 ದಿನ ಮೊದಲೇ ಆಯಾ ಇಲಾಖೆಯ ಅಧಿಕಾರಿಗಳು ಪ್ರಗತಿ ವರದಿ ಸಲ್ಲಿಸಬೇಕು ಎಂದರು.

ಬ್ಯಾಂಕ್ ಪರೀಕ್ಷೆಗಳನ್ನು ಕನ್ನಡದಲ್ಲೇ ಮಾಡಲು ಆಗ್ರಹ

ಗದಗ: ಇಂದು ಕೇಂದ್ರ ಸ್ವಾಮ್ಯದ ಸಾರ್ವಜನಿಕ ವಲಯದ ಬ್ಯಾಂಕ್‌ಗಳ ಆಯ್ಕೆ ಪ್ರಕ್ರಿಯೆ ರಾಷ್ಟ್ರ ಮಟ್ಟದಲ್ಲಿ ಹಿಂದಿ-ಇಂಗ್ಲೀಷಗಳಲ್ಲಿ ಮಾತ್ರ ನಡೆಯುತ್ತಿದ್ದು ಸ್ಥಳೀಯರಿಗೆ ಬ್ಯಾಂಕ್‌ಗಳಲ್ಲಿ ಕೆಲಸ ಸಿಗುತ್ತಿಲ್ಲ. ಕನ್ನಡಿಗರಿಗೆ ಬ್ಯಾಂಕ್‌ಗಳಲ್ಲಿ ಸೂಕ್ತ ಅವಕಾಶ ಸಿಗಲು ಆಯ್ಕೆ ಪರೀಕ್ಷೆಗಳು ಕನ್ನಡದಲ್ಲೂ ನಡೆಯಬೇಕು ಎಂದು ಮಾಜಿ ರಾಜ್ಯಸಭಾ ಸದಸ್ಯ, ಖ್ಯಾತ ಸಾಹಿತಿ ಡಾ. ಎಲ್. ಹನುಮಂತಯ್ಯ ಆಗ್ರಹಿಸಿದರು.

ಅವರು ಬೆಂಗಳೂರಿನ ನಯನ ಸಭಾಂಗಣದಲ್ಲಿ ಕನ್ನಡ ಗೆಳೆಯರ ಬಳಗ, ಕರ್ನಾಟಕ ಕಾರ್ಮಿಕಲೋಕ ಸಂಯುಕ್ತವಾಗಿ ಆಯೋಜಿಸಿದ್ದ ಪ್ರಶಸ್ತಿಗಳ ಪ್ರದಾನ, ಪುಸ್ತಕ ಬಹುಮಾನ, ಕನ್ನಡ ಮಾಧ್ಯಮದ ಮಕ್ಕಳಿಗೆ ಸನ್ಮಾನ-ಬಹುಮಾನ' ಮತ್ತು ಉತ್ತಮ ಸರ್ಕಾರಿ ಶಾಲೆಗೆ ಬಹುಮಾನ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

ಚಲನಚಿತ್ರ ನಿರ್ದೇಶಕ ಡಾ.ಟಿ.ಎಸ್. ನಾಗಾಭರಣ ಅವರು ಮಾತನಾಡಿ, 1956ರಲ್ಲಿ ಭಾಷಾವಾರು ಪ್ರಾಂತಗಳ ರಚನೆಯಾದಾಗ ರಾಜ್ಯದ ಗಡಿ, ಅಧಿಕಾರಗಳಂತಹ ವಿಚಾರವನ್ನು ಸಂವಿಧಾನಕ್ಕೆ ಸೇರಿಸಲಾಯಿತು. ರಾಜ್ಯ ಭಾಷೆಗಳ ಸ್ಥಾನಮಾನ ವ್ಯಾಪ್ತಿಯ ಬಗ್ಗೆ ಸಂವಿಧಾನಕ್ಕೆ ಅಗತ್ಯ ಮಾರ್ಪಾಡು ಮಾಡಲಿಲ್ಲ. ಹಾಗಾಗಿ ಕನ್ನಡ ಶಿಕ್ಷಣ, ಆಡಳಿತ, ಸಾರ್ವಜನಿಕ ವಲಯಗಳ ಬಳಕೆಯ ಬಗ್ಗೆ ಗೊಂದಲವಿದೆ. ಇಂದು ಕನ್ನಡವೂ ಸೇರಿದಂತೆ ಎಲ್ಲ ರಾಜ್ಯದ ಭಾಷೆಗಳಉಳಿವಿಗೆ ಸಾಂವಿಧಾನಿಕವಾಗಿಯೇ ಬದಲಾವಣೆ ತರುವ ಅಗತ್ಯವಿದೆ ಎಂದು ಹೇಳಿದರು.

ಗಾಂಧಿವಾದಿ ಶಿಕ್ಷಣ ತಜ್ಞ ನಾಡೋಜ ಡಾ.ವೂಡೇಪಿ. ಕೃಷ್ಣ ಪ್ರೊ. ಆರ್. ವೇಣುಗೋಪಾಲ್ ಮಾತನಾಡಿದರು.

ಅವರಿಗೆ ಕನ್ನಡ ಅರವಿಂದ ಪ್ರಶಸ್ತಿ, ಹೊಸೂರು ನಾಗರಾಜ್ ಅವರಿಗೆ ಕನ್ನಡ ಚಿರಂಜೀವಿ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಹಾಮಾನಾ ಕನ್ನಡ ಜಾಗೃತಿ ಪುಸ್ತಕ ಬಹುಮಾನವನ್ನು ಪತ್ರಕರ್ತ ಡಾ. ಮಂಜುನಾಥ ಬಮ್ಮನಕಟ್ಟಿ ಸಮಾಧಾನಕರ ಬಹುಮಾನವನ್ನು ಅನುವಾದಕ ಮೋಹನ್ ಕುಂಟಾರ್ ಮತ್ತು ಡಾ. ಎಸ್. ಗುರುಮೂರ್ತಿ ಅವರಿಗೆ ಪ್ರೋತ್ಸಾಹಕ ಬಹುಮಾನವನ್ನು ನೀಡಲಾಯಿತು.

ಇದೇ ಸಮಾರಂಭದಲ್ಲಿ ಕನ್ನಡ ಮಾಧ್ಯಮದಲ್ಲಿ ಹೆಚ್ಚು ಅಂಕಗಳಿಸಿದ 10 ಮಕ್ಕಳಿಗೆ ಸನ್ಮಾನ, ಬಹುಮಾನ, ಕನ್ನಡದಲ್ಲಿ ಹೆಚ್ಚು ಅಂಕಗಳಿಸಿದ ಕನ್ನಡೇತರ ಮಕ್ಕಳಿಗೆ ಸನ್ಮಾನ ಮತ್ತು ಉತ್ತಮ ಕನ್ನಡ ಶಾಲೆಗೆ ನೀಡುವ 10 ಸಾವಿರ ರು. ಬಹುಮಾನವನ್ನು ಎಸ್.ಎಸ್.ಎಲ್. ಸಿಯಲ್ಲಿ ಉತ್ತಮ ನಿರ್ವಹಣೆ ತೋರುತ್ತಿರುವ ಹೆಬ್ಬೂರಿನ ಕನ್ನಡ ಮಾಧ್ಯಮದ ಅನುದಾನಿತ ಶ್ರೀಗಣಪತಿ ಪ್ರೌಢಶಾಲೆಗೆ ನೀಡಲಾಯಿತು. 60 ವರ್ಷಗಳಿಂದ ಕನ್ನಡ ಹೋರಾಟದಲ್ಲಿ ಪಾಲ್ಗೊಳ್ಳುತ್ತಿರುವ ಬೆ.ರಾ. ನಾಗರಾಜ್ ಮತ್ತು ಬಿ.ಸಿ.ಜಯರಾಂ ಅವರನ್ನು ಗೌರವಿಸಿತು.

ಕಾರ್ಯಕ್ರಮದಲ್ಲಿ ಹಿರಿಯ ಕನ್ನಡ ಹೋರಾಟಗಾರ ವ.ಚ.ಚನ್ನೇಗೌಡ, ಭಾರತಿ ಶೇಷಗಿರಿರಾವ್, ಬಾ.ಹ. ಉಪೇಂದ್ರ, ಕೇಂದ್ರೀಯ ಕನ್ನಡ ಸಂಘದ ಅಧ್ಯಕ್ಷ ಮ. ಚಂದ್ರಶೇಖರ, ಎಚ್.ಎ.ಎಲ್. ಕನ್ನಡ ಮುಖಂಡ ಆರ್. ರಾಮಸ್ವಾಮಿ, ಕರ್ನಾಟಕ ಕಾರ್ಮಿಕಲೋಕದ ಬಿ.ವಿ.ರವಿಕುಮರ್, ಡಾ. ಆರ್. ಶೇಷಶಾಸ್ತ್ರಿ, ಡಾ.ಸ್ಮಿತಾರೆಡ್ಡಿ ಮತ್ತು ರಾಜಭವನದ ಕಾರ್ಯದರ್ಶಿ ಆರ್. ಪ್ರಭುಶಂಕರ್ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಪ್ರೀತಿ ವಿಚಾರಕ್ಕೆ ಬೆಂಕಿ ಹಚ್ಚಿಕೊಂಡ ಯುವಕ

ಹಾವೇರಿ: ಪ್ರೀತಿ-ಪ್ರೇಮದ ವಿಚಾರಕ್ಕೆ ಸಂಬಂಧಿಸಿದಂತೆ ಯುವಕನೊಬ್ಬ ಪೆಟ್ರೋಲ್ ಸುರಿದುಕೊಂಡು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿದ ಘಟನೆ ಶಿಗ್ಗಾವಿ ತಾಲೂಕಿನ ತಡಸದ ಸಮೀಪದ ತಾಯಮ್ಮ ದೇವಸ್ಥಾನ ಹತ್ತಿರ ನಡೆದಿದೆ. ಹುಬ್ಬಳ್ಳಿ ತಾಲೂಕಿನ ಬೆಳಗಲಿ ಗ್ರಾಮದ ಪ್ರವೀಣ್ ಭರಮಪ್ಪ ಬೆಟದೂರು(25) ಆತ್ಮಹತ್ಯೆಗೆ ಯತ್ನಿಸಿದ ಯುವಕ.

ಉಡುಪಿಯಲ್ಲಿ ಹಣ್ಣಿನ ವ್ಯಾಪಾರ ಮಾಡಿಕೊಂಡಿದ್ದ ಪ್ರವೀಣ ಎರಡೂ ದಿನಗಳ ಹಿಂದಷ್ಟೇ ಬೆಳಗಲಿ ಗ್ರಾಮಕ್ಕೆ ಬರುವುದಾಗಿ ಮನೆಯಲ್ಲಿ ತಿಳಿಸಿದ್ದ. ಆದರೆ ತಡಸದ ತಾಯಮ್ಮ ದೇವಸ್ಥಾನ ಹತ್ತಿರ ಪ್ರೀತಿಯ ವಿಚಾರಕ್ಕೆ ಸಂಬಂಧಿಸಿದಂತೆ ಮೈಮೇಲೆ ಪೆಟ್ರೋಲ್ ಸುರಿದುಕೊಂಡು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾನೆ. ಈ ಘಟನೆಯಲ್ಲಿ ಗಂಭೀರವಾಗಿ ಸುಟ್ಟು ಗಾಯಗೊಂಡಿರುವ ಪ್ರವೀಣ ಸಾವು ಬದುಕಿನ ಮಧ್ಯೆ ಹೋರಾಟ ನಡೆಸಿದ್ದಾನೆ. ಕೂಡಲೇ ಸ್ಥಳೀಯ ಪೊಲೀಸರು ಗಾಯಾಳು ಪ್ರವೀಣನನ್ನು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ರವಾನಿದ್ದು, ಚಿಕಿತ್ಸೆ ನೀಡಲಾಗುತ್ತಿದೆ. ಈ ಕುರಿತು ತಡಸ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆನ್‌ಲೈನ್ ಗೇಮ್ ಸಾಲಕ್ಕೆ ವಿದ್ಯಾರ್ಥಿ ಬಲಿ

ಕಲಬುರಗಿ: ಆನ್‌ಲೈನ್ ಗೇಮ್‌ಗಾಗಿ ವಿಪರೀತ ಸಾಲ ಮಾಡಿಕೊಂಡಿದ್ದ ಯುವನೊಬ್ಬ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ನಗರದಲ್ಲಿ ಗುರುವಾರ ನಡೆದಿದೆ. ನಗರದ ಜಿಮ್ಸ್ ಕಾಲೇಜಿನಲ್ಲಿ ನರ್ಸಿಂಗ್ ಅಂತಿಮ ವರ್ಷದ ವಿದ್ಯಾರ್ಥಿ ಸೋಮನಾಥ ಚಿದ್ರಿ(22) ಆತ್ಮಹತ್ಯೆ ಮಾಡಿಕೊಂಡ ಯುವಕ.

ಬೀದರ್ ಜಿಲ್ಲೆಯ ಭಾಲ್ಕಿ ತಾಲೂಕಿನ ಡೋಣಗಾಪುರದ ಯುವಕ ನಗರದಲ್ಲಿ ಅಭ್ಯಾಸ ಮಾಡುತ್ತ ವೀರಶೈವ ವಿದ್ಯಾರ್ಥಿ ನಿಲಯದಲ್ಲಿ ವಾಸವಾಗಿದ್ದ. ವಿದ್ಯಾರ್ಥಿ ವಸತಿ ನಿಲಯದ ಆವರಣದಲ್ಲಿನ ಬೇವಿನ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಈ ಕುರಿತು ಮೃತನ ತಂದೆ ಸತೀಶಕುಮಾರ ನೀಡಿದ ದೂರಿನಂತೆ ಬ್ರಹ್ಮಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.ಆನ್‌ಲೈನ್ ಗೇಮ್‌ನಿಂದ ಸಾಲ: ಎರಡು ವರ್ಷಗಳಿಂದ ಸೋಮನಾಥ ಚಿದ್ರಿ ಆನ್‌ಲೈನ್ ಗೇಮ್ ಆಡುತ್ತಿದ್ದ. ಇದರಿಂದ ನಿರಂತರ ಸುಮಾರು 80 ಲಕ್ಷ ರು. ಸಾಲ ಮಾಡಿಕೊಂಡಿದ್ದ. ಮಗ ಮಾಡಿದ ಸಾಲವನ್ನು ತಂದೆ ಸತೀಶಕುಮಾರ ಹಂತ ಹಂತವಾಗಿ ತೀರಿಸುತ್ತಿದ್ದ. ಮನೆಯಲ್ಲಿ ಸಾಲದ ವಿಷಯ ತಿಳಿದ ಮೇಲೂ ಆನ್‌ಲೈನ್ ಗೇಮ್ ಆಡುವುದನ್ನು ಸೋಮನಾಥ ಬಿಟ್ಟಿರಲಿಲ್ಲ.

ಹತ್ತು ಸಮಿತಿ ರಚನೆ | ಛಾಯಾಚಿತ್ರ ಪ್ರದರ್ಶನ ಆಯೋಜನೆ | ದಸರಾ ಮಾದರಿ ದೀಪಾಲಂಕಾರಕ್ಕೆ ನಿರ್ಧಾರ

ಚಳಿಗಾಲ ಅಧಿವೇಶನಕ್ಕೆ ಸಕಲ ಸಿದ್ಧತೆ

ಬೆಳಗಾವಿ: ಬೆಳಗಾವಿಯಲ್ಲಿ ಡಿ. 9 ರಿಂದ 19 ರ ವರೆಗೆ ನಡೆಯಲಿರುವ ಚಳಿಗಾಲ ಅಧಿವೇಶನ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಸಕಲ ಸಿದ್ಧತೆ ನಡೆಸಿದೆ. ಅಧಿವೇಶನಕ್ಕೆ ಬರುವ ಜನಪ್ರತಿನಿಧಿಗಳು ಹಾಗೂ ಅಧಿಕಾರಿವರ್ಗ ಸೇರಿದಂತೆ ಜನಸಾಮಾನ್ಯರಿಗೆ ಯಾವುದೇ ತೊಂದರೆ ಆಗದಂತೆ ಅಚ್ಚುಕಟ್ಟಾದ ವ್ಯವಸ್ಥೆ ಮಾಡಿಕೊಳ್ಳಲಾಗಿದೆ.

ಸುಗಮ ಅಧಿವೇಶನಕ್ಕಾಗಿ ಈಗಾಗಲೇ ಹತ್ತು ಸಮಿತಿಗಳನ್ನು ರಚಿಸಲಾಗಿದೆ. ಶಾಸಕರು, ಸಚಿವರು, ಅಧಿಕಾರಿ, ಸಿಬ್ಬಂದಿಗಳ ವಸತಿಗಾಗಿ ಖಾಸಗಿ ಹೋಟೆಲ್, ಅತಿಥಿಗೃಹ, ಪ್ರವಾಸಿಮಂದಿರಗಳಲ್ಲಿ ಒಟ್ಟಾರೆ 2,756 ಕೊಠಡಿಗಳನ್ನು ಕಾಯ್ದಿರಿಸಲಾಗಿದೆ. ಹೊರ ಜಿಲ್ಲೆಗಳಿಂದ ವಾಹನಗಳನ್ನು ಬಳಕೆ ಮಾಡಿಕೊಳ್ಳಲಾಗುತ್ತಿದ್ದು ಈಗಾಗಲೇ ಆಯ್ದು ಜಿಲ್ಲೆಗಳಿಂದ 600 ವಾಹನ ಬೆಳಗಾವಿಗೆ ಬಂದಿವೆ.

ಛಾಯಚಿತ್ರ ಪ್ರದರ್ಶನ:

ಈ ಬಾರಿ ಚಳಿಗಾಲ ಅಧಿವೇಶನ ಮತ್ತೊಂದು ವಿಶೇಷತೆಗೆ ಪಾತ್ರವಾಗಿದೆ. 1924 ರಲ್ಲಿ ಮಹಾತ್ಮಾ ಗಾಂಧೀಜಿ ಅಧ್ಯಕ್ಷತೆಯಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಇದ್ದು ಅಧಿವೇಶನ ಸಂದರ್ಭದಲ್ಲಿ ಸುವರ್ಣ ವಿಧಾನಸೌಧದ ಆವರಣದಲ್ಲಿ ಛಾಯಾಚಿತ್ರ ಪ್ರದರ್ಶನ ಆಯೋಜಿಸಲಾಗಿದೆ. ಶಾಲಾ ಮಕ್ಕಳಿಗೆ ಆಡಿಟೋರಿಯಂ ನಲ್ಲಿ ಚರ್ಚಾಕೂಟ, ಭಾಷಣ, ಕಿರುಚಿತ್ರ ಪ್ರದರ್ಶನ ಸೇರಿದಂತೆ ವಿವಿಧ ಬಗೆಯ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಅಲ್ಲದೇ ಬೆಳಗಾವಿ ನಗರದ ಮೂವತ್ತು ವೃತ್ತಗಳಲ್ಲಿ ಡಿ.9. ರಿಂದಲೇ ಮೈಸೂರು ದಸರಾ ಮಾದರಿ ದೀಪಾಲಂಕಾರ ಮಾಡಲು ನಿರ್ಧರಿಸಲಾಗಿದೆ ಎಂದು ವಿವರಿಸಿದರು.

24 ಕೋಟಿ ವೆಚ್ಚದ ಪ್ರಸ್ತಾವನೆ: ಕಾಂಗ್ರೆಸ್ ಶತಮಾನೋತ್ಸವ ಕ್ರಿಯಾ ಯೋಜನೆಗೆ ಮುಖ್ಯಮಂತ್ರಿಗಳು 24 ಕೋಟಿ ರು. ವೆಚ್ಚದ ಪ್ರಸ್ತಾವನೆಗೆ ಅನುಮೋದನೆ ನೀಡಿದ್ದು ಅಲ್ಪಾವಧಿ ಮತ್ತು ದೀರ್ಘಾವಧಿಯ ವಿವಿಧ ಯೋಜನೆಗಳನ್ನು ಹಂತ ಹಂತವಾಗಿ ಅನುಷ್ಠಾನಗೊಳಿಸಲಾಗುವುದು ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಮಾಹಿತಿ ನೀಡಿದ್ದಾರೆ.

ಬೆಳಗಾವಿಯಲ್ಲಿ ನಡೆಯಲಿರುವ ಚಳಿಗಾಲ ಅಧಿವೇಶನ ಹಿನ್ನೆಲೆಯಲ್ಲಿ ಸಿದ್ಧತೆಯಲ್ಲಿ ತೊಡಗಿರುವ ಕಾರ್ಮಿಕರು

> **ಅಧಿವೇಶನದ ಭದ್ರತೆಗಾಗಿ 6000 ಕ್ಕೂ ಅಧಿಕ ಪೊಲೀಸ್ ಅಧಿಕಾರಿ ಸಿಬ್ಬಂದಿಗಳನ್ನು ನಿಯೋಜನೆ ಮಾಡಲಾಗುತ್ತಿದೆ. ಅಧಿವೇಶನ ಭದ್ರತೆಗಾಗಿ ನಿಯೋಜಿತ ಅಧಿಕಾರಿ ಸಿಬ್ಬಂದಿಗಳಿಗೆ ಸೂಕ್ತ ವಸತಿ ಹಾಗೂ ಊಟದ ವ್ಯವಸ್ಥೆ ಮಾಡಲಾಗುವುದು. ಈ ಬಾರಿ ಪ್ರತಿಭಟನೆ ಕುರಿತು 55 ಅರ್ಜಿಗಳನ್ನು ಸ್ವೀಕರಿಸಲಾಗಿದೆ.**
>
> -ಯಡಾ ಮಾರ್ಟಿನ್ ಮಾರ್ಬನ್ಯಾಂಗ್, ಪೊಲೀಸ್ ಆಯುಕ್ತ

ಅಧಿವೇಶನದಲ್ಲಿ ದುಂದು ವೆಚ್ಚದ ಆರೋಪ: ಕಳೆದ 2023 ರಲ್ಲಿ 10 ದಿನಗಳ ವರೆಗೆ ನಡೆದಿದ್ದ ಬೆಳಗಾವಿ ಚಳಿಗಾಲದ ಅಧಿವೇಶನಕ್ಕೆ ಬರೋಬ್ಬರಿ 24 ಕೋಟಿ 89 ಲಕ್ಷ ರು. ಕರ್ಚು ಮಾಡಲಾಗಿದ್ದು, ಕೆಲವು ಇಲಾಖೆಗಳಲ್ಲಿ ದುಂದು ವೆಚ್ಚ ನಡೆದಿದೆ ಎಂದು ಮಾಹಿತಿ ಹಕ್ಕಿನಿಂದ ತಿಳಿದು ಬಂದಿದೆ.

ಶುಕ್ರವಾರ ನಗರದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಮಾಹಿತಿ ಹಕ್ಕು ಕಾರ್ಯಕರ್ತ ಭೀಮಪ್ಪ ಗಡಾದ ಅವರು, ಕಳೆದ ಚಳಿಗಾಲ ಅಧಿವೇಶನ ಸಂದರ್ಭದಲ್ಲಿ ಸರಕಾರ ದುಂದು ವೆಚ್ಚ ಮಾಡಿದೆ. ಕೆಲವು ಇಲಾಖೆಗಳಲ್ಲಿ ದುಪ್ಪಟ್ಟು ಖರ್ಚು ತೋರಿಸಿ ಬಿಲ್ ತಯಾರಿಸಿದ್ದು ಇದರಿಂದ ಸಾರ್ವಜನಿಕರ ಹಣ ಅನವಶ್ಯಕವಾಗಿ ಪೋಲಾಗಿದೆ ಎಂದು ಗಂಭೀರ ಆರೋಪ ಮಾಡಿದ್ದಾರೆ.

> **ನೂರಾರು ಕೋಟಿ ರು. ವೆಚ್ಚದಲ್ಲಿ ಸರಕಾರ ಸುವರ್ಣಸೌಧ ನಿರ್ಮಾಣ ಮಾಡಿದ್ದರು ಇದರಿಂದ ಜನರಿಗೆ ಎಷ್ಟು ಲಾಭವಾಗಿದೆ ಎಂಬುದನ್ನು ಜನಪ್ರತಿನಿಧಿಗಳು ತಿಳಿದುಕೊಳ್ಳಬೇಕು. ದುಂದುವೆಚ್ಚ ಮಾಡುವ ಮೂಲಕ ಅಧಿಕಾರಿಗಳು ಸಾರ್ವಜನಿಕರ ತೆರಿಗೆ ಹಣ ಪೋಲು ಮಾಡುತ್ತಿದ್ದಾರೆ. ಉತ್ತರ ಕರ್ನಾಟಕದ ಜನರ ಸಮಸ್ಯೆಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ನಡೆದರೆ ಒಳಿತು.**
>
> ಭೀಮಪ್ಪ ಗಡಾದ, ಮಾಹಿತಿ ಹಕ್ಕು ಕಾರ್ಯಕರ್ತ

ಅಧಿವೇಶನ ಸಂದರ್ಭದಲ್ಲಿ ಕಲಾಪ ವೀಕ್ಷಿಸಲು ಬರುವ ವಿದ್ಯಾರ್ಥಿಗಳಿಗೆ ಜ್ಯೂಸ್ ಪೂರೈಸಿದ ಬೆಂಗಳೂರು ಮೂಲದ ಅರೇಬಿಯನ್ ಜ್ಯೂಸ್ ಕಂಪನಿಗೆ 4 ಲಕ್ಷ ರು. ಬಿಲ್ ಪಾವತಿ ಮಾಡಲಾಗಿದೆ ಎಂದು ಜಿಲ್ಲಾಡಳಿತ ಸರಕಾರಕ್ಕೆ ಲೆಕ್ಕ ನೀಡಿದೆ. ಆದರೆ ಅಧಿವೇಶನ ಸಂದರ್ಭದಲ್ಲಿ ಯಾವುದೇ ಮಕ್ಕಳಿಗೆ ಜ್ಯೂಸ್ ಸೇರಿದಂತೆ ಹನಿ ನೀರನ್ನು ವಿತರಣೆ ಮಾಡಲಾಗಿಲ್ಲ ಎಂಬ ಆರೋಪ ಕೇಳಿಬಂದಿದೆ. ಇನ್ನು ಮಧ್ಯಾಹ್ನದ ಸ್ನ್ಯಾಕ್ ಸೇರಿದಂತೆ ಊಟಕ್ಕೆ 90 ಲಕ್ಷಕ್ಕೂ ಅಧಿಕ ಬಿಲ್ ಪಾವತಿ ಮಾಡಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಮಂಗಳೂರಿನಲ್ಲಿ ನಡೆದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ 5ನೇ ಜಿಲ್ಲಾ ಸಮ್ಮೇಳನದಲ್ಲಿ ಸರ್ವಾಧ್ಯಕ್ಷ ಸ್ಥಾನವನ್ನು ಅಲಂಕರಿಸಿದ ಹಿರಿಯ ಪತ್ರಕರ್ತ ಕೆ. ಶಿವಸುಬ್ರಹ್ಮಣ್ಯ ಅವರನ್ನು ಸಂಘದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಆಲ್ದೂರು ಗ್ರಾಮದಲ್ಲಿ ಉದ್ವಿಗ್ನ ಸ್ಥಿತಿ ನಿರ್ಮಾಣ

ಶವ ಹೂಳುವ ವೇಳೆ ಗಲಾಟೆ

ಚಿಕ್ಕಮಗಳೂರು: ತಾಲೂಕಿನ ಆಲ್ದೂರು ಗ್ರಾಮದಲ್ಲಿ ಶವ ಹೂಳುವ ವೇಳೆ ಎರಡು ಸಮುದಾಯದ ನಡುವೆ ಗಲಾಟೆ ನಡೆದು ಉದ್ವಿಗ್ನ ಸ್ಥಿತಿ ನಿರ್ಮಾಣವಾದ ಘಟನೆ ಶುಕ್ರವಾರ ನಡೆದಿದೆ.

ಪರಿಶಿಷ್ಟ ಜಾತಿ ಮತ್ತು ಒಕ್ಕಲಿಗ ಸಮುದಾಯದ ನಡುವೆ ಶವ ಹೂಳುವ ವಿಚಾರಕ್ಕೆ ಗಲಾಟೆ ನಡೆದಿದ್ದು, ಗುಂಡಿಗೆ ಇಳಿದು ಒಕ್ಕಲಿಗ ಮಹಿಳೆ ತೀವ್ರ ಆಕ್ರೋಶ ಹೊರ ಹಾಕಿದ್ದಾರೆ. ಸ್ಥಳ ಒಕ್ಕಲಿಗರ ಸಮುದಾಯ ಭವನ ಮತ್ತು ಪರಿಶಿಷ್ಟ ಜಾತಿ ಶ್ಮಶಾನ ಜಾಗದ ವಿವಾದ ಸ್ಥಳವಾಗಿದ್ದು, ಹಲವು ದಶಕಗಳಿಂದ ವಿವಾದ ಬೂದಿ ಮುಚ್ಚಿದ ಕೆಂಡದಂತಿತ್ತು. ಶುಕ್ರವಾರ ವಿವಾದಿತ ಜಾಗಕ್ಕೆ ಶವ ಹೂಳಲೆಂದು ಪರಿಶಿಷ್ಟ ಜಾತಿ ಸಮುದಾಯದವರು ತೆರಳಿದ ವೇಳೆ ಒಕ್ಕಲಿಗರ ಸಮುದಾಯದಿಂದ ತೀವ್ರ ವಿರೋಧ ವ್ಯಕ್ತವಾಗಿದೆ.

ವಿವಾದಿತ ಜಾಗ ನ್ಯಾಯಾಲಯದಲ್ಲಿ ಇದೆ ಎಂದು ಒಕ್ಕಲಿಗರ ವಾದಿಸಿ, ಗುಂಡಿಗೆ ಇಳಿದು ಶವ ಹೂಳಲು ಗ್ರಾಪಂ ಮಾಜಿ ಅಧ್ಯಕ್ಷೆ ಪೂರ್ಣಿಮಾ ಶ್ರೀನಿವಾಸ್ ವಿರೋಧ ವ್ಯಕ್ತಪಡಿಸಿದ್ದಾರೆ. ಈ ವೇಳೆ ಮೂರ್ನಾಲ್ಕು ಮಹಿಳೆಯರು ಗುಂಡಿಯೊಳಗೆ ಇಳಿದು ಆಕ್ರೋಶ ಹೊರ ಹಾಕಿದ್ದು, ಎಲ್ಲರನ್ನು ಆಲ್ದೂರು ಪೊಲೀಸರು ಮೇಲಕ್ಕೆ ಎಳೆದು ಹಾಕಿದ್ದಾರೆ. ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದ್ದು ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿದೆ.

ಪರಿಹಾರ ಹಣ ನೀಡಲು ವಿಳಂಬ: ಮೈಸೂರು ಮಹಾನಗರ ಪಾಲಿಕೆ ಜಪ್ತಿ

ಮೈಸೂರು: ಸ್ವಾಧೀನ ಮಾಡಿಕೊಂಡ ಭೂಮಿಗೆ ಪರಿಹಾರ ನೀಡುವಲ್ಲಿ ವಿಳಂಬ ಮಾಡಿದ ಹಿನ್ನೆಲೆಯಲ್ಲಿ ನಗರಪಾಲಿಕೆಯ ಪೀಠೋಪಕರಣಗಳನ್ನು ಶುಕ್ರವಾರ ಜಪ್ತಿ ಮಾಡಲಾಯಿತು.

ಕುಡಿಯುವ ನೀರು ಘಟಕ ಸ್ಥಾಪಿಸಲು ಭೂ ಸ್ವಾಧೀನಪಡಿಸಿಕೊಂಡು ಪರಿಹಾರ ನೀಡಲು ವಿಳಂಬ ಮಾಡಿದ ಹಿನ್ನೆಲೆಯಲ್ಲಿ ಕೋರ್ಟ್ ಆದೇಶದಂತೆ ನಗರಪಾಲಿಕೆಯ ಪೀಠೋಪಕರಣಗಳನ್ನು ವಶಕ್ಕೆ ತೆಗೆದುಕೊಳ್ಳಲಾಯಿತು.

1994ರಲ್ಲಿ ರಮ್ಮನಹಳ್ಳಿ ಗ್ರಾಮದಲ್ಲಿ ಕುಡಿಯುವ ನೀರು ಘಟಕ ಸ್ಥಾಪಿಸಲು ವಿವಿಧ ಸರ್ವೇ ನಂಬರ್ ನ ಸುಮಾರು 45 ಎಕರೆ ಜಮೀನನ್ನು ಪಾಲಿಕೆ ಸ್ವಾಧೀನಪಡಿಸಿಕೊಂಡಿತ್ತು. ಒಂದು ಎಕರೆಗೆ 45 ಸಾವಿರದಂತೆ ಪರಿಹಾರ ಕೊಡಲು ನಗರಪಾಲಿಕೆ ಒಪ್ಪಿತ್ತು.

ಈ ಮಧ್ಯೆ ಹೆಚ್ಚಿನ ಪರಿಹಾರಕ್ಕಾಗಿ ಗ್ರಾಮಸ್ಥರು ಕೋರ್ಟ್ ಮೊರೆ ಹೋಗಿದ್ದರು. ವಿಚಾರಣೆ ನಡೆಸಿದ್ದ ಕೋರ್ಟ್ ಸಂತ್ರಸ್ತರಿಗೆ ಹೆಚ್ಚಿನ ಪರಿಹಾರ ಕೊಡಲು ಆದೇಶ ಹೊರಡಿಸಿತ್ತು. 2021ರಲ್ಲೇ ಹೆಚ್ಚಿನ ಪರಿಹಾರ ನೀಡುವಂತೆ ಕೋರ್ಟ್ ಆದೇಶ ಕೊಟ್ಟಿತ್ತು. ಆದರೆ, ಪರಿಹಾರ ನೀಡಲು ನಗರಪಾಲಿಕೆ ವಿಳಂಬ ಮಾಡಿದ್ದು, ನ್ಯಾಯಾಲಯದ ಆದೇಶ ಪಾಲಿಸಿರಲಿಲ್ಲ. ಸಂತ್ರಸ್ತ ರೈತರಿಗೆ ಸೂಕ್ತ ಪರಿಹಾರ ಕೊಡಲು ವಿಳಂಬ ಮಾಡಿತ್ತು. ಈ ಹಿನ್ನೆಲೆಯಲ್ಲಿ ಪಾಲಿಕೆಯ ಚರ ಮಾಲುಗಳ ಜಪ್ತಿ ಮಾಡಲು ಕೋರ್ಟ್ ಆದೇಶ ಹೊರಡಿಸಿತ್ತು. ಕೋರ್ಟ್ ಅಮೀನರು, ವಕೀಲರ ಸಮ್ಮುಖದಲ್ಲಿ ಪಾಲಿಕೆ ಪಿಠೋಪಕರಣಗಳನ್ನು ಜಪ್ತಿ ಮಾಡಲಾಯಿತು.

ಉತ್ತರ ಕರ್ನಾಟಕದ ಸಮಸ್ಯೆ ಪರಿಹಾರಕ್ಕೆ ಆಗ್ರಹ

ಮತ್ತೆ ಮಾರ್ದನಿಸಿದ ಪ್ರತ್ಯೇಕ ರಾಜ್ಯದ ಕೂಗು

ಬಾಗಲಕೋಟೆ: ಜಿಲ್ಲಾಡಳಿತ ಭವನದ ಎದುರು ಕೃಷ್ಣಾ ಮೇಲ್ದಂಡೆ ಯೋಜನೆ (ಯುಕೆಪಿ) 3ನೇ ಹಂತ ಯೋಜನೆ ಅನುಷ್ಠಾನಕ್ಕೆ ಸೇರಿದಂತೆ ನಾನಾ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಕೃಷ್ಣಾ ಮೇಲ್ದಂಡೆ ಯೋಜನಾ ಬಾಧಿತ ಸಂತ್ರಸ್ತರ ಹೋರಾಟ ಸಮಿತಿಯಿಂದ ಹಮ್ಮಿಕೊಂಡಿರುವ ಅನಿರ್ದಿಷ್ಟಾವಧಿ ಧರಣಿಯಲ್ಲಿ ಪ್ರತ್ಯೇಕ ರಾಜ್ಯದ ಕೂಗು ಮತ್ತೊಮ್ಮೆ ಮಾರ್ಧನಿಸಿದೆ.

ಧರಣಿಗೆ ಬೆಂಬಲಿಸಿ ಹಿರಿಯ ವಕೀಲ ಹಾಗೂ ಹೋರಾಟಗಾರ ಬಿ.ಡಿ.ಹಿರೇಮಠ ಮಾತನಾಡಿ, ಸಂತ್ರಸ್ತರ ಬೇಡಿಕೆ ನ್ಯಾಯಯುತವಾಗಿದ್ದು, ಈ ಕುರಿತು ಚಳಿಗಾಲ ಅಧಿವೇಶನದಲ್ಲಿ ಚರ್ಚೆಯಾಗಬೇಕು. ಜತೆಗೆ ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಅನುದಾನ ಮೀಸಲಿಡುವ ಬಗ್ಗೆ ಅಧಿವೇಶನದಲ್ಲಿ ಘೋಷಿಸಬೇಕು. ಇಲ್ಲದಿದ್ದರೆ ಜಿಲ್ಲೆಯಿಂದಲೇ ಪ್ರತ್ಯೇಕ ರಾಜ್ಯದ ಕೂಗು ಜಿಲ್ಲೆಯಿಂದಲೇ ಪ್ರಾರಂಭವಾಗಲಿದೆ ಎಂದು ತಿಳಿಸಿದರು.

ನಮ್ಮ ಜನಪ್ರತಿನಿಧಿಗಳಿಗೆ ನಿಯತ್ತಿದ್ದರೇ ಅವರು ಪಕ್ಷಾತೀತವಾಗಿ ಹೋರಾಟ ಮಾಡಬೇಕು. ಇಲ್ಲದಿದ್ದರೆ ಅವರು ಜನದ್ರೋಹಿಗಳು. ಹೋರಾಟದಿಂದ ಪರಿಹಾರ ಪಡೆಯುವ ಹಕ್ಕು ನಮಗಿದೆ. ಆದರೆ, ಇಲ್ಲಿ ಬರುವ ರಾಜಕಾರಣಿಗಳಿಗಿಲ್ಲ. ಯುಕೆಪಿ ಸೇರಿದಂತೆ ಉತ್ತರ ಕರ್ನಾಟಕದ ಸಮಸ್ಯೆಗೆ ಪರಿಹಾರ ದೊರಕದಿದ್ದಲ್ಲಿ ಪ್ರತ್ಯೇಕ ರಾಜ್ಯದ ಬೇಡಿಕೆ ಅನಿವಾರ್ಯ ಎಂದರು.



ಸಂಸದ ಗೋವಿಂದ ಕಾರಜೋಳ ಮಾತನಾಡುತ್ತಿದ್ದ ವೇಳೆ ರೈತರು ಪರಸ್ಪರ ವಾಗ್ವಾದ ನಡೆಸಿದರು.

ಸಂಸದ ಕಾರಜೋಳ ಭಾಷಣಕ್ಕೆ ಅಡ್ಡಿ

ಕೃಷ್ಣಾ ಮೇಲ್ದಂಡೆ ಯೋಜನೆ ವಿಚಾರವಾಗಿ ನಡೆದಿರುವ ಹೋರಾಟ ಬೆಂಬಲಿಸಿ, ಮಾತನಾಡುತ್ತಿದ್ದ ಸಂಸದ ಗೋವಿಂದ ಕಾರಜೋಳ ಭಾಷಣದ ಸಂದರ್ಭದಲ್ಲಿ ಕೆಲವು ರೈತರಲ್ಲಿ ವಾಗ್ವಾದ ನಡೆಯಿತು. ತಾವು ಜಲಸಂಪನ್ಮೂಲ ಸಚಿವರಾಗಿದ್ದ ವೇಳೆ 522 ಮೀಟರ್ ವರೆಗೆ ಪರಿಹಾರ ವಿತರಣೆ ಬಗ್ಗೆ ಸಭೆಯಲ್ಲಿ ಕೇವಲ ಚರ್ಚೆ ನಡೆದಿತ್ತು. ಆದರೆ, ಸರಕಾರದ ಆದೇಶವಾಗಿರಲಿಲ್ಲ. ಜೆ.ಎಚ್.ಪಟೇಲ್ ಸರಕಾರದ ನಂತರ ರೈತರಿಗೆ ಪರಿಹಾರ ವಿತರಿಸಲು ಭೂದರ ನಿಗದಿಯಾಗಿರಲಿಲ್ಲ. ನಮ್ಮ ಅವಧಿಯಲ್ಲಿ ನೀರಾವರಿಗೆ 24 ಲಕ್ಷ ರು., ಒಣಬೇಸಾಯಕ್ಕೆ 20 ಲಕ್ಷ ರು. ಘೋಷಿಸಲಾಗಿತ್ತು. ಆವಾಗ ಎಕರೆಗೆ 40 ಲಕ್ಷ ರು. ಕೊಡ್ತೀವಿ ಅಂದವರು ಈಗ ಎಲ್ಲಿದ್ದಾರೆ ಎಂದು ಪ್ರಶ್ನಿಸಿದರು. ಆಗ ಸಭೆಯಲ್ಲಿದ್ದ ಕೆಲವರು 522 ಮೀಟರ್ ವರೆಗಿನ ತೀರ್ಮಾನ ನಿಮ್ಮದೇ ಸರಕಾರದ್ದು ಎಂದು ಆಕ್ರೋಶ ವ್ಯಕ್ತಪಡಿಸುತ್ತಿದ್ದಂತೆ ಕೆರಳಿದ ಕಾರಜೋಳ, ಇದರಲ್ಲಿ ಅನಗತ್ಯ ಪಕ್ಷ ರಾಜಕಾರಣ ತರಬೇಡಿ ನಾನು ಇತಿಹಾಸ ಬಿಚ್ಚಿಟ್ಟರೆ ಕಾಂಗ್ರೆಸ್‌ನವರು ರಾಜ್ಯದಲ್ಲೇ ಇರುವುದಿಲ್ಲ ಎಂದರು.

ಬಾಣಂತಿಯರ ಸಾವು: ಮುಗಿಯದ ತಲ್ಲಣ

← ಮೊದಲಪುಟದಿಂದ

ತಪ್ಪಿದ್ದರೆ ರಾಜೀನಾಮೆಗೆ ಸಿದ್ಧ: ಬಾಣಂತಿಯರ ಸಾವು ಪ್ರಕರಣದಲ್ಲಿ ಪ್ರತಿಪಕ್ಷಗಳ ಸಹಕಾರವೂ ನಮಗೆ ಅಗತ್ಯ. ಇದು ಜೀವಕ್ಕೆ ಸಂಬಂಧಿಸಿದ ವಿಚಾರ. ಇಂತಹ ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಕ್ರಮ ಆಗಲೇಬೇಕು. ನನ್ನ ರಾಜೀನಾಮೆಯಿಂದ ಪರಿಸ್ಥಿತಿ ಸರಿಯಾಗುತ್ತದೆ ಎಂಬುದಾದರೆ, ಅದಕ್ಕೂ ಸಿದ್ಧ. ಇದರಲ್ಲಿ ಯಾವುದೇ ಪ್ರತಿಷ್ಠೆ ಇಲ್ಲ. ನನ್ನ ತಪ್ಪಿದ್ದರೆ ರಾಜೀನಾಮೆ ಕೊಡಲೂ ಸಿದ್ಧ ಎಂದು ಹೇಳಿದ್ದಾರೆ.

ರಾಜ್ಯದಲ್ಲಿ ಈ ವರ್ಷ ಇದುವರೆಗೆ 327 ಬಾಣಂತಿಯರ ಸಾವಾಗಿದೆ. ಇದನ್ನು ನಾವು ಗಂಭೀರವಾಗಿ ತೆಗೆದುಕೊಂಡಿದ್ದೇವೆ. ತಪ್ಪಿತಸ್ಥರಿಗೆ ಕ್ರಮವಾಗಬೇಕು. ಎಲ್ಲವನ್ನೂ ಪರಿಶೀಲಿಸಿ ಎಂದು ಸೂಚನೆ ನೀಡಿದ್ದೇವೆ ಎಂದರು.

ಬಳ್ಳಾರಿಯಲ್ಲಿ ಒಂಬತ್ತು ಮಹಿಳೆಯರಿಗೆ ಸಮಸ್ಯೆ ಆಗಿತ್ತು. ನಾಲ್ವರು ಈಗಾಗಲೇ ತೀರಿಕೊಂಡಿದ್ದರು. ಚಿಕಿತ್ಸೆ ಪಡೆಯುತ್ತಿದ್ದ ಐದನೆಯವರೂ ಮೃತಪಟ್ಟಿದ್ದಾರೆ. ಅದೇ ಬ್ಯಾಚ್‌ನ ರಿಂಗರ್ ಲ್ಯಾಕ್ಟೇಟ್ ದ್ರಾವಣ ಕೊಡಲಾಗಿತ್ತು. ಈಗಾಗಲೇ ಕಂಪನಿ ವಿರುದ್ಧ ಕ್ರಮಕ್ಕೆ ಮುಂದಾಗಿದ್ದೇವೆ. ಮೃತರಿಗೆ ಬೇರೆ ಆರೋಗ್ಯ ಸಮಸ್ಯೆಯೂ ಇತ್ತು ಎನ್ನಲಾಗಿದೆ. ಆದರೆ, ಚೇತರಿಸಿಕೊಳ್ಳುತ್ತಿದ್ದರು ಎಂದು ವೈದ್ಯರು ಹೇಳಿದ್ದರು. ಗುರುವಾರ ಮತ್ತೆ ಆರೋಗ್ಯದಲ್ಲಿ ಏರುಪೇರಾಗಿದೆ ಎಂದು ತಿಳಿಸಿದ್ದರು ಎಂದು ವಿವರಿಸಿದರು.

ಲೋಕಾಯುಕ್ತಕ್ಕೆ ದೂರು: ಈ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಬಿಜೆಪಿ ಶುಕ್ರವಾರ ಲೋಕಾಯುಕ್ತಕ್ಕೆ ದೂರು ಸಲ್ಲಿಸಿದೆ. ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಮತ್ತು ಶಾಸಕ ಸಿ.ಕೆ. ರಾಮಮೂರ್ತಿ ಮತ್ತು ಎಂಎಲ್‌ಸಿ ರವಿಕುಮಾರ್ ಒಳಗೊಂಡ ನಿಯೋಗ ಬೆಂಗಳೂರಿನ ಲೋಕಾಯುಕ್ತ ಕಚೇರಿಗೆ ಭೇಟಿ ನೀಡಿ ಬಾಣಂತಿಯರ ಸಾವಿನ ಪ್ರಕರಣದ ಬಗ್ಗೆ ತನಿಖೆ ನಡೆಸುವಂತೆ ದೂರು ನೀಡಿದೆ.

ನಾಪತ್ತೆಯಾಗಿದ್ದ ವಕೀಲ ಶವವಾಗಿ ಪತ್ತೆ

ಬೆಳಗಾವಿ: ಅಥಣಿಯಲ್ಲಿ ಕಳೆದ 3 ದಿನಗಳ ಹಿಂದೆ ನಾಪತ್ತೆಯಾಗಿದ್ದ ವಕೀಲ ಶುಕ್ರವಾರ ಶವವಾಗಿ ಪತ್ತೆಯಾಗಿದ್ದಾರೆ.

ಅಥಣಿ ತಾಲೂಕಿನ ಯಲ್ಲಮ್ಮವಾಡಿ ಗ್ರಾಮದ ನಿವಾಸಿ ಸುಭಾಷ್ ಪಾಟಣಕರ(56) ಮೃತ ದುರ್ದೈವಿ. ಡಿ.3 ರಂದು ನಾಪತ್ತೆಯಾಗಿದ್ದ ಸುಭಾಷ್ ಮೃತದೇಹ ಅಥಣಿ ತಾಲೂಕಿನ ಹಲ್ಯಾಳ- ದರೂರ ಕೃಷ್ಣಾ ನದಿಯಲ್ಲಿ ಪತ್ತೆಯಾಗಿದೆ.

ಎಸ್‌ಡಿಆರ್‌ಎಫ್, ಅಗ್ನಿಶಾಮಕ, ಪೊಲೀಸ್ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಮೃತದೇಹವನ್ನು ಹೊರ ತೆಗೆದಿದ್ದಾರೆ. ಗುರುವಾರ ಸುಭಾಷ್ ಪಾಟಣಕರ ಪತ್ತೆಗಾಗಿ ಆಗ್ರಹಿಸಿ ಪೊಲೀಸರ ವಿರುದ್ಧ ವಕೀಲರು ಪ್ರತಿಭಟನೆ ನಡೆಸಿದ್ದರು. ಇದು ಕೊಲೆಯೋ ಅಥವಾ ಆತ್ಮಹತ್ಯೆಯೋ ಎಂಬುದನ್ನು ಪತ್ತೆಹಚ್ಚಲು ತನಿಖೆ ನಡೆಸುವಂತೆ ವಕೀಲರು ಆಗ್ರಹಿಸಿದ್ದಾರೆ. ಅಥಣಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮೃತದೇಹ ಪತ್ತೆಯಾಗಿದೆ.

ಎಎಸ್‌ಐ ನೇಣಿಗೆ ಶರಣು

ಬೆಳಗಾವಿ: ಐಗಳಿ ಪೊಲೀಸ್ ಠಾಣೆ ಎಎಸ್‌ಐ ಆತ್ಮಹತ್ಯೆಗೆ ಶರಣಾದ ಘಟನೆ ಶುಕ್ರವಾರ ನಡೆದಿದೆ. ಶಂಭು ಮೆತ್ರಿ (50) ಮೃತ ದುರ್ದೈವಿ. ಸ್ವಗ್ರಾಮ ಅನಂತಪುರದಲ್ಲಿ ನೇಣಿಗೆ ಶರಣಾಗಿದ್ದಾರೆ. ಕೆಲವು ತಿಂಗಳಿನಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಇವರು ಮನನೊಂದು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ಹೇಳಲಾಗುತ್ತಿದೆ. ಸ್ಥಳಕ್ಕೆ ಅಥಣಿ ಪೊಲೀಸರು ಭೇಟಿನೀಡಿ ಪರಿಶೀಲನೆ ನಡೆಸಿದ್ದು, ಅಥಣಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಪುರಸಭಾ ಕಾರ್ಯಾಲಯ, ತರೀಕೆರೆ. ಚಿಕ್ಕಮಗಳೂರು ಜಿಲ್ಲೆ.
www.tarieretown.gov.in Phone No.: 08261-222233
Gmail: ka.tarikere.tmc@gmail.com
ಸಂ:ಪುತ/ಆ.ಶಾ/ಸಿಆರ್/ಟೆಂಡರ್/48/24-25 ದಿನಾಂಕ: 04.12.2024

:ಟೆಂಡರ್ ಪ್ರಕಟಣೆ:

ತರೀಕೆರೆ ಪುರಸಭೆಯ 2024-25ನೇ ಸಾಲಿನ 15ನೇ ಹಣಕಾಸು ಯೋಜನೆಯಡಿ ಈ ಕೆಳಕಂಡ ಕಾಮಗಾರಿಗೆ ಇ-ಟೆಂಡರ್ ಆಹ್ವಾನಿಸಲಾಗಿದ್ದು, ಆಸಕ್ತ ನೊಂದಾಯಿತ ಅರ್ಹ ಗುತ್ತಿಗೆದಾರರು ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ವಿವರಗಳಿಗೆ ವೆಬ್‌ಸೈಟ್ ವಿಳಾಸ http://eproc.Karnataka.gov.in ಸಂಪರ್ಕಿಸತಕ್ಕದ್ದು.

1) ಇ-ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:13.12.2024 ರ ಸಂಜೆ 17:30 ರೊಳಗಾಗಿ, 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 16.12.2024 ರ ಸಂಜೆ 17:30 ಗಂಟೆಗೆ, 3) ಆರ್ಥಿಕ ಬಿಡ್ ತೆರೆಯುವ ದಿನಾಂಕ:18.12.2024 ರ ಬೆಳಗ್ಗೆ 11:00 ಗಂಟೆಗೆ, INDENT NO. DMA/2024-25/IND3837.

ಸೂಚನೆ: ಟೆಂಡರ್‌ನಲ್ಲಿ ಯಾವುದೇ ಬದಲಾವಣೆಗಳಿದ್ದಲ್ಲಿ ಇ-ಪೋರ್ಟಲ್‌ನಲ್ಲಿ ಮಾತ್ರ ಪ್ರಚುರಪಡಿಸಲಾಗುವುದು.

ಸಹಿ/- (ವಸಂತ್ ಕುಮಾರ್) ಅಧ್ಯಕ್ಷರು, ಪುರಸಭೆ, ತರೀಕೆರೆ.
ಸಹಿ/- (ಗಿರಿಜಾಪ್ರಕಾಶ್ (ವರ್ಮ)) ಉಪಾಧ್ಯಕ್ಷರು, ಪುರಸಭೆ, ತರೀಕೆರೆ.
ಸಹಿ/- (ಪ್ರಶಾಂತ್.ಹೆಚ್) ಮುಖ್ಯಾಧಿಕಾರಿ ಪುರಸಭೆ, ತರೀಕೆರೆ.

ವಾ.ಸಾ.ಸಂ.ಇ/ಕೆಎಸ್ಎಂಸಿಎ/ಚಿ/24-25/122/1178

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಖರೀದಿ ಶಾಖೆ, ಚಾವಿಸನಿನಿ,
ಮೈಸೂರು-570017, ದೂರವಾಣಿ: 9448994705
ಇ-ಮೇಲ್: gmpurc@cescmysore.org, ವೆಬ್‌ಸೈಟ್: cescmysore.karnataka.gov.in

ಸಂಖ್ಯೆ: ಚಾವಿಸನಿನಿ/ಪ್ರ.ವ್ಯ/ಸ.ಪ್ರ.ವ್ಯ(ಖ)/ಸ.ಪ್ರ.ವ್ಯ(ಖ)-1/2024-25/20769 ದಿನಾಂಕ: 03.12.2024

ಇ-ಹರಾಜು ಪ್ರಕಟಣೆ (ವಿದ್ಯುನ್ಮಾನ ಸಂಗ್ರಹಣಾ ವೇದಿಕೆ)

ಚಾವಿಸನಿನಿ ವತಿಯಿಂದ ಕೆಳಕಂಡ 33/11 ಕೆ.ವಿ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ದಾಸ್ತಾನಿರುವ ವಿವಿಧ ಸಾಮರ್ಥ್ಯದ ರದ್ದಿ ಶಕ್ತಿ ಪರಿವರ್ತಕಗಳನ್ನು ಮತ್ತು ಉಪಕೇಂದ್ರ ಸಾಮಗ್ರಿಗಳನ್ನು 'AS IS WHERE IS BASIS' ಆಧಾರದ ಮೇಲೆ ಇ-ಹರಾಜು ಮುಖೇನ ವಿಲೇವಾರಿ ಮಾಡಲು ಬಿಡ್ ಆಹ್ವಾನಿಸಿದೆ. ಕೇಂದ್ರಗಳ ಮತ್ತು ಇತರೆ ವಿವರಗಳು ಕೆಳಕಂಡಂತಿವೆ;

ಕ್ರ ಸಂ.	ಕೇಂದ್ರಗಳ ಹೆಸರು	ವಿಚಾರಣೆ ಸಂಖ್ಯೆ/ದಿನಾಂಕ
1	33/11 ಕೆ.ವಿ ಸಿದ್ಧಾಪುರ ಕೇಂದ್ರ	ಸಿ2-5999/03-12-2024
2	33/11 ಕೆ.ವಿ ಶುಂಠಿಕೊಪ್ಪ ಕೇಂದ್ರ	ಸಿ2-6000/03-12-2024
3	33/11 ಕೆ.ವಿ ಸೋಮವಾರಪೇಟೆ ಕೇಂದ್ರ	ಸಿ2-6001/03-12-2024
4	33/11 ಕೆ.ವಿ ಶ್ರೀಮಂಗಲ ಕೇಂದ್ರ	ಸಿ2-6002/03-12-2024
5	33/11 ಕೆ.ವಿ ವೀರಾಜಪೇಟೆ ಕೇಂದ್ರ	ಸಿ2-6003/03-12-2024
6	33/11 ಕೆ.ವಿ ಚಂದಕವಾಡಿ ಕೇಂದ್ರ	ಸಿ2-6004/03-12-2024
7	33/11 ಕೆ.ವಿ ತೆರಕಣಾಂಬಿ ಕೇಂದ್ರ	ಸಿ2-6005/03-12-2024
8	ಹುಣಸೂರು ವಿಭಾಗೀಯ ಉಗ್ರಾಣದಲ್ಲಿ ಕಳಚಿ ಶೇಖರಿಸಲಾಗದ 33/11 ಕೆ.ವಿ ರದ್ದಿ ಶಕ್ತಿ ಪರಿವರ್ತಕ ಮತ್ತು ಉಪ ಕೇಂದ್ರ ಸಾಮಗ್ರಿಗಳು	ಸಿ2-6006/03-12-2024

ಇತರೆ ವಿವರಗಳನ್ನು ಹಾಗೂ ಹರಾಜಿನ ದಿನಾಂಕ, ಸಮಯ ಮತ್ತು ಅರ್ಹ ಬಿಡ್‌ದಾರರು ಸದರಿ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವ ಬಗ್ಗೆ ವಿವರಗಳನ್ನು http://kppp.karnataka.gov.in ನಲ್ಲಿ ದಿನಾಂಕ: 06-12-2024 ಅಥವಾ ನಂತರ ಪಡೆಯಬಹುದಾಗಿರುತ್ತದೆ. ಇ-ಪೋರ್ಟಲ್‌ನ ಬಗ್ಗೆ ಮಾಹಿತಿಗಾಗಿ ಸಹಾಯವಾಣಿ 080-46010000/22631200ಗೆ ಅಥವಾ ಇ-ಮೇಲ್ ವಿಳಾಸ support@eprochelpdesk.com ಗೆ ಸಂಪರ್ಕಿಸಬಹುದಾಗಿದೆ.

ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ : 1912

ಸಹಿ/-
ಪ್ರಧಾನ ವ್ಯವಸ್ಥಾಪಕರು (ಖರೀದಿ)
ಚಾವಿಸನಿನಿ, ಮೈಸೂರು

DIPR/MYS/KAVITA/927/2024-25

ವಿರಾಮ
ಪ್ರತಿ ಭಾನುವಾರ

ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರರವರ ಕಾರ್ಯಾಲಯ,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ,ವಿಜಯಪುರ
ದೂರವಾಣಿ ಸಂ:08352-277816, ಫ್ಯಾಕ್ಸ್:08352-277817
ಇ-ಮೇಲ್:zpebjp9@yahoo.co.in
ಸಂಖ್ಯೆ:ಕಾಇಂ/ಪಂ.ರಾ.ಇಂ.ವಿ/ವಿಜ/ಇಪ್ರಾ/ಟೆಂಡರ್/2024-25/6386 ದಿನಾಂಕ:05.12.2024

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ ಇವರು ಶಿಕ್ಷಣ ಇಲಾಖೆಯ ಶಾಲೆಗಳಿಗೆ ಶೌಚಾಲಯ ನಿರ್ಮಾಣ ಲೆಕ್ಕ ಶೀರ್ಷಿಕೆ ಯೋಜನೆಯಡಿಯಲ್ಲಿ **ಸಾಮಾನ್ಯ ಗುತ್ತಿಗೆದಾರರ** 3 ಪ್ಯಾಕೇಜ್ ಕಾಮಗಾರಿ (ಇಂಡೆಂಟ ನಂ. 11161, 11026, 10893) **ಪರಿಶಿಷ್ಟ ಜಾತಿ ಗುತ್ತಿಗೆದಾರರ** 1 ಪ್ಯಾಕೇಜ್ ಕಾಮಗಾರಿ (ಇಂಡೆಂಟ ನಂ. 11146) ರೂ. 8.00 ಲಕ್ಷ ದಿಂದ 14.00 ಲಕ್ಷಗಳವರೆಗೆ ಒಟ್ಟು 4 ಕಾಮಗಾರಿಗಳಿಗೆ ಕೆ.ಡಬ್ಲ್ಯೂ-1 ಮತ್ತು 2 ರ ಪ್ರಕಾರ ಈ ಕಚೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ: 6386 **ದಿನಾಂಕ: 05.12.2024** ರಂತೆ ಕಾಮಗಾರಿಗಳನ್ನು ಇ-ಟೆಂಡರ್‌ನ್ನು ಆಹ್ವಾನಿಸಿದ್ದು, ಕೆ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ: 11.12.2024 ಸಾಯಂಕಾಲ 5.30 ಗಂಟೆಯವರೆಗೆ ಮಾತ್ರ ನಿಗದಿಪಡಿಸಿರುತ್ತದೆ.

ಟೆಂಡರಿನ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ www.kppp.karnataka.gov.in ನಲ್ಲಿ ಅಥವಾ ಕಛೇರಿ ಸಮಯದಲ್ಲಿ ಸದರಿ ವಿಭಾಗ ಕಾರ್ಯಾಲಯಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು
ಪಂ.ರಾ.ಇಂ. ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/484/ಕೆಎಸ್ಎಂಸಿಎ/2024-25

ಕರ್ನಾಟಕ ಸರ್ಕಾರ
(ಜಲಸಂಪನ್ಮೂಲ ಇಲಾಖೆ)
ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ
ಕಾರ್ಯನಿರ್ವಾಹಕ ಅಭಿಯಂತರ ಕಾರ್ಯಾಲಯ,
ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು,
ಕಾಡಾ, ವಿಭಾಗ ಸಂ-1, ನರಗುಂದ.
ದೂರವಾಣಿ ಸಂಖ್ಯೆ 08377-295365 e.mail : eecadadiv1nrg@gmail.com
ಕ್ರ/ಕಾನಿಅನ/ತಾಂತ್ರಿಕ/ಟೆಂಡರ/2024-25/ 259 ದಿನಾಂಕ : 05-12-2024

ಇ-ಟೆಂಡರ್ ಪ್ರಕಟಣೆ

ಕಾಡಾ ಮಲಪ್ರಭಾ ಮತ್ತು ಘಟಪ್ರಭಾ ಯೋಜನಾ ವ್ಯಾಪ್ತಿ ಪ್ರದೇಶದ 2024-25 ನೇ ಸಾಲಿನ ಲೆಕ್ಕಶೀರ್ಷಿಕೆ 4705 ಯೋಜನೆಯಡಿಯಲ್ಲಿ 06 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಸದರಿ ಕಾಮಗಾರಿಯ ಅನುಷ್ಠಾನಕ್ಕಾಗಿ ಐಟಂದರ ಟೆಂಡರಗಳನ್ನು ಆಡಳಿತಾಧಿಕಾರಿಗಳು ಕಾಡಾ ಬೆಳಗಾವಿ ಇವರ ಪರವಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ಕನಿಷ್ಠ ಟೆಂಡರಿಗಿಟ್ಟ ಮೊತ್ತ : ರೂ. 9.74 ಲಕ್ಷಗಳು, ಗರಿಷ್ಠ ಟೆಂಡರಿಗಿಟ್ಟ ಮೊತ್ತ : ರೂ. 27.19 ಲಕ್ಷಗಳು, ಅರ್ಜಿಗಳನ್ನು ಆನ್‌ಲೈನ್‌ಲ್ಲಿ ಸಲ್ಲಿಸುವ ಹಾಗೂ ತೆರೆಯುವ ದಿನಾಂಕಗಳು ಈ ಕೆಳಗಿನಂತಿರುತ್ತವೆ.

1) ಆನ್ ಲೈನ್ ನಲ್ಲಿ ಪ್ರಕಟಿಸುವ ದಿನಾಂಕ: **06-12-2024** ರ 10:00 ಗಂಟೆಯ ನಂತರ. 2) ಆನ್ ಲೈನ್ ನಲ್ಲಿ ಭರ್ತಿ ಮಾಡಿದ ಟೆಂಡರಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **13-12-2024** (17:30 ಗಂಟೆಯವರೆಗೆ). 3) ಗುತ್ತಿಗೆದಾರರ ಬಿಡ್‌ಗಳನ್ನು ತೆರೆಯುವ ದಿನಾಂಕ: **16-12-2024** (10:30 ಗಂಟೆಯ ನಂತರ).

ಕಾಮಗಾರಿಗಳ ಹೆಸರು / ಗುತ್ತಿಗೆದಾರರ ಅರ್ಹತೆ/ ಟೆಂಡರಿನ ನಿಯಮ/ ಟೆಂಡರ್ ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ (www.kppp.karnataka.gov.in) ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕಚೇರಿಯ ದೂರವಾಣಿ ಸಂಖ್ಯೆ 08377-295365 ಗೆ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ ಯಾವುದೇ ಟೆಂಡರನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಮತ್ತು ರದ್ದುಪಡಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು
ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು,
ಕಾಡಾ, ವಿಭಾಗ ಸಂ-1, ನರಗುಂದ

ವಾ.ಸಾ.ಇ/ಗದಗ/446/ದೇಶಪಾಂಡೆಪಬ್ಲಿಸಿಟಿ/2024-25

ಪುರಸಭೆ ಕಾರ್ಯಾಲಯ ಆಳಂದ, ಜಿ: ಕಲಬುರಗಿ
E-mail : ka.aland.tmc@gmail.com, Website : www.alandatown.mrc.gov.in
ಸಂ:ಪು.ಸ.ಆ/ಟೆಂಡರ್/2024-25 ದಿನಾಂಕ : 04-12-2024

:: ಕಾಲ್-2 ಟೆಂಡರ್ ಪ್ರಕಟಣೆ-(ಈ-ಪ್ರೊಕ್ಯೂರ್‌ಮೆಂಟ್ ಮುಖಾಂತರ) ::

ಮುಖ್ಯಾಧಿಕಾರಿಗಳು ಪುರಸಭೆ ಆಳಂದ ಇವರಿಂದ ವಿವಿಧ ಅನುದಾನದ ಅಡಿಯಲ್ಲಿ (05) ಕಾಮಗಾರಿಗಳ ಕರ್ನಾಟಕ ಪಾರದರ್ಶಕ ನಿಯಮದಂತೆ (ಕೆ.ಟಿ.ಪಿ.ಪಿ-2000) ರನ್ವಯ Standared Bid Document ಟೆಂಡರ ಕರೆಯಲಾಗಿದ್ದು, ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ನವಿಕರಿಸಿದ ಅರ್ಹ ಆಸಕ್ತಿಯುಳ್ಳ ಗುತ್ತಿಗೆದಾರರು / ಉತ್ಪಾದಕರು / ಅಧಿಕೃತ ಸರಬರಾಜುದಾರರು ತಮ್ಮ ಮೂಲ ಪ್ರಮಾಣ ಪತ್ರದ ಪ್ರತಿ ಹಾಗೂ ಇತರೆ ಸೂಕ್ತ ದಾಖಲಾತಿಗಳೊಂದಿಗೆ **https://kppp.karnataka.gov.in** ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ **20-12-2024 ರ 5.30 ಗಂಟೆ** ಒಳಗಾಗಿ ಸಲ್ಲಿಸಲು ಕೋರಲಾಗಿದೆ.

1) ಕಾಮಗಾರಿ/ ಸರಕು/ಸೇವೆಯ ವಿವರ : DMA/2023-24/SE1768/CALL-4, DMA/2024-25/OW/WORK_INDENT24753/CALL-2 ST, DMA/2024-25/OW/WORK_INDENT25379/CALL-2 ST, DMA/2024-25/OW/WORK_INDENT24687/CALL/2 GEN, DMA/2024-25/WS/WORK_INDENT25656/CALL-2 GEN, 2) ಅನುದಾನದ ವಿವರ : ವಿವಿಧ ಅನುದಾನ, 3) ಕಾಮಗಾರಿ/ಸರಕು/ಸೇವೆಯ ಅಂದಾಜು ಮೊತ್ತ : **ಕನಿಷ್ಠ ರೂ : 12.00 ಲಕ್ಷಗಳು, ಗರಿಷ್ಠ ರೂ : 83.60 ಲಕ್ಷಗಳು,** 4) ಗುತ್ತಿಗೆದಾರರ ಅರ್ಹತೆ ವಿವರ : ನೋಂದಾಯಿತ ಅರ್ಹ ಸರಬರಾಜುದಾರರು / ಗುತ್ತಿಗೆದಾರರು, 5) ಟೆಂಡರ್ ಫಾರಂಗಾಗಿ ಆನ್-ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : **20.12.2024 ರಂದು ಸಾ. 5.30 ಗಂಟೆ,** 6) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **23.12.2024 ರಂದು ಬೆ 11.00,** 7) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ : **26.12.2024 ರಂದು ಬೆ. 11.00 ಗಂಟೆಗೆ,** 8) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ, ಕಛೇರಿಯ ವಿಳಾಸ, ದೂರವಾಣಿ ಸಂ. : ಪುರಸಭೆ ಕಾರ್ಯಾಲಯ ಆಳಂದ, ಜಿ: ಕಲಬುರಗಿ, 9) ಅಂತರ್ಜಾಲ ತಾಣದ ವಿಳಾಸ: www.alandatown.mrc.gov.in

ಸಹಿ/- ಆಡಳಿತಾಧಿಕಾರಿಗಳು
ಪುರಸಭೆ ಆಳಂದ

ಸಹಿ/- ಮುಖ್ಯಾಧಿಕಾರಿ
ಪುರಸಭೆ ಆಳಂದ

ವಾ.ಸಾ.ಸಂ.ಇ/ಕಲಬುರಗಿ/697/ಕೆ.ಎಸ್.ಎಂ.ಸಿ.&ಎ/2024-25

ಟ್ವೀಟೂ-ಖಾರಾ

ಆರ್. ಅಶೋಕ್, ಪ್ರತಿಪಕ್ಷ ನಾಯಕ

ಕಾಂಗ್ರೆಸ್ ಸರಕಾರದಿಂದ ಬಳ್ಳಾರಿ ಜಿಲ್ಲೆಯಲ್ಲಿ ಕಳಪೆ ಔಷಧಿಯಿಂದ ಮತ್ತೊಬ್ಬ ಬಾಣಂತಿ , ಮಗು ಸಾವಾಗಿದೆ. ಸಿಎಂ ಸಿದ್ದರಾಮಯ್ಯನವರೇ, ನಿಮಗೆ ಮಾನವೀಯತೆ ಇದೆಯಾ..? ನೀವು ಮಾಡಿದ ಕಾಟಾಚಾರದ ಸಭೆಗಳಿಂದ ಯಾವ ಪ್ರಯೋಜನವೂ ಆಗಿಲ್ಲ. ಇಷ್ಟಾದರೂ ತಾವಾಗಲೀ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರಾಗಲೀ ಬಳ್ಳಾರಿಗೆ ಭೇಟಿ ನೀಡಿಲ್ಲ.ನಿಮ್ಮನ್ನು ಕೊಲೆಗಡುಕ ಸರಕಾರ ಅನ್ನದೇ ಇನ್ನೇನು ಅನ್ನಬೇಕು..?

ಬಸವರಾಜು ಮುತ್ತತ್ತಿ, ಬೆಂಗಳೂರು

ಮೊದಲು ನಿಮ್ಮ ಪ್ರಧಾನಿಗೆ ಸೌಜನ್ಯಕ್ಕಾದರೂ ಮಣಿಪುರಕ್ಕೆ ಭೇಟಿ ನೀಡಿ ಜನರ ಕಷ್ಟಗಳಿಗೆ ಕಿವಿಯಾಗಲು ಹೇಳಿ. ಚಾಮರಾಜನಗರದ ಆಕ್ಸಿಜನ್ ದುರಂತವನ್ನು ಕರ್ನಾಟಕದ ಜನತೆ ಇನ್ನೂ ಮರೆತಿಲ್ಲ.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಬೆಂಗಳೂರು**

ಸಮಸ್ಯೆಯೇನು..?

- ಲಾಲ್‌ಬಾಗ್ ಬಳಿ ಬಿಬಿಎಂಪಿ ತ್ಯಾಜ್ಯ ಸಾಗಿಸುವ ವಾಹನಗಳಿಂದ ನಿಂತು, ಭಾರಿ ಪ್ರಮಾಣ ಕಸ ರಸ್ತೆಯಲ್ಲೆಲ್ಲಾ ಬಿದ್ದಿರುವುದು.
- **ಪರಿಹಾರ:** ಲಾಲ್‌ಬಾಗ್ ಬಳಿ ಬಿಬಿಎಂಪಿ ತ್ಯಾಜ್ಯ ಸಾಗಿಸುವ ವಾಹನಗಳು, ಭಾರಿ ಪ್ರಮಾಣದ ಕಸವನ್ನು ತೆರವು ಮಾಡಲಾಗಿದೆ.

ಸಮಾಚಾರ ಸಣ್ಣದಲ್ಲ

ಆರ್‌ಟಿಓ ಇನ್ಸ್‌ಪೆಕ್ಟರ್ ಕೊರವಿ ಅಮಾನತು

ಬೀದರ್: ಬಿಜೆಪಿ ಶಾಸಕ ಶೈಲೇಂದ್ರ ಬೆಲ್ದಾಳೆ ಅವರೊಂದಿಗೆ ಅನುಚಿತ ವರ್ತನೆ ತೋರಿ, ಏಕವಚನದಲ್ಲಿ ಮಾತಾನಾಡಿದ್ದ ಆರೋಪದ ಮೇಲೆ ಆರ್‌ಟಿಓ ಇನ್ಸ್‌ಪೆಕ್ಟರ್ ಒಬ್ಬರನ್ನ ಅಮಾನತುಗೊಳಿಸಲಾಗಿದೆ.

ಸಾರಿಗೆ ಇಲಾಖೆಯಲ್ಲಿ ಆರ್‌ಟಿಓ ಇನ್ಸ್‌ಪೆಕ್ಟರ್ ಆಗಿದ್ದ ಮಂಜುನಾಥ ಕೊರವಿಯವರನ್ನು ಅಮಾನತು ಮಾಡಲಾಗಿದೆ. ಬೀದರ್ ಸಾರಿಗೆ ಮತ್ತು ರಸ್ತೆ ಸುರಕ್ಷಿತ ಆಯುಕ್ತರು ಅಮಾನತು ಮಾಡುವಂತೆ ಆದೇಶಿಸಿದ್ದಾರೆ. ಜಿಲ್ಲೆಯ ಹೊರವಲಯದ ನೌಬಾದ್ ಬಳಿ ಬೀದರ್ ದಕ್ಷಿಣ ಕ್ಷೇತ್ರದ ಶಾಸಕ ಶೈಲೇಂದ್ರ ಬೆಲ್ದಾಳೆಗೆ ಆರ್‌ಟಿಓ ಇನ್ಸ್‌ಪೆಕ್ಟರ್ ಏಕವಚನದಲ್ಲಿ ಮಾತಾನಾಡಿದ್ದರು. ಈ ಹಿನ್ನೆಲೆ ಅವರನ್ನು ಬೀದರ್‌ನಿಂದ ರಾಯಚೂರಿಗೆ ವರ್ಗಾವಣೆ ಮಾಡಲಾಗಿತ್ತು. ಜೊತೆಗೆ ಏಕವಚನದಲ್ಲಿ ಮಾತನಾಡಿರುವ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದವು. ಈ ಸಂಬಂಧ ಬೆಲ್ದಾಳೆ ಅವರು ಸರಕಾರಕ್ಕೆ ಹಕ್ಕುಚ್ಯುತಿ ಸಲ್ಲಿದರು. ಹಕ್ಕುಚ್ಯುತಿ ಸಲ್ಲಿಸಿದ್ದ ಹಿನ್ನೆಲೆ ಸಾರಿಗೆ ಆಯುಕ್ತರು ಪರಿಶೀಲನೆ ನಡೆಸಿ, ಆರ್‌ಟಿಓ ಇನ್ಸ್‌ಪೆಕ್ಟರ್‌ನ್ನು ಅಮಾನತು ಮಾಡುವಂತೆ ಆದೇಶ ಹೊರಡಿಸಿದ್ದಾರೆ.

ಬೆಳಗಾವಿ ಅಧಿವೇಶನಕ್ಕೆ ವಿಶೇಷ ವಿಮಾನ



ಬೆಂಗಳೂರು: ಸೋಮವಾರದಿಂದ ಬೆಳಗಾವಿಯಲ್ಲಿ ಆರಂಭವಾಗಲಿರುವ ಚಳಿಗಾಲದ ಅಧಿವೇಶನದ ಹಿನ್ನಲೆಯಲ್ಲಿ ಇಂಡಿಗೋ ಏರ್‌ಲೈನ್ಸ್‌ನಿಂದ ವಿಶೇಷ ವಿಮಾನ ಸಂಚಾರ ಸೇವೆ ಆರಂಭಗೊಂಡಿದೆ. ಡಿ.9ರಿಂದ 19ರವರೆಗೆ ಅಧಿವೇಶನ ನಡೆಯಲಿದ್ದು, ಈ ಅವಧಿಗೆ ಬೆಂಗಳೂರು - ಬೆಳಗಾವಿ ನಡುವೆ ವಿಶೇಷ ವಿಮಾನ ಸಂಚಾರ ನಡೆಸಲಿದೆ. ಅಧಿವೇಶನದಲ್ಲಿ ಭಾಗಿಯಾಗಲು ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವ ಕುಮಾರ್ ಸೇರಿ ಸಚಿವರು, ಶಾಸಕರು, ಪ್ರತಿಪಕ್ಷ ನಾಯಕರು ಮತ್ತು ಅಧಿಕಾರಿಗಳು ಆಗಮಿಸುತ್ತಾರೆ. ಆದ್ದರಿಂದ ಅನುಕೂಲ ಕಲ್ಪಿಸುವ ಉದ್ದೇಶದಿಂದ ಈ ವಿಶೇಷ ಸಂಚಾರ ಆರಂಭವಾಗಿದೆ. ಈ ಬಗ್ಗೆ ಸಂಸದ ಜಗದೀಶ ಶೆಟ್ಟರ್ ಮತ್ತು ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಮನವಿ ಸಲ್ಲಿಸಿದ್ದರು. ವಿಶೇಷ ವಿಮಾನವು ಬೆ.6ಕ್ಕೆ ಬೆಂಗಳೂರಿನಿಂದ ಹೊರಟು 7ಕ್ಕೆ ಬೆಳಗಾವಿ ತಲುಪಲಿದೆ. ಪುನಃ 7.30ಕ್ಕೆ ಬೆಳಗಾವಿಯಿಂದ ಹೊರಟು 8.30ಕ್ಕೆ ಬೆಂಗಳೂರನ್ನು ತಲುಪಲಿದೆ. ಈ ವಿಶೇಷ ವಿಮಾನ 189 ಆಸನಗಳನ್ನು ಹೊಂದಿದೆ.

ವಿರಾಮ
ಪ್ರತಿ ಭಾನುವಾರ

ಉನ್ನತ ಶಿಕ್ಷಣದಲ್ಲೂ ಹೆಚ್ಚುವರಿ ಕೋಟಾ | ಸಚಿವ ಸಂಪುಟ ಸಭೆಯಲ್ಲಿ ಮಹತ್ವದ ತೀರ್ಮಾನ

ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ಮಿತಿಯಲ್ಲಿ ರಿಯಾಯಿತಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳಿಗೆ ಕಡ್ಡಾಯ ಪ್ರವೇಶಕ್ಕೆ ರಿಯಾಯಿತಿ ನೀಡಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ. ವಿಧಾನಸೌಧದಲ್ಲಿ ನಡೆದ ಸಚಿವ ಸಂಪುಟ ಸಭೆ ನಂತರ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿ, ರಾಜ್ಯದಲ್ಲಿರುವ ಒಟ್ಟು ಅಲ್ಪಸಂಖ್ಯಾತರ ಜನಸಂಖ್ಯೆಯಲ್ಲಿ ಮುಸ್ಲಿಂ, ಕ್ರಿಶ್ಚಿಯನ್, ಸಿಖ್, ಜೈನ, ಬೌದ್ಧ ಮತ್ತು ಪಾರ್ಸಿ ಸಮುದಾಯಗಳ ಜನಸಂಖ್ಯೆ ಪ್ರಮಾಣ ತುಂಬಾ ಕಡಿಮೆ ಇರುವುದರಿಂದ ಅಲ್ಪಸಂಖ್ಯಾತರ ಸಮುದಾಯದವರು ನಡೆಸುವ ಶೈಕ್ಷಣಿಕ ಸಂಸ್ಥೆಗಳನ್ನು ಅಲ್ಪಸಂಖ್ಯಾತರ ಶೈಕ್ಷಣಿಕ ಸಂಸ್ಥೆಗಳೆಂದು ಘೋಷಿಸಲು ಪ್ರಸ್ತುತ ಜಾರಿಯಲ್ಲಿರುವ ನಿಯಮ ಮತ್ತು ಆದೇಶಗಳಲ್ಲಿ ನಿಗದಿಪಡಿಸಿರುವ ಶೇಕಡಾವಾರು ವಿದ್ಯಾರ್ಥಿಗಳು ಲಭ್ಯವಾಗುವುದು ಕಷ್ಟವಾಗಿದೆ. ಹಾಗಾಗಿ, ಈ ನಿಯಮಗಳಿಗೆ ತಿದ್ದುಪಡಿ ತರಲು ಪ್ರಸ್ತಾಪಿಸಲಾಗಿತ್ತು. ಇದೀಗ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳಿಗೆ ಮಾನ್ಯತೆ ನೀಡಲು ನಿಬಂಧನೆ ಮತ್ತು ಷರತ್ತುಗಳು) (ಕಾಲೇಜು ಶಿಕ್ಷಣ) (ತಿದ್ದುಪಡಿ) ನಿಯಮಗಳು, 2024 ಕ್ಕೆ ಅನುಮೋದನೆ ನೀಡಲಾಗಿದೆ ಎಂದು ಹೇಳಿದರು.

ಅಲ್ಪಸಂಖ್ಯಾತರ ಶೇ.25ರಷ್ಟು ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಿದ ಶಿಕ್ಷಣ ಸಂಸ್ಥೆಗಳಿಗೆ ಅಲ್ಪಸಂಖ್ಯಾತ ಸ್ಥಾನಮಾನ ನೀಡುವುದಾಗಿ ಕರಡು ಅಧಿಸೂಚನೆ 2018ರಲ್ಲಿ ಹಿಂದಿನ ಸರಕಾರ ಹೊರಡಿಸಿತ್ತು. ಅದಕ್ಕೆ ಸಚಿವ ಸಂಪುಟದಲ್ಲಿ ವಿರೋಧ ವ್ಯಕ್ತವಾಗಿತ್ತು. ಈಗ ಎರಡನೇ ಬಾರಿಗೆ ಕಾಂಗ್ರೆಸ್ ಸರಕಾರ ಷರತ್ತನ್ನು ತೆಗೆದು ಹಾಕಲು ತೀರ್ಮಾನಿಸಿದೆ. ಹಿಂದೆ ಕೇವಲ ಪ್ರಾಥಮಿಕ, ಪ್ರೌಢ ಶಿಕ್ಷಣಕ್ಕೆ ಸೀಮಿತವಾಗಿದ್ದ ಈ ಆದೇಶವನ್ನು ತಾಂತ್ರಿಕ, ಉನ್ನತ ಶಿಕ್ಷಣ ಇಲಾಖೆಗೂ ವಿಸ್ತರಿಸುವ ಸಂಬಂಧ ಸಂಪುಟ ಸಭೆ ಚರ್ಚೆ ನಡೆಸಿ ಅನುಮೋದನೆ ನೀಡಿದೆ ಎಂದರು.

ಠೇವಣಿದಾರರ ಹಿತಾಸಕ್ತಿ ಕಾಯಲು ವಿಧೇಯಕಕ್ಕೆ ಮತ್ತಷ್ಟು ತಿದ್ದುಪಡಿ: ಹಣಕಾಸು ಸಂಸ್ಥೆ, ಅಧೀನ ಸಂಸ್ಥೆ ಅಥವಾ ವಸತಿ ಅಭಿವೃದ್ಧಿ ಸೊಸೈಟಿಗಳಲ್ಲಿ ಠೇವಣಿದಾರರಿಗೆ ವಂಚನೆ ಮಾಡಿರುವವರಿಂದ ಹಣ ವಸೂಲಿ ಮಾಡಿ ಠೇವಣಿದಾರರಿಗೆ ನೀಡಲು ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ತಿದ್ದುಪಡಿ ವಿಧೇಯಕ ಜಾರಿಯಲ್ಲಿದ್ದು, ವಂಚಕರು ಶಿಕ್ಷೆಯಿಂದ ಪಾರಾಗುವುದನ್ನು ತಪ್ಪಿಸಲು ವಿಧೇಯಕಕ್ಕೆ ಮತ್ತಷ್ಟು ತಿದ್ದುಪಡಿ ತರಲು ಅಂಗೀಕಾರ ಸೂಚಿಸಲಾಗಿದೆ. ಠೇವಣಿದಾರರ ಹಣ ವಂಚನೆಯಾದಾಗ ಸಂಬಂಧಪಟ್ಟ ದಸ್ತಾವೇಜು ಅಥವಾ ವಸ್ತುವನ್ನು ಹಾಜರುಪಡಿಸುವ ಬಗ್ಗೆ ಸಮನ್ಸ್ ನೀಡಲು ಸಕ್ಷಮ ಅಧಿಕಾರಿ ಅಥವಾ ವಿಶೇಷ ನ್ಯಾಯಾಲಯಕ್ಕೆ ಅಧಿಕಾರ ನೀಡಲಾಗಿದೆ. ಠೇವಣಿದಾರರಿಗೆ ವಂಚನೆ ಮಾಡುವ ಹಣಕಾಸು ಸಂಸ್ಥೆಗಳ ಆಡಳಿತ ಆರೋಪಿಗಳನ್ನು ಹೊರಗಿಡುವುದು, ವಂಚನೆ ಬಗ್ಗೆ ದೂರು ನೀಡಲು 15 ದಿನದ ಬದಲಿಗೆ 30 ದಿನಗಳವರೆಗೆ ಕಾಲಾವಕಾಶ ನೀಡವುದು ಸೇರಿದಂತೆ 35 ತಿದ್ದುಪಡಿ ಪ್ರಸ್ತಾಪಿಸಲಾಗಿದೆ.

ಬಾಣಂತಿಯರು ಸಾವು ಪ್ರಕರಣ ಚರ್ಚೆ

ಸಚಿವ ಸಂಪುಟ ಸಭೆಯಲ್ಲಿ ಬಳ್ಳಾರಿ ಆಸ್ಪತ್ರೆಯಲ್ಲಿ ನಡೆದ ಬಾಣಂತಿಯರ ಸಾವು ಪ್ರಕರಣ ಚರ್ಚೆಯಾಗಿದ್ದು, ಸಿಎಂ ಸಿದ್ದರಾಮಯ್ಯ ಅವರು ಈ ಪ್ರಕರಣದ ಬಗ್ಗೆ ಕಳವಳ ವ್ಯಕ್ತಪಡಿಸಿದರು. ನಂತರ ಬಹಳ ಜಾಗ್ರತೆ ವಹಿಸುವಂತೆ ಮುಖ್ಯಮಂತ್ರಿ ಸೂಚನೆ ನೀಡಿದ್ದಾರೆ. ಇದೇ ವೇಳೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಬಾಣಂತಿಯರ ಸಾವು ಪ್ರಕರಣ ಸಂಬಂಧ ವರದಿ ನೀಡಿದರು ಎಂದು ಸಚಿವರು ತಿಳಿಸಿದರು.

ಒಪ್ಪಿಗೆ ಪಡೆದ ಇತರ ವಿಷಯಗಳು

- ರಾಜ್ಯ ಸರಕಾರದ ಅಂತರ್ ನಿಗಮ ಠೇವಣಿಗಳಿಗೆ ಅಸ್ತು
- ನೇತ್ರಾವತಿ ನದಿಗೆ ಸೇತುವೆ ನಿರ್ಮಾಣ ಕಾಮಗಾರಿಗೆ ಅನುಮೋದನೆ
- ಹೊಸಕೋಟೆ ತಾಲೂಕಿನ ರಸ್ತೆ ಅಭಿವೃದ್ಧಿಗೆ 97.27 ಕೋಟಿ. ರು.
- ಜನನ ಮತ್ತು ಮರಣ ಪ್ರಮಾಣ ಪತ್ರಗಳಿಗೆ ಏಕರೂಪತೆ ತರಲು ನಿಯಮ ತಿದ್ದುಪಡಿ
- ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲೂಕಿನಲ್ಲಿ ರಸ್ತೆ ಸುಧಾರಣೆ ಕಾಮಗಾರಿಗೆ 25 ಕೋಟಿ ರು.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯಗಳಿಗೆ ಗುಣಮಟ್ಟದ ಚಿಕಿತ್ಸೆ ನೀಡಲು 47 ಕೋಟಿ
- ಎಸ್‌ಸಿಪಿ/ಟಿಎಸ್‌ಪಿ ಯೋಜನೆಯಡಿ ಕಲ್ಯಾಣ ಕರ್ನಾಟಕ ಭಾಗದ ಸರಕಾರಿ ಶಾಲೆಗಳ ಪರಿಕರಕ್ಕಾಗಿ 4266.38 ಲಕ್ಷ ರು. ಅನುಮೋದನೆ.

ಒಟ್ಟು ಜನಸಂಖ್ಯೆಯಲ್ಲಿ ಮುಸ್ಲಿಂ, ಕ್ರಿಶ್ಚಿಯನ್, ಸಿಖ್, ಜೈನ, ಬೌದ್ಧ ಮತ್ತು ಪಾರ್ಸಿ ಸಮುದಾಯಗಳ ಜನಸಂಖ್ಯೆ ಕಡಿಮೆಯಿರುವುದರಿಂದ ಅಲ್ಪಸಂಖ್ಯಾತರ ಶೈಕ್ಷಣಿಕ ಸಂಸ್ಥೆಗಳೆಂದು ಘೋಷಿಸಲು ಪ್ರಸ್ತುತ ಜಾರಿಯಲ್ಲಿರುವ ನಿಯಮ ಮತ್ತು ಆದೇಶಗಳಲ್ಲಿ ನಿಗದಿಪಡಿಸಿರುವ ಶೇಕಡಾವಾರು ವಿದ್ಯಾರ್ಥಿಗಳು ಲಭ್ಯವಾಗುವುದು ಕಷ್ಟವಾಗಿದೆ. ಆದ್ದರಿಂದ ನಿಯಮಗಳಿಗೆ ತಿದ್ದುಪಡಿ ತರಲು ಅನುಮೋದನೆ ನೀಡಲಾಗಿದೆ.

-ಎಚ್.ಕೆ. ಪಾಟೀಲ್, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ

ಆರೋಗ್ಯ ಸಚಿವ ಸಚಿವ ದಿನೇಶ್ ಗುಂಡೂರಾವ್ ಹೇಳಿಕೆ

ಬಾಣಂತಿಯರ ಸಾವು: ಕಂಪನಿ ವಿರುದ್ಧ ಕ್ರಮ

ಕೋಲಾರ: ಬಳ್ಳಾರಿ ಆಸ್ಪತ್ರೆಯಲ್ಲಿ ಬಾಣಂತಿಯರ ಸಾವಿನ ಪ್ರಕರಣ ಸರಕಾರ ಗಂಭೀರ ವಾಗಿ ಪರಿಗಣಿಸಿದ್ದು ಈಗಾಗಲೇ ಔಷಧ ನಿಯಂತ್ರಣ ಇಲಾಖೆಯ ಒಬ್ಬ ಅಧಿಕಾರಿ ಅಮಾನತು ಮಾಡಲಾಗಿದೆ. ಮತ್ತೊಬ್ಬ ಅಧಿಕಾರಿಗೆ ನೋಟಿಸ್ ನೀಡಲಾಗಿದೆ. ಔಷಧ ಪೂರೈಕೆ ಕಂಪನಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳುತ್ತೇವೆ ಎಂದು ಆರೋಗ್ಯ ಸಚಿವ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ನಂಗ್ಲಿ ಆಸ್ಪತ್ರೆ ಯಲ್ಲಿ ಸಮುದಾಯದ ಆರೋಗ್ಯ ಕೇಂದ್ರ ಕಟ್ಟಡ ಶಂಕು ಸ್ಥಾಪನೆ ನೆರವೇರಿಸಿ ಮಾತನಾಡಿ, ಪಶ್ಚಿಮ ಬಂಗಾಳದ ಔಷಧ ತಯಾರಿಕಾ ಘಟಕಕ್ಕೆ ನಮ್ಮ ಅಧಿಕಾರಿಗಳು ಭೇಟಿ ನೀಡಿದ್ದು, ಈಗಾಗಲೇ ಹಲವು ಕ್ರಮ ಜರುಗಿಸಿದ್ದೇವೆ, ವ್ಯವಸ್ಥೆ ಸರಿಪಡಿಸಲು ಫುಡ್ ಅಂಡ್ ಡ್ರಗ್ ಕಂಟ್ರೋಲ್‌ಗೆ ಐಎಎಸ್ ಅಧಿಕಾರಿ ನೇಮಿ ಸಲಾಗುವುದು. ಪ್ರತಿಪಕ್ಷದ ನಾಯಕ ಆರ್.ಅಶೋಕ್ ಆರೋಪಿಸಿರುವಂತೆ ನಾವು ಯಾವುದೇ ಔಷಧ ಖರೀದಿ ಮಾಡಿಲ್ಲ, ಅವರಿಗೆ ಮಾಹಿತಿ ಇಲ್ಲವಾಗಿದ್ದು ರಾಜ್ಯದ ಪ್ರಯೋಗಾ ಲಯಗಳಲ್ಲಿ 22 ವಿವಿಧ ಮಾದರಿಯ ಔಷಧಗಳ ತಪಾಸಣೆ ನಡೆಸಿದಾಗ ರಾಜ್ಯದಲ್ಲಿ ಗುಣಮಟ್ಟ ಖಾತ್ರಿಯಾಗಲಿಲ್ಲ ಆದರೆ ಕೇಂದ್ರದ ಅಧೀನದಲ್ಲಿರುವ ಪ್ರಯೋಗಾಲಯಗಳಲ್ಲಿ ರಾಜ್ಯದಲ್ಲಿ ಗುಣಮಟ್ಟ ಕಳೆದು ಕೊಡಿದ್ದ ಔಷಧಗಳು ಗುಣಮಟ್ಟದಿಂದ ಕೂಡಿದೆ ಎಂದು ವರದಿ ನೀಡಲಾಗಿದೆ ಎಂದರು.

ರಾಜ್ಯದಲ್ಲಿ ಈ ವರ್ಷ 327 ಮಹಿಳೆಯರು ಮೃತ ಪಟ್ಟಿದ್ದು ಕಾರಣವೇನು ಎಂಬುದರ ಬಗ್ಗೆ ತನಿಖೆ ನಡೆಸಲಾಗುವುದು. ಮಹಿಳೆಯರ ಸಾವಿನ ತನಿಖೆಗೆ ಸಮಿತಿ ರಚನೆ ಮಾಡಲಾಗಿದ್ದು ನಿಷೇಧ ಮಾಡಲಾಗಿರುವ ಔಷಧಗಳನ್ನು ಖರೀದಿ ಮಾಡಲಾಗಿದೆ ಎಂಬ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಅವರ ಹೇಳಿಕೆ ಸುಳ್ಳು.

-ದಿನೇಶ್ ಗುಂಡೂರಾವ್, ಸಚಿವ

ಸಿಎಂ ಕುರ್ಚಿಗಾಗಿ ಒಳ ಬೇಗುದಿ ಹೆಚ್ಚಾಗಿದೆ

ಹುಬ್ಬಳ್ಳಿ: ಕಾಂಗ್ರೆಸ್ಸಿನಲ್ಲಿ ಮುಖ್ಯಮಂತ್ರಿ ಒಳಬೇಗುದಿ ಮುಂದಿನ ದಿನಗಳಲ್ಲಿ ದೊಡ್ಡ ಸ್ವರೂಪ ಪಡೆಯುತ್ತದೆ. ಈಗಾಗಲೇ ಮುಖ್ಯಮಂತ್ರಿ ಸ್ಥಾನವನ್ನು ಕಿತ್ತುಕೊಳ್ಳಲು ಡಿ.ಕೆ. ಶಿವಕುಮಾರ ಪ್ರಯತ್ನಿಸುತ್ತಿದ್ದಾರೆ. ಈ ನಡುವೆ ಗೃಹ ಸಚಿವ ಪರಮೇಶ್ವರ ಅವರು ಕೂಡ ಧ್ವನಿ ಎತ್ತಿದ್ದಾರೆ ಎಂದು ಸಂಸದ ಬಸವರಾಜ ಬೊಮ್ಮಾಯಿ ವ್ಯಂಗ್ಯವಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಕುರ್ಚಿಗೆ ಸಿದ್ದರಾಮಯ್ಯ ಫೆವಿಕಾಲ್ ಹಾಕಿ ಕೂತಿದ್ದಾರೆ. ಇದನ್ನು ಕಿತ್ತಿಕೊಳ್ಳಲು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ತುದಿಗಾಲಲ್ಲಿ ನಿಂತಿದ್ದಾರೆ. ಈ ಬೇಗುದಿ ಕಾಂಗ್ರೆಸ್ ಸರಕಾರದಲ್ಲಿ ಮೊದಲಿನಿಂದಲೂ ಇದೆ. ಇವರಿಬ್ಬರ ಕಿತ್ತಾಟದಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ ಅವರ ಎಲ್ಲವನ್ನೂ ಇವರಿಬ್ಬರೇ ಮಾಡಿದರೆ ನಮ್ಮದೇನು ಪಾತ್ರ ಎಂಬ ಹೇಳಿಕೆ ಒಳಬೇಗುದಿಯನ್ನು ಮತ್ತಷ್ಟು ಹೆಚ್ಚಿದೆ. ಬರುವ ದಿನಗಳಲ್ಲಿ ಇದು ದೊಡ್ಡ ಸ್ವರೂಪ ಪಡೆಯುತ್ತದೆ ಎಂದರು.

ಅರ್ಥಿಕ ವ್ಯವಸ್ಥೆಯಲ್ಲಿ ಸಂಪೂರ್ಣ ದಿವಾಳಿ

ಕಾಂಗ್ರೆಸ್ ನವರು ಜನಕಲ್ಯಾಣ ಮರೆತು ಸಮಾವೇಶದಲ್ಲಿ ಮುಳುಗಿದ್ದಾರೆ. ಜನರ ಹಣದಲ್ಲಿ ಇವರು ಸಮಾವೇಶ ಮಾಡುತ್ತಿದ್ದಾರೆ. ಜನರಿಗೆ ಆನೆ ಬಲ ತುಂಬುವ ಬದಲು ತಮ್ಮ ಬಲ ಹೆಚ್ಚಿಸಿಕೊಳ್ಳುತ್ತಿದ್ದಾರೆ. ಜನ ಕಲ್ಯಾಣ ಮಾಡಲಿ ಅಂತ ಅಧಿಕಾರ ನೀಡಿದ್ದಾರೆ. ಆದರೆ ಇವರು ಜನರನ್ನೇ ಮರೆತಿದ್ದಾರೆ. ಇದೊಂದು ಜೀರೋ ಸರಕಾರವಾಗಿದೆ. ಅಭಿವೃದ್ಧಿ, ಕಾನೂನು ವ್ಯವಸ್ಥೆ ಸೇರಿದಂತೆ ಎಲ್ಲದರಲ್ಲಿಯೂ ಜೀರೋ ಎಂದು ಬೊಮ್ಮಾಯಿ ವಾಗ್ದಾಳಿ ನಡೆಸಿದರು.

ರಸ್ತೆ ದಾಟಿದ ಗಜಪಡೆ



ಚಾಮರಾಜನಗರ: ಹಾಡಹಗಲೇ ಕಾಡಿನಲ್ಲಿರುವ ಗಜಪಡೆ ರಸ್ತೆ ದಾಡುವ ದೃಶ್ಯ ಕಂಡ ರಸ್ತೆಯಲ್ಲಿ ಸಂಚಾರ ಮಾಡುವ ಸಾರ್ವಜನಿಕರು ಕೆಲಕಾಲ ಆತಂಕಕ್ಕೆ ಒಳಗಾದ ಪ್ರಸಂಗ ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನ ಎಲ್ಲೆಮಾಳದ ಸಮೀಪ ನಡೆದಿದೆ. ಕಾಡಿನಿಂದ ಬಂದ ಆನೆಗಳ ಹಿಂಡು ಹಾಡುಹಗಲೇ ರಸ್ತೆ ದಾಟಿದೆ. ಇದರಿಂದ ಮಹದೇಶ್ವರ ಬೆಟ್ಟಕ್ಕೆ ತೆರಳುತ್ತಿದ್ದ ವಾಹನ ಸವಾರರು ನಿಂತಲ್ಲಿ ನಿಂತು ಆತಂಕಕ್ಕೆ ಒಳಗಾದರು. ಕೆಲವರು ಅಲ್ಲಿಂದ ಕಾಲ್ಕಿತ್ತರು. ಕೆಲವರು ಮೊಬೈಲ್‌ನಲ್ಲಿ ಆ ಒಂದು ದೃಶ್ಯ ಸೆರೆ ಹಿಡಿದರು.

ಅಪರಿಚಿತ ವಾಹನ ಡಿಕ್ಕಿ: ಚಿರತೆ ಸಾವು



ಚಿಕ್ಕಮಗಳೂರು: ಅಪರಿಚಿತ ವಾಹನ ಡಿಕ್ಕಿಯಾಗಿ 5 ವರ್ಷದ ಗಂಡು ಚಿರತೆ ಸಾವನ್ನಪ್ಪಿರುವ ಘಟನೆ ಚಿಕ್ಕಮಗಳೂರು ತಾಲೂಕಿನ ಉದ್ದೇ ಬೋರನಹಳ್ಳಿ ಗ್ರಾಮದಲ್ಲಿ ನಡೆದಿದೆ. ಮುದ್ದೆ ಬೋರನಹಳ್ಳಿ ಗ್ರಾಮದ ಏರ್‌ಟೆಲ್ ಟವರ್ ಬಳಿ ಈ ಅವಘಡ ಸಂಭವಿಸಿದ್ದು 5 ವರ್ಷದ ಗಂಡು ಚಿರತೆ ಸಾವನ್ನಪ್ಪಿದೆ. ಕಡೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಈ ಅವಘಡ ಸಂಭವಿಸಿರುವುದಾಗಿ ಸ್ಥಳೀಯರು ಮಾಹಿತಿ ನೀಡಿದ್ದಾರೆ. ಚಿರತೆ ರಸ್ತೆ ದಾಟುವಾಗ ಟಿಟಿ ವಾಹನಕ್ಕೆ ಸಿಲುಕಿದೆ ಎಂದು ಹೇಳಲಾಗಿದೆ.

ಸಚಿವ ಜಮೀರ್ ವಿರುದ್ಧ ಮಾಜಿ ಸಚಿವ ಶ್ರೀರಾಮುಲು ವಾಗ್ದಾಳಿ

ಬಾಣಂತಿಯರ ಸಾವು: ಸಿಬಿಐ ತನಿಖೆಗೆ ಒತ್ತಾಯ

ಬಳ್ಳಾರಿ: ಜಿಲ್ಲೆಯಲ್ಲಿ ಬಾಣಂತಿಯರ ಸರಣಿ ಸಾವನ್ನು ರಾಜ್ಯ ಸರಕಾರ ಗಂಭೀರ ವಾಗಿ ಪರಿಗಣಿಸದೆ ನಿರ್ಲಕ್ಷ್ಯ ವಹಿಸಿದೆ. ನಗರದ ಬೀಮ್ಸ್ ಹಾಗೂ ಜಿಲ್ಲಾ ಆಸ್ಪತ್ರೆಯಲ್ಲಿನ ಬಾಣಂತಿಯರ ಸರಣಿ ಸಾವು ಇಡೀ ರಾಜ್ಯ ವನ್ನೇ ಬೆಚ್ಚಿಬೀಳಿಸಿದೆ. ಈ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು ಎಂದು ಮಾಜಿ ಸಚಿವ ಶ್ರೀರಾಮುಲು ಒತ್ತಾಯಿಸಿದ್ದಾರೆ.

ನಗರದಲ್ಲಿರುವ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿ ಬಾಣಂತಿಯರ ಜೊತೆಗೆ ಮಾತನಾಡಿದ ಅವರು ಯೋಗಕ್ಷೇಮ ವಿಚಾರಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಿಲ್ಲಾಸ್ಪತ್ರೆ ಹೆರಿಗೆ ವಾರ್ಡ್ ಸಾವಿನ ಮನೆಯಂತಾಗಿದೆ. ಇಲ್ಲಿ ಬಡವರ ಜೀವಕ್ಕೆ ಬೆಲೆ ಇಲ್ಲದಂತಾಗಿದೆ. ಸಾವಿನ ಪ್ರಮಾಣ ದಿನೇ ದಿನೆ ಏರಿಕೆಯಾದರೂ ಬಾಣಂತಿಯರ ಸಾವಿನ ಬಗ್ಗೆ ರಾಜ್ಯ ಸರಕಾರದ ನಿರ್ಲಕ್ಷ್ಯ ವಹಿಸಿದೆ. ನ.9ರಿಂದ 11ವರೆಗೆ ನಾಲ್ಕು ಬಾಣಂತಿಯರ ಸಾವಾಗಿದೆ. ಗುರುವಾರ ಸುಮ್ಮಯ್ಯಾ ಎಂಬ ಮತ್ತೊಬ್ಬ ಬಾಣಂತಿ ಸಾವಾಗಿದೆ. ಕಳೆದ ಏಳೆಂಟು ತಿಂಗಳಲ್ಲಿ ರಾಜ್ಯದಲ್ಲಿ 100ಕ್ಕೂ ಹೆಚ್ಚು ಬಾಣಂತಿಯರ ಸಾವಾಗಿದೆ. ರಾಜ್ಯದ ಆರೋಗ್ಯ ಮಂತ್ರಿ ಏನು ಮಾಡುತ್ತಿದ್ದಾರೆ ಗೊತ್ತಿಲ್ಲ ಎಂದು ಹೇಳಿದರು.

ಜವಾಬ್ದಾರಿಯುತ ಆರೋಗ್ಯ ಮಂತ್ರಿಯಾಗಲಿ, ಜಿಲ್ಲಾ ಉಸ್ತುವಾರಿ ಮಂತ್ರಿಯಾಗಲಿ ಆಸ್ಪತ್ರೆ ಭೇಟಿ ನೀಡಿಲ್ಲ. ಮೃತರ ಕುಟುಂಬಸ್ಥರಿಗೆ ಸಾಂತ್ವನ ಹೇಳಬೇಕಿತ್ತು. ಆದರೆ ಅವರು ಬೆಂಗಳೂರಿನಲ್ಲಿ ಪ್ರಪಂಚ ನೋಡುತ್ತಿದ್ದಾರೆ. ಜಿಲ್ಲಾಸ್ಪತ್ರೆಗೆ ಭೇಟಿ ನೀಡಿ ಬಾಣಂತಿಯರ ಸಾವಿಗೆ ಕಾರಣವೇನು ಎನ್ನುವುದನ್ನು ತಿಳಿದು ಕೊಂಡಿಲ್ಲ. ಮೃತರ ಕುಟುಂಬಗಳಿಗೆ ಸಾಂತ್ವನ ಹೇಳುವ ಕೆಲಸವನ್ನೂ ಮಾಡಿಲ್ಲ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ವಿರುದ್ಧ ವಾಗ್ದಾಳಿ ನಡೆಸಿದದರು.

ಬಾಣಂತಿಯರ ಸರಣಿ ಸಾವುಗಳ ನಡುವೆಯೂ ರಾಜ್ಯ ಸರಕಾರ ಸಾಧನೆಯ ಸಮಾವೇಶಗಳನ್ನು ನಡೆಸಲು ಮುಂದಾಗಿರುವುದು ಯಾವ ಪುರುಷಾರ್ಥಕ್ಕೆ?. ಸಮಾವೇಶಗಳನ್ನು ಮಾಡಿ ಶಕ್ತಿ ಪ್ರದರ್ಶನಕ್ಕೆ ಮುಂದಾಗಿದ್ದಾರೆ. ಇಡಿ ಅಥವಾ ಸಿಬಿಐನವರು ಬಂಧಿಸಿದರೆ ನಮ್ಮ ಬಳಿ ಜನಶಕ್ತಿ ಇದೆ ಎಂದು ತೋರಿಸಲು ಸಮಾವೇಶಗಳನ್ನು ಮಾಡುತ್ತಿದ್ದಾರೆ.

-ಶ್ರೀರಾಮುಲು, ಮಾಜಿ ಸಚಿವ

ನಮ್ಮ ಹೋರಾಟ ಕಾಂಗ್ರೆಸ್ ವಿರುದ್ಧ: ಮಾಜಿ ಸಿಎಂ ಯಡಿಯೂರಪ್ಪ

ಬಿಜೆಪಿಯೊಳಗಿನ ಗೊಂದಲಗಳಿಗೆ ಇಂದು ತೆರೆ

ಶಿವಮೊಗ್ಗ: ಬಿಜೆಪಿಯೊಳಗಿನ ಎಲ್ಲ ಗೊಂದಲಗಳಿಗೆ ಇಂದು ತೆರೆ ಬೀಳಲಿದೆ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿ ಯೂರಪ್ಪ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಇಂದು ಕೋರ್ ಕಮಿಟಿ ಸಭೆ ಇದೆ. ಅಲ್ಲಿ ಶಾಸಕ ಯತ್ನಾಳ್ ಅವರ ಬಗ್ಗೆ ಚರ್ಚೆ ನಡೆಯುವ ಕುರಿತು ನನಗೆ ಮಾಹಿತಿ ಇಲ್ಲ. ಆಡಳಿತ ಪಕ್ಷವನ್ನು ಎದುರಿಸುವ ನಿಟ್ಟಿ ನಲ್ಲಿ ನಾವೆಲ್ಲ ಒಟ್ಟಾಗಿ ಹೋಗಬೇಕು ಎಂಬುದು ನನ್ನ ಅಪೇಕ್ಷೆ. ಇದನ್ನು ಯತ್ನಾಳ್ ಅವರೂ ಒಪ್ಪಿಕೊಳ್ಳುತ್ತಾರೆ ಎಂದರು.

ಮನುಷ್ಯನ ಸ್ವಭಾವದ ವೀಕ್ನೆಸ್ ಎಲ್ಲರಿಗೂ ಇರುತ್ತದೆ. ಯತ್ನಾಳ್ ನನ್ನ ಹಾಗೂ ನಮ್ಮ ಪುತ್ರರನ್ನು ಟಾರ್ಗೆಟ್ ಮಾಡುತ್ತಿರಬಹುದು. ಆ ಬಗ್ಗೆ ನನಗೇನೂ ಅಭ್ಯಂತರ ಇಲ್ಲ. ನನ್ನ ಉದ್ದೇಶ ನಾವೆಲ್ಲ ಒಟ್ಟಾಗಿ ಹೋಗಬೇಕೆಂಬು ದಾಗಿದೆ. ನಮ್ಮ ಹೋರಾಟ ಕಾಂಗ್ರೆಸ್ ವಿರುದ್ಧವೇ ಹೊರತು, ನಾವು ನಾವೇ ಬಡಿದಾಡಿಕೊಳ್ಳುವುದಲ್ಲ. ಇದು ಹೆಚ್ಚು ಶಕ್ತಿಯನ್ನು ನೀಡುವುದಿಲ್ಲ. ಅದಕ್ಕಾಗಿ ಎಲ್ಲವನ್ನೂ ಮರೆತು ಒಟ್ಟಾಗಿ ಹೋಗಬೇಕು. ಅಧಿವೇಶನವನ್ನು ಯಾವುದೇ ಗೊಂದಲವಿಲ್ಲದೆ ನಾವೆಲ್ಲ ಒಟ್ಟಾಗಿ ಎದುರಿಸುತ್ತೇವೆ ಎಂದು ಹೇಳಿದರು.

ವಿಜಯೇಂದ್ರಗೆ ಜನರ ಬೆಂಬಲವಿದೆ

ವಿಜಯೇಂದ್ರ ರಾಜ್ಯಾಧ್ಯಕ್ಷರಾಗಿದ್ದು ಯಡಿಯೂರಪ್ಪನವರ ಹೆಸರಿನ ಮೇಲೆ ಎಂದಿರುವ ರಮೇಶ್ ಜಾರಕಿಹೊಳಿ ಹೇಳಿಕೆಗೆ ಪ್ರತಿಕ್ರಿಯೆ ನೀಡುವುದಿಲ್ಲ. ವಿಜಯೇಂದ್ರರನ್ನು ರಾಜ್ಯಾಧ್ಯಕ್ಷರನ್ನಾಗಿ ಮಾಡಿದ್ದು ಕೇಂದ್ರದ ನಾಯಕರು, ನಾವ್ಯಾರೂ ಅಲ್ಲ. ಅವರು ಯಶಸ್ವಿಯಾಗಿ ಕೆಲಸ ಮಾಡುತ್ತಿದ್ದಾರೆ. ರಾಜ್ಯದ ಜನ ಅವರ ಓಡಾಟ ಮತ್ತು ಹೋರಾಟಕ್ಕೆ ಬೆಂಬಲ ನೀಡುತ್ತಿದ್ದಾರೆ. ಮೊನ್ನೆಯ ಮೂರು ಜಿಲ್ಲೆಗಳ ಪ್ರವಾಸದ ವೇಳೆ ಅವರಿಗೆ ಸಿಕ್ಕ ಜನಬೆಂಬಲ ಯಾವ ರೀತಿ ಇದೆ ಎಂಬುದನ್ನು ಗಮನಿಸಿದ್ದಾರೆ ಎಂದರು.

ನನ್ನ ಗೆಲುವಿನ ರಹಸ್ಯವೇ ಬಾಬಾ ಸಾಹೇಬರ ಭಾವಚಿತ್ರ: ಪ್ರದೀಪ್ ಈಶ್ವರ್

ಮಹಾರಾಷ್ಟ್ರದಲ್ಲಿ ಭೀಮಕಹಳೆ ಮೊಳಗಿಸಿದ ಶಾಸಕ

ಚಿಕ್ಕಬಳ್ಳಾಪುರ: ನಾನು ಶಾಸಕನಾಗಿದ್ದರ ಹಿಂದೆ ಅಂಬೇಡ್ಕರ್ ನೀಡಿದ ಸಂವಿಧಾನ ಮತ್ತು ಅವರ ಭಾವಚಿತ್ರಕ್ಕಿರುವ ಶಕ್ತಿಯೇ ಕಾರಣವಾಗಿದೆ ಎಂದು ಶಾಸಕ ಪ್ರದೀಪ್ ಈಶ್ವರ್ ಹೇಳಿದರು.

ಮಹಾರಾಷ್ಟ್ರದ ಅಮರಾವತಿಯಲ್ಲಿ ಶುಕ್ರವಾರ ನಡೆದ ಅಂಬೇಡ್ಕರ್ ಪರಿನಿಬ್ಬಾಣದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷವು ಅಪ್ಪ ಅಮ್ಮ ಇಲ್ಲದ ಅನಾಥ ಹುಡಗನಾದ ನನಗೆ ಟಿಕೆಟ್ ನೀಡಿ ಸ್ಪರ್ಧೆ ಮಾಡಿ ಎಂದು ಹೇಳಿದಾಗ, ನನಗೆ ಯಾವ ರಾಜಕೀಯ ಮನೆತನದ ಹಿನ್ನೆಲೆಯೂ ಇರಲಿಲ್ಲ.ಆಗ ನನ್ನ ಬಳಿ ಮೇಷ್ಟ್ರಾಗಿ ದುಡಿದಿದ್ದ ಕೇವಲ 15 ರಿಂದ20 ಲಕ್ಷ ಹಣ ಮಾತ್ರವಿತ್ತು.ಆದರೆ ಹೃದಯದಲ್ಲಿ ಬಲವಾಗಿ ಭೀಮರಾವ್ ಅಂಬೇಡ್ಕರ್ ಅವರ ಪ್ರೇರಣೆಯ ಶಕ್ತಿಯಿತ್ತು. ಹಿಂದೆ ಮುಂದೆ ನೋಡದೆ ಅವರ ಪೋಟೊ ಕೈಲಿಡಿದುಕೊಂಡು ಕ್ಷೇತ್ರದ ಉದ್ದಗಲಕ್ಕೂ ಸಂಚರಿಸಿ ಮತದಾರರ ಪ್ರೀತಿಯನ್ನು ಗಳಿಸಿದೆ .ಘಟಾನುಘಟಿಯನ್ನು ಸೋಲಿಸಿ ಎಂಎಲ್‌ಎ ಆದೆ.ಸ್ನೇಹಿತರೇ ಅಂಬೇಡ್ಕರ್ ಎಂದರೆ ಕೇವಲ ವ್ಯಕ್ತಿಯಲ್ಲ, ನನ್ನಂತಹ ಅನಾಥ ಸಮುದಾಯದ ಕೋಟ್ಯಾಂತರ ಮಂದಿಗೆ ಧೈರ್ಯ ತುಂಬುವ ನಿಜವಾದ ಭೀಮಶಕ್ತಿಯಾಗಿದ್ದಾರೆ ಎಂದು ಬಣ್ಣಿಸಿದರು.

ತಮ್ಮ ಮಾತನ್ನು ಮುಗಿಸುವ ಮುನ್ನ ಮರಾಠಿ ಕನ್ನಡ ಭಾಷಾ ಸಾಮರಸ್ಯದ ಬಗ್ಗೆ ಕಿವಿ ಮಾತು ಹೇಳಿದ ಶಾಸಕ ಪ್ರದೀಪ್ ಈಶ್ವರ್ ನಾನು ಮಹಾರಾಷ್ಟ್ರದಲ್ಲಿ ಒಂದು ವರ್ಷ ಓದುವ ಸಂದರ್ಭದಲ್ಲಿ ನನ್ನ ಗುರುಗಳು ಚೆನ್ನಾಗಿಯೇ ನನಗೆ ಮರಾಠಿ ಕಳಿಸಿದ್ದಾರೆ. ಕರ್ನಾಟಕ ಮತ್ತು ಮಹಾರಾಷ್ಟ್ರದ ಜನತೆ ಸದಾ ಕಾಲ ಸಹೋದರರಂತೆ ಬಾಳಿದ್ದೇವೆ.ಮುಂದೆಯೂ ಬಾಳುತ್ತೇವೆ.ಭಾಷಾ ಸಾಮರಸ್ಯವೇ ಭಾರತದ ಸಾಮರಸ್ಯ.ಜೈ ಕರ್ನಾಟಕ, ಜೈಮಹಾರಾಷ್ಟ್ರ ಎನ್ನುವ ಮೂಲಕ ನೆಲ ಯಾವುದಾದರೇನು? ಮನ ಕನ್ನಡವಾಗಿರಲಿ ಎಂಬುದನ್ನು ಸಾರಿದರು.

ಅಂಬೇಡ್ಕರ್ ಆಗಲು ಕೋರ್ಸಿಲ್ಲ: ವಿಶ್ವದಲ್ಲಿ ವೈದ್ಯರಾಗಲು,ಎಂಜಿನಿಯರ್ ಆಗಲು ಪದವಿಗಳಿವೆ. ಆದರೆ ಭಗವಾನ್ ಬುದ್ಧ,ಬಸವ ಅಂಬೇಡ್ಕರ್ ಆಗಲು ಯಾವುದೇ ಕೋರ್ಸುಗಳಿಲ್ಲ. ನಿಮ್ಮ ಮಕ್ಕಳಲ್ಲಿ ಬಲವಾದ ಕನಸು ಕಾಣಲು ತುಂಬಿ, ಅದನ್ನು ಸಾಧಿಸುವ ಧೈರ್ಯತುಂಬಿ.ಧೈರ್ಯವೇ ನಿಮ್ಮ ಬದುಕಿನ ಸೂತ್ರ ಎಂದು ತಿಳಿಸಿ,ಆಗ ಪ್ರತಿಯೊಬ್ಬರೂ ಬಾಬಾ ಸಾಹೇಬರಂತಾಗುತ್ತಾರೆ ಎಂದು ಕರೆ ನೀಡಿದರು.

ಕೇವಲ 20 ದಿನದಲ್ಲಿ ಶಾಸಕನಾಗಿದ್ದರ ಹಿಂದೆ ಅಂಬೇಡ್ಕರ್ ನೀಡಿದ ಸಂವಿಧಾನ ಮತ್ತು ಅವರ ಭಾವಚಿತ್ರಕ್ಕಿರುವ ಶಕ್ತಿಯೇ ಕಾರಣವಾಗಿದೆ.

ಪ್ರದೀಪ್ ಈಶ್ವರ್, ಚಿಕ್ಕಬಳ್ಳಾಪುರ ಶಾಸಕ



ಶಾಸಕ ಪ್ರದೀಪ್ ಈಶ್ವರ್ ಮಹಾರಾಷ್ಟ್ರದ ನಾಗಪುರದ ಅಂಬೇಡ್ಕರ್ ಚೈತ್ಯ ಭೂಮಿಯಲ್ಲಿ ಏರ್ಪಡಿಸಿದ್ದ ಪರಿನಿಬ್ಬಾಣ ಕಾರ್ಯಕ್ರಮದಲ್ಲಿ ಮಾತನಾಡಿದರು.

ಬೈಕ್ ರ್‍ಯಾಲಿಯಲ್ಲಿ ಶಾಸಕ ಪ್ರದೀಪ್ ಈಶ್ವರ್.

ಬೃಹತ್ ಬೈಕ್ ರ‍್ಯಾಲಿಯಲ್ಲಿ ಭಾಗಿ

ಮಹಾರಾಷ್ಟ್ರದ ಅಮರಾವತಿಯಿಂದ ನಯಾ ಅಕೋಲಾವರೆಗೆ 18 ಕಿಲೋ ಮೀಟರ್ ದೂರ ಏರ್ಪಡಿಸಿದ್ದ ಬೈಕ್ ರ‍್ಯಾಲಿಯಲ್ಲಿ ಭಾಗಿಯಾಗಿದ್ದ ಶಾಸಕ ಪ್ರದೀಪ್ ಈಶ್ವರ್ 10ಸಾವಿರಕ್ಕೂ ಹೆಚ್ಚು ಅಂಬೇಡ್ಕರ್ ಅನುಯಾಯಿಗಳ ಜತೆಗೂಡಿ ಬುಲೆಟ್‌ನಲ್ಲಿ ತೆರಳುವ ಮೂಲಕ ಮಹಾರಾಷ್ಟ್ರದಲ್ಲಿ ಕೂಡ ತಮಗಿರುವ ಭೀಮಭಕ್ತಿಯನ್ನು ಸಾರಿದರು.

ಕಲಬುರಗಿ: ಕೈದಿಗಳ ಎತ್ತಂಗಡಿ

ಕಲಬುರಗಿ: 2013ರಲ್ಲಿ ಬೆಂಗಳೂರಿನ ಮಲ್ಲೇಶ್ವರಂನಲ್ಲಿ ನಡೆದ ಬಾಂಬ್ ಬ್ಲಾಸ್ಟ್ ಪ್ರಕರಣದ ಉಗ್ರ ಜುಲ್ಫಿಕರ್ ನನ್ನು ಎನ್‌ಐಎ ಕೋರ್ಟ್ ನ ಅನುಮತಿ ಮೇರೆಗೆ ವರ್ಗಾವಣೆ ಮಾಡಲಾಗಿದೆ.

ನಗರದ ಹೊರವಲಯದ ಸೆಂಟ್ರಲ್ ಜೈಲ್ ನಲ್ಲಿ ಕೈದಿಗಳ ಹೈ-ಫೈ ಲೈಫ್, ಸುಪರಿಡೆಂಟ್ ಗೆ ಜೀವ ಬೆದರಿಕೆ ಸೇರಿದಂತೆ ಸರಣಿ ಅಕ್ರಮ, ಗೊಂದಲದ ಘಟನೆಗಳಿಗೆ ತಿಲಾಂಜಲಿ ಇಡಲು ಬಂದಿಖಾನೆ ಇಲಾಖೆ ದೃಢ ಹೆಜ್ಜೆ ಇಟ್ಟಿದ್ದು, ಜೈಲಿನಿಂದ ಆರು ಕೈದಿಗಳನ್ನು ಬೇರೆ ಜೈಲುಗಳಿಗೆ ವರ್ಗಾವಣೆ ಮಾಡಲಾಯಿತು. ಶಿವಮೊಗ್ಗ ರೌಡಿ ಶೀಟರ್ ಬಚ್ಚನ್ ಶಿವಮೊಗ್ಗ ಕೋರ್ಟ್ ಅನುಮತಿ ಮೇರೆಗೆ, ಉಳಿದ ನಾಲ್ಕು ಕೈದಿಗಳನ್ನು ಆಯಾ ಕೋರ್ಟ್ ಮತ್ತು ಕಾರಾಗೃಹ ಇಲಾಖೆಯ ನಿರ್ಣಯದ ಮೇರೆಗೆ ಶಿಫ್ಟ್ ಮಾಡಲಾಗಿದೆ.

ಜಮೀರ್ ಅಲಿಯಾಸ್ ಬಚ್ಚನ್ ತಂದೆ ಚಾಂದ ಪೀರ್ ನನ್ನು ಬೆಳಗಾವಿಯಲ್ಲಿ ಕೇಂದ್ರ ಕಾರಾಗೃಹಕ್ಕೆ ಧಾರವಾಡ ಜೈಲಿಗೆ ಅಬ್ದುಲ್ ಖಾದರ್ ಜಿಲಾನಿ ಮತ್ತು ಜುಲ್ಫಿಕರ್ ಅಲಿ ತಂದೆ ಮಹಮ್ಮದ್ ಹನೀಫ್ ನನ್ನು ವರ್ಗ ಮಾಡಲಾಗಿದೆ. ಶಿವಮೊಗ್ಗ ಜೈಲಿಗೆ ಶೇಖ್ ಸದಾಂ ಹುಸೇನ್ ಮತ್ತು ಜಾಕೀರ್ ತಂದೆ ಹನೀಫ್ ನನ್ನು, ಬಳ್ಳಾರಿ ಕೇಂದ್ರ ಕಾರಾಗೃಹಕ್ಕೆ ವಿಶಾಲ್ ತಂದೆ ವಿಜಯಕುಮಾರ್ ರಾಠೋಡ್ ನನ್ನು ಗುರುವಾರ ವರ್ಗಾವಣೆ ಮಾಡಲಾಗಿದೆ.

ವಿಶ್ವವಾಣಿ

ಸಂಪಾದಕೀಯ

ಅಡಕೆ ಮೇಲಿನ ಕಳಂಕ ದೂರವಾಗಲಿ

ಅಡಕೆ ಸೇವನೆಯಿಂದ ಆರೋಗ್ಯದ ಮೇಲೆ ಆಗುವ ಪರಿಣಾಮಗಳ ಬಗ್ಗೆ ದೇಶದೊಳಗಿನ ಸಂಶೋಧನಾ ಸಂಸ್ಥೆಗಳ ಮೂಲಕವೇ ಅಧ್ಯಯನ ನಡೆಸುವ ಕೇಂದ್ರ ಸರಕಾರದ ನಿರ್ಧಾರ ಸ್ವಾಗತಾರ್ಹ. ಇದುವರೆಗೂ ನಡೆದ ಹಲವು ಅಧ್ಯಯನಗಳು ಪಾನ್ ಮಸಾಲಾ, ಗುಟ್ಕಾದಂತಹ ಮಿಶ್ರಣಗಳಿಂದ ಮಾನವನ ಆರೋಗ್ಯದ ಮೇಲೆ ಉಂಟಾಗುವ ಪರಿಣಾಮಗಳನ್ನು ಚರ್ಚಿಸಿವೆ. ಅಡಕೆಯೊಂದನ್ನೇ ಕೇಂದ್ರವಾಗಿರಿಸಿ ಆರೋಗ್ಯದ ಮೇಲೆ ಬೀರುವ ಪರಿಣಾಮದ ಕುರಿತು ಸಮಗ್ರ ಅಧ್ಯಯನ ನಡೆದಿಲ್ಲ. ಆದರೆ ಕ್ಯಾನ್ಸರ್‌ಕಾರಕ ಎಂದು ಹೇಳಲಾದ ಗುಟ್ಕಾ ಮತ್ತು ಪಾನ್ ಮಸಾಲಾದ ಮೇಲಿನ ನಿರ್ಬಂಧದ ವೇಳೆ ಅಡಕೆಯ ಹೆಸರನ್ನೂ ಉಲ್ಲೇಖಿಸಲಾಗಿದೆ. ಅಡಕೆಯ ಧಾರಣೆ ಮೇಲೆ ಇದು ಹೆಚ್ಚಿನ ಪರಿಣಾಮ ಬೀರಿಲ್ಲವಾದರೂ ಆಗಾಗ ಪಾನ್, ಗುಟ್ಕಾ ನಿಷೇಧದ ಹೆಸರಿನಲ್ಲಿ ಅಡಕೆ ದರ ಇಳಿಕೆ ಯತ್ನ ಗಳು ನಡೆಯುತ್ತಲೇ ಇವೆ. ಅಡಕೆಯ ಬಗ್ಗೆ ಸ್ಥಳೀಯ ತಜ್ಞರು, ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ ನಡೆಸಿದ ಸಂಶೋಧನೆಯ ವೇಳೆ ಈ ತನಕ ಯಾವುದೇ ಋಣಾತ್ಮಕ ವರದಿಗಳು ಬಂದಿಲ್ಲ. ಆಯುರ್ವೇದದ ಪ್ರಕಾರವೂ ಅಡಕೆ ಸೇವನೆ ಆರೋಗ್ಯದ ಮೇಲೆ ಸಕಾರಾತ್ಮಕ ಪರಿಣಾಮಗಳನ್ನು ಮಾಡುತ್ತದೆ. ಅಡಕೆಯಲ್ಲಿ ಹಲವಾರು ಆಲ್ಕಲಾಯ್ಡ್‌ಗಳಿರುವುದರಿಂದ ಮನುಷ್ಯರು ಮತ್ತು ಸಾಕುಪ್ರಾಣಿಗಳ ಔಷಧಿಗಳಲ್ಲೂ ಇದರ ಬಳಕೆ ಇದೆ. ಇದೇ ಅಭಿ ಪ್ರಾಯದಲ್ಲಿ ಮಾರುಕಟ್ಟೆಯಲ್ಲಿ ಅಡಕೆಯನ್ನು ಆಧರಿಸಿದ ಹಲವು ಉತ್ಪನ್ನ ಗಳು ಬಂದಿವೆ. ಆದರೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬರುವ ಸಂಶೋಧನಾ ವರದಿಗಳಲ್ಲಿ ಆಗಾಗ ಅಡಕೆಯ ಬಗ್ಗೆ ಕೆಂಗಣ್ಣು ಬೀರಲಾಗುತ್ತಿದೆ. ಇತ್ತೀಚೆಗೆ ವಿಶ್ವ ಆರೋಗ್ಯ ಸಂಸ್ಥೆ ಬಿಡುಗಡೆ ಮಾಡಿದ ವರದಿ ಅಡಕೆ ಸೇವನೆ ಆರೋಗ್ಯದ ಮೇಲೆ ದುಷ್ಪರಿಣಾಮವನ್ನುಂಟು ಮಾಡುತ್ತದೆ ಎಂದಿರುವುದು ಅಡಕೆ ಬೆಳೆಗಾರರ ವಲಯದಲ್ಲಿ ಸಂಚಲನ ಸೃಷ್ಟಿಸಿತ್ತು. ಇದೀಗ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಸೇರಿದಂತೆ ಒಟ್ಟು 16 ಸಂಶೋಧನಾ ಸಂಸ್ಥೆಗಳ ಮೂಲಕ ಅಡಕೆಯ ಬಗ್ಗೆ ಸಮಗ್ರ ಅಧ್ಯಯನ ನಡೆಸಿ ವರದಿ ಪಡೆಯಲಾಗುವುದೆಂದು ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವ ಭಾಗೀರಥ್ ಚೌಧರಿ ಲೋಕಸಭೆಗೆ ತಿಳಿಸಿದ್ದಾರೆ. ಈ ವರದಿಯಿಂದಲಾದರೂ ಅಡಕೆಗೆ ಅಂಟಿರುವ ಕಳಂಕ ದೂರವಾಗಲಿ ಎನ್ನುವುದು ಬೆಳೆಗಾರರ ಆಶಯ.

ಸೊಂಪಾದಕೀಯ

'ಗುಳಿ' ಕಾ ಕಾಲ!

ಈಚೀಚೆಗೆ, ಸೌಂದರ್ಯ ಪ್ರಜ್ಞೆ ಅನ್ನೋದು ಕಾಮನ್ ಸೆನ್ಸ್‌ಗಿಂತ ಜಾಸ್ತಿ ಅವಶ್ಯಕ ಎನಿಸಿಬಿಟ್ಟಿದೆ. ಮೊದಲು ಈ ಸೌಂದರ್ಯ ಪ್ರಜ್ಞೆ ಅನ್ನೋದು ಕೇವಲ ಸೆಲೆಬ್ರಿಟಿಗಳಿಗೆ, ಟಿವಿ, ಮಾಡೆಲಿಂಗ್, ಸಿನಿಮಾ ಹೀಗೆ ಬಣ್ಣದ ಲೋಕದಲ್ಲಿ ಇರೋರಿಗೆ ಮಾತ್ರ ಕಾಡುತ್ತಿತ್ತು. ಆದರೆ ಈಗೀಗ ಕಾಮನ್ ಪೀಪಲ್‌ಗೂ ತಾವು ಚಂದ ಕಾಣಬೇಕು ಅನ್ನೋ ಆಸೆ. ಅದಕ್ಕಾಗಿ ಈಗ ಬಹುತೇಕರು ಪ್ಲಾಸ್ಟಿಕ್ ಸರ್ಜರಿಯ ಮೊರೆ ಹೋಗುತ್ತಿರೋದು ಕಾಮನ್ ಆಗಿದೆ. ಈಗ ಈ ಟ್ರೆಂಡ್‌ನಲ್ಲಿ ಟಾಪ್‌ನಲ್ಲಿ ಇರೋದು ಗುಳಿಕೆನ್ನೆಯ ಸರ್ಜರಿ ಅಂತೆ. ಸಿನಿಮಾಗಳಲ್ಲಿ ನಾವು ನೋಡುವ ಹೀರೋ, ಹೀರೋಯಿನ್‌ಗಳ ಕೆನ್ನೆಗಳ ಸೆಂಟರ್‌ನಲ್ಲಿ ಗುಳಿ ಇದ್ರೆ ಅವರು ಸಹಜವಾಗಿಯೋ ಎಲ್ಲರ 'ಸೆಂಟರ್ ಆಫ್ ಆಟ್ರಾಕ್ಷನ್' ಆಗಿಬಿಡುತ್ತಾರೆ. ಗುಳಿಕೆನ್ನೆ ಇರೋ ಹುಡುಗಿಯರನ್ನು 'ಡಿಂಪಲ್ ಕ್ವೀನ್' ಅಂತಲೂ ಕರೆಯುವ ಅಭ್ಯಾಸ ಇದೆ. ಆದರೆ ಇದು ಎಲ್ಲರಿಗೂ ನ್ಯಾಚುರಲ್ ಆಗಿ ಬರುವಂಥದ್ದಲ್ಲ. ಈಗ ಚಿಕಿತ್ಸೆಯ ಮೂಲಕ ಅದನ್ನು ಕೃತಕವಾಗಿ ಸೃಷ್ಟಿಸಬಹುದು ಅಂತಾರೆ ವೈದ್ಯರು. ಹೌದು, ಇಂದಿನ ಯುವಪೀಳಿಗೆಗೆ, ಅದರಲ್ಲೂ ಯುವತಿಯರಿಗೆ ಕೇವಲ ಸಿಂಪಲ್ ಲುಕ್ ಇದ್ರೆ ಸಾಲಲ್ಲ, ಅವರಿಗೆ ಡಿಂಪಲ್ ಲುಕ್ ಬೇಕು. ಕೆನ್ನೆಯ ಮೇಲೆ ಗುಳಿ ಇದ್ರೆ, ಅಂಥ ಹುಡುಗಿಯರನ್ನು ನೋಡಿ ಹುಡುಗರು ಸುಲಭವಾಗಿ ಗುಳಿಗೆ ಬೀಳುತ್ತಾರೆ ಅನ್ನೋ ನಂಬಿಕೆ. ಹಾಗಾಗಿ ಎಲ್ಲರಿಗೂ ಈಗ ಡಿಂಪಲ್ ಕಪಾಡಿಯಾ ಆಗುವ ಆಸೆ. ಮುಖದ ಎರಡೂ ಕೆನ್ನೆಗಳಿಗೆ ಗುಳಿ ಬೇಕು ಅಂದ್ರೆ, ಅದನ್ನು ಪಡೆಯಲು ಇದೇ ಅಮೃತ ಗಳಿಗೆ ಅಂತ ವೈದ್ಯರು ತುದಿಗಾಲ ಮೇಲೆ ನಿಂತಿದ್ದಾರೆ. ಆದರೆ ಈ ಗುಳಿಕ ಕಾಲದಲ್ಲಿ ಈ ಕೃತಕ ಗುಳಿ ಸೃಷ್ಟಿಸಲು ಬರೀ ಗುಳಿಗೆ ತಗೊಂಡ್ರೆ ಆಗಲ್ಲ, ಅದಕ್ಕೆ ಶಸ್ತ್ರಚಿಕಿತ್ಸೆ ಮಾಡಬೇಕು. ಈ ಶಸ್ತ್ರಚಿಕಿತ್ಸೆಯ ಪರಿಣಾಮ ಕೆಲವರಿಗೆ ಕೊನೆಯವರೆಗೂ ಇದ್ದರೆ, ಇನ್ನು ಕೆಲವರಿಗೆ ಈ ಕೃತಕ ಗುಳಿ ಕ್ಷಣಿಕವಾಗಲೂಬಹುದಂತೆ. ಒಟ್ಟಿನಲ್ಲಿ ಈಗಂತೂ ಈ ವಿಷಯ ಟ್ರೆಂಡಿಂಗ್‌ನಲ್ಲಿದೆಯಂತೆ. ಹಾಗಾಗಿ ಈ ರೀತಿ ಆಸೆ ಇದ್ದವರು ಮರೆಯದೇ, ಮರೆತು ಮರೆಗುಳಿ ಎನಿಸಿಕೊಳ್ಳಬಾರದು ಅಂತಿದ್ರೆ, ನಾಲ್ಕು ಜನ ನಮ್ಮನ್ನು ತಿರುಗಿ ನೋಡಬೇಕು ಅನ್ನೋ ಆಸೆ ಇದ್ರೆ, ಈ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು ತಮ್ಮನ್ನು ನೋಡುವವರಿಗೆ ಕಚಗುಳಿ ಇಡುವಂಥ ಸೌಂದರ್ಯ ಪಡೆಯಬಹುದು.

ಸಂಪಾದಕರ ಸದ್ಯಶೋಧನೆ

ಮಾತು ಕೇಳುವ ಕಮೋಡ್‌ಗಳು

ಸಾಮಾನ್ಯವಾಗಿ ಮೊದಲ ಬಾರಿಗೆ ವಿದೇಶ ಪ್ರಯಾಣ ಮಾಡಿದಾಗ, ಕೆಲವರಿಗೆ 'ಕಲ್ಚರಲ್ ಶಾಕ್' ಆಗುತ್ತದೆ. ಆದರೆ ಹಲವು ಸಲ ವಿದೇಶ ಪ್ರಯಾಣ ಮಾಡಿದವರಿಗೂ ಜಪಾನ್‌ನಲ್ಲಿನ ಶೌಚಾಲಯಗಳನ್ನು ನೋಡಿದಾಗ ಅಂಥ ಅನುಭವವಾದರೆ ಆಶ್ಚರ್ಯವಿಲ್ಲ. ಕಾರಣ ಜಪಾನಿನಲ್ಲಿ ಟಾಯ್ಲೆಟ್‌ಗಳು ಮಾತಾಡುತ್ತವೆ ಅಥವಾ ನಾವು ಹೇಳಿದಂತೆ ಅವು ಕೇಳುತ್ತವೆ, ಅಂದರೆ ನಮ್ಮ ಆದೇಶಗಳನ್ನು ಪಾಲಿಸುತ್ತವೆ. ಟಾಯ್ಲೆಟ್ ಪ್ರವೇಶಿಸುತ್ತಿದ್ದಂತೆ, ಮುಚ್ಚಿದ ಕಮೋಡ್‌ಗಳು ತಮ್ಮಷ್ಟಕ್ಕೆ ತೆರೆದುಕೊಳ್ಳುತ್ತವೆ. ಅಂದರೆ ಅದರ ಮುಚ್ಚಳ ಓಪನ್ ಆಗುತ್ತದೆ. ಕಮೋಡ್ ಮೇಲೆ ಕುಳಿತ ತಕ್ಷಣ ಬೆಚ್ಚಗಿನ ಅನುಭವವಾಗುತ್ತದೆ. ಕಾರಣ ಕಮೋಡ್ ಸೀಟು ಯಾವತ್ತೂ ಬೆಚ್ಚಗಿರುತ್ತದೆ. ಇಲ್ಲಿನ ಟಾಯ್ಲೆಟ್ ಅನ್ನು ಕೆಲವೊಮ್ಮೆ ಇತರ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಶೌಚಾಲಯಗಳಿಗಿಂತ ಹೆಚ್ಚು ವಿಸ್ತಾರವಾಗಿ, ಸುಂದರವಾಗಿ ಮತ್ತು ತಾಂತ್ರಿಕವಾಗಿ ವಿನ್ಯಾಸಗೊಳಿಸಲಾಗಿದೆ. ಯುರೋಪಿಯನ್ ಶೌಚಾಲಯಗಳು ಸಾಂದರ್ಭಿಕವಾಗಿ ಪ್ರತ್ಯೇಕ ಬಿಡೆ ಅಥವಾ ಬಿಡೆಟ್ (Bidet) ಅನ್ನು ಹೊಂದಿರುತ್ತವೆ, ಆದರೆ ಜಪಾನ್‌ನ ಎಲ್ಲ ಶೌಚಾಲಯಗಳಲ್ಲಿ ಇಲೆಕ್ಟ್ರಾನಿಕ್ ಬಿಡೆಟ್ ಅನ್ನು ಸಂಯೋಜಿಸಲಾಗಿದೆ. ಜಪಾನ್‌ನ ಶೇ.81ರಷ್ಟು ಶೌಚಾಲಯಗಳಲ್ಲಿ ಟೋಟೋ ಕಂಪನಿಯ ಇಲೆಕ್ಟ್ರಾನಿಕ್ ಕಮೋಡ್‌ಗಳನ್ನು ಅಳವಡಿಸಿರುವುದು ವಿಶೇಷ. ಸಾರ್ವಜನಿಕ ಶೌಚಾಲಯಗಳಲ್ಲೂ ಇಲೆಕ್ಟ್ರಾನಿಕ್ ಕಮೋಡುಗಳನ್ನು ಕಾಣಬಹುದು. ಸ್ಪ್ರೇ ಸಿಸ್ಟಮ್ ಅನ್ನು ಒಳಗೂಡಿಸಿರುವ ಈ ಟಾಯ್ಲೆಟ್ ಸೀಟುಗಳು, ಬಟನ್ ಒತ್ತಿದರೆ ನಿಮ್ಮ ಅವಶ್ಯಕತೆಗೆ ತಕ್ಕಂತೆ ಪೃಷ್ಠ ಭಾಗಕ್ಕೆ ನೀರನ್ನು ಸ್ಪ್ರೇ ಮಾಡುತ್ತವೆ. ಮಲ ವಿಸರ್ಜನೆ ಮುಗಿಸಿದ ಬಳಿಕ ಕೈಯಿಂದ ತೊಳೆದುಕೊಳ್ಳುವ ಅಥವಾ ಕಾಗದ (ಟಿಶ್ಯು ಪೇಪರ್) ಬಳಸುವ ಅಗತ್ಯವಿಲ್ಲ. ನಮಗೆ ಬೇಕಾದ ಪ್ರೆಶರ್‌ಗೆ ತಕ್ಕಂತೆ ಗುದ ಅಥವಾ ಪೃಷ್ಠವನ್ನು ಕಮೋಡಿನಲ್ಲಿರುವ ಸ್ಪ್ರೇ ಸ್ವಚ್ಛಗೊಳಿಸುತ್ತದೆ. ನೀರಿನ ಪ್ರೆಶರ್ ಅನ್ನು ಅವಶ್ಯಕತೆಗೆ ತಕ್ಕಂತೆ ಅಳವಡಿಸಿಕೊಳ್ಳುವ ಅನುಕೂಲವೂ ಇದರಲ್ಲಿ ಇದೆ. ಮಲ ವಿಸರ್ಜಿಸುವಾಗಿನ ಶಬ್ದ ಅಕ್ಕ-ಪಕ್ಕದವರಿಗೆ ಕೇಳಬಾರದು ಎಂದಿದ್ದರೆ, ಫ್ಲಶ್ ಸಿಸ್ಟಮ್‌ಗೆ, ಮ್ಯೂಸಿಕ್ ಬಟನ್ ಸಹ ಅಳವಡಿಸಲಾಗಿದೆ. ಜೋರಾಗಿ ಮ್ಯೂಸಿಕ್ ಹಾಕಿಕೊಂಡು ವಿಸರ್ಜಿಸಬಹುದು. ಇದು ಮುಜುಗರವಾಗಿಸುವ ಶಬ್ದವನ್ನು ನಾಲ್ಕು ಗೋಡೆಗಳ ಮಧ್ಯವೇ ಇರುವಂತೆ ಮಾಡುತ್ತದೆ. ಕಮೋಡ್ ಅನ್ನು ಅನಕ್ಷರಸ್ಥರೂ ಸುಲಭವಾಗಿ ಬಳಸಲು ಅನುವಾಗುವಂತೆ ಚಿಹ್ನೆ ಅಥವಾ ಸಂಜ್ಞೆಗಳನ್ನು ಬಳಸಲಾಗಿದೆ. ಈ ಕಮೋಡ್ ಅಥವಾ ವಾಶ್ಲೆಟ್‌ಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ವೈಶಿಷ್ಟ್ಯಗಳೆಂದರೆ ಗುದದ ನೈರ್ಮಲ್ಯ, ಪೃಷ್ಠ ಭಾಗಕ್ಕೆ ನೀರು ಸ್ಪ್ರೇ ಆಗುವುದು, ಸೀಟ್ ವಾರ್ಮಿಂಗ್ ಮತ್ತು ಡಿಯೋಡರೈಸೇಶನ್. ಕೆಲವೆಡೆ ವಾಯ್ಸ್ ಕಮಾಂಡ್‌ಗಳ ಮೂಲಕ ಟಾಯ್ಲೆಟ್ ಅನ್ನು ಆಪರೇಟ್ ಮಾಡಬಹುದು. ಅಲ್ಲಿನ ಶೌಚಾಲಯಗಳು ಪರಿಸರ-ಸ್ನೇಹಿ. ಏಕೆ ಎಂದು ಆಶ್ಚರ್ಯ ಪಡುತ್ತೀರಾ? ಏಕೆಂದರೆ ಅವು ಕಡಿಮೆ ಟಾಯ್ಲೆಟ್ ಪೇಪರ್ ಮತ್ತು ಕಡಿಮೆ ನೀರನ್ನು ಬಳಸಲು ಅವಕಾಶ ಮಾಡಿಕೊಡುತ್ತವೆ. ನಾವು ಬಳಸುವ ಟಿಶ್ಯು ಪೇಪರಿನ ಪ್ರತಿ ರೋಲ್ ಎಷ್ಟು ಮರಗಳನ್ನು ಬಳಸುತ್ತದೆ ಎಂಬುದರ ಕುರಿತು ನಾವ್ಯಾರೂ ಹೆಚ್ಚು ಯೋಚಿಸಿರಲಿಕ್ಕಿಲ್ಲ. ಆದರೆ 100 ಪೌಂಡ್‌ಗಳಷ್ಟು ಟಾಯ್ಲೆಟ್ ಪೇಪರ್ ಅನ್ನು ಉತ್ಪಾದಿಸಲು ಒಂದು ಮರ ಬೇಕು ಮತ್ತು ಪ್ರತಿದಿನ 83 ದಶಲಕ್ಷ ರೋಲ್‌ಗಳ ಕಾಗದವನ್ನು ಉತ್ಪಾದಿಸಲಾಗುತ್ತದೆ. ಟಾಯ್ಲೆಟ್ ಪೇಪರ್‌ಗೆ ಜಾಗತಿಕ ಬೇಡಿಕೆ ಅದೆಷ್ಟಿದೆಯೆಂದರೆ, ಪ್ರತಿದಿನ 27 ಸಾವಿರ ಮರಗಳನ್ನು ಕಡಿಯಲಾಗುತ್ತದೆ. ಜಪಾನಿ ಶೌಚಾಲಯಗಳು ಅತ್ಯುತ್ತಮವಾಗಿ ಆಹ್ಲಾದಕರ ಮತ್ತು ಸ್ಥಾಪಿಸಲು ಸುಲಭವಾಗುವುದರ ಜತೆಗೆ, ವೈದ್ಯಕೀಯ ಪ್ರಯೋಜನಗಳನ್ನು ನೀಡುತ್ತವೆ ಎಂಬುದು ಗಮನಾರ್ಹ. ಇದರಿಂದ ಅಲ್ಲಿನ ಶೌಚಾಲಯಗಳು ಸಂಪೂರ್ಣ ಸ್ವಚ್ಛತೆ ಕಾಪಾಡಲು ಯಶಸ್ವಿಯಾಗಿವೆ. ಉದ್ಯಾನಗಳು, ನಿಲ್ದಾಣಗಳು, ಡಿಪಾರ್ಟ್‌ಮೆಂಟ್ ಸ್ಟೋರ್‌ಗಳು ಮತ್ತು ರೆಸ್ಟೋರೆಂಟ್‌ಗಳಲ್ಲಿ ಹೆಚ್ಚಿನ ಸಂಖ್ಯೆಯ ಸಾರ್ವಜನಿಕ ಶೌಚಾಲಯಗಳನ್ನು ಕಾಣಬಹುದು. ಅವನ್ನು ಹುಡುಕಲು ನಿಮಗೆ ಕಷ್ಟವಾಗುವುದಿಲ್ಲ. ಜಪಾನಿನಲ್ಲಿ ಸಾರ್ವಜನಿಕ ಶೌಚಾಲಯಗಳನ್ನು ಬಳಸಿದರೆ ಹಣ ಕೊಡಬೇಕಿಲ್ಲ.

ಇವರು ಜಾರ್ಜ್ ಸೊರೋಸ್ ಪ್ರತಿರೂಪ

ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ
camohanbn@gmail.com

ಜಾರ್ಜ್ ಸೊರೋಸ್ ಎಂಬ ಅಪಾಯಕಾರಿ ವ್ಯಕ್ತಿಯ ಬಗ್ಗೆ ಜಗತ್ತಿನ ಅನೇಕರು ಕಳವಳ ವ್ಯಕ್ತಪಡಿಸಿದ್ದಾರೆ. ಮತ್ತೊಂದೆಡೆ, ರಾಹುಲ್ ಗಾಂಧಿಯವರು ತಮ್ಮ ವೈಯಕ್ತಿಕ ರಾಜಕೀಯ ಲಾಭಕ್ಕಾಗಿ ಭಾರತದ ಸಾರ್ವಭೌಮತ್ವವನ್ನು ಬಲಿಕೊಟ್ಟು ಆತನ ಜತೆ ಕೈಜೋಡಿಸುತ್ತಿರುವುದು ಆತಂಕಕಾರಿ ಸಂಗತಿ. ರಾಹುಲರು ಅಮೆರಿಕಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ, ಸೊರೋಸ್ ಸಂಸ್ಥೆಯ ಜತೆ ನೇರಸಂಪರ್ಕ ಹೊಂದಿರುವ ಸುನಿತಾ ವಿಶ್ವನಾಥ್ ಎಂಬ ಮಹಿಳೆಯ ಜತೆ ಸಭೆ ನಡೆಸಿದ್ದರು. ತಾನು ರಫೇಲ್ ಯುದ್ಧವಿಮಾನ ಖರೀದಿಯ ಕಡತಗಳ ಪರಿಶೀಲನೆ ನಡೆಸಿದ್ದಾಗಿ ಸೊರೋಸ್‌ನ 'ಓಪನ್ ಸೊಸೈಟಿ ಫೌಂಡೇಷನ್' ಹೇಳಿತ್ತು. ಆ ವರದಿಯ ಆಧಾರದ ಮೇಲೆ ರಾಹುಲರು ಆರೋಪ ಮಾಡಿದ್ದರು. ನಂತರ ನ್ಯಾಯಾಲಯವು ಕಾಂಗ್ರೆಸ್ಸಿಗೆ ಛೀಮಾರಿ ಹಾಕಿತ್ತು.

ಪೌರತ್ವ ತಿದ್ದುಪಡಿ ಕಾಯ್ದೆಯ ವಿರುದ್ಧ ಶಾಹೀನ್ ಬಾಗ್‌ನಲ್ಲಿ ಹಮ್ಮಿಕೊಳ್ಳಲಾಗಿದ್ದ ಪ್ರತಿಭಟನೆಯ ವೇಳೆ ನಡೆದ ಹಿಂಸಾಚಾರದ ಹಿಂದಿದ್ದ ವ್ಯಕ್ತಿಯಾದ ಹರ್ಷ ಮಂದೆರ್‌ನ ಸಂಸ್ಥೆಗೆ ಜಾಜ್ ಸೊರೋಸ್ ನೇರವಾಗಿ ಹಣಸಹಾಯ ಮಾಡಿದ್ದ. ಈ ಹರ್ಷ ಮಂದೆರ್ ಯುಪಿಎ ಸರಕಾರದ ಅವಧಿಯಲ್ಲಿ ಸೋನಿಯಾ ಗಾಂಧಿಯವರ ಅತ್ಯಾಪ್ತನಾಗಿದ್ದ. ರಾಹುಲರು ನಡೆಸಿದ ಭಾರತ್ ಜೋಡೋ ಯಾತ್ರೆಯು ಕರ್ನಾಟಕವನ್ನು ಪ್ರವೇಶಿಸಿದಾಗ, 'ಓಪನ್ ಸೊಸೈಟಿ ಫೌಂಡೇಷನ್'ನ ಅಂತಾರಾಷ್ಟ್ರೀಯ ಉಪಾಧ್ಯಕ್ಷ ಸಲೀಲ್ ಶೆಟ್ಟಿ ಅದರಲ್ಲಿ ಭಾಗವಹಿಸಿದ್ದ. ಭಾರತದ ಆರ್ಥಿಕ ವೇಗಕ್ಕೆ ಕಡಿವಾಣ ಹಾಕಲು ಸಂಚುಹೂಡಿರುವ ಜಾರ್ಜ್ ಸೊರೋಸ್, ಮೋದಿಯವರ ವಿರುದ್ಧ ಹಲವು ಸುಳ್ಳು ನಿರೂಪಣೆಗಳನ್ನು ಮಾಡುವ ದೊಡ್ಡ ತಂಡವನ್ನೇ ಹುಟ್ಟುಹಾಕಿದ್ದಾನೆ.

ತಮ್ಮ ದೇಶದ ಸಾರ್ವಭೌಮತ್ವಕ್ಕೇ ಧಕ್ಕೆ ತರುವಂಥ ದೇಶವಿರೋಧಿ ಕೆಲಸಗಳಲ್ಲಿ ತೊಡಗಿರುವವರ ಪರವಾಗಿ ನಿಂತು ಧನಸಹಾಯ ಮಾಡುವ ಮೂಲಕ, ಆ ದೇಶಗಳಲ್ಲಿ ಅರಾಜಕತೆ ಸೃಷ್ಟಿಸುವ ಕೆಲಸವನ್ನು ಸೊರೋಸ್ ಮಾಡುತ್ತಲೇ ಬಂದಿದ್ದಾನೆ. ಈತ ಹುಟ್ಟಿ ಬೆಳೆದ ದೇಶವಾದ ಹಂಗರಿ ಇವನನ್ನು ಉಚ್ಚಾಟಿಸಿದೆ. ಜಗತ್ತಿನ ಯಾವುದೇ ಮೂಲೆಯಲ್ಲೂ ಅರಾಜಕತೆ ಸೃಷ್ಟಿಸುವ ದೊಡ್ಡದೊಂದು ತಂಡ ಈತನ ಬಳಿಯಿದೆ. 'ಓಪನ್ ಸೊಸೈಟಿ ಫೌಂಡೇಷನ್' ಎಂಬ ಎನ್‌ಜಿಒ ಮೂಲಕ ವಿವಿಧ ದೇಶಗಳ ವಿಶ್ವವಿದ್ಯಾಲಯ, ಎನ್‌ಜಿಒ, ಸಂಶೋಧನಾ ಸಂಸ್ಥೆಗಳು ಮತ್ತು ರಾಜಕೀಯ ಪಕ್ಷಗಳ ಹೆಸರಿಗೆ ದಾನದ ಮೂಲಕ ಹಣ ನೀಡಿ, ದೇಶವಿರೋಧಿ ಕೃತ್ಯಗಳನ್ನು ಪ್ರಚೋದಿಸಿ, ಅಲ್ಲಿನ ಸರಕಾರಗಳನ್ನು ಇಕ್ಕಟ್ಟಿಗೆ ಸಿಲುಕಿಸುವ ಕೆಲಸ ಮಾಡುತ್ತಾನೆ ಸೊರೋಸ್. scroll.in ಎಂಬ ಮಾಧ್ಯಮಕ್ಕೆ ಹೀಗೆಯೇ ಆತ ಧನಸಹಾಯ ಮಾಡಿದ್ದ. ಎಡಚರು ನಿರ್ವಹಿಸುತ್ತಿರುವ ಈ ಮಾಧ್ಯಮವು ವಸ್ತುನಿಷ್ಠ ಕೆಲಸವನ್ನು ಮಾಡುತ್ತಿಲ್ಲ. ಪ್ರಧಾನಿ ಮೋದಿಯವರ ವಿರುದ್ಧದ ಸುದ್ದಿಯನ್ನು ಇದು ಸದಾ ಪ್ರಕಟಿಸುತ್ತಿರುತ್ತದೆ. ಅದಾನಿಯವರನ್ನು ಎಳೆತಂದು ಮೋದಿಯವರ ವಿರುದ್ಧದ ನಿರೂಪಣೆ ರೂಪಿಸುವುದರಲ್ಲಿ ಈ ಮಾಧ್ಯಮ ಪ್ರಮುಖ ಪಾತ್ರ ವಹಿಸಿತ್ತು. ಭಾರತದ ಹಲವು ಪತ್ರಕರ್ತರನ್ನು ತನ್ನ ಫೌಂಡೇಷನ್‌ನ ಫೆಲೋಶಿಪ್ ವಿಭಾಗದಲ್ಲಿ ಸೊರೋಸ್ ನೇಮಿಸಿಕೊಂಡಿದ್ದಾನೆ. ಕಾಶ್ಮೀರಿ ಮೂಲದ ಬಷರತ್ ಪೀರ್ ಎಂಬ ಪತ್ರಕರ್ತ ಈ ಫೌಂಡೇಷನ್‌ನಲ್ಲಿ 2009-2010ರ ನಡುವೆ ಫೆಲೋಶಿಪ್ ಮಾಡಿದ್ದ. ನಂತರ ಈತ ಕಾಶ್ಮೀರದಲ್ಲಿ ದ್ದುಕೊಂಡು ಪಾಕಿಸ್ತಾನದ ಪರವಾದ ನಿರೂಪಣೆಯನ್ನು ಪ್ರಚಾರ ಮಾಡಿ, ಅಲ್ಲಿನ ಮುಸಲ್ಮಾನರ ದಿಕ್ಕು ತಪ್ಪಿಸುವ ಕೆಲಸ ಮಾಡಿದ್ದ. 'ಕರ್ಫ್ಯೂ ನೈಟ್' ಎಂಬ ಪುಸ್ತಕದ ಮೂಲಕ ಕಾಶ್ಮೀರಿ ಉಗ್ರರಿಗೆ ಅಮಾಯಕರ ಪಟ್ಟ ಕಟ್ಟುವ ನಿರೂಪ ಣೆಯನ್ನು ಮಾಡಿದ್ದ.

ಸೊರೋಸ್ ತನ್ನ ಸಂಸ್ಥೆಯ ಮೂಲಕ ಭಾರತದೊಳಗಿನ ಕೆಲ ಪ್ರಭಾವಿಗಳಿಗೆ ಧನಸಹಾಯ ಮಾಡಿ, ಸರಕಾರದ ವಿರುದ್ಧ ಸುಳ್ಳು ನಿರೂಪಣೆ ಸೃಷ್ಟಿಸುವ ಕೆಲಸ ಮಾಡಿಸಿದ್ದಾನೆ. ಇಂದಿರಾ ಜೈಸಿಂಗ್ ಎಂಬ ವಕೀಲೆಯ 'ಲಾಯರ್ಸ್ ಕಲೆಕ್ಟಿವ್' ಎಂಬ ಎನ್‌ಜಿಒ ಸಂಸ್ಥೆಗೆ ತನ್ನ ಫೌಂಡೇಷನ್ ಮೂಲಕ ಸೊರೋಸ್ ಸುಮಾರು ನಾಲ್ಕು ಕೋಟಿ ಹತ್ತು ಲಕ್ಷ ರು. ಹಣವನ್ನು ನೀಡಿದ್ದಾನೆಂದು ಹೇಳಲಾಗುತ್ತದೆ. ಈ ಸಂಸ್ಥೆಯು ದೇಶವಿರೋಧಿ ನಿರೂಪಣೆಗಳನ್ನು ಪ್ರಚಾರ ಮಾಡುವಲ್ಲಿ ಮುಂಚೂಣಿಯಲ್ಲಿದ್ದು, 'ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆ'ಯ ಹಲವು ನಿಯಮಗಳನ್ನು ಗಾಳಿಗೆ ತೂರಿದ್ದ ಕಾರಣ ಅದರ ಪರವಾನಗಿಯನ್ನು ರದ್ದುಮಾಡಲಾಗಿತ್ತು. ವಿದೇಶದಿಂದ ಬಂದ ದೇಣಿಗೆ ಹಣವನ್ನು ಈ ಸಂಸ್ಥೆಯು ಭಾರತದಲ್ಲಿ ರಾಜಕೀಯ ಉದ್ದೇಶಗಳಿಗೆ ಬಳಸುತ್ತಿರುವುದನ್ನು ಅಧಿಕಾರಿಗಳು ಕಂಡುಹಿಡಿದಿದ್ದರು. ಈಕೆಯ ಸಂಸ್ಥೆಯಲ್ಲಿದ್ದ ವಕೀಲರಿಗೆ ಸರ್ವೋಚ್ಚ ನ್ಯಾಯಾಲಯವು ನೋಟಿಸ್ ನೀಡಿ ಹಾಜರಾಗುವಂತೆ ಸೂಚಿಸಿತ್ತು. ನಂತರ ಸಿಬಿಐ 2018ರಲ್ಲಿ ಕೇಸನ್ನು ದಾಖಲಿಸಿಕೊಂಡು ತನಿಖೆಗೆ ಚಾಲನೆ ನೀಡಿತ್ತು. ಇಂದಿರಾ ಜೈಸಿಂಗ್‌ರ ಮನೆ ಮತ್ತು ಕಚೇರಿಗಳ ಮೇಲೆ ದಾಳಿ ನಡೆಸಿ ಪ್ರಮುಖ ದಾಖಲೆಗಳನ್ನು ವಶಪಡಿಸಿಕೊಂಡಿತ್ತು. ದೇಶವಿರೋಧಿ ಸೊರೋಸ್ ಜತೆ ಕೈಜೋಡಿಸುವ ರಾಹುಲರು, ಸಿಬಿಐ ನಡೆಸಿದ್ದ ಈ ದಾಳಿಯನ್ನು ರಾಜಕೀಯೀಕರಣಗೊಳಿಸಿದ್ದರು. ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಆಯೋಜಿಸಲಾಗಿದ್ದ ಭಾಷಣವೊಂದರಲ್ಲಿ ಇಂದಿರಾ ಜೈಸಿಂಗ್, ''ಭಾರತದಲ್ಲಿ ರಾಜಕೀಯ ಹಕ್ಕುಗಳ ಅಗತ್ಯವಿದ್ದು, ಪ್ರಜಾಪ್ರಭುತ್ವವು ಅಪಾಯದಲ್ಲಿದೆ'' ಎಂದು ಹೇಳಿದ್ದರು. ''ಭಾರತದಲ್ಲಿ ಎಲ್ಲರಿಗೂ ಸಮಾನವಾದಂಥ ಸಾಮಾಜಿಕ ನ್ಯಾಯ ಸಿಗುವುದಿಲ್ಲ'' ಎಂಬ ಸುಳ್ಳು ನಿರೂಪಣೆಯನ್ನು ಪ್ರಚಾರ ಮಾಡಿದ್ದರು.

ಜಾರ್ಜ್ ಸೊರೋಸ್ ಮತ್ತು ಅರ್ಥಶಾಸ್ತ್ರ ವಿಭಾಗದಲ್ಲಿ ನೊಬೆಲ್ ಪ್ರಶಸ್ತಿ ಪಡೆದಿರುವ ಅಮರ್ತ್ಯಸೇನ್ ಈ ಇಬ್ಬರೂ 'ನಾಮತಿ' ಎಂಬ ಎನ್‌ಜಿಒನಲ್ಲಿ ಸಲಹೆಗಾರರಾಗಿದ್ದಾರೆ. ಈ ಸಂಸ್ಥೆಯ ಹಣದ ಮೂಲ- 'ಓಪನ್ ಸೊಸೈಟಿ ಫೌಂಡೇಷನ್'. ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನದ ಹಿಂದೂಗಳಿಗೆ ಪೌರತ್ವ ತಿದ್ದುಪಡಿ ಕಾಯ್ದೆಯಡಿ ಭಾರತದಲ್ಲಿ ಪೌರತ್ವ ನೀಡುವ ವಿಷಯವನ್ನು ರಾಜಕೀಯೀಕರಣಗೊಳಿಸಿದ್ದ



ಅಮರ್ತ್ಯಸೇನ್, ''ಭಾರತದಲ್ಲಿ ಅಲ್ಪಸಂಖ್ಯಾತರ ಪಾತ್ರವನ್ನು ನಿಯಂತ್ರಿಸುವ ಸಲುವಾಗಿ ಈ ಕಾಯ್ದೆಯನ್ನು ಜಾರಿಗೆ ತರಲಾಗುತ್ತಿದೆ'' ಎಂದು ಸುಳ್ಳು ಹೇಳಿದ್ದರು. ಇವರ ಬಹುತೇಕ ಅಂಕಣಗಳು ಸೊರೋಸ್ ಬೆಂಬಲಿತ scroll.in ಮತ್ತು The Wire ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿದ್ದವು. ಅದಾನಿಯವರ ವಿರುದ್ಧ ಹಿಂಡನ್‌ಬರ್ಗ್ ಸಂಶೋಧನಾ ಸಂಸ್ಥೆ ನೀಡಿದ್ದ ವರದಿಯ ಹಿಂದೆ ಸೊರೋಸ್ ಕೈವಾಡವಿದೆ ಎನ್ನಲಾಗುತ್ತದೆ. ಹಣ ಮಾಡುವ ಉದ್ದೇಶದಿಂದ 1992ರಲ್ಲಿ ಇಂಗ್ಲೆಂಡ್‌ನ ಷೇರು ಮಾರುಕಟ್ಟೆಯನ್ನೇ ಹಾಳುಮಾಡಿದ್ದ ಸೊರೋಸ್, ಈ ರೀತಿಯ ವರದಿ ತಯಾರಿಸಿ ಭಾರತೀಯ ಷೇರು ಮಾರುಕಟ್ಟೆಯನ್ನೂ ಹಾಳುಮಾಡುವುದು ಕಷ್ಟವೇನಲ್ಲ. ಇಸ್ರೇಲ್‌ನಲ್ಲಿರುವ ಹಲವು ದೇಶವಿರೋಧಿ ಎನ್‌ಜಿಒಗಳಿಗೆ ಈತನ ಫೌಂಡೇಷನ್ ಮೂಲಕ ಹಣ ನೀಡಲಾಗುತ್ತಿದೆ. 'ಪಾಪ್ಯುಲರ್ ಫ್ರಂಟ್ ಫಾರ್ ಲಿಬರೇಷನ್ ಆಫ್ ಪ್ಯಾಲೆಸ್ತೀನ್' ಸಂಘಟನೆಯನ್ನು ಅಮೆರಿಕ ಮತ್ತು ಐರೋಪ್ಯ ದೇಶಗಳು 'ಭಯೋತ್ಪಾದಕ ಸಂಘಟನೆ' ಎಂದು ಹೇಳಿವೆ. ಈ ಸಂಸ್ಥೆಯೊಂದಿಗೆ ನೇರಸಂಬಂಧ ಹೊಂದಿರುವ ವ್ಯಕ್ತಿಗಳಿಗೆ ಸೊರೋಸ್ ತನ್ನ ಸಂಸ್ಥೆಯ ಮೂಲಕ ಹಣಸಹಾಯ ಮಾಡುತ್ತಿದ್ದಾನೆ.

ಇಂಗ್ಲೆಂಡ್‌ನ ಷೇರು ಮಾರುಕಟ್ಟೆಯನ್ನು ತಲ್ಲಣಗೊಳಿಸಿದ್ದ BLACK WEDNESDAYಯ ಹಿಂದಿದ್ದುದು ಜಾರ್ಜ್ ಸೊರೋಸ್‌ನ ಕೈವಾಡ. ಷೇರು ಮಾರುಕಟ್ಟೆಯಲ್ಲಿ ಪೌಂಡ್ಸ್ ಪಾತಾಳಕ್ಕೆ ಕುಸಿಯುತ್ತಿದ್ದಾಗಿನ ಸಂದರ್ಭವನ್ನು ಬಳಸಿಕೊಂಡು, ಸುಮಾರು ಒಂದು ಬಿಲಿಯನ್ ಪೌಂಡ್ ಕರೆನ್ಸಿಯನ್ನು ಬ್ಯಾಂಕಿನಿಂದ ಸಾಲ ಪಡೆದು, ಷೇರು ಮಾರುಕಟ್ಟೆಯಲ್ಲಿ ಇಂಗ್ಲೆಂಡ್ ನಿಗದಿಪಡಿಸಿದ್ದ ಮಾರಾಟ ಬೆಲೆಯ ಮಿತಿಗಿಂತಲೂ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡಿದ. ಅಷ್ಟೊಂದು ದೊಡ್ಡ ಮಟ್ಟದ ಮಾರಾಟವನ್ನು ಕಂಡ ಮಾರುಕಟ್ಟೆಯ ಇತರ ಹೂಡಿಕೆದಾರರು ಗಾಬರಿಗೊಂಡು ತಮ್ಮಲ್ಲಿದ್ದ ಅಷ್ಟೂ ಪೌಂಡ್ ಕರೆನ್ಸಿಯನ್ನು ಮಾರತೊಡಗಿದರು. ಮಾರಾಟ ಹೆಚ್ಚಾದಂತೆ ಪೌಂಡಿನ ಮೌಲ್ಯ ಮತ್ತಷ್ಟು ಪಾತಾಳಕ್ಕೆ ಕುಸಿಯಿತು. ಆಗ ಸೊರೋಸ್ ಸುಮಾರು 10 ಬಿಲಿಯನ್‌ನಷ್ಟು ಕರೆನ್ಸಿಯನ್ನು ಖರೀದಿಸಿ, ಇಂಗ್ಲೆಂಡ್ ನಿಗದಿಪಡಿಸಿದ್ದ ಮಾರಾಟ ಬೆಲೆಯ ಮಿತಿಗೆ ಮಾರಿ, ಒಂದೇ ದಿನದಲ್ಲಿ ಒಂದು ಬಿಲಿಯನ್ ಪೌಂಡ್‌ನಷ್ಟು ಲಾಭ ಮಾಡಿದ. ಈತ ಸೃಷ್ಟಿಸಿದ್ದ ಕೃತಕ ಕರೆನ್ಸಿ ಅಭಾವದಿಂದಾಗಿ ಇಂಗ್ಲೆಂಡ್‌ನ ಮಾರುಕಟ್ಟೆಯೇ ಅಲುಗಾಡಿತ್ತು, ಬ್ಯಾಂಕುಗಳು ಕರೆನ್ಸಿಯನ್ನು ನೀಡಲಾಗದೆ ಅಲ್ಲಿನ ವಿದೇಶಿ ವಿನಿಮಯವು ಪಾತಾಳಕ್ಕೆ ಕುಸಿದಿತ್ತು. ಈತ ನಡೆಸಿದ್ದ ಹಗರಣದಿಂದ ತಲ್ಲಣಗೊಂಡಿದ್ದ ಐರೋಪ್ಯ ದೇಶಗಳು ತಮ್ಮ ಆರ್ಥಿಕತೆಯನ್ನು ಮರಳಿ ಹಳಿಗೆ ತಂದುಕೊಳ್ಳಲು ಸುಮಾರು 15 ವರ್ಷಗಳೇ ಬೇಕಾದವು.

'ಬ್ಯಾಂಕ್ ಆಫ್ ಇಂಗ್ಲೆಂಡ್' ಅನ್ನು ಮುಳುಗಿಸಿದಾತ ಎಂಬ ಹಣೆಪಟ್ಟಿ ಜಾರ್ಜ್ ಸೊರೋಸ್‌ಗಿದೆ. 19 ವರ್ಷಗಳ ಕಾಲ ಇಂಗ್ಲೆಂಡನ್ನು ಆಳುತ್ತಿದ್ದ ಕನ್ಸರ್ವೇಟಿವ್ ಪಕ್ಷವು ಈತನ ಇಂಥ ಕಿತಾಪತಿಯಿಂದಾಗಿ ಅಧಿಕಾರ ಕಳೆದುಕೊಳ್ಳುವಂತಾಯಿತು, ನಂತರ ಲೇಬರ್ ಪಕ್ಷವು ಅಧಿಕಾರಕ್ಕೆ ಬಂತು. ಫ್ರಾನ್ಸ್‌ನ ಷೇರು ಮಾರುಕಟ್ಟೆಯಲ್ಲಿ, ಕಂಪನಿಗಳ ಒಳಮಾಹಿತಿಯನ್ನು ಬಳಸಿಕೊಂಡು ಹಣ ಮಾಡಿದ ಆರೋಪದ ಮೇಲೆ ಅಲ್ಲಿನ ನ್ಯಾಯಾಲಯವು ಈತನನ್ನು ದೋಷಿ ಎಂದು ಘೋಷಿಸಿತ್ತು. ಈತ ಥಾಯ್ಲೆಂಡ್, ಮಲೇಷ್ಯಾ ಮತ್ತು ರಷ್ಯಾ ದೇಶಗಳಲ್ಲೂ ಇದೇ ಮಾದರಿಯಲ್ಲಿ ಹಣ ಮಾಡಿ ಪರಾರಿಯಾಗಿದ್ದವ. ಹೀಗೆ ಗಳಿಸಿದ ದುಡ್ಡನ್ನು ಜಗತ್ತಿನ ವಿವಿಧ ದೇಶಗಳ ಆರ್ಥಿಕ ನೀತಿಗಳ ಮತ್ತು ಅಲ್ಲಿನ ಜನರ ಮೇಲೆ ಪ್ರಭಾವ ಬೀರಲು ಬಳಸುವ ಮೂಲಕ, ಸಮಾಜದಲ್ಲಿ ವಿಷಬೀಜ ಬಿತ್ತುವ ಕೆಲಸವನ್ನು ಸೊರೋಸ್ ನಿರಂತರವಾಗಿ ಮಾಡುತ್ತಾ ಬಂದಿದ್ದಾನೆ. ತಾವಿರುವ ದೇಶದ ಸಾರ್ವಭೌಮತ್ವಕ್ಕೇ ಧಕ್ಕೆ ತರುವಂಥ ದೇಶವಿರೋಧಿ ಕೆಲಸಗಳಲ್ಲಿ ತೊಡಗಿರುವವರ ಪರವಾಗಿ ನಿಂತು ಅವರಿಗೆ ಧನಸಹಾಯ ಮಾಡುವ ಮೂಲಕ, ಅಂಥ ವಿವಿಧ ದೇಶಗಳಲ್ಲಿ ಅರಾಜಕತೆ ಸೃಷ್ಟಿಸುವ ಕೆಲಸವನ್ನು ಮಾಡಿಕೊಂಡೇ ಬಂದಿರುವಾತ ಸೊರೋಸ್.

ಸ್ಯಾಮ್ ಪಿತ್ರೋಡ ಮೂಲಕ ರಾಹುಲ್ ಗಾಂಧಿಯವರನ್ನು ಬಳಸಿಕೊಂಡು, 2024ರ ಭಾರತದ ಲೋಕಸಭಾ ಚುನಾವಣೆಯಲ್ಲಿ ನರೇಂದ್ರ ಮೋದಿಯವರನ್ನು ಸೋಲಿಸಲು ಈತ ಯತ್ನಿಸಿದ್ದ ವಿಷಯ ಚರ್ಚೆಗೆ ಬಂದಿತ್ತು. ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲೂ ಡೊನಾಲ್ಡ್ ಟ್ರಂಪ್‌ರನ್ನು ಸೋಲಿಸಿ, ಡೆಮಾಕ್ರಟಿಕ್ ಪಕ್ಷವನ್ನು ಅಧಿಕಾರಕ್ಕೆ ತರಲು ಸೊರೋಸ್ ಹಲವು ತಿಂಗಳುಗಳಿಂತ ತೆರೆಮರೆಯಲ್ಲಿ ಯತ್ನಿಸಿದ್ದನೆಂದು ಅಲ್ಲಿನ ಮಾಧ್ಯಮಗಳು ವರದಿಮಾಡಿವೆ. ಈತ ತನ್ನ ಸಂಸ್ಥೆಯ ಮೂಲಕ ಅಮೆರಿಕದ ಎಡಚರ ಬೆಂಬಲಿತ ಮಾಧ್ಯಮಗಳ ಮೇಲೆ ಸಂಪೂರ್ಣ ಹಿಡಿತ ಸಾಧಿಸುವಲ್ಲಿ ಯಶಸ್ವಿಯಾಗಿದ್ದ ಎನ್ನಲಾಗುತ್ತದೆ. ''ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದರೆ, ದೇಶದ ಜನರ ಆಸ್ತಿಯನ್ನು ಲೆಕ್ಕ ಮಾಡಿಸಿ ಎಲ್ಲರಿಗೂ ಹಂಚುತ್ತೇವೆ'' ಎಂದು ರಾಹುಲರು ಹೇಳಿದ್ದರ ಹಿಂದಿನ 'ಮಾಸ್ಟರ್ ಮೈಂಡ್' ಈ ಸೊರೋಸ್. ತನ್ನ ಸಂಸ್ಥೆಯ ಮೂಲಕ ಸೊರೋಸ್ ನಡೆಸುತ್ತಿರುವ ತಂತ್ರಗಾರಿಕೆಯ ವಿರುದ್ಧ ಬಹಿರಂಗವಾಗಿ ತಿರುಗಿಬಿದ್ದ ಅಮೆರಿಕದ ವ್ಯಕ್ತಿ ಎಂದರೆ ಅದು ಎಲಾನ್ ಮಸ್ಕ್. ಸೊರೋಸ್ ತನ್ನ ವೈಯಕ್ತಿಕ ಹಿತಾಸಕ್ತಿಯ ಚಿಂತನೆಗಳ ಮೂಲಕ ಅಮೆರಿಕವನ್ನು ಮುಂದೊಂದು ದಿನ ದೊಡ್ಡ ಮಟ್ಟದ ಅಪಾಯಕ್ಕೆ ತಳ್ಳುತ್ತಾನೆಂಬ ಸ್ಪಷ್ಟ ಕಲ್ಪನೆ ಎಲಾನ್ ಮಸ್ಕ್‌ಗೆ ಇತ್ತು. ಹೀಗಾಗಿ ಮಾಧ್ಯಮ ಸಂದರ್ಶನಗಳಲ್ಲಿ ಸೊರೋಸ್ ಮತ್ತು ಅವನ ಯೋಚನೆಗಳ ವಿರುದ್ಧ ಮಸ್ಕ್ ನೇರವಾಗಿ ಮಾತನಾಡುತ್ತಿದ್ದರು. ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಕಮಲಾ ಹ್ಯಾರಿಸ್ ಪರ ನಿಂತಿದ್ದ ಸೊರೋಸ್ ಎಷ್ಟೇ ಯತ್ನಿಸಿದರೂ, ಎಲಾನ್ ಮಸ್ಕ್‌ರ ತಂತ್ರಗಾರಿಕೆಯಿಂದಾಗಿ ಡೊನಾಲ್ಡ್ ಟ್ರಂಪ್ ಅಧಿಕಾರಕ್ಕೆ ಬಂದರು. ಸೊರೋಸ್ ನಡೆಸಿದ ದೇಶವಿರೋಧಿ ಕೃತ್ಯಗಳ ವಿರುದ್ಧ ತಿರುಗಿಬಿದ್ದ ಹಂಗರಿ, ಇಂಗ್ಲೆಂಡ್, ಫ್ರಾನ್ಸ್, ಥಾಯ್ಲೆಂಡ್, ಮಲೇಷ್ಯಾ, ರಷ್ಯಾ ದೇಶಗಳು ಆತನನ್ನು ತಮ್ಮ ನೆಲದಿಂದ ಓಡಿಸಿವೆ. ಆದರೆ ರಾಹುಲ್ ಗಾಂಧಿಯವರು ಮಾತ್ರ ಸೊರೋಸ್ ಜತೆ ಕೈಜೋಡಿಸಿ, ಆತ ಭಾರತದ ಮೇಲೆ ಮಾಡುವ ಸುಳ್ಳು ನಿರೂಪಣೆಗಳನ್ನು ಬಳಸಿಕೊಂಡು ರಾಜಕೀಯ ಮಾಡುವಲ್ಲಿ ನಿರತರಾಗಿದ್ದಾರೆ!

ನ್ಯಾಯಾಂಗದ ಮೇಲೆ ಒತ್ತಡ ಹಾಕುವ ಯತ್ನ

ವಿಶ್ಲೇಷಣೆ
ವೇಣುಗೋಪಾಲ್, ಮೈಸೂರು
vveditoped@gmail.com

ಮುಡಾ' ಪ್ರಕರಣದಲ್ಲಿ 'ಜಾರಿ ನಿರ್ದೇಶನಾಲಯ' (ಇ.ಡಿ) ಸಂಸ್ಥೆಯು ನಿನ್ನೆ ತಾನೇ ಕರ್ನಾಟಕ ಲೋಕಾಯುಕ್ತ ಪೊಲೀಸರಿಗೆ 'ಸಂವಹನ'ವೊಂದನ್ನು ರವಾನಿಸಿದೆ. ಇದರ ಹಿಂದಿನ ಉದ್ದೇಶವನ್ನು ತಿಳಿಯುವುದು ಅಗತ್ಯ.

ಮೈಸೂರಿನ 'ಮುಡಾ' ಪ್ರಕರಣದಲ್ಲಿ ಲೋಕಾಯುಕ್ತ ಪೊಲೀಸರು ನ್ಯಾಯಾಲಯದ ಆದೇಶದ ಅನುಸಾರ ಎಫ್‌ಐಆರ್ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ. ಈ ತನಿಖಾ ವರದಿಯನ್ನು ಸಲ್ಲಿಸಲು ನ್ಯಾಯಾಲಯವು 3 ತಿಂಗಳ ಕಾಲಾವಕಾಶ ನೀಡಿದೆ. ಈ ನಡುವೆ 'ಇ.ಡಿ.' ಕೂಡ ತನಿಖೆಯನ್ನು ಕೈಗೊಂಡಿದೆ. ಪಿಎಂಎಲ್‌ಎ ಕಾಯ್ದೆಯ ಪ್ರಕಾರ ಇ.ಡಿ. ಸ್ವತಂತ್ರ ತನಿಖಾ ಸಂಸ್ಥೆಯಲ್ಲ. ಅಂದರೆ ಇ.ಡಿ.ಗೆ ತಾನೇ ಎಫ್‌ಐಆರ್ ಹಾಕಿ ತನಿಖೆ ಮಾಡುವ ಅಧಿಕಾರವಿಲ್ಲ. ದೇಶದ ಯಾವುದೊಂದು ಪೊಲೀಸ್ ಠಾಣೆಯು ಅದಾಗಲೇ ಎಫ್‌ಐಆರ್ ದಾಖಲಿಸಿದ್ದು, ಅದರಲ್ಲಿ ಪಿಎಂಎಲ್‌ಎಗೆ ಸಂಬಂಧಿಸಿದ ಅಪರಾಧಗಳು ಉಲ್ಲೇಖಿಸಲ್ಪಟ್ಟಿದ್ದರೆ, ಆಗ ಅಂಥ ತನಿಖೆಯನ್ನು ತಾನು ಕೂಡ ಮಾಡುವ ಅಧಿಕಾರ ಇ.ಡಿ.ಗೆ ಇದೆ. ಆದರೆ ಈ ತನಿಖೆಯು ಮೂಲತಃ ಪೊಲೀಸರಂತೆ ಅಲ್ಲ. ಇ.ಡಿ.ಯು ಕೇಂದ್ರದ ಆರ್ಥಿಕ ಇಲಾಖೆಯ ಅಡಿಯಲ್ಲಿ ಬರುತ್ತಿದ್ದು, ದೇಶದ ಆರ್ಥಿಕ ಸ್ಥಿತಿಯನ್ನು ಬುಡಮೇಲು ಮಾಡುವಂಥ ಪ್ರಕರಣಗಳು ಅಂದರೆ, ಹವಾಲಾ, ಅಂತಾರಾಷ್ಟ್ರೀಯ ಆರ್ಥಿಕ ಅಪರಾಧ, ಡ್ರಗ್ ಮಾಫಿಯಾ, ಅಂಡರ್‌ವರ್ಲ್ಡ್ ಮಾಫಿಯಾ, ಶೆಲ್ ಕಂಪನಿಗಳ ಅಕ್ರಮ ಇತ್ಯಾದಿ ಗಂಭೀರ ಪ್ರಕರಣಗಳನ್ನು ತನಿಖೆ ಮಾಡಿ ದೇಶದ ಆರ್ಥಿಕ ಸ್ಥಿತಿಯನ್ನು ಕಾಪಾಡುವ ಸಲುವಾಗಿ ಇ.ಡಿ. ಇರುತ್ತದೆ. ಯಾವ ಪ್ರಕರಣಗಳನ್ನು ಇ.ಡಿ. ತನಿಖೆ ಮಾಡಬಹುದೆಂದು ಪಿಎಂಎಲ್‌ಎ ಕಾಯ್ದೆಯು ಹೇಳುತ್ತದೆ; ಇದರಲ್ಲಿ ಭ್ರಷ್ಟಾಚಾರ-ನಿರೋಧ ಪ್ರಕರಣವೂ ಇರುವುದರಿಂದ ಇ.ಡಿ.ಯು 'ಮುಡಾ' ಅವ್ಯವಹಾರದ ತನಿಖೆಯನ್ನು ಕೈಗೊಂಡಿದೆ.

ಆದರೆ ಇದರಲ್ಲಿ ಆಶ್ಚರ್ಯ ಮೂಡಿಸುವ ಸಂಗತಿಯೆಂದರೆ, ನಮ್ಮ ದೇಶದಲ್ಲಿ ಸುಮಾರು 25,000 ಶೆಲ್ ಕಂಪನಿಗಳು ವ್ಯವಹರಿಸುತ್ತಿವೆ ಎಂದು ಲೋಕಸಭೆಯಲ್ಲಿ ತಿಳಿಸಲಾಗಿದೆ. ಡ್ರಗ್ಸ್ ಮಾಫಿಯಾದಂಥ ಗಂಭೀರ ಪ್ರಕರಣಗಳು ಬಹಳಷ್ಟು ನೋಂದಾಯಿಸಲ್ಪಟ್ಟಿವೆ. ಭ್ರಷ್ಟಾಚಾರದ ಸಾವಿರಾರು ಪ್ರಕರಣಗಳ ಕುರಿತು ಎಫ್‌ಐಆರ್ ದಾಖಲಿಸಲ್ಪಟ್ಟಿದೆ. ಹೀಗಿರುವಾಗ, ಇಂಥ ಗಂಭೀರ ಪ್ರಕರಣಗಳ ತನಿಖೆಯನ್ನು ಬಿಟ್ಟು ಒಂದು ಜಿಲ್ಲಾ ಮಟ್ಟದ ಸಂಸ್ಥೆಯಲ್ಲಿ (ಮುಡಾ) ನಡೆದಿರಬಹುದಾದ ಅಕ್ರಮದ ತನಿಖೆಗೆ ಇ.ಡಿ. ಬಂದಿರುವುದು ಹೇಗೆ? ಇಷ್ಟಕ್ಕೂ, ಇ.ಡಿ.ಗೆ ರಾಜ್ಯದ ಪೊಲೀಸರಿಂದ ವರದಿಯಾಗದೇ, ಇ.ಡಿ.ಯು 'ಸುಮೋಟೋ' ಪ್ರಕರಣವನ್ನು ದಾಖಲಿಸಿದೆ! ರಾಷ್ಟ್ರದಲ್ಲಿ ಸರಿಸುಮಾರು 800 ಜಿಲ್ಲೆಗಳಿದ್ದು, ಆ ಯಾವ ಜಿಲ್ಲಾ ಮಟ್ಟದ ಸಂಸ್ಥೆಗಳ ಅಕ್ರಮದ ಬಗ್ಗೆ ತನಿಖೆ ಮಾಡದೇ ಈ ಪ್ರಕರಣಕ್ಕೆ ಬಂದಿರುವುದು ಅನುಮಾನಕ್ಕೆ ಕಾರಣವಾಗಿದೆ. ಇಷ್ಟಕ್ಕೂ ಇ.ಡಿ.ಯಲ್ಲಿ ಪೊಲೀಸ್ ಇಲಾಖೆಯಂತೆ ಬಹಳಷ್ಟು ಅಧಿಕಾರಿಗಳು ಇರುವುದಿಲ್ಲ. ಇಡೀ ರಾಷ್ಟ್ರದಲ್ಲಿ ಕೆಲವೇ ವಲಯ ಕಚೇರಿಗಳಿವೆಯಷ್ಟೇ.

Show me accused, I wll tell you the Crime ಎಂಬಂತೆ ಇ.ಡಿ. ನಡೆಯುತ್ತಿರುವುದಂತೂ ಸ್ಪಷ್ಟ. ಇಲ್ಲಿ ಇ.ಡಿ.ಗೆ ಆರೋಪಕ್ಕಿಂತ ಆರೋಪಿಯೇ ಮುಖ್ಯವಾದಂತಿದೆ.

ಈ ಹಿನ್ನೆಲೆಯಲ್ಲಿ ಲೋಕಾಯುಕ್ತ ಪೊಲೀಸರಿಗೆ ಇ.ಡಿ. ಕಳಿಸಿರುವ ವರದಿಯನ್ನು ಗಮನಿಸಬೇಕು. ಈ ವರದಿಯನ್ನು ಕಳಿಸಿರುವ ಸಮಯ ಮತ್ತು ಅದು ಬಹಿರಂಗವಾದ ಪರಿಯು ಇ.ಡಿ.ಯ Credentials ಬಗ್ಗೆ ಅನುಮಾನ ಹುಟ್ಟಿಸುತ್ತದೆ. ಈ ತಿಂಗಳ 10ರಂದು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ, 'ಮುಡಾ' ಪ್ರಕರಣವನ್ನು ಸಿಬಿಐಗೆ ವಹಿಸಬೇಕೇ ಎಂಬ ಬಗ್ಗೆ ವಾದ ನಡೆಯುವುದಿದೆ. ಈ ಪ್ರಕರಣದಲ್ಲಿ ಈವರೆಗಿನ ತನಿಖಾ ವರದಿಯನ್ನು ಸಲ್ಲಿಸುವಂತೆ, ಈಗಾಗಲೇ ಲೋಕಾಯುಕ್ತ ಪೊಲೀಸರಿಗೆ ಉಚ್ಚ ನ್ಯಾಯಾಲಯವು ಆದೇಶ ನೀಡಿದೆ. ಇಂಥ ಸಮಯ ದಲ್ಲಿ ಇ.ಡಿ.ಯು 'ಸಂವಹನ'ವನ್ನು ಲೋಕಾಯುಕ್ತಕ್ಕೆ ಕಳುಹಿಸಿಕೊಟ್ಟಿದೆ!

ವಾಸ್ತವವಾಗಿ ಇ.ಡಿ. ಇಂಥ ವರದಿಯನ್ನು ಸಲ್ಲಿಸಬೇಕಿರುವುದು ತನ್ನ ಪ್ರಕರಣಕ್ಕೆ ಸಂಬಂಧಿಸಿದ ನ್ಯಾಯಾಲಯಕ್ಕೆ! ಲೋಕಾಯುಕ್ತ ಪೊಲೀಸ್ ತನಿಖೆಯು ಸ್ವತಂತ್ರವಾಗಿದ್ದು, ಅದು ಇ.ಡಿ.ಯಿಂದ ಯಾವುದೇ ಮಾಹಿತಿಯ ವಿನಿಮಯಕ್ಕೆ ಕೇಳಿರುವುದೂ ಇಲ್ಲ!

ಎಲ್ಲಕ್ಕಿಂತ ಬಹುಮುಖ್ಯವಾಗಿ, ಇ.ಡಿ. ಕಳಿಸಿರುವ 'ಸಂವಹನ'ಕ್ಕೆ ಯಾವುದೇ ಸಾಕ್ಷ್ಯ ನಿಯಮದ ಮಾನ್ಯತೆ ಇರುವುದಿಲ್ಲ. ಇಂಥ ವರದಿಯನ್ನು ಅನುಸರಿಸಬೇಕಾದ ಯಾವುದೇ ಕಾನೂನಿನ ಒತ್ತಾಯವೂ ಇರುವುದಿಲ್ಲ. ಜತೆಗೆ ಇ.ಡಿ. ಕಳಿಸಿದ ವರದಿ, ಹೇಳಿಕೆಗಳನ್ನು ಪಾಲಿಸಬೇಕೆಂಬ ಕಡ್ಡಾಯವೂ ಇರುವುದಿಲ್ಲ. ಇದು ಕೇವಲ ಮಾಹಿತಿ ವಿನಿಮಯವಷ್ಟೇ. ಇಂಥ ಮಾಹಿತಿಯ ವಿನಿಮಯವನ್ನು, ಸಾಮಾನ್ಯವಾಗಿ ಇ.ಡಿ.ಯು ಯಾವುದೇ ಅಪರಾಧ ನಡೆದಿರುವ ಬಗ್ಗೆ ತನ್ನ ಗಮನಕ್ಕೆ ಬಂದಾಗ ಅದನ್ನು ಸಂಬಂಧಿಸಿದ ಐಟಿ ಇಲಾಖೆ, ಕೇಂದ್ರ ವಿಜಿಲೆನ್ಸ್, ಒಂದು ರಾಜ್ಯದ ಪೊಲೀಸ್ ಇತ್ಯಾದಿಯವರ ಗಮನಕ್ಕೂ ತಂದು ಆಯಾ ಇಲಾಖೆಯು ತನ್ನ ಕಾನೂನಿನ ಅನುಸಾರವಾಗಿ ಕೂಡ ತನಿಖೆ ಮಾಡಬಹುದು ಎಂಬ ಕಾರಣಕ್ಕಾಗಿ ಪಿಎಂಎಲ್‌ಎ ಕಾಯ್ದೆಯ ಕಲಂ 66ರ ಅಡಿಯಲ್ಲಿ ಮಾಹಿತಿ ವಿನಿಮಯ ಮಾಡಿಕೊಳ್ಳುತ್ತದೆ. ಇ.ಡಿ.ಯು ಲೋಕಾಯುಕ್ತಕ್ಕೆ ಕಳಿಸಿದ ಸಂವಹನವು ಸಾರ್ವಜನಿಕರಿಗೆ ಬಹಿರಂಗವಾದದ್ದು ಪಿಟಿಐ ಮತ್ತು ಎಎನ್‌ಐ ಮೂಲಕ ಮಾತ್ರ! ಇ.ಡಿ. ಅಧಿಕಾರಿಗಳು ತಾವೇ ಯಾವುದೇ ಪತ್ರಿಕಾ ಪ್ರಕಟಣೆಯನ್ನೂ ನೀಡಿಲ್ಲ, ಹಾಗಾಗಿ ಈ ತನಿಖಾ ಮಾಹಿತಿಯನ್ನು ಸೋರಿಕೆ ಮಾಡಿದವರು ಯಾರು?

ಕಾನೂನು ಮತ್ತು ಸುವ್ಯವಸ್ಥೆಯು ಒಂದು ರಾಜ್ಯದ ಸ್ವತಂತ್ರ ವಿಷಯವಾಗಿದೆ. ಆಯಾ ರಾಜ್ಯಗಳು ತಮ್ಮ ವ್ಯಾಪ್ತಿಯಲ್ಲಿ ನಡೆಯುವ ಅಪರಾಧಗಳ ತನಿಖೆ ಮಾಡಲು ಸ್ವತಂತ್ರವಿದ್ದು ಕೇಂದ್ರವು ಹಸ್ತಕ್ಷೇಪ ಮಾಡುವಂತಿಲ್ಲ. ಲೋಕಾಯುಕ್ತ ಪೊಲೀಸರು ಕಾನೂನಿನ ಮೇರೆಗೆ ತನಿಖೆಯನ್ನು ಪೂರ್ಣಮಾಡುವ ಮೊದಲೇ, ಅನುಮಾನದಿಂದ ನೋಡುವುದು ಒಳ್ಳೆಯ ಬೆಳವಣಿಗೆಯಲ್ಲ. ರಾಜ್ಯದ ಅಧಿಕಾರಿಗಳು ರಾಜ್ಯ ಸರಕಾರದ ತಾಳಕ್ಕೆ ಕುಣಿಯುವವರು ಎಂದು ತೀರ್ಮಾನಕ್ಕೆ ಬರುವುದಾದರೆ, ಕೇಂದ್ರ ಸರಕಾರದ ಅಧಿಕಾರಿಗಳು ಕೂಡ ಹಾಗೆಯೇ ಮಾಡುತ್ತಾರೆಂಬ ತೀರ್ಮಾನಕ್ಕೆ ಬರಬೇಕಾಗುವುದು. ಇದು ಅತ್ಯಂತ ಗಂಭೀರ, ದುರದೃಷ್ಟಕರ.

ಒಂದು ರಾಜ್ಯದ ಪೊಲೀಸರ ತನಿಖೆಯಲ್ಲಿ, ಹಿಂಬಾಗಿಲ ಮೂಲಕ, 'ಸಂವಹನ'ದ ಹೆಸರಿನಲ್ಲಿ ಒತ್ತಡ ಹಾಕುವುದು ಕಾನೂನುಬಾಹಿರ. ಇ.ಡಿ. ಹಾಗೆ ಮಾಡಿದರೆ ಅದು ರಾಷ್ಟ್ರದ ಒಕ್ಕೂಟ ವ್ಯವಸ್ಥೆಯನ್ನು ಅಣಕ ಮಾಡಿದಂತೆ. ಅಂತೆಯೇ ಉಚ್ಚ ನ್ಯಾಯಾಲಯದಲ್ಲಿ, 'ಮುಡಾ' ಪ್ರಕರಣವನ್ನು ಸಿಬಿಐ ತನಿಖೆ ವ್ಯಾಪ್ತಿಗೆ ತರುವ ಸಲುವಾಗಿ ಇ.ಡಿ.ಯು ಈ ಕೆಲಸ ಮಾಡಿದ್ದರೆ ಅದು ಉಚ್ಚ ನ್ಯಾಯಾಲಯವನ್ನು ತಪ್ಪು ದಾರಿಗೆ ಎಳೆಯುವ ಪ್ರಯತ್ನವೆಂದೇ ಹೇಳಬೇಕಾಗುವುದು.

ಈ ತಿಂಗಳು 10ರಂದು, 'ಮುಡಾ' ಪ್ರಕರಣದಲ್ಲಿ ಲೋಕಾಯುಕ್ತ ಪೊಲೀಸರು ಉಚ್ಚ ನ್ಯಾಯಾಲಯಕ್ಕೆ 'ತಮ್ಮ ತನಿಖಾ ವರದಿ'ಯನ್ನು ಸಲ್ಲಿಸುವರು; ಅದನ್ನು ನ್ಯಾಯಾಲಯವು ಪರಿಶೀಲಿಸಿ, ತನ್ನ ಆದೇಶವನ್ನು ನೀಡುವುದು. ಹಾಗಾಗಿ ತನ್ನ 'ಸಂವಹನ'ವೂ ಅಂಥ ಲೋಕಾಯುಕ್ತ ವರದಿಯ ಭಾಗವಾಗಲಿ ಎಂಬ ದುರ್ಭಾವದಿಂದ, ಈ 'ಸಂವಹನ' ದಾರಿಯನ್ನು ಇ.ಡಿ. ಹುಡುಕಿಕೊಂಡಿದ್ದರೆ, ಇದು ಇ.ಡಿ.ಗೇ ತಿರುಗುಬಾಣವಾಗುವುದು ಖಚಿತ.

ಇ.ಡಿ.ಯಂಥ ಉನ್ನತ ಸಂಸ್ಥೆ, ತನ್ನ ಯಾವುದೇ ವರದಿಯನ್ನು ಕಾನೂನು ಮೇರೆಗೆ ನ್ಯಾಯಾಲಯಕ್ಕೆ ಸಲ್ಲಿಸದೇ, ಹೀಗೆ ವಾಮಮಾರ್ಗವನ್ನು ಅನುಸರಿಸಿದರೆ, 'ಅದು ಪಕ್ಷಪಾತಿ ಧೋರಣೆ ಹೊಂದಿದೆ, ವಿರೋಧ ಪಕ್ಷಗಳನ್ನು ಹಣಿಯಲು ತನ್ನನ್ನು ದುರ್ಬಳಕೆ ಮಾಡಿಕೊಳ್ಳಲು ತಾನೇ ಅನುಮತಿಸಿದೆ' ಎಂದೇ ಭಾವಿಸಬೇಕಾಗುವುದು.

(ಲೇಖಕರು ವಕೀಲರು)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಆರ್ಥಿಕತೆಗೆ ಬಲ

ಕೋವಿಡ್ ಮಹಾಮಾರಿ ವಕ್ಕರಿಸಿದ ಬಳಿಕ ಭಾರತ ಸೇರಿದಂತೆ ಬಹುತೇಕ ದೇಶಗಳಲ್ಲಿ ಪ್ರವಾಸೋದ್ಯಮವು ನೆಲ ಕಚ್ಚಿತ್ತು. ಈಗ ವಿದೇಶಿ ಪ್ರವಾಸಿಗರ ಹೆಚ್ಚಳದ ವಿಷಯದಲ್ಲಿ ಮಿಕ್ಕೆಲ್ಲ ದೇಶಗಳಲ್ಲಿ ಚೇತರಿಕೆ ಕಂಡುಬಂದಿದ್ದರೂ, ಭಾರತವಿನ್ನೂ ಈ ಬಾಬತ್ತಿನಲ್ಲಿ ಏದುಸಿರು ಬಿಡುತ್ತಿದೆ. ಅನ್ಯದೇಶಗಳಿಗೆ ಹೋಲಿಸಿದರೆ ನಮ್ಮಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಐತಿಹಾಸಿಕ, ಪಾರಂಪರಿಕ, ಪ್ರೇಕ್ಷಣೀಯ ತಾಣಗಳಿದ್ದರೂ, ವಿದೇಶಿಯರು ಭೇಟಿ ನೀಡುವ ಸಂಖ್ಯೆಯಲ್ಲಿ ಭಾರತವು ಅತಿ ಕೆಳಗೆ ಎನ್ನಬಹುದಾದ 37ನೇ ಸ್ಥಾನದಲ್ಲಿರುವುದು ಸಮಾಧಾನಕರ ಸಂಗತಿಯಲ್ಲ. ಹಲವು ದೇಶಗಳಲ್ಲಿ ಪ್ರವಾಸೋದ್ಯಮ ಎಂಬುದು ಗಣನೀಯ ಆದಾಯ ತಂದುಕೊಡುವ ವಲಯವಾಗಿದೆ; ಆದರೆ ಇಷ್ಟೊಂದು ದೊಡ್ಡ ದೇಶವಾಗಿರುವ ಭಾರತದಲ್ಲಿ ಅದು ಸಾಧ್ಯವಾಗುತ್ತಿಲ್ಲ. ವಿಯೆಟ್ನಾಂ, ಫಿಲಿಪ್ಪೀನ್ಸ್, ಶ್ರೀಲಂಕಾ ಮುಂತಾದ ಪುಟ್ಟ ದೇಶಗಳು ಭಾರತಕ್ಕಿಂತಲೂ ಹೆಚ್ಚು 'ಪ್ರವಾಸಿ-ಸ್ನೇಹಿ' ಆಗಿರುವುದು ನಮಗೆ ಪಾಠವಾಗಬೇಕು. ಪ್ರವಾಸಿ ತಾಣಗಳಿಗೆ ಭೇಟಿನೀಡಲು ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸಿ, ಶೌಚಾಲಯಗಳ ಶುಚಿತ್ವದ ಬಗ್ಗೆ ಗಮನ ನೀಡುತ್ತಾ, ಪ್ರವಾಸಿಗರನ್ನು ಆತ್ಮೀಯತೆಯಿಂದ ಸ್ವಾಗತಿಸಿ ನಮ್ಮಲ್ಲಿನ ತಾಣಗಳ ಬಗ್ಗೆ ಸಾಕಷ್ಟು ಪ್ರಚಾರ ನೀಡಿದರೆ, ಪ್ರವಾಸೋದ್ಯಮವು ಇನ್ನಷ್ಟು ಗರಿಗೆದರಿ ದೇಶದ ಆರ್ಥಿಕತೆಗೆ ಮತ್ತಷ್ಟು ಬಲ ನೀಡೀತು ಹಾಗೂ ಉದ್ಯೋಗಾವಕಾಶಗಳೂ ಹೆಚ್ಚಾದಾವು..

- ಬಿ.ಎನ್.ಭರತ್, ಬೆಂಗಳೂರು

ಹೀಗೊಂದು ಎಚ್ಚರಿಕೆ!

ಕುಕ್ಕೆ ಶ್ರೀ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಸಾಗುವ ಮಾರ್ಗದಲ್ಲಿ ಕಾಣಬರುವ ಒಂದು 'ಅನಾಮಧೇಯ' ಎಚ್ಚರಿಕೆಯ ಫಲಕವು ಪ್ರಯಾಣಿಕರ ಗಮನವನ್ನು ಸೆಳೆಯುತ್ತಿರುವುದರ ಜತೆಗೆ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಪ್ರಶಂಸೆಗೆ ಪಾತ್ರವಾಗಿದೆ. ಅದರಲ್ಲಿ ಬರೆದ ಸಾಲು ಹೀಗಿದೆ: ''ಕೈಕಂಬದಿಂದ ಕುಕ್ಕೆ ಸುಬ್ರಹ್ಮಣ್ಯದವರೆಗಿನ ರಸ್ತೆಯಲ್ಲಿ ನಿಧಿಯಿದೆ ಎಂದು ಯಾರೋ ಮಾಂತ್ರಿಕರು ಹೇಳಿದ ಕಾರಣ ಎಚ್ಚೆತ್ತ ರಾಜ್ಯ ಸರಕಾರ ಈ ರಸ್ತೆಯಲ್ಲಿ ನಿಧಿಯನ್ನು ಹುಡುಕಿಸಲು ರಸ್ತೆಯ ಮಧ್ಯವೇ ಅಲ್ಲಲ್ಲಿ ದೊಡ್ಡ ಹೊಂಡಗಳನ್ನು ತೋಡಿಸಿ ಹಾಗೆಯೇ ಬಿಟ್ಟಿದೆ- ನಿಧಾನವಾಗಿ ಚಲಿಸಿ''. ಈ ಸಾಲನ್ನು ಬರೆದ ಅನಾಮಧೇಯರು ಯಾರೇ ಇರಲಿ, ಅದರಲ್ಲೊಂದು ತಿಳಿಹಾಸ್ಯ ಇರುವುದರ ಜತೆಗೆ, ಸಾರ್ವಜನಿಕ ಕ್ಷೇತ್ರದಲ್ಲಿ ಆಗಬೇಕಾದ ಅಭಿವೃದ್ಧಿ ಕಾರ್ಯದ ಕುರಿತು ಸರಕಾರ ತೋರುವ ನಿರ್ಲಕ್ಷ್ಯದ ಬಗೆಗಿನ ವ್ಯಂಗ್ಯವೂ ಅಡಗಿದೆ. ರಸ್ತೆ ದುರಸ್ತಿ ವಿಷಯದಲ್ಲಿನ ಬೇಜವಾಬ್ದಾರಿಯುತ ವರ್ತನೆಯಿಂದಾಗಿ ಪ್ರತಿನಿತ್ಯವೂ ನೂರಾರು ಅಪಘಾತಗಳಾಗುತ್ತಿವೆ. ಅದರಲ್ಲೂ ರಾತ್ರಿ ಪ್ರಯಾಣದ ವೇಳೆ ಹೆಚ್ಚಿನ ಎಚ್ಚರಿಕೆ ವಹಿಸಬೇಕಾದ ಅನಿವಾರ್ಯತೆಯಿದೆ. 'ಬಡವನ ಕೋಪ ದವಡೆಗೆ ಮೂಲ' ಎಂಬ ಮಾತನ್ನು ಗಮನದಲ್ಲಿಟ್ಟುಕೊಂಡು, ಜನಸಾಮಾನ್ಯರ ಅಳಲಿಗೆ ಕಿವಿಗೊಡದ ಆಳುಗರ ವಿರುದ್ಧ ಇಂಥ ಶಾಂತಿಯುತ ಪ್ರತಿಭಟನೆಗೆ ಮುಂದಾಗಿದ್ದು ನಿಜಕ್ಕೂ ಗಮನ ಸೆಳೆಯುವಂತಿದೆ. ಸಂಬಂಧಪಟ್ಟವರು ಈ ಎಚ್ಚರಿಕೆಯ ಫಲಕವನ್ನು ಇನ್ನಾದರೂ ಗಮನಿಸಿ, ದುರಸ್ತಿ ಕೆಲಸ ಆರಂಭಿಸಲಿ. ತತ್ಪರಿಣಾಮವಾಗಿ, ''ನಿಧಿಶೋಧ ಕಾರ್ಯ ಮುಗಿದಿದ್ದು, ಪ್ರಯಾಣಿಕರು ಆರಾಮಾಗಿ ಚಲಿಸಬಹುದು'' ಎಂಬ ಇನ್ನೊಂದು ಅಭಿನಂದನಾ ಫಲಕವನ್ನು ಜನರು ಕಾಣುವಂತಾಗಲಿ!

- ಸುರೇಂದ್ರ ಪೈ, ಭಟ್ಕಳ

ಖರ್ಚಿನ ಲೆಕ್ಕವೆಲ್ಲಿ?

ನಾಡಹಬ್ಬ ದಸರಾ ಮುಗಿದು 2 ತಿಂಗಳಾಗುತ್ತ ಬಂದರೂ, ಸಂಬಂಧಿತ ಖರ್ಚು-ವೆಚ್ಚಗಳ ವಿವರವನ್ನು ಜಿಲ್ಲಾಡಳಿತವು ಮಾಧ್ಯಮಗಳಿಗೆ ಇನ್ನೂ ಬಿಡುಗಡೆ ಮಾಡಿಲ್ಲ, ಇದು ಸಾರ್ವಜನಿಕರಲ್ಲಿ ಅನುಮಾನವನ್ನು ಹುಟ್ಟುಹಾಕಿದೆ. ''ಇನ್ನೂ ಆಡಿಟ್ ನಡೆಯುತ್ತಿದೆ, ಸದ್ಯದಲ್ಲಿಯೇ ಬಿಡುಗಡೆ ಮಾಡಲಾಗುವುದು'' ಎಂದು ಕೆಲವು ಅಧಿಕಾರಿಗಳು ಹೇಳುವುದಿದೆ. ಆದರೆ, ಆಡಿಟ್ ಮುಗಿಸಲು ಅಷ್ಟೊಂದು ಸಮಯ ಹಿಡಿಯುವುದೇ? ಪ್ರಾಯಶಃ 'ರಾಮನ ಲೆಕ್ಕ-ಕೃಷ್ಣನ ಲೆಕ್ಕ'ವನ್ನು ಹೊಂದಿಸಲು ಕಸರತ್ತು ನಡೆಯುತ್ತಿದೆಯೇ? ಎಂಬುದು ಜನರ ಪ್ರಶ್ನೆ. ಉತ್ತರಿಸುವವರಾರು?

- ಬೂಕನಕೆರೆ ವಿಜೇಂದ್ರ, ಮೈಸೂರು

ಸಾರಿಗೆ ವ್ಯವಸ್ಥೆ ಕಲ್ಪಿಸಿ

ಬೆಂಗಳೂರು ಗ್ರಾಮಾಂತರ ಪ್ರದೇಶಗಳಾದ ಸಾದಹಳ್ಳಿ, ಭೋವಿಪಾಳ್ಯ, ನವರತ್ನ ಅಗ್ರಹಾರ ಮತ್ತು ಸುತ್ತಮುತ್ತಲಿನ ಊರುಗಳಲ್ಲಿ ಸಾಕಷ್ಟು ವಿದ್ಯಾಸಂಸ್ಥೆಗಳು, ಪ್ರೇಕ್ಷಣೀಯ ಸ್ಥಳಗಳಿವೆ. ಹೀಗಾಗಿ ದಿನಂಪ್ರತಿ ಸಾವಿರಾರು ವಿದ್ಯಾರ್ಥಿಗಳು, ಸಾರ್ವಜನಿಕರು ಈ ಪ್ರದೇಶಗಳಿಗೆ ಬೆಂಗಳೂರು ನಗರದ ವಿವಿಧ ಭಾಗಗಳಿಂದ ಸಂಚರಿಸಬೇಕಾದ ಅಗತ್ಯವಿದೆ. ಆದರೆ ದುರದೃಷ್ಟವಶಾತ್ ಈ ಭಾಗಗಳಿಗೆ ಸರಿಯಾದ ಸಾರಿಗೆ ವ್ಯವಸ್ಥೆಯಿಲ್ಲದೆ ಅವರು ಪರದಾಡಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಕೆಲವೇ ಬಿಎಂಟಿಸಿ ಬಸ್ಸುಗಳ ಸೌಕರ್ಯವಿದ್ದರೂ ಅದು ಯಾತಕ್ಕೂ ಸಾಲದಂತಾಗಿದೆ. ಈ ವಿಷಯಕ್ಕೆ ಸಂಬಂಧಿಸಿ ಸಂಬಂಧಪಟ್ಟವರಿಗೆ ಸಾಕಷ್ಟು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಆದ್ದರಿಂದ ಬಿಎಂಟಿಸಿಯವರು ಇನ್ನಾದರೂ ಎಚ್ಚೆತ್ತುಕೊಂಡು ಈ ನಿಟ್ಟಿನಲ್ಲಿ ಗಮನಹರಿಸಬೇಕು.

- ಡಾ. ವಿಜಯಕುಮಾರ್ ಎಚ್.ಕೆ., ಬೆಂಗಳೂರು

ಕ್ರೇಜ್ ಹಿಂದಿನ ರಹಸ್ಯ

ಟೆಕ್ ಕಂಪನಿಯ ಮುಖ್ಯಸ್ಥರೊಬ್ಬರಿಗೆ ವಾರ್ಷಿಕ 66.25 ಕೋಟಿ ರುಪಾಯಿ ಸಂಬಳ. ಎರಡು ತಿಂಗಳ ಕಾಲ ಐಪಿಎಲ್ ಕ್ರಿಕೆಟ್ ಆಡಲು ವಿರಾಟ್ ಕೊಹ್ಲಿಗೆ ದಕ್ಕುವುದು 17 ಕೋಟಿ ರುಪಾಯಿ. ಹೀಗಾಗಿ, ಬ್ಯಾಟ್ ಹಿಡಿದು ಕ್ರಿಕೆಟ್ ಮೈದಾನಕ್ಕೆ ಹೋಗಲೋ ಅಥವಾ ಲ್ಯಾಪ್‌ಟಾಪ್ ಹಿಡಿದು ಹವಾನಿಯಂತ್ರಿತ ಕ್ಯಾಬಿನ್‌ಗೆ ತೆರಳಲೋ ಎನ್ನುವ ದ್ವಂದ್ವ ಹಲವರಿಗೆ! ಇದು ಒಂದು ಜೋಕ್ ಕೂಡ ಎನ್ನಿ! 13 ವರ್ಷ ವಯಸ್ಸಿನ ವೈಭವ ಸೂರ್ಯವಂಶಿ ಎಂಬ ಹುಡುಗನನ್ನು 1.10 ಕೋಟಿ ರು. ನೀಡಿ ಐಪಿಎಲ್ ಕ್ರಿಕೆಟ್ ತಂಡವೊಂದು ಖರೀದಿಸಿದ್ದನ್ನು ನೋಡಿದಾಗ ಈ ಜೋಕ್ ಬೇಡವೆಂದರೂ ನೆನಪಿಗೆ ಬರುತ್ತದೆ. ಇಂದಿನ ಹುಡುಗರು

ಕ್ರಿಕೆಟ್ ಮೈದಾನಕ್ಕೆ ದಾಂಗುಡಿ ಇಡುತ್ತಿರುವುದರ ಹಿಂದಿನ ರಹಸ್ಯ ಇದು. ಕ್ರಿಕೆಟ್ ಆಟಕ್ಕೆ ದಕ್ಕಿರುವ ಕ್ರೇಜ್, ಅಂಟಿರುವ ಪ್ರಸಿದ್ಧಿ, ಅಲ್ಲಿ ಹರಿದಾಡುವ ಹಣದ ಹೊನಲು ಮತ್ತು ನೋಡನೋಡುತ್ತಿದ್ದಂತೆ ದಕ್ಕಿಬಿಡುವ ಜನಪ್ರಿಯತೆಯ ಎದುರು ಮಿಕ್ಕ ಎಲ್ಲ ಕ್ಷೇತ್ರಗಳೂ, ಅಲ್ಲಿನ ಪರಿಶ್ರಮದ ದುಡಿಮೆಯೂ ನಗಣ್ಯವಾಗಿಬಿಟ್ಟಿದೆ ಎಂದರೆ ಅತಿಶಯೋಕ್ತಿಯಲ್ಲ. ವಸಾಹತುಶಾಹಿಗಳನ್ನು ನಖಶಿಖಾಂತ ದ್ವೇಷಿಸುವ ನಮ್ಮ ರಾಷ್ಟ್ರದಲ್ಲಿ, ಅವರು ಬಿಟ್ಟುಹೋದ ಈ ಕ್ರೀಡೆಯ ಬಗೆಗೆ ಅದೆಷ್ಟು ಮೋಹವಲ್ಲವೇ?!

- ರಮಾನಂದ ಶರ್ಮಾ, ಬೆಂಗಳೂರು

ಭಟ್ಟರ್ ಸ್ಕಾಚ್

- **ಕಾಶಿ ಪ್ರಾಣೇಶ, ವಿದ್ಯಾಪೀಠ ಸರ್ಕಲ್**
ಭಟ್ರೇ, ಕೆಲವು ವಿಮಾನದಲ್ಲಿ ಅನೌನ್ಸ್‌ಮೆಂಟ್‌ಗಳನ್ನು ಸಂಸ್ಕೃತದಲ್ಲಿ ಮಾಡುತ್ತಿದ್ದಾರಂತೆ?
– **ಹಾಗಾದರೆ ಅಂಥ ವಿಮಾನದಲ್ಲಿ ಮಧು ಬಂಗಾರಪ್ಪ ಹೋದರೆ ಗತಿಯೇನು?**

- **ಚಂದ್ರಶೇಖರ ನಾಗೂರ, (ಇಮೇಲ್ ಮೂಲಕ)**
ಭಟ್ರೇ, ಐಫೋನ್ ಕೊಡಿಸಿಲ್ಲ ಅಂತ ಅವಳು ಕೈ ಕೊಟ್ಟು ಹೋಗೋದಾ?
– **ಅವಳು ಐಫೋನ್ ಜತೆಗೆ ಮದುವೆಯಾಗಿಲ್ಲ ತಾನೇ?!**

- **ಚಟಚಲಾ ಚಿಟಗುಪ್ಪಿ, ಮೈಸೂರು**
ನಾನು ವೆಲ್ಡಿಂಗ್ ವೃತ್ತಿಯಲ್ಲಿದ್ದೇನೆ, ನಮ್ಮ ವೃತ್ತಿಗೆ ಸಂಬಂಧಿಸಿದ ಹಾಡು ಯಾವುದು?
– **'ಬೆಸುಗೆ.. ಬೆಸುಗೆ.. ಸುಂದರ ಬೆಸುಗೆ...'**

- **ಪೂರ್ಣಯ್ಯ, ಮೈಸೂರು**
ಯಾವ ಎರಡು ಸಂದರ್ಭಗಳಲ್ಲಿ ಗಂಡಸು ಮಂಗನಂತೆ ಮುಖಭಾವ ಮಾಡುತ್ತಾನೆ, ಭಟ್ರೇ?
– **ಕನ್ನಡಿ ಮುಂದೆ ನಿಂತಾಗ ಮತ್ತು ಮಕ್ಕಳನ್ನು ಮುದ್ದು ಮಾಡುವಾಗ!**

- **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ನನಗೆ ಇಂಗ್ಲಿಷ್ ಬರುತ್ತೆ ಅಂತ ತೋರಿಸಲು ಏನು ಮಾಡಬೇಕು?
– **'ಹಿಂದು' ಪತ್ರಿಕೆಯನ್ನು ಕೈಯಲ್ಲಿ ಹಿಡಿದಿರಬೇಕು!**

- **ವೀರೇಶ ಕಮತಗಿ, ಅಡಗೂರು**
ಭಟ್ರೇ, ನಮಗಾಗದವರಿಗೆ ಅವಮಾನ ಮಾಡಬೇಕು ಅಂದ್ರೆ ಏನು ಮಾಡಬೇಕು?
– **ಮೊಯಿಲಿ ಮಹಾಕಾವ್ಯವನ್ನು ಉಡುಗೊರೆಯಾಗಿ ಕಳಿಸಬೇಕು!**

- **ಎಸ್. ರಾಮಚಂದ್ರ, ಬೆಂಗಳೂರು**
ಭಟ್ರೇ, ನಿಮ್ಮ ದೃಷ್ಟಿಯಲ್ಲಿ ಬಿಲ್ಡಪ್ ಪರಾಕಾಷ್ಠೆ ಅಂದ್ರೆ ಯಾವುದು?
– **'ಅಂಬಾನಿಗೆ ಹಣ ಬೇಕಾದಾಗ ನಾನೇ ಕೊಡೋದು' ಅಂತ ಹೇಳೋದು!**

- **ಸೀತಾರಾಮ ಹೆಗಡೆ, ಕುಮಟಾ**
ಭಟ್ರೇ, ಒಂದು ತಿಂಗಳ ಅವಧಿಯಲ್ಲಿ ನೀವು ನಾಲ್ಕು ದೇಶಗಳಲ್ಲಿ ಇರುತ್ತೀರಂತೆ?
– **ಕಮ್ಮಿಯಾಯ್ತು ಅಂತ ಹೀಗೆಲ್ಲ ಹಂಗಿಸಬಾರದಿತ್ತು!**

- **ಕೆ.ಉದಯರವಿ, ಮೈಸೂರು**
ಭಟ್ರೇ, ದೇವೇಗೌಡರಿಗೆ ಮೊಮ್ಮಕ್ಕಳಿಂದ ಅವಮಾನ ಆಯ್ತು, ಅಲ್ಲವಾ?
– **ಅದಕ್ಕೆ ಅವರ ಮಕ್ಕಳೇ ಕಾರಣವಲ್ಲವೇ?!**

- **ರಮೇಶ ಗೌಡ, ಮಳವಳ್ಳಿ**
ಭಟ್ರೇ, ಬೆಂಗಳೂರಿಗೆ ಸಹಿಸಿಕೊಳ್ಳುವ ಶಕ್ತಿ ಅಗಾಧ, ಏನಂತೀರಾ?
– **ಆದರೆ ಬೆಂಗಳೂರಿಗೆ ಸಣ್ಣ ಮಳೆಯನ್ನೂ ಸಹಿಸಿಕೊಳ್ಳುವ ಶಕ್ತಿಯಿಲ್ಲ!**

ಆಯುರ್ವೇದವು ಮಾಂಸಾಹಾರದ ವಿರೋಧಿಯೇ?

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ

ಡಾ.ಸಾಧನಶ್ರೀ
vveditoped@gmail.com

ಆಯುರ್ವೇದವೆಂಬ ಜೀವ ವಿಜ್ಞಾನ ಮತ್ತು ಜೀವನ ಜ್ಞಾನದ ಕುರಿತಾಗಿ ಜನರಲ್ಲಿ ಜ್ಞಾನಕ್ಕಿಂತ ಹೆಚ್ಚಾಗಿ ಅಜ್ಞಾನವೇ ತುಂಬಿಹೋಗಿದೆ. ತಮಗಿರುವ ಅಲ್ಪಸ್ವಲ್ಪ ತಿಳಿವಳಿಕೆ ಮತ್ತು ಕಲ್ಪನೆಯ ಆಧಾರದ ಮೇಲೆಯೇ ಆಯುರ್ವೇದವನ್ನು ಅಳೆದು ತೂಗುವ ಸಂದರ್ಭಗಳನ್ನು ನಾನು ಎಷ್ಟೋ ಬಾರಿ ನೋಡಿದ್ದೇನೆ. ಅರ್ಧ ಬೆಂದ ಅರಿವಿನ ಸಹಾಯದಿಂದ, ಆಧಾರವಿಲ್ಲದೆ ಇಲ್ಲಸಲ್ಲದ ಆರೋಪಗಳನ್ನು ಎಸೆಯುವ ಜನರ ಸಾಹಸವು ಸೋಶಿಯಲ್ ಮೀಡಿಯಾದಲ್ಲಿ ಸರ್ವೇಸಾಮಾನ್ಯವಾಗಿಬಿಟ್ಟಿದೆ. ಇಂಥ ಸಂದರ್ಭಗಳನ್ನು ನೋಡಿದಾಗ ನನಗೆ 'ನಾಲ್ಕು ಅಂಧರು ಮತ್ತು ಆನೆ' ಎಂಬ ಕಥೆಯ ನೆನಪಾಗುತ್ತದೆ.

'ಆನೆ' ಎಂಬ ವಿಚಿತ್ರ ಪ್ರಾಣಿಯನ್ನು ಊರಿಗೆ ಕರೆತರಲಾಗಿದೆ ಎಂಬ ಸುದ್ದಿಯು ಕುರುಡರ ಗುಂಪಿಗೆ ಕೇಳಿಬಂತು. ಆದರೆ, ಅವರಲ್ಲಿ ಯಾರಿಗೂ ಆನೆಯೆಂಬ ಪ್ರಾಣಿಯ ಆಕಾರ ಮತ್ತು ರೂಪದ ಬಗ್ಗೆ ತಿಳಿದಿರಲಿಲ್ಲ. ಹಾಗಾಗಿ, ಬಹಳ ಕುತೂಹಲದಿಂದ, ''ನಾವು ಅದನ್ನು ಸ್ಪರ್ಶದಿಂದ ಪರೀಕ್ಷಿಸಬೇಕು ಮತ್ತು ಅದರ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಳ್ಳಬೇಕು'' ಎಂದು ಹೇಳಿದರು. ಎಲ್ಲರೂ ಆನೆಯ ಬಳಿ ಹೋದರು. ಆನೆಯನ್ನು ಮುಟ್ಟಿ ಪರೀಕ್ಷಿಸತೊಡಗಿದರು. ಮೊದಲನೆಯ ಕುರುಡನು ಆನೆಯ ಸೊಂಡಿಲನ್ನು ಮುಟ್ಟಿ ''ಈ ಜೀವಿ ದಪ್ಪ ಹಾವಿನಂತಿದೆ'' ಎಂದು ಹೇಳಿದ. ಆನೆಯ ಕಿವಿಗೆ ಕೈ ಹಾಕಿದ ಇನ್ನೊಬ್ಬನಿಗೆ ಅದು ಒಂದು ರೀತಿಯ ಚಾಮರದಂತೆ ಅನಿಸಿತು. ಕಾಲಿನ ಮೇಲೆ ಕೈಯಿಟ್ಟ ಮತ್ತೊಬ್ಬ ಕುರುಡನು ಆನೆಯು ಮರದ ಕಾಂಡದಂಥ ಕಂಬವಾಗಿದೆ ಎಂದು ಭಾವಿಸಿದ. ಅದರ ಪಾರ್ಶ್ವದಲ್ಲಿ ತನ್ನ ಕೈಯನ್ನು ಇರಿಸಿದ ಮತ್ತೊಬ್ಬ ಕುರುಡನು ''ಆನೆಯು ಒಂದು ಗೋಡೆ'' ಎಂದ. ಅದರ ಬಾಲವನ್ನು ಹಿಡಿದ ಇನ್ನೊಬ್ಬನು ಅದನ್ನು 'ಹಗ್ಗ' ಎಂದು ಬಣ್ಣಿಸಿದ. ಆನೆಯ ದಂತವನ್ನು ಮುಟ್ಟಿದ ಕುರುಡನು, ''ಆನೆಯು ಗಟ್ಟಿಯಾದ, ನಯವಾದ ಈಟಿಯಂತಿದೆ'' ಎಂದು ಹೇಳಿದ. ಆದರೆ ಒಬ್ಬ ಕುರುಡನಿಗೂ ಆನೆಯ ಸಂಪೂರ್ಣ ಪರಿಚಯವಾಗಲೇ ಇಲ್ಲ. ಆಯುರ್ವೇದದ ಬಗ್ಗೆ ನಮಗಿರುವ ಚಿತ್ರಣವು ಸಹ ಇದೇ ರೀತಿಯಾದದ್ದು!

ಆಯುರ್ವೇದದ ಯಾವುದೋ ಒಂದು ಸಣ್ಣ ಅಂಶವನ್ನು ಅಥವಾ ತಪ್ಪು ಅಂಶವನ್ನು ತಿಳಿದುಕೊಂಡು ಇಡೀ ಆಯುರ್ವೇದ ಅದಷ್ಟೇ ಎಂಬ ಭಾವನೆಯಲ್ಲಿ ಇರುತ್ತೇವೆ . ಉದಾಹರಣೆಗೆ, ಸುಮಾರು ಜನರಿಗೆ ಆಯುರ್ವೇದವೆಂದರೆ ಕೇವಲ ಬಾಡಿ ಮಸಾಜ್. ಇನ್ನು ಕೆಲವರಿಗೆ ಕಹಿ ಔಷಧಗಳಷ್ಟೇ ಆಯುರ್ವೇದದ ವಿಷಯ. ಇತರರಿಗೆ, ಆಯುರ್ವೇದವೆಂದರೆ ಕೇವಲ ಆಹಾರದ ಪಥ್ಯಗಳು. ಇನ್ನು ಕೆಲವರಿಗಂತೂ ಆಯುರ್ವೇದವೆಂದರೆ ಕೇವಲ ಪೈಲ್ಸ್ ಮತ್ತು ಫಿಸ್ತುಲಾಗಳನ್ನು ಸರಿಮಾಡುವ ಪದ್ಧತಿ ಎಂಬ ಭಾವನೆ. ಒಟ್ಟಾರೆ, 99 ಪ್ರತಿಶತ ಭಾರತೀಯರಿಗೆ ನಿಜವಾದ ಆಯುರ್ವೇದವೆಂದರೆ ಏನು ಎಂಬ ಅರಿವಿಲ್ಲ. ಹಾಗೆಯೇ, ತಿಳಿದುಕೊಳ್ಳುವ ಕಾಳಜಿಯೂ ಇಲ್ಲವೆಂಬುದು ಅತ್ಯಂತ ದುಃಖಕರ ಸಂಗತಿ. ಆದ್ದರಿಂದ, ಆಯುರ್ವೇದ ವೈದ್ಯರಾದ ನಾವು ಈ ಆಯುರ್ವೇದದ ಬಗೆಗೆ ಇರುವ ಅಪೂರ್ಣ ಅರಿವು, ತಪ್ಪು ಅರಿವು, ಆಧಾರವಿಲ್ಲದ ಅರಿವನ್ನು ಬದಲಾಯಿಸಿ ಆಯುರ್ವೇದವೆಂಬ ಮಹಾಸಾಗರದ ಆಳ ಅಗಲಗಳನ್ನು ಸ್ವಲ್ಪ ಮಟ್ಟಿಗಾದರೂ ಜನರಿಗೆ ತಲುಪಿಸುವ ಕೈಂಕರ್ಯವನ್ನು ತೆಗೆದುಕೊಂಡಿದ್ದೇವೆ.

ಇಂದು ಸಹ, ಇಂಥ ಒಂದು ವಿಷಯದ ಬಗ್ಗೆ ಸರಿಯಾದ ಮಾಹಿತಿಯನ್ನು ನಿಮ್ಮ ಮುಂದೆ ತೆರೆದಿಡುವ ಪ್ರಯತ್ನವನ್ನು ಈ ಲೇಖನದ ಮೂಲಕ ಮಾಡುತ್ತಿದ್ದೇನೆ. ವಿಷಯವೇನೆಂದರೆ, ಆಯುರ್ವೇದವು ಮಾಂಸಾಹಾರದ ವಿರೋಧಿಯೇ? ನನ್ನ ಕ್ಲಿನಿಕ್ಕಿಗೆ ಬರುವ ಬಹಳಷ್ಟು ಜನರು ಆಯುರ್ವೇದವು ಕೇವಲ ಶಾಕಾಹಾರಿಗಳಿಗೆ ಮಾತ್ರ, ಆಯುರ್ವೇದದ ಔಷಧಿಗಳನ್ನ ಸೇವಿಸುವಾಗ ಮಾಂಸವನ್ನು ವರ್ಜಿಸಬೇಕು. ಮಾಂಸಾಹಾರಿಗಳಿಗೆ ಆಯುರ್ವೇದ ದಕ್ಕುವುದಿಲ್ಲ ಎನ್ನುವ ಭಾವನೆಯಲ್ಲಿ ಬರುತ್ತಾರೆ. ನಿಮ್ಮ ಆಹಾರದ ಬಗ್ಗೆ ಸ್ವಲ್ಪ ತಿಳಿಸಿ ಎಂದು ನಾನು ಕೇಳಿದಾಗ, ತಾವು ಸೇವಿಸುವ ಮಾಂಸಾಹಾರದ ವಿಷಯವನ್ನು ಹಂಚಿಕೊಳ್ಳಲು ಬಹಳ ಮುಜುಗರ ಪಡುತ್ತಾರೆ. ಆಯುರ್ವೇದಕ್ಕೆ ಬಂದರೆ ಮಾಂಸಹಾರವನ್ನು ಬಿಡಬೇಕೆಂಬ ಭಯದಿಂದಲೂ ಹಲವಾರು ಜನ ಆಯುರ್ವೇದಕ್ಕೆ ಬರದೆ ಹಿಂದುಳಿಯುತ್ತಾರೆ. ಹಾಗಾದರೆ, ಈ ಅಭಿಪ್ರಾಯ ನಿಜವೇ? ಆಯುರ್ವೇದವು ಮಾಂಸಾಹಾರದ ವಿರೋಧಿಯೇ? ಎಂಬ ವಿಷಯವನ್ನು ಈ ಲೇಖನದಲ್ಲಿ ಅರ್ಥೈಸಿಕೊಳ್ಳೋಣ.

ಮೊಟ್ಟ ಮೊದಲನೆಯದಾಗಿ, ಆಯುರ್ವೇದವು ಮಾಂಸಾಹಾರದ ವಿರೋಧಿಯಲ್ಲ. ಹೌದು! ಆಯುರ್ವೇದದ ವಿಶೇಷವೇನೆಂದರೆ, ಅದು ಯಾವ ವಸ್ತುವಿನ ಬಳಕೆಯನ್ನೂ ನಿಷೇಧಿಸುವುದಿಲ್ಲ, ಮಾಂಸ, ಮದ್ಯ, ಮೈಥುನ ಇವೆಲ್ಲದರ ವಿಷಯಗಳನ್ನು ನಮಗೆ ಬಿಡಿಬಿಡಿಯಾಗಿ ತಿಳಿಸಿ ಹೇಳಿದೆ. ಯಾಕೆಂದರೆ, ಆಯುರ್ವೇದವು ಸರಿ ಮತ್ತು ತಪ್ಪುಗಳ ವಿವೇಚನೆಯನ್ನು ನೀಡುವ ಜ್ಞಾನದ ಹರಿವು. ಜಗತ್ತಿನಲ್ಲಿ ಇರುವ ಯಾವುದೇ ವಸ್ತುವನ್ನಾಗಲಿ ವಿಷಯವನ್ನಾಗಲಿ, ಇದು ತುಂಬಾ ಒಳ್ಳೆಯದು ಅಥವಾ ಇದು ಕೆಟ್ಟದ್ದು ಅಂತ ವಿಂಗಡಿಸಲು ಸಾಧ್ಯವಿಲ್ಲ, ಯಾಕೆಂದರೆ ಅದರ ಪರಿಣಾಮ ಅಥವಾ ದುಷ್ಪರಿಣಾಮವು ಅದನ್ನು ಬಳಸುವ ವ್ಯಕ್ತಿ ಮತ್ತು ವಿಧಾನದ ಮೇಲೆ ನಿರ್ಧಾರವಾಗುತ್ತದೆ. ಆಯುರ್ವೇದವು, ಯಾವುದೇ ವಸ್ತುವಾಗಲಿ ಅದನ್ನು ಅದರ ಗುಣ ಕರ್ಮಗಳನ್ನು ವಿವರಿಸಿ, ಅದನ್ನು ತೆಗೆದುಕೊಂಡಾಗ ಆಗುವ ಅನುಕೂಲ ಮತ್ತು ಅನಾನುಕೂಲಗಳನ್ನು ತಿಳಿಸಿಕೊಡುತ್ತದೆ. ಅದನ್ನು ಉಪಯೋಗಿಸುವುದು ಬಿಡುವುದು ವ್ಯಕ್ತಿಯ ವಿವೇಚನೆಗೆ ಬಿಟ್ಟಿದ್ದು. ಇದೇ ನಿಯಮವು ಮಾಂಸಾಹಾರಕ್ಕೂ ಅನ್ವಯಿಸುತ್ತದೆ.

ವಸ್ತುತಃ, ಮಾಂಸಾಹಾರವು ಜೀರ್ಣಕ್ಕೆ ಜಡವಾಗಿದ್ದು ಮಾನಸಿಕ ಸ್ತರದಲ್ಲಿ ಇದು ತಮಸ್ಸು ಮತ್ತು ರಜಸ್ಸನ್ನು ಹೆಚ್ಚಿಸುತ್ತದೆ. ಹಾಗಾಗಿ, ನಿಮಗೆ ಸಾತ್ವಿಕ ಬದುಕನ್ನು ನಡೆಸುವ ಚಿಂತನೆ ಇದ್ದರೆ ಮಾಂಸ ಸೇವನೆ ಪೂರಕವಲ್ಲ. ಅದೇ ರೀತಿ ಇದು ದೇಹಕ್ಕೆ ಪುಷ್ಟಿ ನೀಡುತ್ತದೆ. ದೇಹಕ್ಕೆ ಹೆಚ್ಚು ಶ್ರಮವಾಗುವಂಥ ಕೆಲಸವನ್ನು ಮಾಡುವವರಿಗೆ ಉತ್ತಮ ಆಹಾರ. ಒಟ್ಟಿನಲ್ಲಿ ನಿಮ್ಮ ಜೀವನದ ಗುರಿ, ಮಾನಸಿಕ ಸ್ಥಿತಿ ಹಾಗೂ ದೈಹಿಕ ಅವಶ್ಯಕತೆಗಳನ್ನು ನೋಡಿ ನಿಮಗೆ ಮಾಂಸಾಹಾರ ಸೂಕ್ತವೋ ಇಲ್ಲವೋ ಎಂದು ನಿರ್ಧರಿಸುವ ಸ್ವಾತಂತ್ರ್ಯವನ್ನು ಆಯುರ್ವೇದ ನಿಮಗೆ ನೀಡಿದೆ. ಹಾಗಾಗಿ ನೆನಪಿರಲಿ, ಆಯುರ್ವೇದವು ಎಲ್ಲೂ ಮಾಂಸಾಹಾರದ ಬಗ್ಗೆ ನಿಷೇಧವನ್ನು ಸಾಮಾನ್ಯವಾಗಿ ಹೇಳಿಲ್ಲ. ಸೇವನೆಯನ್ನು ಮಾಡುವಾಗ ಅಥವಾ ಮಾಡಲು ನಿರ್ಧರಿಸುವ ಮುನ್ನ ನಮಗೆ ಗಮನದಲ್ಲಿ ಇರಬೇಕಾದ ಕೆಲವು ವಿಷಯಗಳನ್ನು ಇಲ್ಲಿ ಹಂಚಿಕೊಳ್ಳುತ್ತೇನೆ.

ನಾನು ಆಗಲೇ ಹೇಳಿದ ಹಾಗೆ, ದೈಹಿಕ ಶ್ರಮವಿರುವವರು ಮಾಂಸಾಹಾರವನ್ನು ಯಥೇಚ್ಛವಾಗಿ ಸೇವಿಸಬಹುದು. ಆದರೆ, ದಿನಪೂರ್ತಿ ಮೈಬಗ್ಗಿಸಿ ಕೆಲಸ ಮಾಡ್ತಾರೆ ಅಂತ ಎಷ್ಟು ಬೇಕಾದರೂ/ಹೇಗೆ ಬೇಕಾದರೂ ತಿನ್ನಬಹುದು ಎಂದರ್ಥವಲ್ಲ. ಮಾಂಸ ಸೇವನೆಯ ಪ್ರಮಾಣವನ್ನು ನಿರ್ಧರಿಸುವ ಮೊದಲು ನಮ್ಮ ಜೀರ್ಣಶಕ್ತಿಯ ಅರಿವು ನಮಗೆ ಸಂಪೂರ್ಣವಾಗಿರಬೇಕು. ಅದು ಉತ್ತಮವಾಗಿದ್ದು, ಸಕಾಲಕ್ಕೆ ಹಸಿವೆಯಾಗಿ, ಮಲಮೂತ್ರದ ಪ್ರವೃತ್ತಿ ಆರೋಗ್ಯಕರವಾಗಿದ್ದಾಗ ಮಾತ್ರ ಮಾಂಸವನ್ನು ಸೇವಿಸುವುದು ಉತ್ತಮ. ಅದೇ ರೀತಿಯಾಗಿ ಮಾಂಸವು ಜೀರ್ಣಕ್ಕೆ ಜಡವಾಗಿರುವ ಕಾರಣ ಸದಾ ಬೆಳಗ್ಗೆ ಅಥವಾ ಮಧ್ಯಾಹ್ನದ ಊಟದ ಜತೆ ಇದನ್ನು ಸೇವಿಸುವುದು ಒಳ್ಳೆಯದು. ಏಕೆಂದರೆ, ದಿನದಲ್ಲಿ ದೇಹದ ಚಟುವಟಿಕೆಯು ಹೆಚ್ಚಾಗಿರುವುದರಿಂದ ಮಾಂಸವು ಸುಲಭವಾಗಿ ಜೀರ್ಣವಾಗುತ್ತದೆ. ಆದರೆ, ರಾತ್ರಿಯ ಊಟಕ್ಕೆ ಇದನ್ನು ಪದೇಪದೆ ಸೇವಿಸುವುದರಿಂದ ಅನೇಕ ಆರೋಗ್ಯದ ಸಮಸ್ಯೆಗಳು ಕಾಣಿಸಿಕೊಳ್ಳಬಹುದು.

ಮಾಂಸ ಸೇವಿಸುವಾಗ ನೆನಪಿಡಬೇಕಾದ ಮತ್ತೊಂದು ಮುಖ್ಯವಾದ ವಿಷಯವೆಂದರೆ ಮಾಂಸಾಹಾರದ ಸರಿಯಾದ ಸಂಯೋಜನೆ. ''ಮಾಂಸವನ್ನು ನೀವು ಹೇಗೆ ಸ್ವೀಕರಿಸ್ತೀರಾ?'' ಅಂತ ರೋಗಿಗಳನ್ನು ಕೇಳಿದಾಗ, ಆಹಾರದಲ್ಲಿ ಪ್ರಧಾನವಾಗಿ ಅವರು ಮಾಂಸವನ್ನೇ ಸೇವಿಸುತ್ತಿರುವುದನ್ನು ನಾವು ಸಾಮಾನ್ಯವಾಗಿ ಕಾಣುತ್ತೇವೆ. ಆದರೆ, ಆಯುರ್ವೇದ ಹೇಳುವುದೇನೆಂದರೆ, ನಾವು ಸೇವಿಸುವ ಆಹಾರವು ಸಂಪೂರ್ಣವಾಗಬೇಕಾದರೆ, ಆಹಾರದ ಬಹುಮುಖ್ಯ ಭಾಗವು ಏಕದಳ ಧಾನ್ಯಗಳಾಗಿರಬೇಕು. ಉದಾಹರಣೆಗೆ, ರಾಗಿ, ಜೋಳ, ಅಕ್ಕಿ, ಗೋಧಿ ಮುಂತಾದವು. ಹಾಗೆಯೇ, ಅದಕ್ಕಿಂತ ಸ್ವಲ್ಪ ಕಡಿಮೆ ಪ್ರಮಾಣದಷ್ಟು ದ್ವಿದಳ ಧಾನ್ಯಗಳಿರಬೇಕು. ಅಂದರೆ ಬೇಳೆಕಾಳುಗಳು. ಉದಾಹರಣೆಗೆ ಹೆಸರುಬೇಳೆ, ತೊಗರಿಬೇಳೆ, ಹುರುಳಿ ಇತ್ಯಾದಿ. ಮತ್ತೆ, ಇದಕ್ಕಿಂತಲೂ ಕಡಿಮೆ ಪ್ರಮಾಣದಲ್ಲಿ ಹಣ್ಣು ಮತ್ತು ತರಕಾರಿಗಳಿರಬೇಕು. ಈ ಪ್ರಮಾಣದ ಪ್ರಕಾರ, ಮಾಂಸವನ್ನು ನಾವು ಬೇಳೆ-ತರಕಾರಿಗಳ ಬದಲಾಗಿ ಉಪಯೋಗಿಸಬಹುದು. ಮಾಂಸಹಾರವನ್ನು ಸೇವಿಸುವಾಗ ಏಕದಳದಿಂದ ತಯಾರಿಸಿದ ಪದಾರ್ಥಗಳ ಜತೆಗೆ ಸೇವಿಸಬೇಕು. ಉದಾಹರಣೆಗೆ, ಅನ್ನ, ರೊಟ್ಟಿ, ಮುದ್ದೆ, ಚಪಾತಿಗಳ ಜತೆಗೆ ತೆಗೆದುಕೊಳ್ಳಬೇಕೇ ಹೊರತು ಕೇವಲ ಮಾಂಸ ಖಾದ್ಯಗಳನ್ನು ಸೇವಿಸುವುದು ಸಂಪೂರ್ಣ ಆಹಾರವಾಗುವುದಿಲ್ಲ.

ಇನ್ನು ಮಾಂಸ ಖಾದ್ಯಗಳನ್ನು ತಯಾರಿಸುವಾಗ ಆಯುರ್ವೇದ ಹೇಳುತ್ತದೆ– ಅದರಲ್ಲಿ ಹೆಚ್ಚಾಗಿ ಶುಂಠಿ, ಕಾಳು ಮೆಣಸು, ಜೀರಿಗೆ ಮತ್ತು ಬೆಳ್ಳುಳ್ಳಿಯನ್ನು ಕಡ್ಡಾಯವಾಗಿ ಬಳಸಲೇಬೇಕು. ಯಾಕೆಂದರೆ, ಮಾಂಸವು ಜೀರ್ಣಕ್ಕೆ ಜಡವಾಗಿರುವುದರಿಂದ ಮೇಲೆ ಹೇಳಿದ ದ್ರವ್ಯಗಳು ಅದನ್ನು ಸಂಪೂರ್ಣವಾಗಿ ಜೀರ್ಣ ಮಾಡಿಕೊಳ್ಳಲು ಸಹಾಯ ಮಾಡುತ್ತವೆ. ಆಯುರ್ವೇದ ನಮಗೆ ತಿಳಿಸಿಕೊಡುವ ಮತ್ತೊಂದು ವಿಷಯವೇನೆಂದರೆ ಮಾಂಸವು ಆಹಾರ ಪದಾರ್ಥವೇ ಆಗಿದ್ದರೂ ಎಲ್ಲರಿಗೂ ದಿನನಿತ್ಯ ಸೂಕ್ತವಲ್ಲ. ಯಾರಿಗೆ ಮಾಂಸಾಹಾರ ಸಾತ್ಮ್ಯವಾಗಿರುತ್ತದೆಯೋ ಅವರು ಜಾಂಗಲ ಮಾಂಸ– ಅಂದರೆ ಒಣಭೂಮಿಯ ಪ್ರಾಣಿಯ ಮಾಂಸವನ್ನು ಮಾತ್ರ ಯಥೇಚ್ಛವಾಗಿ ಬಳಸಬಹುದು. ಆದರೆ, ಯಾರಿಗೆ ಸಸ್ಯಜನ್ಯ ಆಹಾರದ ಬಳಕೆ ಹೆಚ್ಚು ದೇಹಕ್ಕೆ ಒಗ್ಗಿದೆಯೋ ಅವರು ಮಾಂಸಾಹಾರವನ್ನು ವಾರಕ್ಕೊಮ್ಮೆ ಅಥವಾ ತಿಂಗಳಿಗೆ ಎರಡು ಬಾರಿಯಂತೆ ಆಹಾರದಲ್ಲಿ, ಅದೂ ಮಧ್ಯಾಹ್ನದಲ್ಲಿ ಬಳಸುವುದು ಉತ್ತಮ.

ಈಗಿನ ಆಹಾರಪದ್ಧತಿಯ ಬಗ್ಗೆ ಚರ್ಚೆ ಮಾಡುವುದಾದರೆ, ಎಷ್ಟೋ ದಿನದ ಹಿಂದೆ ಕತ್ತರಿಸಿದ ಮಾಂಸವನ್ನು ಫ್ರೀಜರ್‌ನಲ್ಲಿ ಇಟ್ಟು ಸೇವಿಸುವುದನ್ನು ನಾವು ನೋಡಬಹುದು. ಆದರೆ, ಆಯುರ್ವೇದದ ಪ್ರಕಾರ ಈ ಅಭ್ಯಾಸವು ಅನಾರೋಗ್ಯಕರ. ಶಾಸ್ತ್ರ ಹೇಳುತ್ತದೆ– ಸೇವಿಸಲು ಯೋಗ್ಯವಾದ ಮಾಂಸವೆಂದರೆ, ಆಗ ತಾನೇ ಕತ್ತರಿಸಿದ, ಶುದ್ಧವಾದ, ಮಧ್ಯಮ ವಯಸ್ಸಿನ ಪ್ರಾಣಿಯ ಮಾಂಸ. ಅತಿ ಎಳೆಯದಾದ ಮತ್ತು ಅತಿ ವಯಸ್ಸಾದ ಪ್ರಾಣಿಗಳ ಮಾಂಸ ವರ್ಜ್ಯ. ಅಂತೆಯೇ, ಸಹಜವಾಗಿ ಮರಣ ಹೊಂದಿದ ಪ್ರಾಣಿಯ ಮಾಂಸವನ್ನು ಸೇವಿಸುವುದು ಆರೋಗ್ಯಕ್ಕೆ ಕೆಟ್ಟದ್ದು. ಹಾಗೆಯೇ, ಒಣಗಿದ ಮಾಂಸ, ಕೊಳೆತ ಮಾಂಸ, ಅತಿಯಾಗಿ ಕೊಬ್ಬಿದ ಪ್ರಾಣಿಯ ಮಾಂಸ ಸೇವಿಸಲು ಯೋಗ್ಯವಲ್ಲ. ನಿಮಗೆ ಮಾಂಸವನ್ನು ಸೇವಿಸಬೇಕಾದಾಗ, ಮಾರುಕಟ್ಟೆಗೆ ಹೋಗಿ ಖರೀದಿಸುವಾಗ, ಸ್ವತಃ ನೀವೇ ಆ ಪ್ರಾಣಿಯನ್ನು ಪರೀಕ್ಷಿಸಿ ಆರೋಗ್ಯವಾಗಿರುವುದನ್ನು ಕಂಡು, ನಮ್ಮೆದುರೇ ಅದನ್ನು ಬಳಸಲು ಯೋಗ್ಯವಾಗುವ ರೀತಿ ಸಂಸ್ಕರಿಸಿ ಕೊಡಲು ಹೇಳುವುದು ಉತ್ತಮ.

ಒಟ್ಟಾರೆ ಹೇಳಬೇಕಾದರೆ ಆಯುರ್ವೇದದಲ್ಲಿ ಮಾಂಸವು ಖಂಡಿತ ನಿಷೇಧವಾಗಿರುವ ವಸ್ತುವಲ್ಲ. ಅನೇಕ ಆಯುರ್ವೇದೀಯ ಔಷಧಿಗಳಲ್ಲಿ ಮತ್ತು ಪಥ್ಯದಲ್ಲಿ ಮಾಂಸದ ಬಳಕೆಯನ್ನು ನಾವು ಹೇರಳವಾಗಿ ಕಾಣಬಹುದು. ಆಯುರ್ವೇದ ಗ್ರಂಥಗಳಲ್ಲೂ ಮಾಂಸದಿಂದ ತಯಾರಿಸುವ ಅನೇಕ ಖಾದ್ಯಗಳ ಉಲ್ಲೇಖವಿದೆ. ಹಾಗಾಗಿ, ಮಾಂಸವನ್ನು ಬಳಸುವವರಿಗೆ ಆಯುರ್ವೇದ ಸೂಕ್ತವಲ್ಲ ಎಂಬ ತಪ್ಪು ಕಲ್ಪನೆಯನ್ನು ಬದಲಾಯಿಸಿಕೊಳ್ಳಬೇಕಾದ ಸಮಯವಿದು. ಆದರೆ, ಬಳಸುವ ಮುಂಚೆ ಅದರ ಗುಣಕರ್ಮಗಳ ಅರಿವು ನಮಗಿರಲಿ. ನಮ್ಮ ದೇಹದ ಬಲದ ಜ್ಞಾನವಿರಲಿ. ನಮ್ಮ ಅಗ್ನಿಯ ಕ್ಷಮತೆಯ ಅನುಭವ ನಮಗಿರಲಿ. ನಮ್ಮ ದೈಹಿಕ ಶ್ರಮದ ಮಾಪನೆಯಿರಲಿ. ಇದರ ಜತೆಗೆ, ಇದು ಯಾವ ಕಾಲ, ಕಾಲಕ್ಕೆ ತಕ್ಕಂತೆ ನಾನು ಎಷ್ಟು ಸೇವಿಸಬೇಕು ಎಂಬ ವಿವೇಚನೆ ಇಟ್ಟುಕೊಂಡು ನಾವು ಮಾಂಸವನ್ನು ಬಳಸಿದಾಗ, ಅದು ನಮ್ಮ ಆರೋಗ್ಯವನ್ನು ಹೆಚ್ಚಿಸುವುದರಲ್ಲಿ ಯಾವುದೇ ಸಂಶಯವಿಲ್ಲ, ಮಾತ್ರವಲ್ಲ, ನನ್ನ ಜೀವನದ ಉದ್ದೇಶಕ್ಕೆ ಮಾಂಸದ ಬಳಕೆ ಪೂರಕವೋ ಅಥವಾ ಮಾರಕವೋ ಎಂಬ ಚಿಂತನೆಯನ್ನು ಮಾಡಿ ಮಾಂಸವನ್ನು ಹಿತಮಿತವಾಗಿ ಬಳಸಿದಾಗ ಅದು ಆಯುರ್ವೇದ ತೋರಿದ ಪಥವೇ ಆಗಿಬಿಡುತ್ತದೆ!

ಕೃಷಿರಂಗ

ಬಸವರಾಜ ಶಿವಪ್ಪ ಗಿರಗಾಂವಿ

ತಾಂತ್ರಿಕ ಜ್ಞಾನದ ಕೊರತೆ

ಕೃಷಿ ಪ್ರಧಾನ ದೇಶವಾಗಿರುವ ಭಾರತದಲ್ಲಿ ಪ್ರತಿಯೊಂದು ಕ್ಷೇತ್ರದ ಬೆಳವಣಿಗೆಗೂ ಕೃಷಿಯೇ ಮೂಲಾಧಾರ. ಜನಸಂಖ್ಯಾಸ್ಫೋಟದಿಂದ ಬಳಲುತ್ತಿರುವ ನಮ್ಮ ದೇಶದಲ್ಲಿ ಪ್ರತಿಯೊಬ್ಬರಿಗೂ ನೌಕರಿ ದೊರೆಯುವುದು ಅಸಾಧ್ಯ. ಹಾಗಾಗಿ ಕೃಷಿ ಕ್ಷೇತ್ರವು ನಿರುದ್ಯೋಗಿಗಳ ಪಾಲಿಗೆ ಶಾಶ್ವತ ಉದ್ಯೋಗ ಸ್ಥಾನವಾಗಿ ಪರಿಣಮಿಸಿದೆ. ಕೃಷಿಯ ಗಂಧ-ಗಾಳಿ ಗೊತ್ತಿಲ್ಲದವರೂ ಇದರಲ್ಲಿ ತೊಡಗಿಸಿಕೊಳ್ಳುತ್ತಿರುವುದರಿಂದಾಗಿ ಅವೈಜ್ಞಾನಿಕ ಪದ್ಧತಿಗಳು ಬಳಕೆಯಾಗುತ್ತಿವೆ. ಇದರಿಂದಾಗಿ ಮಣ್ಣಿನ ಫಲವತ್ತತೆಯು ದಿನದಿಂದ ದಿನಕ್ಕೆ ಹಾಳಾಗುತ್ತಿರುವುದಲ್ಲದೆ ಇಳುವರಿಯೂ ಗಣನೀಯವಾಗಿ ಕುಸಿಯುತ್ತಿದೆ. 5,000 ವರ್ಷಗಳ ಇತಿಹಾಸವಿರುವ ಭಾರತದ ಕೃಷಿ ಕ್ಷೇತ್ರವು ತಾಂತ್ರಿಕ ಜ್ಞಾನದ ಕೊರತೆಯಿಂದಾಗಿ ಅಭಿವೃದ್ಧಿಯ ಬದಲಿಗೆ ಅವನತಿಯತ್ತ ಸಾಗುತ್ತಿದೆ.

ಸರಕಾರದಿಂದ ಯಾವುದೇ ನಿಯಂತ್ರಣವಿಲ್ಲದಿರುವುದರಿಂದ ಮನಸೋ ಇಚ್ಛೆ ರೀತಿಯಲ್ಲಿ ಕೃಷಿಕಾರ್ಯ ನಡೆಯುತ್ತಿದೆ. ಕೃಷಿವಲಯಕ್ಕೆ ಸಂಬಂಧಿಸಿ ವಿಶ್ವಾದ್ಯಂತ ಹಲವು ಸಂಶೋಧನೆಗಳಾಗುತ್ತಿದ್ದರೂ ಭಾರತದಲ್ಲಿ ಮಾತ್ರ ತಾಂತ್ರಿಕ ಅಳವಡಿಕೆಗಳು ಮತ್ತು ವೈಜ್ಞಾನಿಕ ತಳಹದಿ ಇಲ್ಲವಾಗುತ್ತಿದೆ. ಭೂಮಿ ತಯಾರಿ, ನಾಟಿ, ನಿರ್ವಹಣೆ, ಕೊಯ್ಲು ಮತ್ತು ಕೊಯ್ಲೋತ್ತರ ಚಟುವಟಿಕೆಗಳನ್ನು ಯಾವುದೇ ಮಾನದಂಡಗಳಿಲ್ಲದೆ ಮಾಡಲಾಗುತ್ತಿದೆ. ಇದು ಸರಿಯಲ್ಲ. ಇಂದಿನ ಬಹುತೇಕರು, ನೆರೆಹೊರೆಯ ರೈತರು ಕೈಗೊಳ್ಳುವ ಕೃಷಿ ವಿಧಾನಗಳನ್ನು ಅನುಸರಿಸುತ್ತಿದ್ದಾರೆಯೇ ವಿನಾ, ಅವು ವೈಜ್ಞಾನಿಕವಾಗಿವೆಯೋ ಇಲ್ಲವೋ ಎಂಬುದನ್ನು ಖಚಿತಪಡಿಸಿಕೊಳ್ಳುತ್ತಿಲ್ಲ. ಪ್ರತಿಯೊಂದು ಜಮೀನು, ಬೆಳೆ, ಹವಾಮಾನ ಮತ್ತು ನಿರ್ವಹಣಾ ವಿಧಾನಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತವೆ ಎಂಬ ಅರಿವು ಬಹಳಷ್ಟು ರೈತರಲ್ಲಿ ಇಲ್ಲದಿರುವುದು ದುರಂತ. ಇದರಿಂದ ದೇಶದ ಬಹಳಷ್ಟು ಕಡೆ ಕೃಷಿಕಾರ್ಯಕ್ಕೆ ಹಿನ್ನಡೆ ಒದಗಿರುವುದು ಸ್ಪಷ್ಟವಾಗಿದೆ. ಇದನ್ನು ಸರಿದಾರಿಗೆ ತರಲು ಕೃಷಿ ವಿಶ್ವವಿದ್ಯಾಲಯ ಮತ್ತು ಕೃಷಿ ಇಲಾಖೆ ಸಾರ್ವಜನಿಕವಾಗಿ ತಿಳಿವಳಿಕೆ ನೀಡುತ್ತಿವೆಯಾದರೂ ಫಲಿತಾಂಶವು ತೃಪ್ತಿದಾಯಕವಾಗಿಲ್ಲ.

ವಿಶ್ವಾದ್ಯಂತ ಸದ್ದು ಮಾಡುತ್ತಿರುವ ಕೃತಕ ಬುದ್ಧಿಮತ್ತೆ ಹಾಗೂ ಉಪಗ್ರಹಗಳ ಬಳಕೆಯನ್ನು ಇಂದಿನ ಕೃಷಿಯಲ್ಲಿ ಅಳವಡಿಸಿಕೊಳ್ಳುವುದು ಅತ್ಯಂತ ಅವಶ್ಯವಿದೆ. ಹಾಗಾದಾಗಲೇ ಭಾರತದ ಕೃಷಿಯು ಉಳಿಯುತ್ತದೆ, ಬೆಳೆದು ಸಮೃದ್ಧಿಯಾಗುತ್ತದೆ ಮತ್ತು ವಿಶ್ವಕ್ಕೆ ಮಾದರಿಯಾಗುತ್ತದೆ. ಸಮಶೀತೋಷ್ಣ ವಲಯದಲ್ಲಿರುವ ಭಾರತದಲ್ಲಿ, ಇತರ ದೇಶಗಳಿಗೆ ಹೋಲಿಸಿದಲ್ಲಿ ಕೃಷಿಗೆ ಪೂರಕವಾದ ನೈಸರ್ಗಿಕ ಸಂಪನ್ಮೂಲಗಳು ಹೇರಳವಾಗಿದ್ದರೂ ಅವುಗಳ ವೈಜ್ಞಾನಿಕ ಬಳಕೆಯು ಸಮರ್ಪಕವಾಗಿ ನಡೆಯುತ್ತಿಲ್ಲ. ಕೃಷಿಯಲ್ಲಿ ಮಾಡುವ ಪ್ರತಿಯೊಂದು ಕಾರ್ಯಗಳಲ್ಲಿ ಹಂಗಾಮು, ಸಮಯ, ಅವಧಿ, ಶಿಫಾರಸು, ಅವಶ್ಯಕತೆ, ಮಾಪನ ಮತ್ತು ಪ್ರಮಾಣ ಎಂಬ ಅಂಶಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಸದ್ಯ ಭಾರತದಲ್ಲಿ ಅನನುಭವಿ ನಿರುದ್ಯೋಗಿಗಳೇ ಕೃಷಿಕಾರ್ಯವನ್ನು ಕೈಗೊಳ್ಳುತ್ತಿರುವುದರಿಂದ ಈ ಮಾನದಂಡಗಳು 'ಆಟಕ್ಕುಂಟು ಲೆಕ್ಕಕ್ಕಿಲ್ಲ' ಎಂಬಂತಾಗಿವೆ.

ನಮ್ಮ ಪೂರ್ವಜರು ಜನ-ಜಾನುವಾರುಗಳಿಲ್ಲದೆ ಕೃಷಿಕಾರ್ಯಕ್ಕೆ ಕೈಹಚ್ಚುತ್ತಿರಲಿಲ್ಲ. ಕೃಷಿಗೆ ಪೂರಕವಾಗಿದ್ದ ಹೈನುಗಾರಿಕೆಗೆ ಮತ್ತು ಅದಕ್ಕೆ ಆಧಾರವಾಗಿರುವ ಪಶುಸಂಪತ್ತಿಗೆ ಅವರು ಅಪಾರ ಗೌರವವನ್ನು ನೀಡುತ್ತಿದ್ದರು. ಭೂಮಿಯಲ್ಲಿ ಬೀಜ ಬಿತ್ತುವುದು ಎಂದರೆ 'ಭೂತಾಯಿಯ ಉಡಿತುಂಬುವುದು' ಎಂದೇ ಅರ್ಥೈಸಲಾಗುತ್ತಿತ್ತು. ನಮ್ಮ ಪೂರ್ವಜರು ಅನಕ್ಷರಸ್ಥರಾಗಿದ್ದರೂ, ಕೃಷಿಯ ಸಮೃದ್ಧಿಗೆ ಅವಶ್ಯವಿರುವ ಮೂಲತತ್ತ್ವಗಳನ್ನು ಎಂದಿಗೂ ಬಿಟ್ಟುಕೊಡುತ್ತಿರಲಿಲ್ಲ, ರಸಗೊಬ್ಬರಗಳ ಪರಿಚಯವಿರದ ಆ ದಿನಮಾನಗಳಲ್ಲಿ, ಯಾವ ಹಂಗಾಮಿನಲ್ಲಿ ಯಾವ ಬೆಳೆಯನ್ನು ಪರಿಗಣಿಸಬೇಕು, ಭೂಮಿಯ ತಯಾರಿ ಮಾಡುವುದು ಹಾಗೂ ಅದರ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಹೇಗೆ, ನಾಟಿ ಬೀಜಗಳ ಆಯ್ಕೆ, ಬೀಜೋಪಚಾರ, ಬೆಳೆ ನಿರ್ವಹಣೆ ಹೇಗೆ ಎಂಬ ಅಂಶಗಳು ಸೇರಿದಂತೆ ಫಸಲಿನ ಸಮೃದ್ಧಿಗೆ ಅಗತ್ಯವಾದ ಅಂಶಗಳಿಗೆ ಅವರು ನಿರಂತರವಾಗಿ ಒತ್ತುಕೊಡುತ್ತಿದ್ದರು. ಇದರಿಂದಾಗಿ ಸಮೃದ್ಧ ಫಸಲು ಬರುತ್ತಿದ್ದುದರ ಜತೆಗೆ ಮನುಕುಲದ ಆರೋಗ್ಯವೂ ಉತ್ತಮವಾಗಿತ್ತು.

ಹಿಂದೆಲ್ಲಾ ಪ್ರತಿವರ್ಷದ ಬೇಸಗೆಯ ಅವಧಿಯಲ್ಲಿ 'ಮಾಗಿ ಉಳುಮೆ'ಯನ್ನು ಕಡ್ಡಾಯವಾಗಿ ಕೈಗೊಳ್ಳುತ್ತಿದ್ದುದರಿಂದ, ಬೀಜ ಮೊಳಕೆಯೊಡೆಯುವ ಸಂದರ್ಭದಲ್ಲಿ ಬರಬಹುದಾದ ಅನೇಕ ರೋಗಗಳು ನಾಶವಾಗುತ್ತಿದ್ದವು. ಸಮೃದ್ಧವಾಗಿ ಬೆಳೆದ ಗುಣಮಟ್ಟದ ಫಸಲಿನ ಆಯ್ದಭಾಗವನ್ನು ಮುಂದಿನ ವರ್ಷದ ಬಿತ್ತನೆಗಾಗಿ ವ್ಯವಸ್ಥಿತವಾಗಿ ಶೇಖರಿಸಿಡಲಾಗುತ್ತಿತ್ತು. ಬಾವಿ, ನದಿ ಮತ್ತು ಮಳೆನೀರು ಮಾತ್ರವೇ ಕೃಷಿಕಾರ್ಯಕ್ಕೆ ಬಳಕೆಯಾಗುತ್ತಿತ್ತು (ಈ ನೀರಿನಲ್ಲಿ ಖನಿಜಾಂಶಗಳು ಹೇರಳವಾಗಿರುತ್ತಿತ್ತು, ಕೃಷಿಯ ವೈರಿ ಎನಿಸಿದ 'ಫ್ಲೋರೈಡ್' ಅಂಶವು ಇರುತ್ತಿರಲಿಲ್ಲ). ಹಿಂದಿನವರ ಈ ಪರಿಪಾಠಗಳು ಸೇರಿದಂತೆ ಅನೇಕ ವೈಜ್ಞಾನಿಕ ಕ್ರಮಗಳು ಇಂದಿನ ಕೃಷಿ ಚಟುವಟಿಕೆಗಳಲ್ಲಿ ಮುಂದುವರಿಯಬೇಕಾಗಿವೆ.

ಇಲ್ಲಿ ಮತ್ತೊಂದು ಅಂಶವನ್ನೂ ಉಲ್ಲೇಖಿಸಬೇಕು. ಆಧುನಿಕ ಕೃಷಿಯ ಹೆಸರಿನಲ್ಲಿ ಮುಗ್ಧ ರೈತರನ್ನು ಗೊಂದಲಕ್ಕೆ ಈಡುಮಾಡಲಾಗುತ್ತಿದೆ. ತಿಳಿವಳಿಕೆಯ ಕೊರತೆಯಿಂದಾಗಿ ಇಂಥ ಕೆಲವರು ಭೂಮಿಯ ಫಲವತ್ತತೆಯನ್ನು ಸ್ವತಃ ಹಾಳುಗೆಡವುತ್ತಿದ್ದಾರೆ. ಆದ್ದರಿಂದ ಸರಕಾರವು ಮಣ್ಣು ಪರೀಕ್ಷೆಯನ್ನು ಕಡ್ಡಾಯಗೊಳಿಸಬೇಕು ಹಾಗೂ ಅದರ ಶಿಫಾರಸಿನಂತೆ ಮಾತ್ರವೇ ರಸಗೊಬ್ಬರದ ವಿತರಣೆಯಾಗುವಂತೆ ನೋಡಿಕೊಳ್ಳಬೇಕು. ನೀರಿನ ಮಿತಬಳಕೆಯ ಕುರಿತೂ ಜಾಗೃತಿಯಾಗಬೇಕು. ರಸಗೊಬ್ಬರಗಳ ಅನಿಯಮಿತ ಬಳಕೆಗಿಂತ ನೀರಿನ ಅನಿಯಮಿತ ಬಳಕೆಯಿಂದಲೇ ಮಣ್ಣಿನ ಫಲವತ್ತತೆಯು ಹಾಳಾಗುತ್ತದೆ ಎಂಬುದನ್ನು ಕೃಷಿಕರು ಅರ್ಥಮಾಡಿಕೊಳ್ಳಬೇಕು.

(ಲೇಖಕರು ಕೃಷಿ ತಜ್ಞರು ಹಾಗೂ ಸಹಾಯಕ ಮಹಾ ಪ್ರಬಂಧಕರು)

ಮಣಿಮಂಜರಿ ಎಂಬುದು ಪ್ರಾಮಾಣಿಕ ಕೃತಿ, ಅದರ ಬಗ್ಗೆ ಅಪಲಾಪ ಸಲ್ಲ...

ಪ್ರತಿಸ್ಪಂದನ

ವಿದ್ವಾನ್ ಹೃಷೀಕೇಶಾಚಾರ್ಯ ಮಠದ
vveditoped@gmail.com

ಯಾವುದೇ ಗ್ರಂಥವನ್ನು ಸೂಕ್ಷ್ಮವಾಗಿ ವಿಮರ್ಶೆ ಮಾಡದೇ, ಅದರ ಬಗ್ಗೆ ಟೀಕೆ ಮಾಡುವುದು ಪ್ರಜ್ಞಾವಂತರ ಲಕ್ಷಣವಲ್ಲ. ಸತ್ಯ ಯಾವತ್ತೂ ಶುದ್ಧವಾಗಿರುತ್ತದೆ, ಆದರೆ ಅದು ಅಂದವಾಗಿಯೇ ಇರಬೇಕೆಂದಿಲ್ಲ. ಅಂದವಾಗಿಲ್ಲ ಎಂಬ ಕಾರಣಕ್ಕೆ ಸತ್ಯವನ್ನು 'ಸತ್ಯವಲ್ಲ' ಎಂದು ಜರೆಯುವುದು ಸರಿಯಲ್ಲ. ಅದೇ ರೀತಿ, ಅಂದವಾಗಿ ಇರುವುದೆಲ್ಲವೂ ಸತ್ಯವೇ ಆಗಬೇಕೆಂದಿಲ್ಲ. ಅಂದವಾದ ಎಷ್ಟೋ ಮಾತುಗಳು ಸತ್ಯಕ್ಕೆ ದೂರವಾಗಿರುವುದು ಕಂಡಿದೆ.

ಸಾಕಷ್ಟು ಬುದ್ಧಿಜೀವಿಗಳು ಮನುಸ್ಮೃತಿ, ಭಗವದ್ಗೀತೆಯ ಅನೇಕ ವಿಚಾರಗಳನ್ನು ಸರಿಯಾಗಿ ತಿಳಿಯದೇ ಅಪಲಾಪ ಮಾಡುತ್ತಾರೆ. ಆದರೆ, ಒಬ್ಬರಿಗೆ ಇಷ್ಟವಾಗದ ಮಾತ್ರಕ್ಕೆ ಸತ್ಯ ಬದಲಾಗುವುದಿಲ್ಲ. ಶಂಕರರು ತಮ್ಮ ಭಾಷ್ಯದಲ್ಲಿ ವೇದಾಧಿಕಾರದ ಬಗ್ಗೆ ಹೇಳಿದ್ದನ್ನು ಎಷ್ಟೋ ಜನರು ಸಹಿಸದೇ, ಶಂಕರರನ್ನು ಟೀಕಿಸಿದ್ದಿದೆ. ಹಾಗಾಗಿ ಸತ್ಯನಿಷ್ಠರಾದವರು ಸತ್ಯ ಹೇಳುವುದಕ್ಕೆ ಮಹತ್ವ ಕೊಡುತ್ತಾರೆಯೇ ವಿನಾ, ಜನರ ಇಷ್ಟಾನಿಷ್ಟಗಳನ್ನು ಅನುಸರಿಸಿ ಸತ್ಯವನ್ನು ಮುಚ್ಚಿಡುವುದಿಲ್ಲ. ಭಾರತದ ಪ್ರಾಚೀನ ಗ್ರಂಥಕಾರರು ತಾವು ಕಂಡ ಸತ್ಯವನ್ನು ಅತ್ಯಂತ ಸ್ಪಷ್ಟವಾಗಿ ತಮ್ಮ ಗ್ರಂಥಗಳಲ್ಲಿ ದಾಖಲೆ ಮಾಡಿದ್ದಾರೆ. ಆ ಗ್ರಂಥಕಾರರ ಸಾಲಿನಲ್ಲಿ ಬರುವವರು ಶ್ರೀ ನಾರಾಯಣ ಪಂಡಿತಾಚಾರ್ಯರು.

13ನೇ ಶತಮಾನದಲ್ಲಿ ಬಂದ ನಾರಾಯಣ ಪಂಡಿತರು, ಶ್ರೀ ಮಧ್ವಾಚಾರ್ಯರ ಶಿಷ್ಯರಾದ ತ್ರಿವಿಕ್ರಮ ಪಂಡಿತಾಚಾರ್ಯರ ಮಕ್ಕಳು. ನಾನಾ ಶಾಸ್ತ್ರಗಳ ಪಾಂಡಿತ್ಯದ ಜತೆಗೆ ಅದ್ಭುತವಾದ ಕವಿತ್ವವನ್ನು ಹೊಂದಿದವರು. ಅನೇಕ ಶಾಸ್ತ್ರಗ್ರಂಥಗಳನ್ನೂ, ಐತಿಹಾಸಿಕ ವಿಷಯವನ್ನೊಳಗೊಂಡ ಕೃತಿಗಳನ್ನೂ ಬರೆದಿದ್ದಾರೆ. ಅವುಗಳಲ್ಲಿ 'ಮಣಿಮಂಜರಿ' ಎಂಬ ಗ್ರಂಥವೂ ಒಂದು. ಇದರಲ್ಲಿ ರಾಮಾಯಣ, ಮಹಾಭಾರತದ ಕಥೆಗಳ ಸಂಗ್ರಹದ ಜತೆಗೆ, ಮಹಾಭಾರತದ ನಂತರ ನಡೆದ ಕಥೆಗಳನ್ನು ಪ್ರಾಮಾಣಿಕವಾಗಿ ಸಂಗ್ರಹ ಮಾಡಿದ್ದಾರೆ.

ಇಂಥ 'ಮಣಿಮಂಜರಿ' ಗ್ರಂಥದ ಬಗ್ಗೆ 'ವಿಶ್ವವಾಣಿ' ಅಂಕಣಕಾರ ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅಂಕಣಕಾರರು ಶತಾವಧಾನಿ ಆರ್.ಗಣೇಶ್ ಅವರ ಮಾತಿನ ಮೇಲೆ ವಿಶ್ವಾಸವಿಟ್ಟು, ಈ ಗ್ರಂಥದ ಕೆಲ ಪುಟಗಳನ್ನು ತಿರುವಿಹಾಕಿ, ನವೆಂಬರ್ 16ರ ತಮ್ಮ ಅಂಕಣದಲ್ಲಿ 'ಮಣಿಮಂಜರಿ ಎಂಬ ಶುದ್ಧಾಂಗ ಅಪಲಾಪ' ಎಂಬ ಶೀರ್ಷಿಕೆಯಡಿ ಒಂದು ಲೇಖನವನ್ನು ಬರೆದಿದ್ದಾರೆ. ಇದರ ಕುರಿತು ಪ್ರತಿಕ್ರಿಯಿಸಲು ಬಯಸುವೆ.

ಅಂಕಣಕಾರರು ಈ ಲೇಖನದಲ್ಲಿ 'ಮಣಿಮಂಜರಿ' ಕೃತಿಯ ಬಗ್ಗೆ ಪರಿಚಯ ಮಾಡಿ, ನಂತರ ಅದರ ಕಟುವಾದ ಟೀಕೆಯನ್ನು ಮಾಡಿದ್ದಾರೆ. ಅನೇಕ ಆಕ್ಷೇಪಗಳನ್ನು ಎತ್ತಿದ್ದಾರೆ. ಕೊನೆಗೆ ಶಂಕರರ ಬಗ್ಗೆ ಬರೆದುಕೊಂಡಿದ್ದಾರೆ. ಇಲ್ಲಿ ಅವರು ಮಣಿಮಂಜರಿ ಗ್ರಂಥದ ಬಗ್ಗೆ ಬರೆಯುವ ಮುನ್ನ ಸ್ವಲ್ಪ ವಿಮರ್ಶೆ ಮಾಡಿಕೊಂಡಿದ್ದರೆ ಚೆನ್ನಾಗಿರುತ್ತಿತ್ತು. ಶತಾವಧಾನಿ ಗಣೇಶರು ಪ್ರಸಿದ್ಧ ವಿದ್ವಾಂಸರು, ಉತ್ತಮ ವಾಗ್ಮಿಗಳು, ಕವಿಗಳು. ಹಾಗಂತ ಅವರಾಡಿದ ಮಾತೆಲ್ಲವೂ ಸತ್ಯವೇ ಆಗಿರಬೇಕೆಂದಿಲ್ಲ. ಯಾಕೆಂದರೆ, ಗಣೇಶರು ಮಾತನಾಡುತ್ತಾ, ''ವಾಯುಸ್ತುತಿಯಲ್ಲಿ ಸ್ಮಾರ್ತ ಸಂಪ್ರದಾಯದ ನಿಂದನೆಗೇ ಶ್ರಮ ವಹಿಸಲಾಗಿದೆ'' ಎಂದು ಹೇಳಿದ್ದಾರೆ. ಇದು ಸತ್ಯಕ್ಕೆ ದೂರವಾದ ಮಾತು. ವಾಯುಸ್ತುತಿಯಲ್ಲಿ ಸ್ಮಾರ್ತರ ನಿಂದನೆ ಇಲ್ಲ. ಸಮಗ್ರ ಸ್ತೋತ್ರದಲ್ಲಿ, ವೇದಾದಿಗಳಲ್ಲಿ ವರ್ಣಿತವಾದ ವಾಯುದೇವರ ಸ್ತುತಿಯೇ ಇರುವುದು. ಹೀಗೆ ಗ್ರಂಥದಲ್ಲಿ ಏನಿದೆ ಎಂಬುದನ್ನು ಸರಿಯಾಗಿ ತಿಳಿಯದೆಯೇ ಗಣೇಶರು ಮಾತನಾಡಿದ್ದಾರೆ.

'ಮಣಿಮಂಜರಿ' ಎಂಬುದು ಪ್ರಾಮಾಣಿಕ ಕೃತಿ. ''ಶಂಕರರು ಹುಟ್ಟಿ 400 ವರ್ಷಗಳ ನಂತರ ಬಂದವರು ನಾರಾಯ ಪಂಡಿತರು. ಹಾಗಾಗಿ ಅವರು ಶಂಕರರ ಚರಿತ್ರೆಯ ಬಗ್ಗೆ ಸುಳ್ಳನ್ನೇ ಬರೆದಿದ್ದಾರೆ'' ಎಂಬ ಅಂಕಣಕಾರರ ವಾದವು ಸರಿಯಲ್ಲ. ಸತ್ಯವಾದ ಚರಿತ್ರೆಯನ್ನು ಹೇಳಲು ಸಮಕಾಲದಲ್ಲಿಯೇ ಇರಬೇಕೆಂದಿಲ್ಲ; ಭಿನ್ನಕಾಲದಲ್ಲಿ ಇರುವವರೂ ಸತ್ಯವಾದ ಇತಿಹಾಸವನ್ನು ಜಗತ್ತಿಗೆ ಕೊಟ್ಟಿರುವುದಿದೆ.

ಇನ್ನು, 'ಮಾಧವೀಯ ಶಂಕರವಿಜಯ'ವೂ ಶಂಕರರು ಹುಟ್ಟಿ 400 ವರ್ಷಗಳ ನಂತರ ರಚನೆಯಾದದ್ದು. 'ಗುರುವಂಶ ಕಾವ್ಯ'ವಂತೂ ಶಂಕರರು ಹುಟ್ಟಿ ಸುಮಾರು 800 ವರ್ಷಗಳ ನಂತರ ರಚನೆಯಾದ ಕೃತಿ. ಈ ಗ್ರಂಥಗಳು ಶಂಕರರ ಚರಿತ್ರೆಯನ್ನು ತಿಳಿಸುತ್ತವೆ ಎಂದು ಒಪ್ಪುವಾಗ, ನೂರಾರು ವರ್ಷಗಳ ಅಂತರವು ಸಮಸ್ಯೆಯಾಗುವುದಿಲ್ಲ. ಅದೇ 'ಮಣಿಮಂಜರಿ' ಬಗ್ಗೆ ಮಾತನಾಡುವಾಗ 400 ವರ್ಷಗಳ ಅಂತರ ಎಂಬುದು ಸಮಸ್ಯೆಯಾಗುತ್ತದೆ! ಇದೆಂಥ ದೃಷ್ಟಿಕೋನ?

'ಮಣಿಮಂಜರಿ'ಯ 6 ಮತ್ತು 7ನೇ ಸರ್ಗದಲ್ಲಿ ಶಂಕರರ ಜನನದ ಬಗ್ಗೆ ಬಂದಿದೆ. ಶಂಕರರು ಹುಟ್ಟುವಾಗ ಅವರ ತಂದೆ ಇರಲಿಲ್ಲ, ತಾಯಿ ವಿಧವೆ ಆಗಿದ್ದರು ಎಂದು ಹೇಳುವುದರ ಜತೆಗೆ, ಶಂಕರರು ಮಣಿಮಂತನ ಅವತಾರ ಎಂದು ಅದು ಹೇಳಿದೆ. ಇದೆಲ್ಲವೂ ಪ್ರಾಮಾಣಿಕವಾದ ವಿಚಾರ. ಮಣಿಮಂತನೇ ಶಂಕರರಾಗಿ ಹುಟ್ಟಿದ್ದು ಎಂಬುದನ್ನು 'ಗರುಡ ಪುರಾಣ'ದಲ್ಲಿ ಹೀಗೆ ಹೇಳಿದೆ– ''ಮಣಿಮಾನ್ನಾಮ ದೈತ್ಯಸ್ತು ಸಂಕರಾಖ್ಯೋ ಭವಿಷ್ಯತಿ'' (3–16–70). ಹಾಗಾಗಿ ಪಂಡಿತಾಚಾರ್ಯರು ಸುಳ್ಳು ಹೇಳಿದ್ದಲ್ಲ, ಪ್ರಾಮಾಣಿಕವಾದ ವಿಚಾರವನ್ನೇ ಹೇಳಿದ್ದಾರೆ ಎಂಬುದು ತಿಳಿಯುತ್ತದೆ. ಇನ್ನು ಶಂಕರರ ಜನನದ ಬಗ್ಗೆ ಪಂಡಿತಾಚಾರ್ಯರು ಸರಿಯಾಗಿ ಹೇಳಿದ್ದಾರೆ.

ವಸ್ತುತಃ ಈ ವಿಷಯವಾಗಿ ಶಂಕರರ ಚರಿತ್ರೆ ಹೇಳುವ ಗ್ರಂಥಗಳಲ್ಲಿಯೇ ಮತಭೇದವಿದೆ. ಶಂಕರರ ಚರಿತ್ರೆ ಹೇಳುವ 15ಕ್ಕೂ ಹೆಚ್ಚು ಗ್ರಂಥಗಳು ಇವೆ. 'ಆನಂದಗಿರಿ ಶಂಕರವಿಜಯ'ದಲ್ಲಿ, ''ಶಂಕರರ ತಾಯಿಯು ಗರ್ಭವತಿಯಾಗುವ ಮುನ್ನವೇ ಅವರ ಪತಿಯು ಅವರನ್ನು ತ್ಯಾಗ ಮಾಡಿದರು'' ಎಂದು ಹೇಳಲಾಗಿದೆ. ಅದೇ ಗ್ರಂಥದಲ್ಲಿ ಬರುವ, 'ವಿಶಿಷ್ಟಾಗರ್ಭಗೋಲಕಃ' ಎಂಬ ಪಾಠವನ್ನು ವಿಶಿಷ್ಟಾದ್ವೈತ ಮತದ ಪಂಡಿತರು ಉಲ್ಲೇಖ ಮಾಡಿ, ''ಪರಪುರುಷನಿಂದ ವಿಧವೆಯಲ್ಲಿ ಹುಟ್ಟಿದವರು'' ಎಂದು ಅರ್ಥವನ್ನು ಮಾಡಿದ್ದಾರೆ. ಪುರುಷೋತ್ತಮ ಭಾರತಿ ಎಂಬುವವರು ಬರೆದ 'ಶಂಕರ ವಿಜಯ'ದಲ್ಲಿ, ''ವಿಧವೆಯಾದ ಶಂಕರರ ತಾಯಿಯು, ಒಂದು ಕುಂಬಳಕಾಯಿ ಗಿಡದ ಮೂಲಕ ಪುತ್ರನನ್ನು ಪಡೆದಳು, ಊರಿನ ಜನರು ತಾಯಿ–ಮಗುವನ್ನು ದೂರ ಇಟ್ಟಿದ್ದರು'' ಎಂದು ಹೇಳಲಾಗಿದೆ. ಇದೆಲ್ಲಾ ಶಂಕರರ ಪರಂಪರೆಯವರೇ ಬರೆದ ಗ್ರಂಥಗಳು. ಅವರಲ್ಲಿ ಈ ಮತಭೇದವೇಕೆ?

ಜಗತ್ತಿನಲ್ಲಿ ಶ್ರೀರಾಮಚಂದ್ರ ದೇವರ ಚರಿತ್ರೆಗೆ ಸಂಬಂಧಪಟ್ಟಂತೆ ನೂರಾರು ಗ್ರಂಥಗಳು ಬಂದಿವೆ. ಅದರಲ್ಲಿ ಅನೇಕ ಕಥೆಗಳು ಭಿನ್ನವಾಗಿ ಬಂದಿವೆ. ಆದರೆ ಎಲ್ಲಿಯಾದರೂ ರಾಮದೇವರ ಜನನದ ಬಗ್ಗೆ, ಅವರ ತಂದೆ–ತಾಯಿಯ ಬಗ್ಗೆ ಭಿನ್ನಾಭಿಪ್ರಾಯ ಬಂದಿದೆಯೇ? ಇಲ್ಲ. ಅದೇ ರೀತಿ, ಶಂಕರರ ವಿಷಯದಲ್ಲಿಯೂ ಅವರು ಇಂಥ ತಂದೆ–ತಾಯಿಯರ ಮಗ ಎಂದು ಏಕರೂಪವಾಗಿ ಎಲ್ಲ ಚರಿತ್ರೆಗಳೂ ಹೇಳಬೇಕು. ಆದರೆ ಶಂಕರರ ಅನುಯಾಯಿಗಳೇ ಬರೆದ ಶಂಕರರ ಚರಿತ್ರೆಗಳಲ್ಲಿ, ಅವರ ಜನನದ ಬಗ್ಗೆ, ಅವರ ತಂದೆ–ತಾಯಿಯರ ಬಗ್ಗೆ ಭಿನ್ನಾಭಿಪ್ರಾಯ ಇದೆ. ಏಕರೂಪತೆ ಇಲ್ಲ. ಹೀಗೆ ಈ ಗ್ರಂಥಗಳ ತೌಲನಿಕ ಅಧ್ಯಯನ ನಡೆಸಿದರೆ, 'ಮಣಿಮಂಜರಿ' ಕೃತಿಯು ಹೇಳುವ ವಿಷಯವು ಪ್ರಾಮಾಣಿಕ ಎಂಬುದು ಸ್ಪಷ್ಟವಾಗುತ್ತದೆ.



ಇನ್ನು, 'ಮಾಧವೀಯ ಶಂಕರವಿಜಯ' ಕೃತಿಯಲ್ಲಿ, ''ಮಂಡನಮಿಶ್ರರು ವಿಶ್ವರೂಪಾಚಾರ್ಯರು ಇಬ್ಬರೂ ಒಬ್ಬರೇ'' ಎಂದು ಸುಳ್ಳು ಹೇಳಲಾಗಿದೆ. ''ಇವರಿಬ್ಬರೂ ಬೇರೆ ಬೇರೆ ವ್ಯಕ್ತಿಗಳು'' ಎಂದು ಶಾಂಕರಮತದ ಆನಂದಾನುಭವರು ತಮ್ಮ 'ನ್ಯಾಯಮುಕ್ತಾವಲೀ' ಗ್ರಂಥದಲ್ಲಿ ಹೇಳಿದ್ದಾರೆ. ''ವಿಶ್ವರೂಪ ಪ್ರಭಾಕರ ಗುರು ಮಂಡನ ವಾಚಸ್ಪತಿ ಸುಚರಿತಮಿಶ್ರೈಃ'' ಎಂದು ಇಬ್ಬರನ್ನೂ ಪ್ರತ್ಯೇಕವಾಗಿ ಉಲ್ಲೇಖಿಸಿದ್ದಾರೆ. ಹಾಗಾಗಿ, ಉಭಯಭಾರತಿ ಎಂಬುವರು ವಿಶ್ವರೂಪಾಚಾರ್ಯರ ಹೆಂಡತಿ. ಆದರೆ ಈ ಸತ್ಯವನ್ನು ಮುಚ್ಚಿಹಾಕಿ, ಅವರು 'ಮಂಡನಮಿಶ್ರರ ಹೆಂಡತಿ' ಎಂದು, ಯಾರದೋ ಹೆಂಡತಿಯನ್ನು ಇನ್ನಾರದೋ ಹೆಂಡತಿಯನ್ನಾಗಿ ಸುಳ್ಳು ಹೇಳಿದ್ದಾರೆ. ಈ ಪ್ರಸಂಗವನ್ನು 'ಮಣಿಮಂಜರಿ'ಯಲ್ಲಿ ಯಥಾವತ್ತಾಗಿ ತಿಳಿಸಲಾಗಿದೆ. ವಿಶ್ವರೂಪಾಚಾರ್ಯರ ಹೆಂಡತಿಯ ಜತೆಗೆ ಶಂಕರರು ಭೋಗ ಮಾಡಿದ ಬಗ್ಗೆ ಆಕ್ಷೇಪ ಮಾಡುವುದು ಸರಿಯಲ್ಲ. ಮಾಧವೀಯ ಶಂಕರವಿಜಯಾದಿಗಳಲ್ಲಿ ''ಪರಕಾಯ ಪ್ರವೇಶ ಮಾಡಿ ಶಂಕರರು ಕಾಮಶಾಸ್ತ್ರ ಅಧ್ಯಯನ ಮಾಡಿದರು'' ಎಂದು ಹೇಳುವಾಗ, ಅನೇಕ ಸ್ತ್ರೀಯರ ಭೋಗದ ಬಗ್ಗೆ ಬರೆದಿದ್ದಾರೆ. ಹೀಗೆ, ಒಂದಲ್ಲಾ ಒಂದು ರೀತಿಯಲ್ಲಿ ಶಂಕರರ ಸ್ತ್ರೀಭೋಗ ವಿಚಾರವನ್ನು ಅವರ ಚರಿತ್ರೆ ಗ್ರಂಥಗಳು ಹೇಳುತ್ತಿವೆ. ಉಭಯಭಾರತಿಯವರಿಗೆ 15 ವರ್ಷಕ್ಕಿಂತ ಚಿಕ್ಕ ವಯಸ್ಸಿನಲ್ಲೇ ಪ್ರೀತಿ–ಪ್ರೇಮ ಇದ್ದ ಬಗ್ಗೆ 'ಮಾಧವೀಯ ಶಂಕರವಿಜಯ' ತಿಳಿಸುತ್ತದೆ. ಹಾಗಾಗಿ, ತಮಗೆ ಇಷ್ಟವಾಗಿಲ್ಲ ಎಂಬ ಕಾರಣಕ್ಕೆ ಪ್ರಾಮಾಣಿಕವಾದ 'ಮಣಿಮಂಜರಿ' ಗ್ರಂಥವನ್ನು ದೂರುವುದು ಸರಿಯಲ್ಲ.

ಶಂಕರರು ಅದ್ವೈತ ಮತ ಪ್ರಚಾರ ಮಾಡಿದವರು, ಅನೇಕ ಗ್ರಂಥಗಳನ್ನು ರಚನೆ ಮಾಡಿದವರು. ಆದರೆ, ''ಇವತ್ತು 'ಶಂಕರರ ರಚನೆ' ಎಂದು ಹೇಳಲಾಗುವ ಎಲ್ಲಾ ಸ್ತೋತ್ರಗಳೂ ಶಂಕರರೇ ರಚನೆ ಮಾಡಿದ್ದಲ್ಲ; ಬೇರೆ ಯಾರೋ ರಚಿಸಿ ಶಂಕರರ ಹೆಸರಿನಿಂದ ಪ್ರಸಿದ್ಧ ಮಾಡಿದ್ದಾರೆ'' ಎಂದು ಸಂಶೋಧಕರು ಅಭಿಪ್ರಾಯಪಡುತ್ತಾರೆ.

ಶಂಕರರು ಬದರಿಯಲ್ಲಿ ನಾರಾಯಣನನ್ನು ಪ್ರತಿಷ್ಠೆ ಮಾಡಿದರು ಎಂಬುದು ಸತ್ಯಕ್ಕೆ ದೂರವಾದ ಮಾತು. ದ್ವಾಪರದಲ್ಲಿ ಪ್ರತಿಮೆ ಕಾಣದಂತೆ ಆದಾಗ, ಶಿವನು ಪುನಃ ಪ್ರತಿಷ್ಠೆ ಮಾಡುವುದಾಗಿ ಪುರಾಣದಲ್ಲಿ ಹೇಳಿದೆ. ಇನ್ನು 'ಶಂಕರವಿಜಯ'ದಲ್ಲಿ ಶಂಕರರು ಬದರಿಗೆ ಹೋದಾಗ ಅಲ್ಲಿ ನಾರಾಯಣನಿಗೆ ನಮಸ್ಕಾರ ಮಾಡಿದ್ದನ್ನು ವರ್ಣನೆ ಮಾಡಿದ್ದಾರೆ. ಜತೆಗೆ, ''ನಾರಾಯಣ ಪ್ರತೀಕವನ್ನು ನಾರದಕುಂಡದಿಂದ ಶಂಕರರು ತಂದರು'' ಎಂಬುದನ್ನು 'ಮಾಧವೀಯ ಶಂಕರವಿಜಯ'ದಲ್ಲಿ ಹೇಳಿಲ್ಲ. ಮುಖ್ಯವಾಗಿ ಶಂಕರರು ಆ ಬದರಿಯಲ್ಲಿ, ''ಹೇ ನಾರಾಯಣ, ತಂಪಾದ ನೀರಿನಲ್ಲಿ ಸ್ನಾನ ಅಶಕ್ಯ, ಬಿಸಿನೀರನ್ನು ನಮಗೆ ಸ್ನಾನಕ್ಕೆ ಕೊಡು'' ಎಂದು ಪ್ರಾರ್ಥನೆ ಮಾಡಿದ್ದಕ್ಕೆ ನಾರಾಯಣ ದೇವರು ಬಿಸಿನೀರಿನ ವ್ಯವಸ್ಥೆ ಮಾಡಿದರು ಎಂದು 'ಆನಂದಗಿರಿ ಶಂಕರವಿಜಯ'ದಲ್ಲಿ ಹೇಳಲಾಗಿದೆ. ''ಭೋ ನಾರಾಯಣ ಸ್ನಾನಾಯ ಉಷ್ಣೋದಕಂ ನೋ ದೇಹಿ ಇತಿ...'' ಎಂದು ಬರೆಯಲಾಗಿದೆ. ಸ್ನಾನವೇ ಅಶಕ್ಯವಾದಾಗ, ಮುಳುಗಿ ಪ್ರತಿಮೆ ತರುವುದು ಅಸಂಭವ. ಹಾಗಾಗಿ ಇದು ಪ್ರಸಿದ್ಧಿಗಾಗಿ ಕಟ್ಟಿದ ಕಥೆ. ಶಂಕರರ ಕೊನೆಯ ಅವಧಿಯಲ್ಲಿ ಭಗಂಧರ ರೋಗಪೀಡಿತರಾದ ಬಗ್ಗೆ 'ಮಾಧವೀಯ ಶಂಕರವಿಜಯ'ದಲ್ಲಿ ವಿಸ್ತಾರವಾಗಿ ಬಂದಿದೆ. ಹಾಗಾಗಿ ಅದೆಲ್ಲಾ 'ಮಣಿಮಂಜರಿ'ಯ ಕಲ್ಪನೆಯಲ್ಲ.

ಹೀಗೆ ಶಂಕರರು ಬಂದದ್ದೇ ಅದ್ವೈತವನ್ನು ಹೇಳುವುದಕ್ಕೆ. ಅದನ್ನು ತಮ್ಮ ಜೀವಿತಾವಧಿಯಲ್ಲಿ ವ್ಯಾಪಕವಾಗಿ ಪ್ರಚಾರ ಮಾಡಿದ್ದಾರೆ. ಅದ್ವೈತವನ್ನು ಒಪ್ಪದವರನ್ನು ಬೇರೆ ಬೇರೆ ಉಪಾಯಗಳಿಂದ ವಶಪಡಿಸಿಕೊಂಡು, ಎಲ್ಲರೂ ಅದ್ವೈತವನ್ನೇ ಒಪ್ಪುವಂತೆ ಮಾಡಿದ್ದಾರೆ. ಆ ಅದ್ವೈತವನ್ನು ಸಾಧಿಸುವುದಕ್ಕಾಗಿ, ಭಾರತೀಯರ ಅತ್ಯಂತ ಪವಿತ್ರವಾದ, ನಿತ್ಯವಾದ, ಅಪೌರುಷೇಯವಾದ ವೇದಗಳನ್ನು ಅನಿತ್ಯ ಎಂದು ಜರೆದಿದ್ದಾರೆ. ವೇದಗಳಿಗೆ ಅಭಾವವನ್ನು (ನಾಶವನ್ನು) ಹೇಳಿದ್ದಾರೆ. ಶಂಕರರು ಶಿವ–ಕೇಶವರ ಅಭೇದವನ್ನು ಸಾರಿದ್ದಲ್ಲ. ಶಿವ–ಕೇಶವ ಇದೆಲ್ಲಾ ಸತ್ಯವಲ್ಲ. ಶಿವ, ಗಣಪತಿ, ಸ್ಕಂದ, ವಿಷ್ಣು ಇದೆಲ್ಲವೂ ಕಲ್ಪಿತ. ಇದ್ಯಾವುದೂ ಸತ್ಯವಲ್ಲ. 'ಪರಬ್ರಹ್ಮ ಒಂದೇ ಸತ್ಯ' ಎಂದು ತಮ್ಮ ಅದ್ವೈತಕ್ಕೆ ಅನುಗುಣವಾಗಿ ಈ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಇದನ್ನು ಅವರ ಪರಂಪರೆಯವರು 'ಸಾಮರಸ್ಯ ಮಾಡಿದ್ದು' ಎಂದು ಸುಳ್ಳು ಹೇಳುತ್ತಾರೆ.

ಹೀಗೆ, ನಾರಾಯಣ ಪಂಡಿತಾಚಾರ್ಯರು 'ಮಣಿಮಂಜರಿ' ಗ್ರಂಥದಲ್ಲಿ ನೈಜ ಘಟನೆಯನ್ನು ತೆರೆದಿಟ್ಟಿದ್ದಾರೆ. ಅವರ ಪ್ರತಿಯೊಂದು ಮಾತುಗಳೂ ಪ್ರಾಮಾಣಿಕ. ಕೆಲವು ವಿಚಾರಗಳಿಗೆ ಇವತ್ತು ಪ್ರಮಾಣಗಳು ಅನುಪಲಬ್ಧವಾಗಿರಬಹುದು. ಹಾಗಂತ ಅವು ಅಪ್ರಾಮಾಣಿಕವಲ್ಲ. ಸತ್ಯವನ್ನು ಎಲ್ಲರಿಗೂ ಅರಗಿಸಿಕೊಳ್ಳಲು ಆಗದಿರುವುದು ಸತ್ಯನಿಷ್ಠರ ಸಮಸ್ಯೆಯಲ್ಲ. ಯಾರೂ ಯಾವುದೇ ರೀತಿಯ ವ್ಯಂಗ್ಯ ಮಾಡಿದರೂ, ಆಡಿಕೊಂಡರೂ ಸತ್ಯ ಬದಲಾಗದು. ನಾರಾಯಣ ಪಂಡಿತಾಚಾರ್ಯರು ಹಾಗೂ ಅವರ ತಂದೆ ತ್ರಿವಿಕ್ರಮ ಪಂಡಿತಾಚಾರ್ಯರು ತಮ್ಮ ಗ್ರಂಥಗಳಲ್ಲಿ ಸತ್ಯವನ್ನು ಹೇಳಿದ್ದಾರೆ. ಪ್ರಾಮಾಣಿಕ ವಿಚಾರಗಳನ್ನು ಸಮಾಜಕ್ಕೆ ಕೊಟ್ಟಿದ್ದಾರೆ. ಇದರ ಬಗ್ಗೆ ಕೆಲವರು ಸಾಮಾಜಿಕ ಜಾಲತಾಣದಲ್ಲಿ ಆಕ್ಷೇಪವನ್ನು ಎತ್ತಿದಾಗ, ಅನೇಕ ಲೇಖನಗಳ ಮೂಲಕ ಉತ್ತರ ಕೊಟ್ಟಿದೆ. ಈಗಲೂ ಉತ್ತರ ಕೊಡಲಾಗುತ್ತಿದೆ. ಅವರ ಗ್ರಂಥಗಳು ಪ್ರಾಮಾಣಿಕವಾದದ್ದು ಎಂಬುದು ನಮ್ಮ ನಿಲುವು. ಅದಕ್ಕೆ ಸಂಬಂಧಪಟ್ಟ ಅನೇಕ ದಾಖಲೆಗಳು ನಮ್ಮ ಬಳಿ ಇವೆ. ಹಾಗಾಗಿ, ''ಯಾವುದೇ ಮಾಧ್ಯಮದಲ್ಲಿ, ಯಾವುದೇ ರೀತಿಯಲ್ಲಿ ಈ ಗ್ರಂಥಗಳ ಬಗ್ಗೆ ಆಕ್ಷೇಪ ಬಂದರೂ, ಅವುಗಳಿಗೆ ಉತ್ತರ ಕೊಡುವುದಕ್ಕೆ ಸಿದ್ಧ'' ಎಂದು ಈ ಮೂಲಕ ತಿಳಿಸುತ್ತಿದ್ದೇವೆ. ಭಾರತದ ಪ್ರಾಚೀನವಾದ ಪ್ರಾಮಾಣಿಕ ಗ್ರಂಥಗಳ ಬಗ್ಗೆ ಅಪಲಾಪ ಮಾಡುವುದು ಸರಿಯಲ್ಲ...

(ಲೇಖಕರು ಅಧ್ಯಾತ್ಮ ಚಿಂತಕರು)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 212

ಸಮಾಚಾರ ಸಣ್ಣದಲ್ಲ

ವಾಲ್ಮಾರ್ಟ್ ಒಳಉಡುಪು ಗಣೇಶ ಚಿತ್ರಕ್ಕೆ ಆಕ್ಷೇಪ

ಬೆಂಟೊನ್‌ವಿಲ್ಲೆ: ಅಮೆರಿಕದ ಬಹುರಾಷ್ಟ್ರೀಯ ಮಾರಾಟ ಸಂಸ್ಥೆ 'ವಾಲ್ಮಾರ್ಟ್' ಹಳೆಯ ಚಾಳಿಯನ್ನೇ ಮುಂದುವರಿಸಿದೆ. ಹಿಂದೂ ದೇವರ(ಗಣಪತಿ) ಚಿತ್ರವನ್ನು 74 ರೀತಿಯ ಒಳಉಡುಪುಗಳ(ಪುರುಷರ ಚಡ್ಡಿ) ಮೇಲೆ ಮುದ್ರಿಸಿ ಮಾರಾಟಕ್ಕಿಟ್ಟಿದೆ. ಇದರ ವಿರುದ್ಧ ಹಿಂದೂಗಳು ಆಕ್ರೋಶ ಹೊರಹಾಕಿ ಪ್ರತಿಭಟನೆ ನಡೆಸಿದರು. ದೇಗುಲ, ಮನೆಗಳಲ್ಲಿ, ಯಾವುದೇ ಕಾರ್ಯದ ಆರಂಭದಲ್ಲಿ ಗಣೇಶನಿಗೆ ಆದ್ಯತೆಯ ಪೂಜೆ. ಅಂತಹ ಗಣೇಶನ ಚಿತ್ರವನ್ನು ಒಳಉಡುಪುಗಳಿಗೆ ಮುದ್ರಿಸಿರುವುದು ಅಕ್ಷಮ್ಯ. ವಾಲ್‌ಮಾರ್ಟ್ ನಡೆ ಅನುಚಿತ ಎಂದು ಟೀಕಿಸಿದ್ದಾರೆ.

ಭಾರತ ನಂಟು ರಕ್ಷಣೆಗೆ ಟ್ರುಡೊ ವಿಫಲ: ಕೆನಡಾ

ಟೊರಾಂಟೊ: ಭಾರತ ಸ್ನೇಹಶೀಲ ರಾಷ್ಟ್ರ. ಆ ದೇಶದ ಜತೆಗಿನ ಉತ್ತಮ ಬಾಂಧವ್ಯ ನಿಭಾಯಿಸುವಲ್ಲಿ ಪ್ರಧಾನಿ ಜಸ್ಟಿನ್ ಟ್ರುಡೊ ವಿಫಲರಾಗಿದ್ದಾರೆ ಎಂದು ಕೆನಡಾ ಪ್ರಜೆಗಳಲ್ಲಿ ಶೇ.39ರಷ್ಟು ಮಂದಿ ಅಭಿಪ್ರಾಯಪಟ್ಟಿದ್ದಾರೆ. ಏಷ್ಯಾ-ಪೆಸಿಫಿಕ್ ಫೌಂಡೇಷನ್ ಆಫ್ ಕೆನಡಾ ಸಮೀಕ್ಷೆ ನಡೆಸಿದ್ದು, ಪ್ರಧಾನಿ ನರೇಂದ್ರ ಮೋದಿ ಅವರ ಅವಧಿಯಲ್ಲಿ ಎರಡೂ ದೇಶಗಳ ನಡುವಿನ ಬಾಂಧವ್ಯ ಉತ್ತಮಪಡಿಸಿಕೊಳ್ಳಲು ಹೆಚ್ಚಿನ ಅವಕಾಶಗಳಿವೆ ಎಂದು ಶೇ.34 ಮಂದಿ ಹೇಳಿದ್ದಾರೆ. ಪ್ರಧಾನಿ ಟ್ರುಡೊ ಅವಧಿಯಲ್ಲಿ ಕೆನಡಾ-ಭಾರತ ಸಂಬಂಧದಲ್ಲಿ ಸ್ವಲ್ಪವೂ ವೃದ್ಧಿ ಕಾಣಿಸಿಲ್ಲ ಎಂದು ಶೇ.39 ಮಂದಿ ಬೇಸರ ವ್ಯಕ್ತಪಡಿಸಿದ್ದಾರೆ. ಶೇ.32 ಮಂದಿ ಮಾತ್ರ ಕೆನಡಾ ಸರಕಾರ ಭಾರತದ ಜತೆಗಿನ ರಾಜತಾಂತ್ರಿಕ ಬಿಕ್ಕಟ್ಟಿನ ಅಂಶಗಳನ್ನು ಸಮರ್ಥವಾಗಿ ನಿಭಾಯಿಸಿದೆ ಎಂದಿದ್ದಾರೆ.

ದೆಹಲಿ ಎಕ್ಯುಐ 161: ನಿರ್ಬಂಧಗಳು ಸಡಿಲ

ದೆಹಲಿ: ದೆಹಲಿ ಮತ್ತು ರಾಷ್ಟ್ರ ರಾಜಧಾನಿ ಪ್ರದೇಶ (ಎನ್‌ಸಿಆರ್)ದಲ್ಲಿ ಗಾಳಿಯ ಗುಣಮಟ್ಟದಲ್ಲಿ ಸುಧಾರಣೆ ಕಂಡುಬಂದಿರುವುದರಿಂದ ಶುಕ್ರವಾರ 'ಜಿಆರ್‌ಎಪಿ-4' ನಿಯಮದಡಿ ವಿಧಿಸಲಾಗಿದ್ದ ನಿರ್ಬಂಧಗಳನ್ನು ಸಡಿಸಲಾಗಿದೆ. ವಾಯು ಗುಣಮಟ್ಟ ಸೂಚ್ಯಂಕ(ಎಕ್ಯುಐ) ಶುಕ್ರವಾರ 161ರಲ್ಲಿ ದಾಖಲಾಗಿದೆ. ಹಾಗಾಗಿ, ಜಿಆರ್‌ಎಪಿ-4ರ ನಿರ್ಬಂಧ ಸಡಿಲಿಸಲು ಅನುಮತಿ ನೀಡಲಾಗಿದೆ ಎಂದಿರುವ ಸುಪ್ರೀಂ ಕೋರ್ಟ್, ಏರ್ ಕ್ವಾಲಿಟಿ ಇಂಡೆಕ್ಸ್(ಎಕ್ಯುಐ) ಮತ್ತೇನಾದರೂ 400ರ ಮಟ್ಟ ದಾಟಿದರೆ ತಕ್ಷಣವೇ ಜಿಆರ್‌ಎಪಿ-4 ಜಾರಿಗೊಳಿಸಬೇಕು ಎಂದೂ ಹೇಳಿದೆ.

ಐಐಟಿ-ಮದ್ರಾಸ್, ರೈಲ್ವೆ, ಸ್ಟಾರ್ಟಪ್ 'ಟಿಯುಟಿಆರ್' ಜಂಟಿ ಮೊದಲ ಪ್ರಯೋಗ

ವಿಶಿಷ್ಟ ಹೈಪರ್‌ಲೂಪ್ ಸಾರಿಗೆ ವ್ಯವಸ್ಥೆಯತ್ತ ಭಾರತೀಯ ರೈಲ್ವೆ

ದೆಹಲಿ: ಭಾರತೀಯ ರೈಲ್ವೆ ಕಳೆದ ಕೆಲ ವರ್ಷಗಳಲ್ಲಿ ಬಹಳಷ್ಟು ಸುಧಾರಣೆ ಕಂಡಿದ್ದು, ಲಾಭದ ಹಾದಿಗೂ ಮರಳಿದೆ. ಜತೆಗೆ ವೇಗದ ವಂದೇ ಭಾರತ್ ರೈಲು ಸಂಚಾರ ಮತ್ತು ಆನ್‌ಲೈನ್ ಸೇವೆಗಳ ಮೂಲಕ ಪ್ರಗತಿಯ ಹಾದಿಯಲ್ಲಿ ಮುನ್ನಡೆಯುತ್ತಿದೆ. ಈಗ ಮತ್ತೊಂದು ವಿಭಾಗದಲ್ಲಿ ಹೊಸ ಸಾಧನೆಯತ್ತ ದಾಪುಗಾಲಿಡಲು ಸಜ್ಜಾಗುತ್ತಿದೆ.

ಗಂಟೆಗೆ 1100 ಕಿಮೀ ವೇಗದಲ್ಲಿ ಚಲಿಸಬಲ್ಲ ಹೈಪರ್ ಲೂಪ್ ಟ್ಯೂಬ್ ರೈಲ್ವೆ ಸೇವೆಗೆ ಮುನ್ನಡಿ ಇಡಲು ಪ್ರಯೋಗಕ್ಕೆ ಸಿದ್ಧವಾಗಿದೆ. ದೇಶದಲ್ಲೇ ಮೊದಲ ಬಾರಿಗೆ ಹೈಪರ್‌ಲೂಪ್ ರೈಲ್ವೆ ಪ್ರಯೋಗಕ್ಕೆ ತಮಿಳುನಾಡಿನಲ್ಲಿ ವೇದಿಕೆ ಸಿದ್ಧವಾಗಿದೆ.

ಐಐಟಿ ಮದ್ರಾಸ್‌ನ ರೈಲ್ವೆ ಟೀಂ ದೇಶದ ಮೊದಲ ಹೈಪರ್‌ಲೂಪ್ ರೈಲ್ವೆ ಸೇವೆಯ ಮೊದಲ ಹಂತವಾಗಿ ಪರೀಕ್ಷಾರ್ಥ ಪ್ರಯೋಗಕ್ಕೆ ಮದ್ರಾಸ್‌ನ ಥೈಯೂರ್‌ನಲ್ಲಿನ ಐಐಟಿ-ಎಂ ಡಿಸ್ಕವರಿ ಕ್ಯಾಂಪಸ್‌ನಲ್ಲಿ 451 ಮೀಟರ್ ಉದ್ದದ ಟ್ಯೂಬರ್ ಟ್ರ್ಯಾಕ್ ಸಿದ್ಧಪಡಿಸಿದೆ.

ಅಚ್ಚರಿ ಹಾಗೂ ಹೆಮ್ಮೆಯ ಈ ವಿಚಾರವನ್ನು 'ಎಕ್ಸ್' ಖಾತೆಯಲ್ಲಿ ವಿಡಿಯೊ ಸಮೇತ ಶುಕ್ರವಾರ ಹಂಚಿಕೊಂಡಿರುವ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, 'ಭಾರತದ ಪ್ರಪ್ರಥಮ ಹೈಪರ್‌ಲೂಪ್ ಸಾರಿಗೆ ಸೇವೆ ಆರಂಭದ ಮೊದಲ ಹೆಜ್ಜೆಯಾಗಿ ಟೆಸ್ಟ್ ಟ್ರ್ಯಾಕ್ ಸಿದ್ಧವಾಗಿದೆ. ಸದ್ಯವೇ ಪರೀಕ್ಷೆ ನಡೆಯಲಿದೆ' ಎಂದಿದ್ದಾರೆ.

'ಇದು ದೇಶದ ಭವಿಷ್ಯದ ಭೂಮಟ್ಟದ ತ್ವರಿತಗತಿ ಸಂಚಾರ ಸಾರಿಗೆ ಸೇವೆ' ಎಂದೂ ಬಣ್ಣಿಸಿರುವ ಸಚಿವ ಅಶ್ವಿನಿ ವೈಷ್ಣವ್, ಇದನ್ನು ಸಿದ್ಧಪಡಿಸಿದ ದೇಶದ ಪ್ರತಿಷ್ಠಿತ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ-ಮದ್ರಾಸ್'(ಐಐಟಿ-ಎಂ) ಉನ್ನತ ಶಿಕ್ಷಣ ಸಂಸ್ಥೆಯ 'ಆವಿಷ್ಕಾರ್ ಹೈಪರ್‌ಲೂಪ್ ಟೀಂ' ಮತ್ತು ಸ್ಟಾರ್ಟ್‌ಅಪ್ ಕಂಪನಿ 'ಟಿಯುಟಿಆರ್'ನ ಯುವಪ್ರತಿಭೆಗಳನ್ನು ಬಹಳವಾಗಿ ಪ್ರಶಂಸಿಸಿದ್ದಾರೆ. ನೇತೃತ್ವ ವಹಿಸಿರುವ ಭಾರತೀಯ ರೈಲ್ವೆಯ ಪ್ರಯತ್ನವನ್ನೂ ಶ್ಲಾಘಿಸಿದ್ದಾರೆ.

ಮದ್ರಾಸ್‌ನಲ್ಲಿ ಹೈಪರ್‌ಲೋಪ್ 410 ಮೀ. ಅಭಿವೃದ್ಧಿಪಡಿಸಿದ ಐಐಟಿ-ಎಂ ಟ್ರೈನ್ ಟೀಂ.

ಕೃತಕ ಬುದ್ಧಿಮತ್ತೆ(ಎಐ) ವಿನ್ಯಾಸಗೊಳಿಸಿರುವ ಭವಿಷ್ಯದ ಹೈಪರ್‌ಲೂಪ್ ರೈಲು ಸಂಚಾರದ ಕಾಲ್ಪನಿಕ ಚಿತ್ರ.

ಭಾರತದ ಪ್ರಥಮ ಹೈಪರ್‌ಲೂಪ್

ಭಾರತದ ಪ್ರಥಮ ಹೈಪರ್ ಲೂಪ್ ರೈಲು ಸಂಚಾರ ದೇಶದ ವಾಣಿಜ್ಯ ರಾಜಧಾನಿ ಇರುವ ಮಹಾರಾಷ್ಟ್ರದಲ್ಲಿ ನಡೆಯಲಿದೆ. ಮುಂಬೈ-ಪುಣೆ ಮಧ್ಯದ 150 ಕಿಮೀ ಮಾರ್ಗದಲ್ಲಿ ಮೊಟ್ಟಮೊದಲು ಹೈಪರ್ ಲೂಪ್ ಸೇವೆ ಆರಂಭಿಸಲು ಭಾರತೀಯ ರೈಲ್ವೆ ಯೋಜಿಸಿದೆ. ಯೋಜನೆ ಕಾರ್ಯಗತವಾದಲ್ಲಿ ಮುಂಬೈ-ಪುಣೆ ಮಧ್ಯೆ ಪ್ರಯಾಣದ ಅವಧಿಗೆ 25 ನಿಮಿಷಕ್ಕೆ ತಗ್ಗಲಿದೆ.

- ಮದ್ರಾಸ್ ಐಐಟಿ ಆವಿಷ್ಕಾರ್ ಕ್ಯಾಂಪಸ್‌ನಲ್ಲಿ ಹೈಪರ್‌ಲೂಪ್‌ನ ಮೊದಲ 410 ಮೀ ಕೊಳವೆ ಮಾರ್ಗ ಸಿದ್ಧ
- ಹೊಸ ಪ್ರಯೋಗ ಬಗ್ಗೆ ವಿಡಿಯೊ ಸಮೇತ ಮಾಹಿತಿ ಹಂಚಿಕೊಂಡು ಸಂಭ್ರಮಿಸಿರುವ ಸಚಿವ ಅಶ್ವಿನಿ ವೈಷ್ಣವ್

3 ಶಕ್ತಿಗಳ ಜಂಟಿ ಪ್ರಯತ್ನ!

ಭಾರತೀಯ ರೈಲ್ವೆ ನೇತೃತ್ವದಲ್ಲಿ 'ಐಐಟಿ-ಎಂ'ನ ಆವಿಷ್ಕಾರ್ ಹೈಪರ್‌ಲೂಪ್ ಟೀಂ ಮತ್ತು 'ಟಿಯುಟಿಆರ್' ಸ್ಟಾರ್ಟ್‌ಅಪ್ ಕಂಪನಿ ಮದ್ರಾಸ್‌ನ ಥೈಯೂರ್‌ನಲ್ಲಿರುವ ಕಾಲೇಜ್ ಕ್ಯಾಂಪಸ್ ನಲ್ಲಿಯೇ 410 ಮೀ. ಉದ್ದದ ಹೈಪರ್‌ಲೂಪ್ ಟ್ಯೂಬ್ ಟೆಸ್ಟ್ ಟ್ರ್ಯಾಕ್ ಅನ್ನು ಸಿದ್ಧಪಡಿಸಿವೆ. ಇದು 3 ಸಂಸ್ಥೆಗಳ ಪ್ರತಿಭೆಗಳ ಜಂಟಿ ಪ್ರಯತ್ನವಾಗಿದೆ.

ಹೈಪರ್‌ಲೂಪ್ ಸಾರಿಗೆ ವೈಶಿಷ್ಟ್ಯ!

ಪ್ರಯಾಣಿಕ ಮತ್ತು ಸರಕು ಸಾಗಣೆ ರೈಲು ಗಾಡಿಗಳು ಜೋಡಿ ಹಳಿಗಳ ಮೇಲೆ ಸಾಗುತ್ತವೆ. ಆದರೆ, ಹೈಪರ್ ಲೂಪ್ ರೈಲು ನಿರ್ವಾತದ ಕೊಳವೆ ಮಾರ್ಗದಲ್ಲಿ ಸಾಗುತ್ತದೆ. ಯಾವುದೇ ಅಡೆತಡೆ ಇಲ್ಲದಿರುವುದರಿಂದ ಗಂಟೆಗೆ 1100 ಕಿಮೀ ವೇಗದಲ್ಲಿ ಸಾಗಬಲ್ಲ ಸಾಮರ್ಥ್ಯ ಹೈಪರ್‌ಲೂಪ್ ರೈಲಿನದ್ದಾಗಿದೆ. ಪಾಡ್ಸ್ ಆಕಾರದ ವಿಶೇಷ ವಿನ್ಯಾಸದ ಬೋಗಿಗಳಲ್ಲಿ ಕನಿಷ್ಠ 24 ಗರಿಷ್ಠ 28 ಪ್ರಯಾಣಿಕರ ಆಸನಗಳಿರುತ್ತವೆ. ವಿದ್ಯುದಯಸ್ಕಾಂತೀಯ ಪರಿಣಾಮದಿಂದ ಗಾಳಿಯಲ್ಲಿ ಭಾರೀ ಒತ್ತಡ ಉಂಟಾಗಿ ಪಾಡ್ ಕ್ಯಾಬಿನ್‌ಗಳ ಅತಿವೇಗದಲ್ಲಿ ಸಂಚಾರಕ್ಕೆ ಕಾರಣವಾಗುತ್ತವೆ. ವಿಶ್ವದ ಮೊಟ್ಟಮೊದಲ ಹೈಪರ್‌ಲೂಪ್ ರೈಲ್ವೆ ವ್ಯವಸ್ಥೆ ಅಬುಧಾಬಿ-ದುಬೈ ನಡುವೆ ಆರಂಭಗೊಳ್ಳುವ ನಿರೀಕ್ಷೆ ಇದೆ. ಹೈಪರ್‌ಲೂಪ್ ಸಾರಿಗೆ ಸಂಚಾರದ ಪರಿಕಲ್ಪನೆ 'ಎಕ್ಸ್' ಮತ್ತು ವಿದ್ಯುಚ್ಚಾಲಿತ ಕಾರು 'ಟೆಸ್ಲಾ' ಕಂಪನಿ ಮಾಲೀಕ, ವಿಶ್ವದ ಸಿರಿವಂತ ಉದ್ಯಮಿ ಎಲಾನ್ ಮಸ್ಕ್ ಅವರದ್ದಾಗಿದೆ.

ಫೋಟೊ ಭಾರತೀಯ ರೈಲ್ವೆಯ ನೇತೃತ್ವದಲ್ಲಿ 'ಐಐಟಿ-ಎಂ'ನ ಆವಿಷ್ಕಾರ್ ಹೈಪರ್‌ಲೂಪ್ ಟೀಂ ಮತ್ತು 'ಟಿಯುಟಿಆರ್' ಸ್ಟಾರ್ಟ್‌ಅಪ್ ಕಂಪನಿ ಮದ್ರಾಸ್‌ನ ಥೈಯೂರ್‌ನಲ್ಲಿ ಸಿದ್ಧಪಡಿಸಿರುವ 410 ಮೀ. ಉದ್ದದ ಹೈಪರ್ ಲೂಪ್ ಟ್ಯೂಬ್ ಟೆಸ್ಟ್ ಟ್ರ್ಯಾಕ್.

1,015 ಕಡೆ ಟೋಲ್ ಪ್ಲಾಜಾ ನಿರ್ವಹಣೆ

ರಾ.ಹೆ ಶುಲ್ಕ ಸಂಗ್ರಹ ದುಪ್ಪಟ್ಟು

ದೆಹಲಿ: ಕಳೆದ ಐದು ವರ್ಷಗಳಲ್ಲಿ ಭಾರತದ ರಾಷ್ಟ್ರೀಯ ಹೆದ್ದಾರಿ ಮತ್ತು ಎಕ್ಸ್‌ಪ್ರೆಸ್ ವೇಗಳಲ್ಲಿ ಟೋಲ್(ಶುಲ್ಕ) ಸಂಗ್ರಹ ಪ್ರಮಾಣ ದುಪ್ಪಟ್ಟಾಗಿದೆ. 2019-20ರ ಹಣಕಾಸು ವರ್ಷದಲ್ಲಿ 27,503 ಕೋಟಿ ರು.ಗಳಷ್ಟಿದ್ದ ಶುಲ್ಕ ಸಂಗ್ರಹ ಪ್ರಮಾಣ, 2023-24ರ ವೇಳೆಗೆ 56,882 ಕೋಟಿ ರು.ಗಳಿಗೆ ಹೆಚ್ಚಳವಾಗಿದೆ ಎಂದು ಹೆದ್ದಾರಿ-ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ಹೆದ್ದಾರಿ ಶುಲ್ಕ ಸಂಗ್ರಹದ ವಾರ್ಷಿಕ ಆದಾಯ ಕುರಿತ ಪ್ರಶ್ನೆಗಳಿಗೆ ರಾಜ್ಯಸಭೆಯಲ್ಲಿ ಶುಕ್ರವಾರ ಉತ್ತರಿಸಿದ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ, ದೇಶದಲ್ಲಿನ 1.50 ಲಕ್ಷ ಕಿ.ಮೀ. ಉದ್ದದ ಹೆದ್ದಾರಿಗಳಲ್ಲಿ 70 ಸಾವಿರ ಕಿ.ಮೀ. ರಾಷ್ಟ್ರೀಯ ಹೆದ್ದಾರಿಗಳ ನಿರ್ವಹಣೆಯನ್ನು ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದಡಿ ಬರುವ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ(ಎನ್‌ಎಚ್‌ಎಐ) ನಡೆಸುತ್ತದೆ. ರಾಷ್ಟ್ರೀಯ ಹೆದ್ದಾರಿ ಶುಲ್ಕ ನಿಯಮಗಳು-2008ರ ಅನುಸಾರ ಶುಲ್ಕ ಸಂಗ್ರಹಿಸಲಾಗುತ್ತದೆ. ಪ್ರಸ್ತುತ, 45,000 ಕಿಮೀ ರಾಷ್ಟ್ರೀಯ ಹೆದ್ದಾರಿ ಮತ್ತು ಎಕ್ಸ್‌ಪ್ರೆಸ್ ವೇಗಳಲ್ಲಿ 1,015 ಟೋಲ್ ಪ್ಲಾಜಾಗಳಲ್ಲಿ ಶುಲ್ಕ ಸಂಗ್ರಹಿಸಲಾಗುತ್ತದೆ ಎಂದು ಮಾಹಿತಿ ನೀಡಿದರು. ಕರೋನಾ ನಂತರದ ವರ್ಷಗಳಲ್ಲಿ ನಿಧಾ ನಗತಿಯಲ್ಲಿ ಶುಲ್ಕ ಸಂಗ್ರಹದಲ್ಲಿ ಹೆಚ್ಚಳವಾ ಗುತ್ತಾ ಬಂದಿದೆ. 2021ರ ಫೆ.16ರಿಂದ ಜಾರಿಗೆ ಬರುವಂತೆ ಹೆದ್ದಾರಿ ಟೋಲ್ ಪ್ಲಾಜಾಗಳಲ್ಲಿ 'ಫಾಸ್ಟ್ಯಾಗ್' ಲೇನ್‌ಗಳಾಗಿ ಪರಿವರ್ತಿಸಲಾಗಿದ್ದರಿಂದ ಶುಲ್ಕ ಸಂಗ್ರಹಣೆ ಯಲ್ಲಿ ಬಹಳಷ್ಟು ಸುಧಾರಣೆಯಾಗಿದೆ. ಅಲ್ಲದೆ, ವಾಹನ ಸಂಚಾರ ಪ್ರಮಾಣದ ವೃದ್ಧಿ, ಶುಲ್ಕದ ಪ್ರಮಾಣದಲ್ಲಿನ ಪರಿಷ್ಕರಣೆ ಮತ್ತು ಹೊಸದಾಗಿ ಶುಲ್ಕ ಸಂಗ್ರಹಣೆಗೆ ರಸ್ತೆಗಳ ಸೇರ್ಪಡೆ, ಶುಲ್ಕ ಸಂಗ್ರಹ ರಸ್ತೆಗಳ ಉದ್ದ ಹೆಚ್ಚಳ ಮೊದಲಾದ ಕ್ರಮಗಳಿಂದಲೂ ಶುಲ್ಕ ಸಂಗ್ರಹ ಪ್ರಮಾಣ ವರ್ಷಂಪ್ರತಿ ಹೆಚ್ಚುತ್ತಾ ಹೋಗುತ್ತಿದೆ ಎಂದು ಸಚಿವರು ಸದನಕ್ಕೆ ವಿವರಿಸಿದರು.

ರಾ.ಹೆದ್ದಾರಿ ಶುಲ್ಕ ಸಂಗ್ರಹ

ವರ್ಷ	ಶುಲ್ಕ ಕೋಟಿ ರು.
2019-20	27,503
2020-21	27,926
2021-22	33,928
2022-23	48,032
2023-24	56,882

- 2019-20ರಲ್ಲಿ 27,503 ಕೋಟಿ ರು.
- 2023-24ರಲ್ಲಿ 56,882 ಕೋಟಿ ರು.
- 45,000 ಕಿಮೀಗಳಷ್ಟು ರಾಷ್ಟ್ರೀಯ ಹೆದ್ದಾರಿ

ಸುಧಾಮೂರ್ತಿಗೆ ರಾಜ್ಯಸಭೆ ಪ್ರಶಂಸೆ

ದೆಹಲಿ: ಲೇಖಕಿ, ಶಿಕ್ಷಣತಜ್ಞೆ ಮತ್ತು ಸಮಾಜ ಸೇವಾ ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಿರುವ, ಪದ್ಮಶ್ರೀ ಪುರಸ್ಕೃತರೂ, ಸಂಸದೆಯೂ ಆದ 73 ವರ್ಷದ ಸುಧಾ ಮೂರ್ತಿ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ 'ಮಾತೃಹೃದಯಿ' ಎಂದು ಸಚಿವರಿಂದ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ನಾಗರಿಕ ವಿಮಾನಯಾನ ಸಚಿವ ಕಿಂಜರಾಪು ರಾಮಮೋಹನ್ ನಾಯ್ಡು ಅವರು ಭಾರತೀಯ ವಾಯುಯಾನ ತಿದ್ದುಪಡಿ ವಿಧೇಯಕವನ್ನು ರಾಜ್ಯಸಭೆಯಲ್ಲಿ ಮಂಡಿಸಿ ಮಾತನಾಡುತ್ತಿದ್ದಾಗ ಗಂಟಲು ಒಣಗಿದೆ. ಸಚಿವರು ಸದನದ ಸಿಬ್ಬಂದಿಗೆ ನೀರು ಕೇಳಿದ್ದಾರೆ. ಸಿಬ್ಬಂದಿ ನೀರು ತರುವಷ್ಟರಲ್ಲಿಯೇ ಸುಧಾ ಮೂರ್ತಿ ಆಸನದಿಂದ ಎದ್ದು ಸಚಿವ ನಾಯ್ಡು ಅವರ ಬಳಿ ಸಾಗಿ ತಮ್ಮ ಬಳಿ ಇದ್ದ ನೀರಿನ ಬಾಟಲಿಯನ್ನು ನೀಡಿದ್ದಾರೆ. ಸಕಾಲಿಕ ಸಹಾಯ ಕಂಡು ಭಾವುಕರಾದ ಸಚಿವ ರಾಮಮೋಹನ್ ನಾಯ್ಡು, 'ನೀವೊಬ್ಬರು ಮಾತೃಹೃದಯಿ' ಎಂದು ಪ್ರಶಂಸಿಸಿ ಕೈಮುಗಿದು ಧನ್ಯವಾದ ಹೇಳಿದ್ದಾರೆ. 'ನೀವು ನಮಗೆಲ್ಲ ತಾಯಿ ಸ್ವರೂಪರು. ನಿಮ್ಮ ಮಾತೃತ್ವ ಭಾವವನ್ನು ಸದಾ ಸಾಬೀತುಪಡಿಸುತ್ತಲೇ ಇರುತ್ತೀರಿ' ಎಂದು ಪ್ರಶಂಸಿಸಿದ್ದಾರೆ. ಸುಧಾಮೂರ್ತಿ ಅವರ ಸಕಾಲಿಕ ಹಾಗೂ ಸರಳ ನಡೆಗೆ ರಾಜ್ಯಸಭೆಯಲ್ಲಿ ಹಾಜರಿದ್ದ ಸದಸ್ಯರೆಲ್ಲರೂ ಚಪ್ಪಾಳೆ ತಟ್ಟಿ ಮೆಚ್ಚುಗೆ ಸೂಚಿಸಿದ್ದಾರೆ.

C2C ADVANCED SYSTEMS LIMITED
(Formerly known as C2C ADVANCED SYSTEMS PRIVATE LIMITED)
CIN:U72200KA2018PLC110361
Registered office:NO 86, Wings of Eagles, S S Commercial EstateVarthur Road, Nagavarapalya, C V Raman Nagar,Bangalore, Karnataka, India, 560093

E-mail ID: Compliance@c2c-as.com **Website:** www.c2c-as.com

NOTICE OF THE 7TH ANNUAL GENERAL MEETING OF THE COMPANY AND E-VOTING

NOTICE is hereby given that the7th(Seventh) Annual General Meeting (AGM) of the Members of **C2C Advanced Systems Limited(Formerly known as C2C Advanced Systems Private Limited)**be held on **Saturday, December 28, 2024 at 03:00 P.M.** through Video Conferencing ("VC") / Other Audio Visual Means ("OAVM") to transact the Ordinary and Special Businesses as set out in the notice of 7thAGM. Thevenue of the meeting shall be deemed to the Registered Office of the Company i.e. NO 86, Wings of Eagles, S S Commercial EstateVarthur Road, Nagavarapalya, C V Raman Nagar, Bangalore, Karnataka, India, 560093

In accordance with the General Circular No. 14/2020 dated April 08, 2020, Circular No. 17/2020 dated April 13, 2020 and Circular No. 20/2020 dated May 05, 2020 and Circular No. 02/2021 dated January 13, 2021 and Circular No. 21/2021 dated December 14, 2021 and 02/2022 dated May 05, 2022, 10/2022 dated December 28, 2022 and latest being 09/2023 dated September 25, 2023 ("MCA Circulars") and Circular no. SEBI/HO/CFD/CMD1/CIR/P/2020/79 dated May 12, 2020 Circular No. SEBI/HO/CFD/CMD2/CIR/P/2021/11 dated January 15, 2021, Circular No. SEBI/HO/CFD/ CMD2/ CIR/P/2022/62 dated May 13, 2022, SEBI/ HO/CRD/PoD-2/P/CIR/2023/4 dated January 05, 2023 and Circular No. SEBI/HO/CFD/CFD-PoD-2/P/ CIR/2023/167 dated October 07, 2023 issued by the Securities Exchange Board of India ("SEBI Circular") the Annual General Meeting through VC/ OAVM, the Notice of AGM along with Annual Report 2023-24is being sent through electronic mode to those Members whose email addresses are registered with the Company/ Depositories. Member may note that Notice and Annual Report 2023-24will be uploaded on the website of the Company at www.c2c-as.com, website of NSE Limited at www.nseindia.com

In light of the MCA Circulars, the shareholders whether holding equity shares in demat form or physical form and who have not submitted their email addresses and in consequence to whom the notice of 7thAGM and Annual Report 2023-24 could not be serviced, may temporarily get their e-mail addresses registered by following the procedure given below:

1. In case shares are held in physical mode, please provide Folio No., Name of shareholder, scanned copy of the share certificate (front and back), PAN (self-attested scanned copy of PAN card), AADHAR (self-attested scanned copy of Aadhar Card) by email to Compliance@c2c-as.com
2. In case shares are held in demat mode, please provide DPID-CLID (16 digit DPID + CLID or 16 digit beneficiary ID), Name, client master or copy of Consolidated Account statement, PAN (self-attested scanned copy of PAN card), AADHAR (self-attested scanned copy of Aadhar Card) to Compliance@c2c-as.com
3. Alternatively member may send an e-mail request toinstameet@linkintime.co.in for obtaining User ID and Password by proving the details mentioned in Point (1) or (2) as the case may be.

Post successful registration of the e-mail address, the shareholder would get soft copies of notice of 7thAGM and Annual Report 2023-24and the procedure for e-voting along with the user-id and the password to enable e-voting for 7thAGM. In case of any queries, shareholder may write to the Company at Compliance@c2c-as.comShareholders are requested to register/ update their Email Ids with their Depository Participant(s) with whom they maintain their demat accounts if shares are held in dematerialized mode by submitting the requisite documents.

Members whose names are recorded in the Register of Members or in the Register of Beneficial Owners maintained by the Depositories as on**Saturday,December 21, 2024** shall only be entitled to avail the facility of remote e-voting as well as e-voting on the Annual General Meeting.

Pursuant to the provisions of Section 108 of the Companies Act, 2013 read with Rules made thereunder (as amended) and Regulation 44 of SEBI (LODR) Regulations, 2015 (as amended) and above-mentionedMCA Circulars, the Company is providing facility of remote e-voting and e-voting on the date of the AGM to its Members in respect of the businesses to be transacted at the AGM. For this purpose, the Company has entered into an agreement with Linkin time India Private Limited, for facilitating voting through electronic means.

The remote e-voting will commence on 9.00 a.m. on Wednesday, December 25, 2024 and will end on 5:00 P.M. on Friday, December 27, 2024. During this period, the members of the Company holding shares as on Cut-off date may cast their vote electronically (Remote E-Voting). Members may note that

a) the remote e-voting module shall be disabled by Linkin time India Private Limited after the aforesaid date and time for voting and once the vote on a resolution is cast by the member, the member shall not be allowed to change it subsequently;
b) the facility of e-voting shall be made available at the7thAGM; and
c) the members who have cast their vote by remote e-voting prior to the 7thAGM may also attend the 7thAGM but shall not be entitled to cast their vote again.

Detailed procedure for remote e-voting/ e-voting is provided in the Notice of the 7thAnnual General Meeting.

Any person, who acquires shares of the Company and become member of the Company after dispatch of the Notice of AGM and holding shares as on the cut-off date i.e. Saturday, December 21, 2024,are requested to refer to the Notice of AGM for the process to be adopted for obtaining the USER ID and Password for casting the vote.

In case of any queries for e-voting, send a request at instameet@linkintime.co.inMembers may also contact Mr. Manjeet Singh, Company Secretary of the Company by writing an e-mail toCompliance@c2c-as.comfor any further clarification.

Members can attend and participate in the Annual General Meeting through VC/OAVM facility. The instructions for joining the Annual General Meeting through VC/OAVM are provided in the Notice of the Annual General Meeting. In case the shareholders/members have any queries or issues regarding participation in the AGM, you can write an email to instameet@linkintime.co.inor Call: - Tel: 022 – 4918 6000. Members attending the meeting through VC/OAVM shall be counted for the purposes of reckoning the quorum under Section 103 of the Companies Act, 2013.
For,C2C Advanced Systems Limited
(Formerly Known as C2C Advanced Systems Private Limited)
Sd/-

Lakshmi Chandra

Managing Director
DIN:07436752

Place: Bangalore
Date: December 06, 2024

ಉ.ಪ್ರ. ಹೆದ್ದಾರಿ; 3 ಪ್ರತ್ಯೇಕ ಅಪಘಾತಗಳಲ್ಲಿ 18 ಸಾವು

ಲಖನೌ: ಉತ್ತರ ಪ್ರದೇಶದಲ್ಲಿ ಶುಕ್ರವಾರ ಒಂದೇ ದಿನ ಎಕ್ಸ್‌ಪ್ರೆಸ್ ವೇ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ 3 ಪ್ರತ್ಯೇಕ ಅಪಘಾತಗಳಾಗಿದ್ದು, ಒಟ್ಟು 18 ಮಂದಿ ದುರ್ಮರಣಕ್ಕೀಡಾಗಿದ್ದಾರೆ.

ಕನೌಜ್ ಬಳಿ ಆಗ್ರಾ-ಲಖನೌ ಎಕ್ಸ್‌ಪ್ರೆಸ್ ವೇನಲ್ಲಿ ಸ್ಲೀಪರ್‌ಕೋಚ್ ಬಸ್ ಅತಿವೇಗವಾಗಿ ಸಾಗಿ ಬಂದು ಡಿವೈಡರ್ ಮಧ್ಯದ ಗಿಡಗಳಿಗೆ ನೀರು ಹಾಕುತ್ತಿದ್ದ ಟ್ಯಾಂಕರ್ ಲಾರಿಗೆ ಡಿಕ್ಕಿ ಹೊಡೆದ ಪರಿಣಾಮ ಬಸ್‌ನ ಮುಂಬದಿ ನಜ್ಜುಗುಜ್ಜಾಗಿದ್ದು, 8 ಮಂದಿ ಸಾವನ್ನಪ್ಪಿದ್ದಾರೆ. 38 ಪ್ರಯಾಣಿಕರು ಗಾಯಗೊಂಡಿದ್ದಾರೆ. ಸ್ಥಳದಲ್ಲಿದ್ದ ಜನರು ಬಸ್‌ನ ಕಿಟಕಿ ಗಾಜು ಒಡೆದು ಗಾಯಾಳು ಪ್ರಯಾಣಿಕರನ್ನು ಹೊರಗೆ ಕರೆತಂದು ರಕ್ಷಿಸಿದ್ದಾರೆ. ಬಳಿಕ ಆಂಬ್ಯುಲೆನ್ಸ್‌ನಲ್ಲಿ ಆಸ್ಪತ್ರೆಗೆ ಮುಟ್ಟಿಸಿದ್ದಾರೆ. ಎಕ್ಸ್‌ಪ್ರೆಸ್ ವೇನಲ್ಲಿ ಗಂಟೆಗೆ 120-140 ಕಿ.ಮೀ ವೇಗದಲ್ಲಿ ವಾಹನಗಳನ್ನು ಓಡಿಸುವುದರಿಂದೇ ಅಪಘಾತಗಳಾಗುತ್ತಿವೆ ಎನ್ನಲಾಗಿದೆ.

ಮತ್ತೆರಡು ಕಡೆ, ಚಿತ್ರಕೂಟ ಮತ್ತು ಪಿಲಿಭಿತ್‌ನಲ್ಲಿನ ಹೆದ್ದಾರಿಗಳಲ್ಲಿ ನಡೆದ ಎರಡು ಪ್ರತ್ಯೇಕ ಕಾರು ಅಪಘಾತಗಳಲ್ಲಿ 12 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಎರಡು ಅಪಘಾತಗಳಲ್ಲೂ ತಲಾ 6 ಮಂದಿ ಸಾವನ್ನಪ್ಪಿ, 10ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಪ್ರಯಾಗರಾಜ್‌ನಲ್ಲಿ ಗಂಗಾನದಿಯಲ್ಲಿ ಚಿತಾಭಸ್ಮ ವಿಸರ್ಜಿಸಿ ಬರುತ್ತಿದ್ದ ಛತ್ತರ್‌ಪುರ ಕುಟುಂಬದ 6 ಜನರು ಚಿತ್ರಕೂಟದಲ್ಲಿನ ಅಪಘಾತದಲ್ಲಿ ಸಾವನ್ನಪ್ಪಿದ್ದಾರೆ. ಉತ್ತರಾಖಂಡದ ಕುಟುಂಬವೊಂದು ಮಗಳ 4ನೇ ಜನ್ಮದಿನ ಆಚರಿಸಿ ಪಿಲಿಭಿತ್‌ನಿಂದ ಹಿಂದಿರುಗುತ್ತಿದ್ದಾಗ ಕಾರು ಹಳ್ಳಕ್ಕೆ ಬಿದ್ದು 6 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ.

1,500 ಮಂದಿಗೆ ನಕಲಿ ವೈದ್ಯ ಪದವಿ: 13 ವಂಚಕರ ಬಂಧನ

ಗಾಂಧಿನಗರ: ಎಂಟು-ಹತ್ತನೇ ತರಗತಿಯನ್ನಷ್ಟೇ ಓದಿದವರಿಗೆ 70 ಸಾವಿರ ರು.ಗೆ ನಕಲಿ ಬಿಇಎಂಎಸ್ ಪದವಿ ಪ್ರಮಾಣ ಪತ್ರ ನೀಡಿ 1500ಕ್ಕೂ ಅಧಿಕ ನಕಲಿ ವೈದ್ಯರನ್ನು ಸೃಷ್ಟಿಸಿದ್ದ ಮೂವರು ವಂಚಕರನ್ನು ಗುಜರಾತ್‌ನ ಸೂರತ್ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ. ನಕಲಿ ವೈದ್ಯಕೀಯ ಪದವಿ ಪಡೆದು ಆಸ್ಪತ್ರೆಯನ್ನೂ ನಡೆಸುತ್ತಿದ್ದ 10 ನಕಲಿ ವೈದ್ಯರನ್ನೂ ಬಂಧಿಸಲಾಗಿದೆ. ಉಳಿದ ನಕಲಿ ವೈದ್ಯರಿಗಾಗಿ ರಾಜ್ಯಾದ್ಯಂತ ಶೋಧ ಆರಂಭಗೊಂಡಿದೆ.

ಸೂರತ್‌ನ ಮೂವರು ವಂಚಕರು, 'ಬೋರ್ಡ್ ಆಫ್ ಎಲೆಕ್ಟ್ರೋ ಹೋಮಿಯೋಪತಿಕ್ ಮೆಡಿಸಿನ್' ಹೆಸರಲ್ಲಿ ಸಂಸ್ಥೆ ತೆರೆದು 'ಬ್ಯಾಚುಲರ್ ಆಫ್ ಎಲೆಕ್ಟ್ರೋ-ಹೋಮಿಯೋಪತಿ ಮೆಡಿಸಿನ್ ಮತ್ತು ಸರ್ಜರಿ'(ಬಿಇಎಂಎಸ್) ಹೆಸರಲ್ಲಿ ನಕಲಿ ವೈದ್ಯಕೀಯ ಪದವಿ ಪ್ರಮಾಣಪತ್ರಗಳನ್ನು 70 ಸಾವಿರ ರು. ನೀಡಿದವರಿಗೆಲ್ಲಾ ಕೆಲ ವರ್ಷಗಳಿಂದ ವಿತರಿಸುತ್ತಾ ಬಂದಿದ್ದಾರೆ. ಬಂಧಿತ 13 ಜನರ ವಿರುದ್ಧವೂ ಗುಜರಾತ್ ಮೆಡಿಕಲ್ ಪ್ರಾಕ್ಟೀಷನರ್ಸ್ ಆಕ್ಟ್‌ನಡಿ(ಜಿಎಂಪಿಎ) ಅಪರಾಧ ಪ್ರಕರಣ ದಾಖಲಿಸಲಾಗಿದೆ. ಮೂವರು ಪ್ರಮುಖ ಆರೋಪಿಗಳ ಬಳಿಯಿಂದ ನೂರಾರು ನಕಲಿ ಪ್ರಮಾಣ ಪತ್ರಗಳು, ಬಮ್ರೋಲಿ ಪ್ರದೇಶದಲ್ಲಿ ಕ್ಲಿನಿಕ್, ಆಸ್ಪತ್ರೆ ತೆರೆದಿದ್ದ ನಕಲಿ ವೈದ್ಯರ ಬಳಿಯಿಂದ ಅಲೋಪತಿ ಮತ್ತು ಹೋಮಿಯೋಪತಿ ಔಷಧಗಳು, ಚುಚ್ಚುಮದ್ದು, ಸಿರಪ್ ಬಾಟಲಿಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪಾಂಡೇಸರ ಪೊಲೀಸರು ತಿಳಿಸಿದ್ದಾರೆ.

- 70 ಸಾವಿರ ರು.ಗೆ ನಕಲಿ ಬಿಇಎಂಎಸ್ ಪ್ರಮಾಣ ಪತ್ರ
- ಗುಜರಾತ್ ಸೂರತ್‌ನಲ್ಲಿ ನಕಲಿ ವೈದ್ಯರ ದೊಡ್ಡ ಜಾಲ

ರೈತರ ದೆಹಲಿ ಚಲೋ 2 ದಿನ ಸ್ಥಗಿತ

ದೆಹಲಿ: ರೈತರ 'ದೆಹಲಿ ಚಲೋ' ಪ್ರತಿಭಟನಾ ಮೆರವಣಿಗೆ ಮೇಲೆ ಹರಿಯಾಣ ಪೊಲೀಸರು ಶುಕ್ರವಾರ ಅಶ್ರುವಾಯು ಪ್ರಯೋಗಿಸಿದ್ದರಿಂದ 6 ರೈತರು ಗಾಯಗೊಂಡು ಅಸ್ವಸ್ಥರಾಗಿದ್ದರಿಂದ ದೆಹಲಿ ಚಲೋ ಕಾರ್ಯಕ್ರಮವನ್ನು 2 ದಿನದ ಮಟ್ಟಿಗೆ ಮುಂದೂಡಲಾಗಿದೆ.

ಅಶ್ರುವಾಯು ಸೆಲ್‌ಗಳು ಪಕ್ಕದಲ್ಲೇ ಸ್ಫೋಟಗೊಂಡಾಗ 6 ರೈತರು ಗಾಯಗೊಂಡರು. ಇನ್ನೂ ಕೆಲವರು ಅಸ್ವಸ್ಥರಾದರು. ಹಾಗಾಗಿ ಜಾಥಾವನ್ನು ಭಾನುವಾರಕ್ಕೆ ಮುಂದೂಡಲಾಗಿದೆ. ಗಾಯಗೊಂಡ ರೈತರನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿದೆ ಎಂದು ರೈತ ಮುಖಂಡ ಸರ್ವಾನ್ ಸಿಂಗ್ ಪಂಧೇರ್ ಹೇಳಿದ್ದಾರೆ. 101 ರೈತರು ಶಂಭು ಗಡಿಯಿಂದ ಮಧ್ಯಾಹ್ನ 1ರ ವೇಳೆ ದೆಹಲಿಯತ್ತ ಪ್ರತಿಭಟನಾ ಮೆರವಣಿಗೆ ಆರಂಭಿಸಿದರು. ಸ್ವಲ್ಪ ದೂರ ಸಾಗುತ್ತಿ ದ್ದಂತೆ ಬ್ಯಾರಿಕೇಡ್ ಹಾಕಿದ್ದ ಪೊಲೀಸರು ಜಾಥಕ್ಕೆ ತಡೆಯೊಡ್ಡಿ ದ್ದರು. ರೈತರು ಬ್ಯಾರಿಕೇಡ್‌ಗಳನ್ನು ದಾಟಲು ಮುಂದಾಗುತ್ತಿದ್ದಂತೆ ಪ್ರತಿಭಟನಾಕಾರರನ್ನು ಚದುರಿಸಲು ಪೊಲೀಸರು ಅಶ್ರುವಾಯು ಸೆಲ್ ಪ್ರಯೋಗಿಸಿದರು.

ಹರಿಯಾಣ ಸರಕಾರ ಈ ಪ್ರದೇಶದಲ್ಲಿ 1 ವಾರ ನಿಷೇಧಾಜ್ಞೆ ವಿಧಿಸಿದೆ. ಅಲ್ಲದೇ ಅಂಬಾಲಾ ಜಿಲ್ಲೆಯ 11 ಹಳ್ಳಿಗಳಲ್ಲಿ ಇಂಟರ್ನೆಟ್ ಸೇವೆ ಸ್ಥಗಿತಗೊಳಿಸಿದೆ.

ಲೋಕಸಭೆಯಲ್ಲಿ ವಾಗ್ಯುದ್ಧ: ಕಲಾಪ ಡಿ.9ಕ್ಕೆ ಮುಂದೂಡಿಕೆ

ದೆಹಲಿ: ಲೋಕಸಭೆಯಲ್ಲಿ ಶುಕ್ರವಾರ ಬೆಳಗ್ಗೆ ಆಡಳಿತಾರೂಢ ಎನ್‌ಡಿಎ ಸಂಸದರು ಹಾಗೂ ಪ್ರತಿಪಕ್ಷ ಸದಸ್ಯರ ನಡುವೆ ವಾಗ್ಯುದ್ಧ ನಡೆದು ಸದನದಲ್ಲಿ ಗದ್ದಲದ ವಾತಾವರಣ ಸೃಷ್ಟಿಯಾಗಿದ್ದರಿಂದ ಕಲಾಪವನ್ನು ಸೋಮವಾರಕ್ಕೆ ಮುಂದೂಡಲಾಗಿದೆ.

ಸದನ ಸಮಾವೇಶಗೊಂಡಾಗ ಬಿಜೆಪಿ ಸದಸ್ಯ ನಿಶಿಕಾಂತ್ ದುಬೆ, ವಿವಾದಿತ ವಿದೇಶಿ ಹೂಡಿಕೆದಾರ ಜಾರ್ಜ್ ಸೊರೊಸ್ ಮತ್ತು ಪ್ರತಿಪಕ್ಷ ನಾಯಕರ ನಡುವೆ ಸಂಬಂಧವಿದೆ. ಪ್ರಧಾನಿ ಮೋದಿ ನಾಯಕತ್ವದ ಭಾರತದ ಯಶಸ್ಸನ್ನು ಹಾಳು ಮಾಡಲು ಅಂತಾರಾಷ್ಟ್ರೀಯ ಸಂಚು ನಡೆದಿದೆ ಎಂದು ಆರೋಪಿಸಿದರು. ಮರುಕ್ಷಣವೇ ಸದನದಲ್ಲಿ ಕೋಲಾಹಲ ಉಂಟಾಯಿತು. ಪ್ರಶ್ನೋತ್ತರ ವೇಳೆ ಪ್ರತಿಪಕ್ಷ ಸಂಸದರು ಅದಾನಿ ಮತ್ತು ಸಂಭಾಲ್ ಹಿಂಸಾಚಾರ ವಿಚಾರ ಪ್ರಸ್ತಾಪಿಸಲು ಪ್ರಯತ್ನಿಸಿದರು. ಆದರೆ, ಮೊದಲು ಪ್ರಶ್ನೋತ್ತರ ನಡೆಯಬೇಕು. ಅದನ್ನು ತಪ್ಪಿಸಿದರೆ ಸದನದ ಘನತೆ ತಗಲಿದೆ. ಅದಕ್ಕೆ ಅವಕಾಶ ನೀಡುವುದಿಲ್ಲ ಎಂದು ಹೇಳಿದ ಸ್ಪೀಕರ್, ಕಲಾಪವನ್ನು ಮಧ್ಯಾಹ್ನ 12ಕ್ಕೆ ಮುಂದೂಡಿದರು. ಸ್ಪೀಕರ್ ಓಂ ಬಿರ್ಲಾ ಕಲಾಪವನ್ನು ಮೊದಲು ಮಧ್ಯಾಹ್ನದವರೆಗೆ ಮುಂದೂಡಿದರು. ಮಧ್ಯಾಹ್ನವೂ ಪರಿಸ್ಥಿತಿ ಸುಧಾರಿಸದೇ ಹೋಗಿದ್ದರಿಂದ ಸೋಮವಾರಕ್ಕೆ ಕಲಾಪ ಮುಂದೂಡಿದರು.

ಅದಾನಿ ಲಂಚ ಆರೋಪ ಮತ್ತು ಸಂಭಾಲ್ ಹಿಂಸಾಚಾರ ವಿಚಾರಗಳ ಚರ್ಚೆಗೆ ಪ್ರತಿಪಕ್ಷಗಳು ಪಟ್ಟು ಹಿಡಿದಿರುವುದರಿಂದ ಚಳಿಗಾಲದ ಅಧಿವೇಶನದ ಮೊದಲ ವಾರ ಕಲಾಪ ಸರಿಯಾಗಿ ನಡೆಯಲಿಲ್ಲ. ಮಂಗಳವಾರ ಮತ್ತು ಬುಧವಾರವಷ್ಟೇ ಕಲಾಪ ಜರುಗಿದೆ.

ಸಮಾಚಾರ ಸಣ್ಣದಲ್ಲ

ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ

ಕೊಪ್ಪಳ: ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಮಹಾ ಪರಿನಿರ್ವಾಣ ದಿನ ಆಚರಿಸಲಾಯಿತು. ಜಿಪಂ ಉಪ ಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಅಜ್ಜಪ್ಪ ಸೊಗಲದ, ಡಿಡಿಪಿಯು ಜಗದೀಶ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಪರುಶುರಾಮ ಶೆಟ್ಟಪ್ಪನವರ, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಸುಧಾಕರ ಮಾನೆ, ಚುನಾವಣಾ ತಹಸೀಲ್ದಾರ ರವಿ ವಸ್ತ್ರದ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ್ ಮರಬನಳ್ಳಿ ಇದ್ದರು.

ಜಿಲ್ಲಾ ಉಸ್ತುವಾರಿ ಸಚಿವರ ಪ್ರವಾಸ ಇಂದು

ಕೊಪ್ಪಳ: ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಡಿ. 7 ಮತ್ತು 8 ರಂದು ಜಿಲ್ಲಾ ಪ್ರವಾಸ ಹಮ್ಮಿಕೊಂಡಿದ್ದಾರೆ. ಡಿ.7ರ ಬೆಳಗ್ಗೆ 10ಕ್ಕೆ ಜಿಪಂ ಜೆ.ಹೆಚ್ ಪಟೇಲ್ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಅಂಜನಾದ್ರಿ, ಹನುಮಮಾಲಾ ಧಾರಣ ಕಾರ್ಯಕ್ರಮದ ಪೂರ್ವ ಸಿದ್ದತೆ ಸಭೆ ನಡೆಸುವರು. ನಂತರ 11 ಜಿಲ್ಲಾ ತ್ರೈಮಾಸಿಕ ಕೆಡಿಪಿ ಸಭೆ ನಡೆಸುವರು. ಸಂಜೆ 6ಕ್ಕೆ ಕೊಪ್ಪಳದಿಂದ ನಿರ್ಗಮಿಸಿ ಕಾರಟಗಿಯಲ್ಲಿ ಸಂಜೆ 7ಕ್ಕೆ ಕನಕಗಿರಿ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ಸಾರ್ವಜನಿಕರ ಭೇಟಿ ಮತ್ತು ಕುಂದು ಕೊರತೆ ವಿಚಾರಣೆ ಮಾಡುವರು.

ಹಿಂದೂಗಳ ಮೇಲಿನ ದೌರ್ಜನ್ಯ ಖಂಡನೆ

ರಾಯಚೂರು: ಬಾಂಗ್ಲಾ ದೇಶಕ್ಕೆ ಭಾರತ ಸ್ವಾತಂತ್ರ್ಯ ನೀಡಿದೆ. ಆದರೆ ಬಾಂಗ್ಲಾ ದೇಶದಲ್ಲಿ ಹಿಂದುಗಳ ಮೇಲೆ ದೌರ್ಜನ್ಯ ನಡೆಯುತ್ತಿದೆ. ಸಮಸ್ತ ಬಾಂಗ್ಲಾ ದೇಶದ ಹಿಂದುಗಳ ಪರವಾಗಿ ಭಾರತ ದೇಶದ ಹಿಂದುಗಳಿದ್ದೇವೆ. ನಾವು ರಾಷ್ಟ್ರಪತಿಗಳಿಗೆ ಬಾಂಗ್ಲಾದ ಹಿಂದುಗಳ ರಕ್ಷಣೆಗೆ ಆಗ್ರಹಿಸುತ್ತೇವೆ ಎಂದು ರಾಯಚೂರು ನಗರ ಶಾಸಕ ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಶಿವರಾಜ ಪಾಟೀಲ ಹೇಳಿದರು. ಬಾಂಗ್ಲಾ ದೇಶದಲ್ಲಿ ಹಿಂದುಗಳ ಮೇಲೆ ನಡೆಯುತ್ತಿರುವ ದೌರ್ಜನ್ಯ ಖಂಡಿಸಿ ಬಿಜೆಪಿ ಯುವ ಮೋರ್ಚಾದಿಂದ ಹಮ್ಮಿಕೊಂಡಿದ್ದ ಪಂಜಿನ ಮೆರವಣಿಗೆಯಲ್ಲಿ ಭಾಗವಹಿಸಿ ಮಾತನಾಡಿದರು. ಕಾಂಗ್ರೆಸ್ ಸರಕಾರ ಜಾತಿ ಜಾತಿಗಳ ನಡುವೆ ವಿಷ ಬೀಜ ಬಿತ್ತುತ್ತಿದೆ. ನಾವೆಲ್ಲಾ ಯಾವುದೇ ಜಾತಿಯಲ್ಲಿ ಹುಟ್ಟಿದ್ದರೂ, ಹಿಂದುಗಳು ಎಂಬುವುದನ್ನ ಮರೆಯದೆ ಒಗ್ಗಟ್ಟಾಗಿರಬೇಕು. ನಮ್ಮ ಧರ್ಮದ ಮೇಲೆ ಅಥವ ನಮ್ಮವರ ಮೇಲೆ ಏನಾದರೂ ಅನಾಹುತ ಸಂಬವಿಸಿದರೆ ಅದನ್ನ ಎದುರಿಸಲು ಹಿಂದುಗಳಾದ ನಾವು ಸನ್ನದ್ದರಾಗಿರಬೇಕೆಂದು ಕರೆ ನೀಡಿದರು. ಪಂಜಿನ ಮೆರವಣಿಗೆ ನೇತಾಜಿ ನಗರ ವೃತ್ತದಿಂದ ಪ್ರಮುಖ ರಸ್ತೆಗಳ ಮೂಲಕ ಸೂಪರ್ ಮಾರ್ಕೆಟ್ ವರೆಗೆ ನಡೆಯಿತು. ಮೆರವಣಿಗೆಯಲ್ಲಿ ವಿದಾನ ಪರಿಷತ್ ಮಾಜಿ ಸದಸ್ಯ ಎನ್ ಶಂಕ್ರಪ್ಪ, ನಗರಸಭೆ ಸದಸ್ಯ ಶಶಿರಾಜ, ಮುಖಂಡರಾದ ರಾಘವೇಂದ್ರ ಉಟ್ಕೂರು, ಕಡಗೋಲು ಆಂಜಿನೇಯ, ರಾಜಕುಮಾರ, ಯುವಮೋರ್ಚ ಜಿಲ್ಲಾಧ್ಯಕ್ಷ ಎನ್.ವಿನಯಕುಮಾರ ಸೇರಿದಂತೆ ನೂರಾರು ಯುವಕರು ಭಾಗಿಯಾಗಿದ್ದರು.

ಕೃಷಿ ತಿದುಪಡಿ ಕಾಯೆ ಹಿಂಪಡೆಯಲು ಆಗ್ರಹ

ರಾಯಚೂರು: ರೈತರ ಸಂಪೂರ್ಣ ಸಾಲ ಮನ್ನಾ ಮಾಡಬೇಕು. ಮೂರು ಕೃಷಿ ತಿದ್ದುಪಡಿ ಕಾಯ್ದೆಯನ್ನು ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರುಸೇನೆ (ವಾಸುದೇವ್ ಮೇಟಿ ಬಣ) ರಾಜ್ಯ ಹಾಗೂ ಜಿಲ್ಲಾ ಘಟಕದ ವತಿಯಿಂದ ಡಿಸೆಂಬರ್ 9 ರಂದು ಬೆಳಗಾವಿ ಚಲೋ ಹೋರಾಟ ಆಯೋಜಿಸಲಾಗಿದೆ ಎಂದು ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ನರಸಿಂಹ ನಾಯಕ ಕಮಲಾಪುರ ಹೇಳಿದರು. ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಟಿ ಉದ್ದೇಶಿಸಿ ಮಾತನಾಡಿದ ಅವರು, ಕೇಂದ್ರ ಸರಕಾರ ಮೂರು ಕೃಷಿ ತಿದ್ದುಪಡಿ ರೈತ ವಿರೋಧಿ ಕಾಯ್ದೆಗಳನ್ನು ರದ್ದುಗೊಳಿಸಿದ್ದರೂ, ರಾಜ್ಯದ ಕಾಂಗ್ರೆಸ್ ಸರಕಾರ ರದ್ದುಗೊಳಿಸದೇ ಮುಂದುವರೆಸಿದ್ದು, ಕೂಡಲೇ ಹಿಂಪಡೆಯಬೇಕು. ಆಲಮಟ್ಟಿ ಜಲಾಶಯದ ಎತ್ತರವನ್ನು 519 ಮೀಟರ್ ನಿಂದ 524.256 ಮೀಟರ್‌ಗೆ ಹೆಚ್ಚಿಸಬೇಕು. ರೈತರ ಬೆಲೆಗಳಿಗೆ ವೈಜ್ಞಾನಿಕ ಬೆಲೆ ನಿಗದಿ ಮಾಡಬೇಕು. ಜಿಲ್ಲೆಯ ಎಲ್ಲಾ ಕೆರೆಗಳಿಗೆ ನದಿಗಳ ಮೂಲಕ ನೀರು ತುಂಬಿಸಬೇಕು ಎಂದು ಒತ್ತಾಯಿಸಿ ಬೆಳಗಾವಿಯ ಸುವರ್ಣಸೌಧದ ಮುಂದೆ ಧರಣಿ ನಡೆಸಲಾಗುವುದು ಎಂದು ತಿಳಿಸಿದರು. ಸಂಘದ ಜಿಲ್ಲಾ ಘಟಕದ ಪ್ರದಾನ ಕಾರ್ಯದರ್ಶಿ ವೈ. ಗೋವಿಂದ ನಾಯಕ, ಶಿವಪ್ಪ, ಜಂಗ್ಲೀಪೀರ್, ಮಲ್ಲನಗೌಡ ಉಪಸ್ಥಿತರಿದ್ದರು.

ನಂಬಿಕೆ ಜಗದಂಬಿಕೆ
ಗುರು
ಪ್ರತಿ ಗುರುವಾರ

{ ದಿನೇಶ್ ಗುಂಡೂರಾವ್ } ಸಚಿವ

ರಾಜ್ಯದಲ್ಲಿ ಈ ವರ್ಷ 327 ಮಹಿಳೆಯರು ಮೃತ ಪಟ್ಟಿದ್ದು ಕಾರಣವೇನು ಎಂಬುದರ ಬಗ್ಗೆ ತನಿಖೆ ನಡೆಸಲಾಗುವುದು. ಮಹಿಳೆಯರ ಸಾವಿನ ತನಿಖೆಗೆ ಸಮಿತಿ ರಚನೆ ಮಾಡಲಾಗಿದ್ದು ನಿಷೇಧ ಮಾಡಲಾಗಿರುವ ಔಷಧಗಳನ್ನು ಖರೀದಿ ಮಾಡಲಾಗಿದೆ ಎಂಬ ಪ್ರತಿಪಕ್ಷದ ನಾಯಕ ಆರ್. ಅಶೋಕ್ ಅವರ ಹೇಳಿಕೆ ಸುಳ್ಳು.

ಸರಕಾರದ ಯೋಜನೆ ಬಗ್ಗೆ ಮಾಹಿತಿ ನೀಡಿ

ತಾಲೂಕು ಕೆಡಿಪಿ ಸಭೆ | ಶಾಸಕ ರಾಘವೇಂದ್ರ ಹಿಟ್ನಾಳ ಸೂಚನೆ

ಕೊಪ್ಪಳ: ಗ್ಯಾರಂಟಿ ಯೋಜನೆ ಸೇರಿ ಸರಕಾರದ ಅನೇಕ ಜನಪರ ಕಾರ್ಯಕ್ರಮಗಳ ಬಗ್ಗೆ ಜನರಿಗೆ ಮಾಹಿತಿ ನೀಡಿ, ಸಮರ್ಪಕವಾಗಿ ಅನುಷ್ಠಾನ ಮಾಡಬೇಕು ಎಂದು ಶಾಸಕ ರಾಘವೇಂದ್ರ ಹಿಟ್ನಾಳ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ತಾಪಂ ಕಚೇರಿ ಸಭಾಂಗಣದಲ್ಲಿ ನಡೆದ 2024-25ನೇ ಸಾಲಿನ 2ನೇ ಕೆಡಿಪಿ ತ್ರೈಮಾಸಿಕ ಸಭೆಯ ಅಧ್ಯಕ್ಷತೆ ವಹಿಸಿ ಶುಕ್ರವಾರ ಮಾತನಾಡಿದರು.

ಎಲ್ಲ ಯೋಜನೆ ಸಾರ್ವಜನಿಕರಿಗೆ ತಲುಪುವಂತಾಗಬೇಕು. ಆ ನಿಟ್ಟಿನಲ್ಲಿ ಅಧಿಕಾರಿಗಳು ಮುತುವರ್ಜಿ ವಹಿಸಿ ಯೋಜನೆಗಳ ಬಗ್ಗೆ ಜನರಿಗೆ ಸಮರ್ಪಕ ಮಾಹಿತಿ ನೀಡಬೇಕು. ಎಲ್ಲ ತಾಲೂಕು ಮಟ್ಟದ ಅಧಿಕಾರಿಗಳು ಸಾರ್ವಜನಿಕರ ಭೇಟಿಗೆ ನಿಮ್ಮ ಕಚೇರಿಯಲ್ಲಿ ಸಮಯ ನಿಗದಿ ಮಾಡಬೇಕು. ಯಾವುದೇ ಸಮಸ್ಯೆ ಹೊತ್ತು, ನಿಮ್ಮನ್ನು ಭೇಟಿ ಮಾಡಲು ಕಚೇರಿಗೆ ಬರುವ ಸಾರ್ವಜನಿಕರಿಗೆ ಉತ್ತಮ ಮತ್ತು ವಿನಯದಿಂದ ಮಾತನಾಡಬೇಕು. ಅವರ ಸಮಸ್ಯೆಗೆ ಪರಿಹಾರ ನೀಡುವುದರ ಜತೆಗೆ ನಿಮ್ಮ ಇಲಾಖೆಗೆ ಸಂಬಂಧಿಸಿದ ಯೋಜನೆಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡಿ, ಸಾರ್ವಜನಿಕರಿಗೆ ಆಡಳಿತ ವ್ಯವಸ್ಥೆ ಮೇಲೆ ನಂಬಿಕೆ ಬರುವಂತೆ ನಡೆದುಕೊಳ್ಳಬೇಕು ಎಂದು ಪಾಠ ಮಾಡಿದರು.

ಎಲ್ಲ ಇಲಾಖೆ ವಸತಿ ನಿಲಯದ ವಿದ್ಯಾರ್ಥಿಗಳಿಗೆ ಗುಣಮಟ್ಟವಾದ ಆಹಾರ ನೀಡುವಂತೆ ಅಧಿಕಾರಿಗಳು ಕ್ರಮ ವಹಿಸಬೇಕು. ಕಾಲಕಾಲಕ್ಕೆ ವಸತಿ ನಿಲಯಕ್ಕೆ ಅನಿರೀಕ್ಷಿತ ಭೇಟಿ ನೀಡಿ, ವಿದ್ಯಾರ್ಥಿಗಳಿಂದ ಸಮಸ್ಯೆ ಆಲಿಸಬೇಕು. ಹಾಸ್ಟೇಲ್ ಪ್ರವೇಶಕ್ಕೆ ಅರ್ಜಿ ಹಾಕುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುವ ಬಗ್ಗೆ ಮಾಹಿತಿ ಇದೆ. ವಿದ್ಯಾರ್ಥಿಗಳ ಹಿತ ದೃಷ್ಟಿಯಿಂದ ಹೊಸ ವಸತಿ ನಿಲಯ ಮಂಜೂರಿಗೆ ಸರಕಾರಕ್ಕೆ ಮನವಿ ಮಾಡಿದ್ದೇನೆ ಎಂದರು.

ಕೊಪ್ಪಳದ ತಾಪಂ ಕಚೇರಿ ಸಭಾಂಗಣದಲ್ಲಿ ನಡೆದ 2024-25ನೇ ಸಾಲಿನ 2ನೇ ಕೆಡಿಪಿ ತ್ರೈಮಾಸಿಕ ಸಭೆಯಲ್ಲಿ ಶಾಸಕ ರಾಘವೇಂದ್ರ ಹಿಟ್ನಾಳ ಮಾತನಾಡಿದರು.

> ಹಿಂದುಳಿದ ವರ್ಗ, ಸಮಾಜ ಕಲ್ಯಾಣ ಹಾಗೂ ಅಲ್ಪ ಸಂಖ್ಯಾತರ ಇಲಾಖೆ ಸಚಿವರ ಜತೆ ಚರ್ಚೆ ಮಾಡಿದ್ದೇನೆ. ಕೊಪ್ಪಳ ಕ್ಷೇತ್ರಕ್ಕೆ ಅಗತ್ಯಕ್ಕೆ ತಕ್ಕಷ್ಟು ವಸತಿ ನಿಲಯ ಮಂಜೂರು ಮಾಡುವಂತೆ ಮನವಿ ಮಾಡಿದ್ದೇನೆ.
> - ರಾಘವೇಂದ್ರ ಹಿಟ್ನಾಳ ಶಾಸಕ

ಗ್ರಾಮೀಣ ಕುಡಿವ ನೀರು, ಶಿಕ್ಷಣ ಇಲಾಖೆ, ಜೆಸ್ಕಾಂ, ಕೆಎಸ್ ಆರ್‌ಟಿಸಿ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಸೇರಿದಂತೆ ನಾನಾ ಇಲಾಖೆ ಅಧಿಕಾರಿಗಳು ಸಭೆಗೆ, ಅನುಪಾಲನ ವರದಿ ಮತ್ತು ಮಾಹಿತಿ ನೀಡಿದರು. ಎಲ್ಲ ಇಲಾಖೆಗಳ ಅಧಿಕಾರಿಗಳ ಬಗ್ಗೆ ಶಾಸಕರು ಸುದೀರ್ಘವಾಗಿ ಚರ್ಚಿಸಿದರು.

ರಸ್ತೆಗೆ ಅನುದಾನ

ಈಗಾಗಲೇ ಕ್ಷೇತ್ರದಲ್ಲಿ 100 ಕೋಟಿ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕೆಲಸ ನಡೆಯುತ್ತಿವೆ. ಉಳಿದ ಹದೆಗೆಟ್ಟ ರಸ್ತೆಗಳ ರಿಪೇರಿ ಮತ್ತು ನಿರ್ಮಾಣಕ್ಕೆ ಕ್ರಿಯಾ ಯೋಜನೆ ತಯಾರಿಸಿ ಎಂದು ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು. ಕ್ಷೇತ್ರದ ಎಲ್ಲ ರಸ್ತೆಗಳ ಬದಿ ಸಸಿ ನೆಡಬೇಕು ಎಂದು ಅರಣ್ಯ ಮತ್ತು ಪರಿಸರ ಇಲಾಖೆ ಅಧಿಕಾರಿಗಳಿಗೆ ಶಾಸಕ ರಾಘವೇಂದ್ರ ಹಿಟ್ನಾಳ್ ಸೂಚಿಸಿದರು.

ಜಿಪಂ ಯೋಜನಾ ನಿರ್ದೇಶಕ ಪ್ರಕಾಶ ವಡ್ಡರ, ಉಪ ವಿಭಾಗಧಿಕಾರಿ ಮಹೇಶ ಮಾಲಗಿತ್ತಿ, ತಾಪಂ ಇಒ ದುಂಡೇಶ ತುರಾದಿ, ತಹಸೀಲ್ದಾರ್ ವಿಠ್ಠಲ್ ಚೌಗಲೆ, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕಾಧ್ಯಕ್ಷ ಬಾಲಚಂದ್ರನ ಮುನಿರಬಾದ್ ಸೇರಿ ವಿವಿಧ ತಾಲೂಕ ಮಟ್ಟದ ಅಧಿಕಾರಿಗಳು ಇದ್ದರು.

ಅಂಬೇಡ್ಕರ್ ಪರಿನಿರ್ವಾಣ ದಿನಾಚರಣೆ

ಕುಕನೂರು: ಪಟ್ಟಣದ ಅಂಬೇಡ್ಕರ್ ವೃತ್ತದಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಅವರ ಮಹಾ ಪರಿ ನಿರ್ವಾಣ ದಿನ ಶುಕ್ರವಾರ ಆಚರಿಸಲಾಯಿತು. ಬಾಬಾ ಸಾಹೇಬ್ ರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿಸಲಾಯಿತು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಮತ್ತು ಕೆಲ ಪಟ್ಟಣ ಪಂಚಾಯಿತಿ ಸದಸ್ಯರು ಮಾತ್ರ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಇದರಿಂದ ಆಕ್ರೋಶಗೊಂಡ ಅಂಬೇಡ್ಕರ್ ಅನುಯಾಯಿಗಳು, ದಲಿತ ಪರ ಸಂಘಟನೆ ಕಾರ್ಯಕರ್ತರು ತಹಸೀಲ್ದಾರ್ ಗೆ ತರಾಟೆ ತೆಗೆದುಕೊಂಡರು. ತಹಸೀಲ್ದಾರ್ ಎಚ್ ಪ್ರಾಣೇಶ ಸಮಜಾಯಿಸಿ ನೀಡಿ, ಅಧಿಕಾರಿಗಳಿಗೆ ಎಚ್ಚರಿಕೆ ನೀಡುವ ಭರವಸೆ ನೀಡಿದರು.

ರಾಮಣ್ಣ ಭಜಂತ್ರಿ, ನಾಗಪ್ಪ ಕಲ್ಮನಿ, ಲಕ್ಷ್ಮಣ ಕಾಳಿ, ಸಣ್ಣ ಯಲ್ಲಪ್ಪ, ಗುದ್ನೇಶ ಛಲವಾದಿ, ನಿಂಗಪ್ಪ ಗೊರ್ಲೆಕೊಪ್ಪ, ನಿಂಗು ಬೇಣಕಲ, ಭರಮಪ್ಪ ತಲ್ವಾರ್, ಶಂಕರ ಭಂಡಾರಿ, ಲಕ್ಷ್ಮಣ ಬಾರಿಗಿಡದ್, ವಿರೇಶ ಸಬರದ್, ಪಪಂ ಸದಸ್ಯರಾದ ನೂರುದ್ದಿನ್ ಸಾಬ್ ಗುಡಿ ಹಿಂದಲ್, ಪ್ರಶಾಂತ ಆರು ಬೆರಳಿನ, ಮಲ್ಲಿಕಾರ್ಜುನ ಚೌದರಿ, ಮಹಾಂತೇಶ ಹೂಗಾರ ಇದ್ದರು.

ಪಟ್ಟಣದ ಅಂಬೇಡ್ಕರ್ ವೃತ್ತದಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಅವರ ಮಹಾ ಪರಿ ನಿರ್ವಾಣ ದಿನ ಶುಕ್ರವಾರ ಆಚರಿಸಲಾಯಿತು. ಬಾಬಾ ಸಾಹೇಬ್ ರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿಸಲಾಯಿತು.

ಅಂಬೇಡ್ಕರ್ ಜೀವನದ ತತ್ವಾದರ್ಶ ಪಾಲಿಸಿ

ಪಟ್ಟಣದ ಪುರಸಭೆ ಹಾಗೂ ನಾಡ ಕಚೇರಿಯಲ್ಲಿ ಸಂವಿಧಾನ ಶಿಲ್ಪಿ ಡಾಃ ಬಿ.ಆರ್ ಅಂಬೇಡ್ಕರ್ ಅವರ 68 ನೇ ಮಹಾಪರಿನಿರ್ವಾಣ ದಿನಾಚರಣೆ ಮಾಡಲಾಯಿತು.

ಮುದಗಲ್: ಪಟ್ಟಣದ ಪುರಸಭೆ ಹಾಗೂ ನಾಡ ಕಚೇರಿಯಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ.ಆರ್ ಅಂಬೇಡ್ಕರ್ ಅವರ 68 ನೇ ಮಹಾಪರಿನಿರ್ವಾಣ ದಿನಾಚರಣೆ ಶುಕ್ರವಾರ ಮಾಡಲಾಯಿತು.

ಡಾಃ ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ದೀಪ ಬೆಳಗಿಸುವ ಮೂಲಕ ಮಹಾಪರಿನಿರ್ವಾಣ ದಿನಾಚರಣೆ ಆಚರಿಸಲಾಯಿತು. ನಂತರ ದಲಿತ ಸಂಘರ್ಷ ಸಮಿತಿ ತಾಲೂಕಾ ಸಂಚಾಲಕ ಶರಣಪ್ಪ ಕಟ್ಟಿಮನಿ ಮಾತನಾಡಿ ನಾಡಿನ ಜನರಿಗೆ ಸಂವಿಧಾನ ನೀಡಿದ ಡಾ. ಅಂಬೇಡ್ಕರ್ ಅವರ ಜೀವನದ ತತ್ವಾದರ್ಶಗಳನ್ನು ಅಳವಡಿಸಿಕೊಂಡು ಇತರರಿಗೆ ಮಾದರಿಯಾಗಬೇಕೆಂದರು.

ಈ ಸಂದರ್ಭದಲ್ಲಿ ಉಪ ತಹಸೀಲ್ದಾರ ತುಳಜರಾಂ ಸಿಂಗ್, ಪುರಸಭೆ ಸದಸ್ಯರಾದ ಗುಂಡಪ್ಪ ಗಂಗಾವತಿ, ದುರಗಪ್ಪ ಕಟ್ಟಿಮನಿ, ಮಹಿಬೂಬಸಾಬ ಕಡ್ಡಿಪುಡಿ, ಬಿಜೆಪಿ ನಗರ ಘಟಕ ಅಧ್ಯಕ್ಷ ಕರಿಯಪ್ಪ ಯಾದವ್, ಸಿಬ್ಬಂದಿಗಳಾದ ಚನ್ನಮ್ಮ

ದಳವಾಯಿಮಠ, ರಹಿಮತ್ತ ಉನ್ನಿಸ್ ಬೇಗಂ,ಪವನಕುಮಾರ, ಅಪ್ರಿಯಾ ಜಕೀಯಾಬೇಗಂ,ಆರಿಫ್ ಉನ್ನಿಸ್

ಬೇಗಂ, ಮುನೀರ್, ಶಿವು, ಬಸವರಾಜ, ಶರಣಪ್ಪ ಸೇರಿದಂತೆ ಸಾರ್ವಜನಿಕರು ಉಪಸ್ಥಿತರಿದ್ದರು.

ಬಸವೇಶ್ವರರ ಬಗ್ಗೆ ಅವಹೇಳನ: ಯತ್ನಾಳ ಕ್ಷಮೆಗೆ ಸಮಾಜ ಆಗ್ರಹ



ರಾಯಚೂರು: ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ವಿಶ್ವಗುರು ಬಸವಣ್ಣನವರ ಬಗ್ಗೆ ಹಗುರವಾಗಿ ಮಾತನಾಡಿದ್ದು ಖಂಡನೀಯ. ಕೂಡಲೇ ಬಹಿರಂಗವಾಗಿ ಕ್ಷಮೆಯಾಚಿಸಬೇಕು ಇಲ್ಲದಿದ್ದರೆ ಲಿಂಗಾಯತ ಸಮಾಜ ಹಾಗೂ ಬಸವಣ್ಣನವರ ಅನುಯಾಯಿಗಳಿಂದ ರಾಜ್ಯಾದ್ಯಂತ ಉಗ್ರ ಹೋರಾಟ ಮಾಡಲಾಗುವುದು ಎಂದು ನೀಲಾಂಬಿಕ ಬಸವ ಯೋಗಾಶ್ರಮದ ಸಂಚಾಲಕ ವೀರಭದ್ರಪ್ಪ ಸ್ವಾಮಿ ಎಚ್ಚರಿಕೆ ನೀಡಿದರು.

ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಟಿ ಉದ್ದೇಶಿಸಿ ಮಾತನಾಡಿದ ಅವರು, ಸಾಂಸ್ಕೃತಿಕ ನಾಯಕ, ಸಮ ಸಮಾಜದ ಕನಸು ಕಂಡ ಬಸವಣ್ಣನವರ ಬಗ್ಗೆ ಹಗುರವಾಗಿ ಮಾತನಾಡಿದ್ದಲ್ಲದೇ ನಾನೇ ಬಸವಣ್ಣ ಕ್ಷಮೆಯಾಚಿಸುವುದಿಲ್ಲ ಎಂದು ತಮ್ಮ ಹೇಳಿಕೆಗೆ ಪಶ್ಚತಾಪ ಪಡೆಯದೇ ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೆ. ಬಸನಗೌಡ ಪಾಟೀಲ ಯತ್ನಾಳ ಅವರು ದಲಿತರ, ಮುಸ್ಲಿಮರ, ಶೋಷಿತರ ಮತಗಳನ್ನು ಪಡೆದು ಶಾಸಕರಾಗಿದ್ದನ್ನು ಮರೆತು ಅಹಂನಿಂದ ವರ್ತಿಸುತ್ತಿದ್ದಾರೆ ಎಂದು ಕಿಡಿಕಾರಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಬೆಟ್ಟಪ್ಪ ಕದ್ದೂರಿ, ಅಮರಣ್ಣ ಸಾಹುಕಾರ ಉಪಸ್ಥಿತರಿದ್ದರು.

ಸೇನಾ ಭರ್ತಿ ರ್‍ಯಾಲಿಗೆ ಜಿಲ್ಲಾಡಳಿತದಿಂದ ಉತ್ತಮ ಸಹಕಾರ

ಕೊಪ್ಪಳ: ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಸೇನಾ ನೇಮಕಾತಿ ರ್‍ಯಾಲಿಗೆ ಜಿಲ್ಲಾಡಳಿತ ಹಾಗೂ ಜಿಲ್ಲಾ ಮಟ್ಟದ ವಿವಿಧ ಇಲಾಖೆ ಅಧಿಕಾರಿಗಳಿಂದ ಅಗತ್ಯ ಸಹಕಾರ ದೊರೆಕಿದೆ ಎಂದು ಎಡಿಜಿ. ರಿಕ್ರ್ಯೂಟಿಂಗ್ ಝುಡ್‌ಆರ್‌ಒ ಬೆಂಗಳೂರಿನ ಮೇಜರ್ ಜನರಲ್ ಹರಿಪಿಳ್ಳೈ ಹೇಳಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಸೇನಾ ನೇಮಕಾತಿ ರ್‍ಯಾಲಿ ವೀಕ್ಷಣೆ ನಂತರ, ಜಿಲ್ಲಾಡಳಿತದ ವಿವಿಧ ಅಧಿಕಾರಿಗಳಿಗೆ ಭಾರತೀಯ ಸೇನೆಯಿಂದ ಸನ್ಮಾನಿಸಿ ಮಾತನಾಡಿದರು.

ಬೆಳಗಾವಿ ವಿಭಾಗದಲ್ಲಿ ನಡೆದ ದೊಡ್ಡ ಮಟ್ಟದ ಈ ರ್‍ಯಾಲಿ ಯಶಸ್ವಿಯಾಗಿಗೆ ತಮ್ಮೆಲ್ಲರ ಉತ್ತಮ ಸಹಕಾರ ಇದೆ. ನಮ್ಮ ಪ್ರಯತ್ನ ನಿಜವಾದ ಪ್ರತಿಭಾವಂತರಿಗೆ ತಲುಪಬೇಕು. ತಾಲೂಕು ಹಾಗೂ ಗ್ರಾಮೀಣ ಭಾಗದಲ್ಲಿ ಬಹಳಷ್ಟು ಪ್ರತಿಭಾವಂತ ವಿದ್ಯಾರ್ಥಿಗಳಿದ್ದಾರೆ. ಅಂಥ ನಾವು ಪ್ರೋತ್ಸಾಹ ನೀಡಬೇಕಿದೆ ಎಂದು ಅಭಿಪ್ರಾಯಪಟ್ಟರು.

ಡೈರೆಕ್ಟರ್ ರಿಕ್ರೂಟಿಂಗ್ ಎಆರ್ ಒ ಬೆಳಗಾವಿಯ ಕರ್ನಲ್ ಎ.ಕೆ. ಉಪಾಧ್ಯಾಯ ಮಾತನಾಡಿ, ರ್‍ಯಾಲಿಯ ಮೊದಲ ಸಭೆಯಿಂದ ಜಿಲ್ಲಾಡಳಿತ ನಮಗೆ ಉತ್ತಮ ಸಹಕಾರ ನೀಡಿದೆ. ನವೆಂಬರ್. 26 ರಿಂದ ಆರಂಭವಾದ ರ್‍ಯಾಲಿ ಡಿ. 8ಕ್ಕೆ ಮುಗಿಯಲಿದೆ. ಬೆಳಗಾವಿ ವಿಭಾಗದ ಬೀದರ, ಕಲಬುರಗಿ, ಯಾದಗಿರಿ, ಕೊಪ್ಪಳ ಸೇರಿ ಒಟ್ಟು 6 ಜಿಲ್ಲೆಯ ಸುಮಾರು 30 ಸಾವಿರಕ್ಕಿಂತ ಹೆಚ್ಚಿನ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಅದರಲ್ಲಿ 9130 ಅಭ್ಯರ್ಥಿಗಳು ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ರ್‍ಯಾಲಿಗೆ ಬಂದಿದ್ದಾರೆ. ಇದರಲ್ಲಿ 7186 ಅಭ್ಯರ್ಥಿಗಳು ರನ್ನಿಂಗ್ ಪಾಸಾಗಿದ್ದಾರೆ. ಮೇಡಿಕಲ್‌ನಲ್ಲಿ 2380 ಅಭ್ಯರ್ಥಿಗಳು ಪಾಸಾಗಿದ್ದು, 1878 ಅಭ್ಯರ್ಥಿಗಳು ಮೇಡಿಕಲ್ ರಿವ್ಯೂವ್‌ಗೆ ಹೋಗಿದ್ದಾರೆ ಆಯ್ಕೆಯಾದ ಅಂತಿಮ ಅಭ್ಯರ್ಥಿಗಳ ಮಾಹಿತಿ ಡಿ. 8 ರಂದು ತಿಳಿಯಲಿದೆ ಎಂದು ಹೇಳಿದರು.

ಕೊಪ್ಪಳದ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಸೇನಾ ನೇಮಕಾತಿ ರ್‍ಯಾಲಿ ಯಶಸ್ವಿ ಹಿನ್ನೆಲೆ ಜಿಲ್ಲಾಡಳಿತದ ಅಧಿಕಾರಿಗಳಿಗೆ ಭಾರತೀಯ ಸೇನೆಯಿಂದ ಅಭಿನಂಧಿಸಲಾಯಿತು.

ಜಿಪಂ ಸಿಇಒ ರಾಹುಲ್ ರತ್ನಂ ಪಾಂಡೇಯ ಮಾತನಾಡಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್ ಅರಸಿದ್ದಿ, ಎಡಿಸಿ ಸಿದ್ರಾಮೇಶ್ವರ, ಎಎಸ್ಪಿ ಹೇಮಂತ್ ಕುಮಾರ್, ಸಹಾಯಕ ಆಯುಕ್ತ ಮಹೇಶ ಮಾಲಗತ್ತಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ರೇಷ್ಮಾ ಹಾನಗಲ್. ಅಸಿಸ್ಟೆಂಟ್ ರಿಕ್ರ್ಯೂಟಿಂಗ್ ಆಫೀಸರ್ ಸುಬೇದಾರ ಮೇಜರ್ ದಿನೇಶ್ ಲೋಹಿಯಾ ಇದ್ದರು.

ಈ ವೇಳೆ ಸೇನಾ ನೇಮಕಾತಿ ರ್‍ಯಾಲಿ ಕರ್ತವ್ಯಕ್ಕೆ ಪರೋಕ್ಷ ಹಾಗೂ ಪ್ರತ್ಯಕ್ಷವಾಗಿ ನಿಯೋಜಿತ ಜಿಲ್ಲಾ ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳಿಗೆ ಸೇನಾಧಿಕಾರಿಗಳಿಂದ ಸನ್ಮಾನಿಸಲಾಯಿತು. ಸೇನಾ ಭರ್ತಿ ರ್‍ಯಾಲಿಯಲ್ಲಿ ಭಾಗಿಯಾಗಿದ್ದ ಅಭ್ಯರ್ಥಿಗಳು ಮಾತನಾಡಿ, ಕೊಪ್ಪಳ ಜಿಲ್ಲಾಡಳಿತ ಮಾಡಿದ್ದ ವಸತಿ ಬತ್ತು ಸಾರಿಗೆ ವ್ಯವಸ್ಥೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಸರಕಾರಿ ಆಸ್ಪತ್ರೆಗೆ ತಜ್ಞವೈದ್ಯರ ನೇಮಕಕ್ಕೆ ಒತ್ತಾಯ

ಲಿಂಗಸಗೂರು: ಜಿಲ್ಲೆಯಲ್ಲಿ ರಿಮ್ಸ್ ಆಸ್ಪತ್ರೆ ಬಿಟ್ಟರೆ ಲಿಂಗಸುಗೂರು ತಾಲೂಕು ಆಸ್ಪತ್ರೆ ಅತಿ ಹೆಚ್ಚು ರೋಗಿಗಳಿಗೆ ಚಿಕಿತ್ಸೆ ನೀಡುವ ಆಸ್ಪತ್ರೆಯಾಗಿದೆ. ಸಾರ್ವಜನಿಕ ಆಸ್ಪತ್ರೆಗೆ ಹೃದಯರೋಗ ತಜ್ಞ ಹಾಗೂ ಚರ್ಮ ರೋಗ ತಜ್ಞರನ್ನು ಕೂಡಲೇ ನೇಮಕ ಮಾಡಬೇಕೆಂದು ಪ್ರತಿಭಟಿಸಿ ಕರ್ನಾಟಕ ರಕ್ಷಣಾ ವೇದಿಕೆ (ನಾರಾಯಣ ಗೌಡ ಬಣ) ತಾಲೂಕು ಅರೋಗ್ಯಧಿ ಮೂಲಕ ಅರೋಗ್ಯ ಸಚಿವರಿಗೆ ಮನವಿಯನ್ನು ಸಲ್ಲಿಸಿದರು.

ಪಕ್ಕದ ತಾಲೂಕಿನ ಸುರಪುರ, ಹುಣಸಗಿ, ಮಸ್ಕಿ ಸೇರಿದಂತೆ ಇತರೆ ತಾಲೂಕಿನಿಂದ ನೂರಾರು ರೋಗಿಗಳು ಚಿಕಿತ್ಸೆಗಾಗಿ ಲಿಂಸಗೂರು ಸಾರ್ವಜನಿಕ ಆಸ್ಪತ್ರೆಯನ್ನು ಅವಲಂಬಿಸಿದ್ದಾರೆ. ಕಳೆದ 2 ವರ್ಷಗಳಿಂದ ಆಸ್ಪತ್ರೆಯಲ್ಲಿ ಹೃದಯ ರೋಗ ತಜ್ಞರು ಇಲ್ಲದೇ ಬಡ ರೋಗಿಗಳು ಮರಣ ಹೊಂದಿದ ಸಾಕಷ್ಟು ಉದಾಹರಣೆಗಳಿವೆ. ಶ್ರೀಮಂತರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆದರೆ ಬಡ ರೋಗಿಗಳ ಗತಿ ಏನು ಎಂಬುವಂತಾಗಿದೆ. ತಾಲೂಕಿನಲ್ಲಿ ಶಾಸಕರು, ವಿಧಾನ ಪರಿಷತ್ತು ಸದಸ್ಯರು ಹಾಗೂ ಮಾಜಿ ಶಾಸಕರು ಇದ್ದರೂ, ಯಾವುದೇ ಪ್ರಯೋಜನ ಇಲ್ಲದಂತಾಗಿದೆ.

ಕರ್ನಾಟಕ ರಕ್ಷಣಾ ವೇದಿಕೆ (ನಾರಾಯಣ ಗೌಡ ಬಣ) ತಾಲೂಕು ಅರೋಗ್ಯಧಿ ಮೂಲಕ ಅರೋಗ್ಯ ಸಚಿವರಿಗೆ ಮನವಿಯನ್ನು ಸಲ್ಲಿಸಿದರು.

ಹಾಲಿ ಶಾಸಕರು ತಮ್ಮ ಗುತ್ತಿಗೆ ಕೆಲಸಗಳಿಗೆ ಸಿಮೀತಗೊಂಡಿದ್ದಾರೆ ವಿನಹ ಕ್ಷೇತ್ರದ ಜನತೆ ಕಾಳಜಿ ಅವರಿಗಿಲ್ಲ. ಇನ್ನು ಮಾಜಿ ಶಾಸಕ ಡಿಎಸ್ ಹೂಲಗೇರಿಯವರು ಅಧಿಕಾರಿಗಳ ವರ್ಗಾವಣೆಯಲ್ಲಿ ಬ್ಯೂಸಿಯಾಗಿದ್ದಾರೆ. ಆಸ್ಪತ್ರೆಗೆ ತಜ್ಞ ವೈದ್ಯರನ್ನು ನೇಮಕ ಮಾಡುವ ಬಗ್ಗೆ ಅವರು ಚಿಂತಿಸುತ್ತಿಲ್ಲ. ಇನ್ನು ವಿಧಾನ ಪರಿಷತ್ ಸದಸ್ಯರು ಇದ್ದು ಇಲ್ಲದಂತಿದ್ದಾರೆ ಎಂದು ದೂರಿದರು.

ನೂರಾರು ರೋಗಿಗಳ ಆಸರೆಯಾಗಿರುವ ಲಿಂಗಸುಗೂರು ಸಾರ್ವಜನಿಕ ಆಸ್ಪತ್ರೆಗೆ ಹೃದಯರೋಗ ತಜ್ಞರು ಹಾಗೂ ಚರ್ಮ ರೋಗ ತಜ್ಞರನ್ನು ಕೂಡಲೇ ನೇಮಿಸಿ ಬಡ ರೋಗಿಗಳಿಗೆ ಆಸರೆಯಾಗಬೇಕೆಂದು ಒತ್ತಾಯಿಸಿದ್ದಾರೆ.

ಜಿಲಾನಿ ಪಾಷಾ. ರವಿಕುಮಾರ್ ಬರಗೋಡಿ , ಹನುಮಂತ ನಾಯಕ್ , ಅಜಿಜ ಪಾಷಾ , ಅಲ್ಲಾವುದ್ದೀನ್ , ಸುಲೇಮಾನ್ ಭಾಗಿಯಾಗಿದ್ದರು.

ತೆರಿಗೆ ವಸೂಲಿ ಅಭಿಯಾನಕ್ಕೆ ತಾಪಂ ಇಒ ಚಾಲನೆ

ಮಸ್ಕಿ: ತಾಲೂಕಿನ ಅಂಕುಶದೊಡ್ಡಿ, ಮಾರಲದಿನ್ನಿ, ಅಡವಿಬಾವಿ (ಮಸ್ಕಿ) ಗ್ರಾಮ ಪಂಚಾಯತಿಯಲ್ಲಿ ತಾಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿ ಅಮರೇಶ ಯಾದವ ಅವರು ಗುರುವಾರ ತೆರಿಗೆ ವಸೂಲಾತಿ ಅಭಿಯಾನಕ್ಕೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಸ್ಥಳೀಯರು ತೆರಿಗೆ ಪಾವತಿಸಿದರೆ, ಮಾತ್ರ ಗ್ರಾಮ ಪಂಚಾಯತಿಗಳ ಸಿಬ್ಬಂದಿ ವೇತನ ಇನ್ನಿತರೆ ಆಡಳಿತಾತ್ಮಕ ವೆಚ್ಚಕ್ಕೆ ಅನುಕೂಲವಾಗಲಿದೆ. ಈ ಹಿನ್ನಲೆಯಲ್ಲಿ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಆದೇಶದಂತೆ ಎರಡನೇ ಗುರುವಾರವಾದ ಇಂದು ತೆರಿಗೆ ವಸೂಲಾತಿ ಅಭಿಯಾನ ಜರುಗಿದೆ. ಸ್ಥಳೀಯರು ತಮ್ಮ ಸ್ವತ್ತುಗಳಿಗೆ ಸಂಬಂಧಿಸಿದಂತೆ ಗ್ರಾ ಪಂ ಕರ ವಸೂಲಿಗಾರರು ನಿಗದಿಪಡಿಸುವ ಮೊತ್ತವನ್ನು ಪಾವತಿಸಿ ಸಹಕರಿಸಬೇಕು ಎಂದರು.

ಸಹಾಯಕ ನಿರ್ದೇಶಕರಾದ (ಪಂಚಾಯತ್ ರಾಜ್) ಸೋಮನಗೌಡ ಪಾಟೀಲ್ ಅವರ ನೇತೃತ್ವದಲ್ಲಿ ಹಾಲಾಪುರದಲ್ಲಿ ತೆರಿಗೆ ವಸೂಲಾತಿ ಅಭಿಯಾನ ಜರುಗಿತು. ಮಸ್ಕಿ ತಾಲೂಕಿನ 21 ಗ್ರಾಮ ಪಂಚಾಯತಿಗಳಲ್ಲಿ ಒಟ್ಟು 15 ಲಕ್ಷ ರು. ಹೆಚ್ಚು ತೆರಿಗೆ ಸಂಗ್ರಹವಾಗಿದೆ. ತಲೇಖಾನ್, ಮಟ್ಟೂರು, ಮೆದಕಿನಾಳ, ಸಂತೆಕಲ್ಲೂರು, ಗುಡದೂರು, ಬಪ್ಪೂರು ಗ್ರಾಪಂಗಳು ತೆರಿಗೆ ವಸೂಲಾತಿಯಲ್ಲಿ ಮುಂಚೂಣಿಯಲ್ಲಿದ್ದು, ರಾತ್ರಿ 8 ರವರೆಗೆ ತೆರಿಗೆ ವಸೂಲಾತಿ ಅಭಿಯಾನ ಜರುಗಿತು. ಈ ಸಂದರ್ಭದಲ್ಲಿ ಗ್ರಾಪಂ ಅಭಿವೃದ್ಧಿ ಅಧಿಕಾರಿಗಳು, ಕರವಸೂಲಿಗಾರರು, ಸಿಬ್ಬಂದಿ ಇದ್ದರು.

ತೆರಿಗೆ ವಸೂಲಾತಿ ಅಭಿಯಾನಕ್ಕೆ ತಾಪಂ ಇಒ ಚಾಲನೆ ನೀಡಿದರು.

ಸರಕಾರಿ ಶಾಲೆ ವಿದ್ಯಾರ್ಥಿಗಳಿಗೆ ವಿಮಾನಯಾನ ಭಾಗ್ಯ

ಕೊಪ್ಪಳ ತಾಲೂಕು ಲಿಂಗದಹಳ್ಳಿ ಸರಕಾರಿ ಪ್ರಾಥಮಿಕ ಶಾಲೆ ವಿದ್ಯಾರ್ಥಿಗಳು | ನಾಲ್ಕು ದಿನದ ಶೈಕ್ಷಣಿಕ ಪ್ರವಾಸ

ಕೊಪ್ಪಳ: ಆ ಮಕ್ಕಳ ಮೊಗದಲ್ಲಿ ಸಂತೋಷಕ್ಕೆ ಪಾರವೇ ಇರಲಿಲ್ಲ, ಕಾರಣ ಆಕಾಶದ ಹೋಗುವ ವಿಮಾನವನ್ನು ಬೆರಗು ಕಣ್ಣಿನಿಂದ ನೋಡುತ್ತಿದ್ದ ಆ ಮಕ್ಕಳು, ವಿಮಾನವನ್ನು ಹತ್ತಿರದಿಂದ ನೋಡುವ ಕನಸು ಕಂಡಿದ್ದ, ಆ ಮಕ್ಕಳಿಗೆ ವಿಮಾನಯಾದ ಅವಕಾಶ ಸಿಕ್ಕಿದ್ದು ಕೊಪ್ಪಳ ತಾಲೂಕು ಲಿಂಗದಹಳ್ಳಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಒಟ್ಟು 32 ವಿದ್ಯಾರ್ಥಿಗಳು ಶುಕ್ರವಾರ ವಿಮಾನದ ಮೂಲಕ ಶೈಕ್ಷಣಿಕ ಪ್ರವಾಸಕ್ಕೆ ಹೈದ್ರಾಬಾದ್‌ಗೆ ತೆರಳಿದರು. ಒಟ್ಟು 32 ವಿದ್ಯಾರ್ಥಿಗಳು, ಶಿಕ್ಷಕರು, ಎಸ್ ಡಿ ಎಂಸಿ ಸಧಸ್ಯರು ಸೇರಿ ಒಟ್ಟು 45 ಜನರು, ಬಳ್ಳಾರಿಯ ಜಿಂದಾಲ್ ಉಡಾನ್ ವಿಮಾನ ನಿಲ್ದಾಣದ ಮೂಲಕ ಪ್ರವಾಸ ಆರಂಭಿಸಿದ ವಿದ್ಯಾರ್ಥಿಗಳಿಗೆ ಶಾಸಕ ರಾಘವೇಂದ್ರ ಹಿಟ್ನಾಳ ಶುಭ ಹಾರೈಸಿದರು. ವಿಮಾನ ಕಣ್ಣಾರೆ ನೋಡಲೂ ಸಾಧ್ಯವಾಗ ಸರಕಾರಿ ಶಾಲೆ ವಿದ್ಯಾರ್ಥಿಗಳಿಗೆ ವಿಮಾನ ಯಾನದ ಅವಕಾಶ ದೊರೆತಿದ್ದು, ಮಕ್ಕಳಲ್ಲಿ ಸಂತಸ ಇಮ್ಮಡಿಗೊಳಿಸಿತ್ತು. ಕಲ್ಯಾಣ ಕರ್ನಾಟಕ ಭಾಗದಲ್ಲಿ ಇದು ಮೊದಲು ಪ್ರಯತ್ನ ಎಂಬುದು ಹೆಮ್ಮೆಯ ವಿಷಯ.

ಯಾವಾಗ ವಿಮಾನ ಹತ್ತುತ್ತೇವೋ, ಯಾವಾಗ ಲೋಹದ ಹಕ್ಕಿಯಲ್ಲಿ ಆಕಾಶದಲ್ಲಿ ತೇಲಾಡುವ ಆನಂದವನ್ನು ಸವಿಯುತ್ತೇವೋ ಅನ್ನೋ ದಾವಂತ ವಿತ್ತು. ಹೀಗಾಗಿ ಬೇಗನೆ ಬಸ್ ಗೆ ತಮ್ಮ ಬ್ಯಾಗ್ ಗಳನ್ನು ಇಟ್ಟು ಬಸ್ ಹತ್ತುವ ದಾವಂತದಲ್ಲಿದ್ದರು.

ವಿಮಾನ ನಿಲ್ದಾಣದ ಮುಂದೆ ವಿದ್ಯಾರ್ಥಿಗಳು

ವೆಚ್ಚ ಭರಿಸಿದ ಶಿಕ್ಷಕರು, ಗ್ರಾಮಸ್ಥರು

ಒಟ್ಟು 3 ರೀತಿಯ ಸಾರಿಗೆ ವ್ಯವಸ್ಥೆ ಬಗ್ಗೆ ಪಾಠ ಮಾಡಲಾಗುತ್ತದೆ. ಅದರಂತೆ ವಾಯು ಮತ್ತು ಭೂ ಸಾರಿಗೆಯ ಅನುಭವ ಮಕ್ಕಳಿಗೆ ತಿಳಿಸಲು ಯೋಜನೆ ರೂಪಿಸಲಾಗಿದೆ. ವಿದ್ಯಾರ್ಥಿಗಳಿಂದ ಕೇವಲ 2.5 ಸಾವಿರ ರೂಪಾಯಿ ಹಣ ಪಡೆದಿದ್ದಾರೆ. ಆದರೆ, ನಾಲ್ಕು ದಿನದ ಪ್ರವಾಸಕ್ಕೆ ಒಬ್ಬರಿಗೆ 10 ಸಾವಿರಕ್ಕೂ ಹೆಚ್ಚು ಖರ್ಚಾಗುತ್ತದೆ. ಹೀಗಾಗಿ ಆ ಹಣವನ್ನು ಶಿಕ್ಷಕರು ಸ್ವತಃ ಚರ್ಚಿನಲ್ಲಿ ಭರಿಸಿದ್ದಾರೆ. ಕೆಲ ಗ್ರಾಮಸ್ಥರು ಕೂಡ ಆರ್ಥಿಕ ಸಹಾಯ ಮಾಡಿದ್ದಾರೆ. ಹೈದ್ರಾಬಾದ್ ನಿಂದ ರೈಲ್ವೇ ಮೂಲಕ ವಿಜಯಪುರಕ್ಕೆ ಬರುವ ತಂಡ, ನಂತರಆಲಮಟ್ಟಿಗೆ ನೋಡಿಕೊಂಡು, ಭೂ ಸಾರಿಗೆ ಮೂಲಕ ತಮ್ಮೂರಿಗೆ ವಾಪಸ್ ಆಗಲಿದ್ದಾರೆ.

> ಶಾಲೆ ಆವರಣದಲ್ಲಿ ವಿಮಾನ ಹೋದಾಗ ತಲೆ ಎತ್ತಿ ವಿಮಾನ ನೋಡಿ ಖುಷಿ ಪಡುತ್ತಿದ್ದೆವು. ಒಮ್ಮೆ ಹತ್ತಿರದಿಂದ ನೋಡುವ ಕನಸು ಕಂಡಿದ್ದೆವು. ಆದರೆ, ವಿಮಾನಯಾನದ ಬಗ್ಗೆ ಕನಸಿನಲ್ಲೂ ಚಿಂತಿಸಿರಲಿಲ್ಲ. ಈಗ ವಿಮಾನದಲ್ಲೇ ಪ್ರಮಾಣ ಮಾಡುತ್ತಿರುವುದು ತುಂಬಾ ಖುಷಿ ಇದೆ. ನಮ್ಮ ಶಿಕ್ಷಕರಿಗೆ ಧನ್ಯವಾದ ಹೇಳುತ್ತೇವೆ.
> - ವನಿತಾ ವಿದ್ಯಾರ್ಥಿನಿ

ಇನ್ನೊಂದಡೆ ಅವರಿಗೆ ಶುಭ ಹಾರೈಸಲು ಕ್ಷೇತ್ರದ ಶಾಸಕ, ಶಿಕ್ಷಣ ಇಲಾಖೆಯ ಅಧಿಕಾರಿಗಳು, ಅನೇಕ ಸುತ್ತಮುತ್ತಲಿನ ಶಾಲೆ ಶಿಕ್ಷಕರು, ಗ್ರಾಮದ ನೂರಾರು ಜನರು ಆಗಮಿಸಿದ್ದರು. ಹೀಗಾಗಿ ಶಾಲೆಯಲ್ಲಿ ಸಂಭ್ರಮ ಮನೆ ಮಾಡಿತ್ತು. ಲಿಂಗದಹಳ್ಳಿ ಗ್ರಾಮದಿಂದ ಜಿಂದಾಲ್ ಏರಪೋರ್ಟ್ ವರೆಗೆ ಬಸ್ ನಲ್ಲಿ ಪ್ರಯಾಣ ಮಾಡಿದ ಮಕ್ಕಳು, ಜಿಂದಾಲ್ ಏರ್ಪೋರ್ಟ್ ಗೆ ಹೋಗುತ್ತಿದ್ದಂತೆ ಪುಳಕಿತರಾಗಿದ್ದರು. ನಂತರ ಸ್ವತ ತಾವೇ ಬೋರ್ಡಿಂಗ್ ಪಾಸ್ ಪಡೆದು, ವಿಮಾನದಲ್ಲಿ ಸಂತಸದಿಂದ ಏರಿದರು.

ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ: ಕಠಿಣ ಶಿಕ್ಷೆ

ಸಿಂಧನೂರು: ನಗರ ಪೊಲಿಸ್ ಠಾಣೆ ವ್ಯಾಪ್ತಿಯಲ್ಲಿ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿಯಲ್ಲಿ ಒಂದನೇ ಆರೋಪಿಗೆ 10 ವರ್ಷ ಕಠಿಣ ಕಾರಾಗೃಹ ಶಿಕ್ಷೆ ಹಾಗೂ 15 ಸಾವಿರ ರು ದಂಡ ವಿಧಿಸಿ ಸಿಂಧನೂರಿನ 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ ಪೊಕ್ಸೋ ನ್ಯಾಯಾಲಯ ಆದೇಶ ನೀಡಿದೆ. 2018 ರಲ್ಲಿ ಅಪ್ರಾಪ್ತ ಬಾಲಕಿ ಮೇಲೆ ತಾಲೂಕಿನ ಉಮಲೂಟಿ ಗ್ರಾಮದ ರಮೇಶ ತಂದೆ ಮರಿಯಪ್ಪ ಲೈಂಗಿಕ ದೌರ್ಜನ್ಯ ಎಸಗಿದ್ದು, 2 ನೇ ಆರೋಪಿ ರಮೇಶ ತಂದೆ ಮುದಿಯಪ್ಪ ಸಹಕರಿಸಿದ್ದ ಬಗ್ಗೆ ಸಂತ್ರಸ್ತೆ ತಂದೆ ನಗರ ಠಾಣೆಯಲ್ಲಿ ನೀಡಿದ ದೂರಿನ ಮೇರೆಗೆ ಅಂದಿನ ಸಿಪಿಐ ನಾಗರಾಜ ಕಮ್ಮಾರ ತನಿಖೆ ನಡೆಸಿ ಆರೋಪಿತರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪ್ರಕರಣ ಕೈಗೆತ್ತಿಕೊಂಡ ನ್ಯಾಯಾಲಯ ವಾದ -ವಿವಾದ, ಸಾಕ್ಷಿಗಳನ್ನು ಪರಿಶೀಲಿಸಿ, ಅಪರಾಧಿಗೆ 10 ವರ್ಷ ಕಠಿಣ ಕಾರಾಗೃಹ ಶಿಕ್ಷೆ, 15 ಸಾವಿರ ದಂಡ ಹಾಗೂ ಲೈಂಗಿಕ ದೌರ್ಜನ್ಯಕ್ಕೆ ಸಹಕರಿಸಿ ಆರೋಪಿಗೆ 2 ವರ್ಷ ಕಾರಾಗೃಹ ಶಿಕ್ಷೆ ಹಾಗೂ 5 ಸಾವಿರ ರು ದಂಡ ವಿಧಿಸಿ ನ್ಯಾಯಾಧೀಶರಾದ ಬಿ.ಬಿ ಜಕಾತಿ ತೀರ್ಪು ನೀಡಿದ್ದಾರೆ. ಸರಕಾರ ಸಂತ್ರಸ್ಥರ ಪರಿಹಾರ ನಿಧಿಯಿಂದ ಸಂತ್ರಸ್ತೆ ಬಾಲಕಿಗೆ 4.50 ಲಕ್ಷ ರು ನೀಡಬೇಕು ಎಂದು ಆದೇಶಿಸಲಾಗಿದೆ. ಸರಕಾರದ ಪರವಾಗಿ ಸರಕಾರಿ ಅಭಿಯೋಜಕ ಎಂ. ಮಂಜುನಾಥ್ ವಾದ ಮಂಡಿಸಿದ್ದರು.

ಚಿತ್ತ ವಿಹಾರ

ಪ್ರಯತ್ನದ ಬೀಜ ಬಿತ್ತುತ್ತಿರಬೇಕು!

ನಡೆಯುವಾಗ ಎಡವುದು ಪ್ರಕೃತಿ ಸಹಜ ಕ್ರಿಯೆ, ಮಗು ಅಂಬೆಗಾಲಿಡುತ್ತ ನಡೆಯಲು ಪ್ರಾರಂಭಿಸಿದಾಗ ಅನೇಕ ಬಾರಿ ಎಡವಿ ಬೀಳುತ್ತದೆ. ಹಾಗಂತ ನಡೆಯುವುದನ್ನು ನಿಲ್ಲಿಸಲು ಹೇಳುತ್ತೇವೆಯೇ? ಹಾಗೆಯೇ, ನಮ್ಮ ಜೀವನವೆಂಬ ಬಂಡಿ ಸಾಗುವಾಗ ಕೆಟ್ಟ ರಸ್ತೆಗಳು, ಕಲ್ಲು ಬಂಡೆಗಳು, ಮುಳ್ಳು ಕಂಟಿಗಳು ಎದುರಾಗಿ ತೊಡಕುಂಟು ಮಾಡುತ್ತಿರುತ್ತವೆ. ಅವುಗಳನ್ನು ದೂಷಿಸಿ ಸುಮ್ಮನೆ ಕುಳಿತು ಬಿಟ್ಟರೆ ಗುರಿ ತಲುಪಲು ಸಾಧ್ಯವಿಲ್ಲ. ಪರ್ಯಾಯ ಮಾರ್ಗದಲ್ಲಿ ಸಾಗಿದಾಗ ಗುರಿ ತಲುಪಲು ಸಾಧ್ಯ. ಒಂದು ವೇಳೆ ಅದೇ ಮಾರ್ಗಲ್ಲಿಯೇ ಸಾಗಬೇಕೆಂದು ಬಯಸಿದರೆ ಆ ಮಾರ್ಗದಲ್ಲಿನ ಕಲ್ಲು ಮುಳ್ಳುಗಳೆಂಬ ಸಂಕಷ್ಟಗಳನ್ನು ಮೆಟ್ಟಿ ನಿಲ್ಲಬೇಕಾಗುತ್ತದೆ. ಈ ಜೀವನದ ಪಯಣದಲ್ಲಿ, ಅಪಮಾನ, ನಿಂದನೆಗಳು, ಸಂಕಷ್ಟಗಳು ಎದುರಾದಾಗ ಅವುಗಳ ಬಗ್ಗೆ ಬೇಸರಪಟ್ಟುಕೊಳ್ಳದೇ, ನಿರ್ಲಕ್ಷಿಸಿ, ನಿರಂತರ ಪರಿಶ್ರಮ ತೋರಬೇಕು, ಯಶಸ್ಸು ಗಳಿಸುವತ್ತ ಮನವನ್ನು ತೊಡಗಿಸಿಕೊಳ್ಳಬೇಕು. ಕಬಡ್ಡಿ ಆಟದಲ್ಲಿನ ಎದುರಾಳಿ ಆಟಗಾರರು ಕಾಲೆಳೆದು ಕೆಡವಲು ಕಾದಿರುತ್ತಾರೆ ವಿನಃ ನಿಮ್ಮನ್ನು ಬಾಚಿ ತಬ್ಬಿಕೊಂಡು ಬೀಳ್ಕೊಡುವುದಕ್ಕಲ್ಲ. ಹಾಗಂತ ಅವರು ಕೆಟ್ಟವರಲ್ಲ. ಅವರೂ ಕೂಡ ಆಟದ ಧರ್ಮ ಪಾಲಿಸಿ ಗೆಲುವಿಗಾಗಿ ಕಾಯುತ್ತಿರುತ್ತಾರೆ. ಇಂದಿನ ಸ್ಪರ್ಧಾ ಜಗತ್ತಿನಲ್ಲಿರುವವರೆಲ್ಲ ಗೆಲ್ಲಲೇಬೇಕೆಂದು ಬಂದವರಾಗಿದ್ದು ಅಷ್ಟು ಸುಲಭವಾಗಿ ಸೋಲನ್ನು ಒಪ್ಪಿಕೊಳ್ಳುವುದಿಲ್ಲ. ಕಷ್ಟಪಟ್ಟು ಉನ್ನತ ಸ್ಥಾನಕ್ಕೆ ಬಂದವರು ಎಂದಿಗೂ ಜೀವನದಲ್ಲಿ ಸೋಲುವುದಿಲ್ಲ. ಒಂದು ವೇಳೆ ಸೋತರೆ ಅದೃಷ್ಟ ಕೈಕೊಟ್ಟು ಸೋತಿರುತ್ತಾರೆಯೇ ಹೊರತು ಪ್ರಯತ್ನದಿಂದಲ್ಲ. ಯಾವುದೇ ಪ್ರಯತ್ನವನ್ನೇ ಮಾಡದೇ, ಗೆಲುವು ಸಿಗಲಿಲ್ಲವೆಂದು ಸಿಟ್ಟಾಗಿ ಲೋಕ ಸರಿಯಿಲ್ಲವೆಂದು ನರಳುತ್ತ ಬದುಕಿದರೆ, ಆ ಬದುಕಿಗೆ ಯಾವುದೇ ಅರ್ಥವಿಲ್ಲ. ಪ್ರಯತ್ನ ಎಂಬುದು ಬೀಜದ ಹಾಗೆ. ಬಿತ್ತುತ್ತಲೇ ಇರಿ. ಒಂದಲ್ಲ ಒಂದು ದಿನ ಮರವಾಗಿ ಫಲ ಕೊಟ್ಟೇ ಕೊಡುತ್ತದೆ.

● ರವಿ ಕಂಗಳ ಕೊಂಕಣಕೊಪ್ಪ

ಗೆಲುವಿನ ಅಮಲು ಒಳಿತಲ್ಲ

ಬದುಕೆಂಬುದು ಸೋಲು ಗೆಲುವಿನ ಪಯಣ. ಅವೆರಡೂ ಸಾಮಾನ್ಯ. ಅವೆರಡನ್ನು ಮುಕ್ತವಾಗಿ ಸ್ವೀಕರಿಸುವ ಗುಣ ಬೆಳೆಸಿಕೊಂಡರೆ ಬದುಕು ಸಹ್ಯವಾಗುತ್ತದೆ. ಆದರೆ ಬಹುತೇಕರು ಸೋತಾಗ ಮುಂದೆ ಪ್ರಯತ್ನ ಮಾಡುವದನ್ನು ಬಿಟ್ಟು ಬಿಡುವರು. ಸ್ಪರ್ಧಾತ್ಮಕ ಯುಗದಲ್ಲಿ ಗೆಲುವು ಎಲ್ಲರಿಗೂ ಸಿಗದು. ಪ್ರಯತ್ನ ವಾದಿಗಳಿಗೆ ಪ್ರತಿಭಾವಂತರಿಗೆ ಗೆಲುವು ಸಿಗುವುದು. ಹೀಗಾಗಿ ನಾವು ಸೋತೆವು ಎಂದ ಮಾತ್ರಕ್ಕೆ ನಾವು ಪ್ರಯತ್ನ ಪಡಲಿಲ್ಲ ಎಂದರ್ಥವಲ್ಲ ಗೆದ್ದವರು ನಮಗಿಂತ ಹೆಚ್ಚು ಪರಿಶ್ರಮ ಪಟ್ಟಿರಬಹುದು. ಹೀಗಾಗಿ ಸೋತಾಗ ಸೋಲಿನಿಂದ ಪಾಠ ಕಲಿಯಬೇಕು. ಸೋಲಿಗೆ ಕಾರಣ ತಿಳಿದು ಅದನ್ನು ಒಪ್ಪಿಕೊಳ್ಳಬೇಕೆ ವಿನಹ ಗೆದ್ದವರ ಜೊತೆ ವೈ ಮನಸ್ಸು ಬೆಳೆಸಿಕೊಳ್ಳಬಾರದು . ಸೋಲು ಕೂಡಾ ಒಂದು ಅನುಭವ. ಸೋತು, ನಂತರ ಗೆದ್ದಾಗಲೇ ಗೆಲುವಿನ ಖುಷಿ ಅಧಿಕ. ಅದೇ ರೀತಿ ಬದುಕಿನ ಪಯಣದಲ್ಲಿ ಅನೇಕ ಕೆಲಸಗಳಿಗೆ ಕೈಹಾಕುತ್ತೇವೆ. ಅಂತಹ ಸಂದರ್ಭದಲ್ಲಿ ನಮಗೆ ಗೆಲುವು ಸಿಗಬಹುದು ಯಶಸ್ಸು ಸಿಗಬಹುದು. ಹೋರಾಟದಲ್ಲಿ ಸ್ಪರ್ಧೆಯಲ್ಲಿ ನಾವು ಗೆಲ್ಲಬಹುದು. ಆಗ ಗೆಲುವಿನ ಅಮಲಿನಲ್ಲಿ ತೇಲಬಾರದು. ಗೆದ್ದಾಗ ಸಂತೋಷ ಪಡೋಣ. ಹಾಗಂತ ಸೋತವರನ್ನು ಟೀಕಿಸುವ, ಹೀಯಾಳಿಸುವ ಪರಿಪಾಠ ಒಳ್ಳೆಯದಲ್ಲ. ಪ್ರತಿ ಸಾರಿ ಗೆಲುವು ನಮಗೆ ಸಿಗುತ್ತದೆ ಎನ್ನುವುದು ತಪ್ಪು ತಿಳಿವಳಿಕೆ. ಗೆದ್ದೆನೆಂದು ಮೆರೆಯಬಾರದು. ನನಗಿಂತ ಶ್ರೇಷ್ಠರು ಇಲ್ಲಿದ್ದಾರೆ ಎಂಬ ಅರಿವು ಅಗತ್ಯ. ಸೋತಾಗ ಕುಗ್ಗದೇ ಗೆದ್ದಾಗ ಹಿಗ್ಗದೇ ಮುನ್ನಡೆಯಬೇಕು. ಗೆಲುವಿನ ಅಮಲು ಏರಿಸಿಕೊಂಡರೆ ಬದುಕು ಅರ್ಥ ಕಳೆದುಕೊಂಡೀತು.

● ರಂಗನಾಥ ಎನ್ ವಾಲ್ಮೀಕಿ

ಲಾಡ್ಜ್ ಕುರಿತ ಲಾಜಿಕ್‌ಗಳು!

ಬಾಹ್ಯನೋಟಕ್ಕೆ ಸುಂದರವೆನಿಸುವ ವಸತಿಗೃಹಗಳ ನಿರ್ವಹಣೆ ಅದೆಷ್ಟು ಕಠಿಣ ಗೊತ್ತೇ? ಒಬ್ಬ ಮಾಲೀಕನಾಗಿ ಸ್ವಾನುಭವ ಹೇಳುತ್ತೇನೆ, ಕೇಳಿ!

- ಒಮ್ಮೆ ಒಬ್ಬ ಠಾಕುಠೀಕು ವಸ್ತ್ರ ಧರಿಸಿ ಒಳ ಬಂದ. ಬಾಡಿಗೆ ವಿಚಾರಿಸಿ ರೂಂ ನೋಡಬಹುದಾ? ಎಂದ. ರೂಂಬಾಯ್ ಜೊತೆ ಕೀ ಕೊಟ್ಟು ಕಳಿಸಿದೆ. ಆ ಮಹಾಶಯ ರೂಂ ಪರಿಶೀಲಿಸಿದಂತೆ ಮಾಡಿ ಬಾತ್ ರೂಂ ಒಳಹೊಕ್ಕು ಚಿಲಕ ಹಾಕಿಕೊಂಡ. ಎರಡೇ ನಿಮಿಷದಲ್ಲಿ ಬಾತ್ ರೂಂ ಉಪಯೋಗಿಸಿ, ರೂಂ ಬಾಯ್ ಕೀ ಹಾಕಿಕೊಂಡು ಕೆಳಬರುವ ಮುನ್ನವೇ ಕೆಳಗಿಳಿದು ಬಂದು ರೂಂ ಬೇಡವೆಂದು ಹೇಳಿ ನಡೆದ!
- ಆಗಾಗ ಕೆಲವರು ಬಟ್ಟೆ ಮಾರುವವರು, ಕರಕುಶಲ ವಸ್ತು ವ್ಯಾಪಾರಿಗಳು ದೂರದ ಊರುಗಳಿಂದ ಬರುತ್ತಾರೆ. ಏಳೆಂಟು ಜನರಿರುತ್ತಾರೆ. ಅವರಿಗೆ ಕನಿಷ್ಠ ಬೆಲೆಯ ಒಂದೇ ಕೋಣೆ ಬೇಕು. ಒಂದು ತಿಂಗಳು ಇರುವುದಾಗಿ ಹೇಳಿ, ಚೌಕಾಸಿ ಮಾಡಿ ಮಾಡಿ, ಕೊನೆಗೆ 5 ಜನರ ರೂಮಿನಲ್ಲಿ 8 ಜನರಿರಲು ಕೇಳಿಕೊಂಡು ಮರುದಿನವೇ ಖಾಲಿ ಮಾಡಿ ಹೋಗಿರುತ್ತಾರೆ!
- ಇಬ್ಬರು ಬಂದು ಕೋಣೆ ತೆಗೆದುಕೊಳ್ಳುತ್ತಾರೆ. ಕೆಲ ಗಂಟೆಗಳಲ್ಲಿ ಒಬ್ಬ ಹೊರ ಹೋಗುತ್ತಾನೆ. ಇನ್ನೊಬ್ಬ ಅದಾವಾಗಲೋ ಹೊರ ಹೋಗಿರುತ್ತಾನೆ. ಮರುದಿನ ಯಾರೂ ಬರದಿದ್ದಾಗ ಅನುಮಾನಗೊಂಡು ಮೆನೇಜರ್ ಡೂಪ್ಲಿಕೇಟ್ ಕೀ ಮೂಲಕ ರೂಂ ಬಾಗಿಲು ತೆರೆದರೆ ಒಳಗಿನ ದುಬಾರಿ ಟಿವಿ ನಾಪತ್ತೆ!

● ಕೆ.ಶ್ರೀನಿವಾಸರಾವ್, ಹರಪನಹಳ್ಳಿ

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687, 3ನೇ ಮಹಡಿ,
ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ
ಮಠದ ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್: vishwavanimagazine
@gmail.com

ವಿಜಯಪುರ ನವೋದಯ ಶಾಲೆಯ ಬೆಳ್ಳಿ ಹಬ್ಬ

ನಮ್ಮ ದೇಶದಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಜವಾಹರ್ ನವೋದಯ ವಿದ್ಯಾಲಯವು ಸದಾ ಮುಂಚೂಣಿಯಲ್ಲಿದೆ. ಹಲವು ಕಡೆ ಆರಂಭಗೊಂಡಿರುವ ಈ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಣ ಪಡೆದವರು ಬದುಕಿನಲ್ಲಿ ಯಶಸ್ಸು ಸಾಧಿಸಿದ್ದಾರೆ. ಆಲಮಟ್ಟಿ ಜಲಾಶಯದ ಸಮೀಪ ಇರುವ ವಿಜಯಪುರ ಜವಾಹರ್ ನವೋದಯ ವಿದ್ಯಾಲಯದಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಯೊಬ್ಬರು, ಅವರ ಬ್ಯಾಚಿನ ಬೆಳ್ಳಿ ಹಬ್ಬವನ್ನು ಆಚರಿಸುವ ಸಂದರ್ಭದಲ್ಲಿ ತಾವು ಪಡೆದ ಶಿಕ್ಷಣದ ದಿನಗಳನ್ನು ಇಲ್ಲಿ ನೆನಪಿಸಿಕೊಂಡಿದ್ದಾರೆ.

● ವಿಜಯ್ ಕೊಕಟನೂರ

ನಮ್ಮ ರಾಜ್ಯದ ವಿಜಯಪುರ ಜಿಲ್ಲೆಯಲ್ಲಿ 1987 ನೆಯ ಇಸವಿಯಲ್ಲಿ ಆಲಮಟ್ಟಿ ಜಲಾಶಯದ ಸಮೀಪ ಶುರುವಾದಂತಹ ಜವಾಹರ್ ನವೋದಯ ವಿದ್ಯಾಲಯವು, ಸತತ ನಾಲ್ಕು ದಶಕಗಳಿಂದ ಬಡ ಮತ್ತು ಗ್ರಾಮೀಣ ಪ್ರತಿಭೆಗಳಿಗೆ ಉಚಿತ ಶಿಕ್ಷಣವನ್ನು ನೀಡುತ್ತಾ ಬಂದಿದೆ. ಕಳೆದ ನಾಲ್ಕು ದಶಕಗಳಲ್ಲಿ ಕಂಡುಬಂದ ಈ ವಿದ್ಯಾಲಯದ ಶೈಕ್ಷಣಿಕ ಸಾಧನೆಯು, ಆಲಮಟ್ಟಿ ಜಲಾಶಯದಷ್ಟೇ ಎತ್ತರವಾದುದು, ಉನ್ನತವಾದುದು, ಆದರ್ಶಪ್ರಾಯ

ವಾದುದು. ಮುಖ್ಯವಾಗಿ ಗ್ರಾಮೀಣ ಪ್ರದೇಶದಿಂದ ಬಂದವರಿಗೆ ಎಂದೇ ಆರಂಭ ಗೊಂಡ ಜವಾಹರ್ ನವೋದಯ ವಿದ್ಯಾಲಯವು, ಗ್ರಾಮೀಣ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುವುದರ ಜತೆಯಲ್ಲೇ, ನಗರದಿಂದ ಬಂದ ವಿದ್ಯಾರ್ಥಿಗಳಿಗೂ ಅಚ್ಚು ಮೆಚ್ಚಿನದು ಎನಿಸಿತು; ನಗರದವರು ಗ್ರಾಮೀಣ ಪರಿಸರದಲ್ಲಿ ವಿದ್ಯಾಭ್ಯಾಸಕ್ಕೆ ತೊಡಗಿಕೊಂಡು, ಗುಣಮಟ್ಟದ ಶಿಕ್ಷಣ ಪಡೆದು, ಬದುಕಿನಲ್ಲಿ ಉನ್ನತ ಸ್ಥಾನಕ್ಕೆ ಏರುವಲ್ಲಿ, ಜವಾಹರ್ ನವೋದಯ ವಿದ್ಯಾಲಯವು ಬೆಂಬಲ ನೀಡಿದೆ.

ಸರಿಸುಮಾರು 40 ಎಕರೆ ಜಾಗದಲ್ಲಿ ವಿಸ್ತರಿಸಿರುವ ಈ ವಿದ್ಯಾಲಯವು ಸುಸಜ್ಜಿತ ಶಾಲಾ ಕಟ್ಟಡ, ಆಟದ ಮೈದಾನ, ಭೋಜನ ಶಾಲೆ, ವಿದ್ಯಾರ್ಥಿ- ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ವಸತಿ, ನುರಿತ ಶಿಕ್ಷಕರನ್ನು ಹೊಂದಿದೆ. ಈ ಶಾಲೆಯಲ್ಲಿ ಓದಿದ 13ನೆಯ ಬ್ಯಾಚಿನ ವಿದ್ಯಾರ್ಥಿಗಳಿಗೆ ಇದೇ ಡಿಸೆಂಬರ್ 8 ರಂದು ಬೆಳ್ಳಿ ಹಬ್ಬ.

ಹದಿಮೂರನೆಯ ಬ್ಯಾಚಿನ ವೈಶಿಷ್ಟ್ಯ

ಹದಿಮೂರನೆಯ ಬ್ಯಾಚಿನಲ್ಲಿ, 1999 ರಲ್ಲಿ 6ನೆಯ ತರಗತಿಗೆ 80 ಮಂದಿ ಪ್ರವೇಶ ಪಡೆದಿದ್ದರು. ಎಲ್ಲರೂ ಅಲ್ಲಿನ ವಿದ್ಯಾಭ್ಯಾಸಕ್ಕೆ ಹೊಂದಿಕೊಂಡು ಉತ್ತಮ ಶಿಕ್ಷಣ ಪಡೆದಿದ್ದಾರೆ ಮತ್ತು ಶಿಕ್ಷಣ ಮುಗಿದ ನಂತರ, ಉತ್ತಮ ಹುದ್ದೆಗಳಲ್ಲಿ ವೃತ್ತಿನಿರತರಾಗಿದ್ದಾರೆ. 2006 ನೆಯ ಇಸವಿಯಲ್ಲಿ 12 ನೆಯ ತರಗತಿಯಿಂದ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಲ್ಲಿ, 29 ಜನ ಇಂಜಿನಿಯರುಗಳು ಮತ್ತು 4 ಜನ ಡಾಕ್ಟರುಗಳಿದ್ದಾರೆ. ಈ ಬ್ಯಾಚಿನ ಇರ್ಫಾನ್ ಅವರು, ದೇಶದ ಪ್ರತಿಷ್ಠಿತ ಏಮ್ಸ್ ಸಂಸ್ಥೆಯಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದು, ಹೆಸರು ಗಳಿಸಿದ್ದಾರೆ. ಇದೇ ಬ್ಯಾಚಿನ ಸಿದ್ದಲಿಂಗೇಶ್ ಅವರು, ಭಾರತೀಯ ಸ್ಟೇಟ್ ಬ್ಯಾಂಕಿನ ಗ್ರಾಮ ಸೇವಾ ಫೌಂಡೇಶನ್‌ನಲ್ಲಿ ಸಂಯೋಜಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ವಿಶೇಷವೆಂದರೆ, 2006ನೆಯ ಇಸವಿಯಲ್ಲಿ 12ನೆಯ ತರಗತಿಯಿಂದ ತೇರ್ಗಡೆ ಹೊಂದಿದವರಲ್ಲಿ, ಮೂರು ಜನ ಕರ್ನಾಟಕ ಆಡಳಿತ ಸೇವೆಯಲ್ಲಿದ್ದಾರೆ. ಉಳಿದವರು ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ವಿದ್ಯಾಲದ ಕೀರ್ತಿ ಪತಾಕೆಯನ್ನು ಬಾನೆತ್ತರದಲ್ಲಿ ಹಾರಿಸುತ್ತಿದ್ದಾರೆ. ಶಾಲೆಯಲ್ಲಿನ ವಿಧ್ಯಾರ್ಥಿ ದೆಸೆಯಲ್ಲಿ ಸಂಗನಗೌಡ ಮತ್ತ ಸಂತೋಷ್ ಸುತ್ತಗುಂಡರ್‌ರವರು ರಾಷ್ಟ್ರೀಯ ಹಂತದಲ್ಲಿ ವಿಜಯಪುರ ನವೋದಯ ವಿದ್ಯಾಲಯವನ್ನು ಪ್ರತಿನಿಧಿಸಿ ವಿದ್ಯಾಲಯದ

ವಿದ್ಯಾಲಯದ ಗುರಿ

ವಿದ್ಯಾರ್ಥಿಯ ಕುಟುಂಬದ ಸಾಮಾಜಿಕ-ಆರ್ಥಿಕ ಸ್ಥಿತಿಯನ್ನು ಪರಿಗಣಿಸದೆ ಗ್ರಾಮೀಣ ಪ್ರದೇಶದ ಪ್ರತಿಭಾವಂತ ಮಕ್ಕಳಿಗೆ ಉತ್ತಮ ಗುಣಮಟ್ಟದ ಆಧುನಿಕ ಶಿಕ್ಷಣವನ್ನು ಒದಗಿಸುವುದು - ಸಂಸ್ಕೃತಿ, ಮೌಲ್ಯಗಳ ಅಳವಡಿಕೆ, ಪರಿಸರದ ಅರಿವು, ಸಾಹಸ ಚಟುವಟಿಕೆಗಳು ಮತ್ತು ದೈಹಿಕ ಶಿಕ್ಷಣದ ಬಲವಾದ ಅಂಶವನ್ನು ವಿದ್ಯಾರ್ಥಿಯಲ್ಲಿ ಮೈಗೂಡಿಸುವುದು

ಗರಿಮೆಯನ್ನು ಮೆರೆದಿದ್ದಾರೆ. ಆಡಳಿತ ಸೇವೆಯನ್ನು ಸೇರಬೇಕು ಎಂಬುದು ಬಹುತೇಕ ಗ್ರಾಮೀಣ ಯುವಕ ಯುವತಿಯರ ಕನಸು. ಅದರಂತೆ, ಜವಾಹರ್ ನವೋದಯ ವಿದ್ಯಾಲಯ ವಿಜಯಪುರದ 13ನೆ ಬ್ಯಾಚಿನಲ್ಲಿ ಮೂರು ಜನ ಕರ್ನಾಟಕ ಆಡಳಿತ ಸೇವೆಯ ಅಧಿಕಾರಿಗಳಿದ್ದಾರೆ. ಪ್ರಮೋದ್ ಪಾಟೀಲ್, ಶಾಂತಗೌಡ ಗುಣಕಿ ಮತ್ತು ಚಂದ್ರಶೇಖರ ಹೊಸಮನಿ ಇವರುಗಳು ಕರ್ನಾಟಕ ಸರ್ಕಾರದಲ್ಲಿ ಉನ್ನತ ಹುದ್ದೆಗಳಲ್ಲಿದ್ದು ಜನಸ್ನೇಹಿ ಅಧಿಕಾರಿಗಳೆಂದೇ ಹೆಸರುವಾಸಿಯಾಗಿದ್ದಾರೆ. ಜತೆಗೆ, ತಾವು ಓದಿದ ಸಂಸ್ಥೆಯನ್ನು ಇವರು ಮರೆತಿಲ್ಲ : ಇವರು ವಿದ್ಯಾಲಯಕ್ಕೆ ನೀಡಿರುವ ಕೊಡುಗೆ ಅಪಾರವಾದುದು. ಇವರು ಸತತ ಒಂದು ವರ್ಷದಿಂದ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನವನ್ನು ನೀಡುತ್ತಿದ್ದು, ಶಾಲೆಯ ಬಗೆಗಿನ ಶ್ರದ್ಧೆ ಮತ್ತು ಅಭಿಮಾನವನ್ನು ಎತ್ತಿ ತೋರಿಸುತ್ತದೆ.

ವಿಜಯಪುರ ನವೋದಯಲ್ಲಿ ಒಂದು ದಿನ

ವಿದ್ಯಾರ್ಥಿಗಳು ಬೆಳಗ್ಗೆ 5 ಘಂಟೆ ಎದ್ದು ತಮ್ಮ ದೈನಂದಿನ ನಿತ್ಯ ಕರ್ಮಗಳನ್ನು ಮುಗಿಸಿ 5:30 ಕ್ಕೆ ಮೈದಾನದಲ್ಲಿ ಹಾಜರಿರಬೇಕು. ಎಲ್ಲಾ ವಿದ್ಯಾರ್ಥಿಗಳ ಹಾಜರಾತಿ ಪಡೆದ ನಂತರ ಸರಿಸುಮಾರು 5 ಕಿಲೋಮೀಟರ್ ಓಟ ಮತ್ತು ನಂತರ ವ್ಯಾಯಾಮ. 6:30 ಕ್ಕೆ ಸ್ನಾನ ಮತ್ತು ಶಾಲೆಗೆ ಹೊರಡಲು ತಯಾರಿ. 7:30 ಕ್ಕೆ ಶಾಲಾಸಭೆ ಮತ್ತು ಪ್ರಾರ್ಥನೆ ನಂತರ ಎರಡು ಅವಧಿಯ ಕ್ಲಾಸುಗಳು. 9 ಘಂಟೆಗೆ ಉಪಹಾರ. ನಂತರ ಪಾಠ ಪ್ರವಚನಗಳು. 11:15 ರಿಂದ 11:30 ರವರೆಗೂ ವಿರಾಮ ನಂತರ ಮತ್ತೆ ಪಾಠ. 1: 30 ಕ್ಕೆ ಭೋಜನ ವಿರಾಮ. ಮತ್ತೆ 2.30ರಿಂದ ತರಗತಿಯಲ್ಲಿ ಅಂದಿನ ಪಾಠಗಳ ಅಭ್ಯಾಸ. ಸಂಜೆ 4.00 ರಿಂದ 4.30ರ ತನಕ ಉಪಾಹಾರ ಮತ್ತು ಸಂಜೆ 6ರ ತನಕ ತಮಗೆ ಇಷ್ಟವಾದ ಕ್ರೀಡೆಗಳಲ್ಲಿ ಭಾಗವಹಿಸುವ ಚಟುವಟಿಕೆ.6.30 ರಿಂದ 8.00

ಘಂಟೆಯವರೆಗೂ ಮತ್ತೆ ತರಗತಿಯಲ್ಲಿ ಅಂದಿನ ಪಾಠಗಳ ಅಭ್ಯಾಸ. 8 ಕ್ಕೆ ಬೋಜನ ಮತ್ತು 10ಕ್ಕೆ ನಿದ್ರೆ. ಇದೇ ಡಿಸೆಂಬರ್ 8ನೆಯ ಶನಿವಾರ ಶಾಲೆಯಲ್ಲಿ ಬೆಳ್ಳಿ ಹಬ್ಬವನ್ನು ಆಚರಿಸುತ್ತಿದ್ದೇವೆ. ನಮ್ಮ ಬಾಳಿಗೆ ಬೆಳಕಾದ ವಿಜಯಪುರ ಜವಾಹರ್ ನವೋದಯ ವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಎಂದೂ ತೊಂದರೆಯಾಗಬಾರದೆಂಬ ಉದ್ದೇಶದಿಂದ ದಿನದ ಇಪತ್ತನಾಲ್ಕು ಗಂಟೆಯೂ ವಿದ್ಯುತ್ ಸೌಕರ್ಯವನ್ನು ಒದಗಿಸಿ ವಿದ್ಯಾಲಯಕ್ಕೆ ನಮ್ಮ ನಮನಗಳನ್ನು ಸಮರ್ಪಿಸುತ್ತಿದ್ದೇವೆ. ತಮ್ಮೆಲರಿಗೂ 13ನೆಯ ಬ್ಯಾಚಿನಿಂದ ವಿಜಯಪುರ ಜವಾಹರ್ ನವೋದಯ ವಿದ್ಯಾಲಯಕ್ಕೆ ಆತ್ಮೀಯವಾದ ಸ್ವಾಗತ.

ಎಲ್ಲರ ನೆಚ್ಚಿನ ಪುಳಿಯೋಗರೆ!

ನಮ್ಮ ಶಾಲೆಯಲ್ಲಿ ಪುಳಿಯೋಗರೆ ಅತ್ಯಂತ ಜನಪ್ರಿಯ ಉಪಹಾರ ಎನಿಸಿತ್ತು. ಇಂದಿಗೂ ಹಳೇ ವಿದ್ಯಾರ್ಥಿಗಳ ಸಮ್ಮಿಲನದಲ್ಲಿ ಪುಳಿಯೋಗರೆಗೆ ಹೆಚ್ಚಿನ ಬೇಡಿಕೆಯಿದೆ. ಪುಳಿಯೋಗರೆಯ ರುಚಿಯನ್ನು ನೆನಪಿಸಿಕೊಂಡರೆ, ಈಗಲೂ ಶಾಲಾದಿನಗಳ ಮಧುರ ಸ್ಮೃತಿ ಮನದಲ್ಲಿ ಮೂಡುತ್ತದೆ. ಬಾಲ್ಯದಲ್ಲಿ ತಿಂದ ಉಪ್ಪಿಟ್ಟು ಮತ್ತು ಬೋರ್ನವಿಟಾದ ಕಾಂಬಿನೇಷನ್ ಇಂದಿಗೂ ನೆನಪಿನಲ್ಲಿ ಅಳಿಯದೇ ಉಳಿದಿದೆ.

ಅತೃಪ್ತ ಮನುಷ್ಯನಿಗೆ ಭಗವಂತನ ಸೃಷ್ಟಿಯಲ್ಲೂ ತಪ್ಪು ಕಾಣುತ್ತದೆ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಒಂದು ಸಲ ಭಗವಂತನಿಗೆ, ತಾನು ಇಷ್ಟೊಂದು ಸುಂದರವಾದ ಪ್ರಕೃತಿಯನ್ನು ಸೃಷ್ಟಿ ಮಾಡಿದ್ದೇನೆ, ಅದನ್ನು ಒಂದು ಸಲ ನೋಡಿ ಬರಬೇಕೆಂದೆನಿಸಿ, ಹಾಗೇ ಅಲ್ಲಿರುವ ಪಕ್ಷಿ, ಪ್ರಾಣಿಗಳ ಅನಿಸಿಕೆಯನ್ನು ತಿಳಿಯಬೇಕೆನಿಸಿತು. ಅದಕ್ಕಾಗಿ ಭಗವಂತ ಭೂಮಿಗೆ ಬಂದ.

ಭಗವಂತ ಮೊಟ್ಟ ಮೊದಲು ಒಂದು ದುಂಬಿಯನ್ನು ಭೇಟಿಯಾಗಿ, 'ನಾನು ಸೃಷ್ಟಿ ಮಾಡಿದ್ದರ ಬಗ್ಗೆ ನಿನಗೇನು ಅನಿಸುತ್ತದೆ?' ಎಂದು ಕೇಳಿದ. ಆಗ ಅದು 'ತುಂಬಾ ಚೆನ್ನಾಗಿದೆ ಭಗವಂತ ಎಷ್ಟೊಂದು ಹೂವುಗಳನ್ನು ಸೃಷ್ಟಿ ಮಾಡಿರುವೆ. ಅವುಗಳಿಂದ ಮಕರಂದ ಹೀರುವುದೇ ನನ್ನ ಕೆಲಸ ಹೂವಿನಿಂದ ಹೂವಿಗೆ ಹಾರುವುದೇ ನನಗೆ ಬಹಳ ಸಂತೋಷವನ್ನು ತರುತ್ತದೆ. ಇದನ್ನು ಸೃಷ್ಟಿ ಮಾಡಿದ ನಿನಗೆ ಹೇಗೆ ಕೃತಜ್ಞತೆ ಅರ್ಪಿಸಬೇಕೆಂದು ನನಗೆ ತಿಳಿಯದು ದೇವಾ ಎಂದು ಹೇಳಿತು'. ಭಗವಂತನಿಗೆ ಬಹಳ ಸಂತೋಷವಾಯಿತು.

ನಂತರ ಅವನು ಒಂದು ಪಕ್ಷಿಯನ್ನು ಭೇಟಿಯಾಗಿ ಇದೇ ಪ್ರಶ್ನೆಯನ್ನು ಅದಕ್ಕೂ ಕೇಳಿದ. 'ನಿನ್ನ ಸೃಷ್ಟಿಯ ಬಗ್ಗೆ ಮಾತನಾಡಲು ನಾನೊಂದು ಹಕ್ಕಿಯಷ್ಟೇ. ನೀನು ಎಷ್ಟೊಂದು ವಿಧವಿಧವಾದ ಗಿಡಮರಗಳನ್ನ ಸೃಷ್ಟಿ ಮಾಡಿದ್ದೀಯಾ. ನಾನು ಎಲ್ಲ ಕಡೆಯೂ ಹಾರುತ್ತಾ ಹೋಗಿ ನನಗೆ ಬೇಕಾದ ಹಣ್ಣುಗಳನ್ನು ತಿನ್ನುತ್ತೇನೆ. ಎಷ್ಟೊಂದು ನದಿ ಸರೋವರಗಳನ್ನು ಸೃಷ್ಟಿ ಮಾಡಿದ್ದೀಯಾ, ನನಗೆ ಬಾಯಾರಿಕೆಯಾದಾಗ ಅಲ್ಲಿಗೆ ಹಾರಿ ಹೋಗಿ ನೀರು ಕುಡಿಯುತ್ತೇನೆ. ನಿನ್ನ ಸೃಷ್ಟಿಯ ಬಗ್ಗೆ ವಿವರಣೆ ನೀಡಲು ನಾನು ಬಹಳ ಚಿಕ್ಕವನು. ಒಂದು ಹಾಡಿನ ಮೂಲಕ ನಿನಗೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ' ಎಂದು ಇಂಪಾಗಿ ಚಿಲಿ ಪಿಲಿ ಎನ್ನುತ್ತಾ ಅದರ ಹಾಡನ್ನು ಹಾಡಿತು. ನಂತರ ಒಂದು ಕಪ್ಪೆಯ ಬಳಿಗೆ ಹೋಗಿ ಇದೇ ಪ್ರಶ್ನೆಯನ್ನು ಭಗವಂತ ಕೇಳಿದ. 'ಕಲ್ಲಲ್ಲೂ ಹುಟ್ಟಿ ಕೂಗುವ ನಮಗೆ ಅಲ್ಲಲ್ಲಿಗೆ ಆಹಾರ ಒದಗಿಸಿದ ನಿನ್ನ ಬಗ್ಗೆ ಮಾತನಾಡಲು ನನ್ನ ಬಳಿ ಶಬ್ದಗಳೇ ಇಲ್ಲ ಪರಮಾತ್ಮ,' ಎಂದು ವಂದಿಸಿತು ಕಪ್ಪೆ. ಭಗವಂತ ಈಗ ಬಹಳ ಸಂತುಷ್ಟನಾಗಿ ನಂತರ ಮನುಷ್ಯನ ಬಳಿಗೆ ಹೋಗಿ, 'ನನ್ನ ಸೃಷ್ಟಿಯ ಬಗ್ಗೆ ನಿನಗೇನು ಅನ್ನಿಸುತ್ತದೆ' ಎಂದು ಕೇಳಿದ.

'ನೀನು ಏನು ಮಹಾ ಮಾಡಿರುವೆ? ಒಂದನ್ನಾದರೂ ಸರಿಯಾಗಿ ಸೃಷ್ಟಿಸಿರುವಿಯಾ? ಸಿಹಿ ನೀರು ಇರುವ ನದಿ, ಕೊಳಗಳನ್ನು ಚಿಕ್ಕದು ಮಾಡಿರುವೆ, ಸಮುದ್ರದ ನೀರನ್ನು ಕುಡಿಯಲಾರದಂತೆ ಉಪ್ಪು ಮಾಡಿಟ್ಟಿರುವೆ, ಪರ್ವತಗಳೊಂದಕ್ಕೂ ಆಕಾರವೇ ಇಲ್ಲ. ಕೆಲವು ಜನರನ್ನು ಕೆಂಪಗೆ, ಕೆಲವರನ್ನು ಬೆಳ್ಳಗೆ, ಇನ್ನೂ ಕೆಲವರನ್ನು ಕಪ್ಪಗೆ ಸೃಷ್ಟಿಸಿದ್ದೀಯ. ಅವರ ಹಾಗೆ ನಾವು ಆಗಬೇಕೆಂದು, ಇವರೆಲ್ಲ ಬಣ್ಣ ಬಳಿದುಕೊಳ್ಳುತ್ತಾರೆ. ಹೊಟ್ಟೆಗೆ ಅನ್ನವಿಲ್ಲವೆಂದು ಕೆಲವರು ಪರದಾಡುತ್ತಾರೆ, ಇನ್ನೂ ಕೆಲವರು ತಿಂದಿದ್ದು ಜೀರ್ಣವಾಗಲೆಂದು ಕಸರತ್ತು ಮಾಡ್ತಾರೆ. ಹೀಗೆಲ್ಲಾ ಬೇಕಾಬಿಟ್ಟಿ ಸೃಷ್ಟಿ ಮಾಡುವ ಮೊದಲು, ಒಮ್ಮೆಯಾದರೂ ನನ್ನನ್ನು ವಿಚಾರಿಸಬಾರದಿತ್ತೇ, ವಿಚಾರಿಸಿದ್ದರೆ, ನಾನೇ ನಿನಗೆ ಸರಿಯಾದ ಸಲಹೆ ನೀಡುತ್ತಿದ್ದೆ' ಎಂದ.

ಇವನ ಮಾತು ಕೇಳಿ ಭಗವಂತನಿಗೆ ಕೋಪ ಉಕ್ಕಿ ಬಂದರೂ, ತಾಳ್ಮೆಯಿಂದ ಪಕ್ಕದಲ್ಲಿದ್ದ ಹಕ್ಕಿಯನ್ನು 'ಇವನು ಏಕೆ ಹೀಗೆ?' ಎಂದು ಕೇಳಿದ. ಆಗ ಆ ಹಕ್ಕಿ 'ಅವನ ಹಣೆ ಬರಹವೇ ಅಷ್ಟು. ಅವನ್ಯಾವಾಗಲೂ ಅತೃಪ್ತನೆ, ಅವನನ್ನು ಯಾವುದರಿಂದಲೂ ತೃಪ್ತಿಪಡಿಸಲು ಸಾಧ್ಯವಿಲ್ಲ. ಯಾವಾಗಲೂ ಅತೃಪ್ತಿಯಿಂದ ಇರುವುದೇ ಅವನ ಜಾಯಮಾನ ಪ್ರಭು' ಎಂದಿತು ಹಕ್ಕಿ. ಇನ್ನೆಂದೂ ತಾನು ಈ ಅತೃಪ್ತ ಮನುಷ್ಯನಿರುವ ಕಡೆಗೆ ತಲೆ ಹಾಕಬಾರದೆಂದು ಭಗವಂತ ತೀರ್ಮಾನಿಸಿದ. ಕಥೆ ಕಾಲ್ಪನಿಕವಾದರೂ ಮನುಷ್ಯನ ನಡವಳಿಕೆಯಂತೂ ಸದಾ ಈ ರೀತಿಯೇ ಅಲ್ಲವೇ? ಭಗವಂತನ ಸೃಷ್ಟಿಯಲ್ಲೂ ಕೂಡ ತಪ್ಪು ಹುಡುಕುವ ಮನುಷ್ಯನನ್ನು ಇನ್ನು ಯಾರ ತೃಪ್ತಿಪಡಿಸಲು ಸಾಧ್ಯ? ನಿಜವಾದ ಜ್ಞಾನಿಯಾದವನು ನಿಸರ್ಗ ನೀಡಿದ್ದನ್ನು ಸರಿಯಾಗಿ ಬಳಸಿಕೊಂಡು ಪಶು ಪಕ್ಷಿಗಳ ಹಾಗೆ ನೆಮ್ಮದಿಯಿಂದ ತೃಪ್ತಿಯಿಂದ ಸ್ವಚ್ಛಂದವಾಗಿ ಜೀವನ ನಡೆಸುತ್ತಾನೆ. ಎಲ್ಲ ಇದ್ದು ಕೊರಗುವವರ ಕಾಯಿಲೆಗೆ ಮದ್ದಿಲ್ಲ!

ನಾಲ್ಕು ವಿಧದ ಭಕ್ತರು

ನಿತ್ಯ ಜೀವನದಲ್ಲಿ ಭಗವದ್ಗೀತೆ
ಹಿರಿಯ ಐಎಎಸ್ ಅಧಿಕಾರಿ ● ಕೆ.ಶಿವಪ್ರಸಾದ್

ನಾಲ್ಕು ಬಗೆಯ ಭಕ್ತರಿರುತ್ತಾರೆ ಎಂದು ಕೃಷ್ಣ ಹೇಳುತ್ತಾನೆ. ಮೊದಲನೆಯ ವರ್ಗಕ್ಕೆ ಸೇರಿದವನು ತಾನು ಜೀವನದಲ್ಲಿ ಎದುರಿಸುತ್ತಿರುವ ದುಃಖ ದುಮ್ಮಾನಗಳಿಂದ ಹೊರಬರಲು ಪ್ರಯತ್ನಿಸುತ್ತಾನೆ. ಎರಡನೆಯವನು ಭೌತಿಕ ಸಂಪತ್ತು ಮತ್ತು ಲೌಕಿಕ ಸುಖವನ್ನು ಹೊಂದಲು ಬಯಸುತ್ತಾನೆ. ಬಹಳಷ್ಟು ಜನರು ಯಾವುದೇ ಸಂಸ್ಕೃತಿ, ಲಿಂಗ, ನಂಬಿಕೆ ಬೇಧವಿಲ್ಲದೆ ಈ ಎರಡು ವಿಭಾಗಗಳಲ್ಲಿ ಬರುತ್ತಾರೆ.

ಈ ಎರಡು ವಿಭಾಗದ ಭಕ್ತರು ಬೇರೆ ಬೇರೆ ದೇವತೆಗಳಿಗೆ ಪ್ರಾರ್ಥನೆ ಸಲ್ಲಿಸುತ್ತಾರೆ ಹಾಗೂ ಧಾರ್ಮಿಕ ಕ್ರಿಯೆಗಳನ್ನು ನಡೆಸುತ್ತಾರೆ ಎಂದು ಕೃಷ್ಣ ಹೇಳುತ್ತಾನೆ. ಇದು ವ್ಯಕ್ತಿ ತಾನು ಅನುಭವಿಸುತ್ತಿರುವ ಖಾಯಿಲೆಗೆ ಸಂಬಂಧಿಸಿದಂತೆ ಸರಿ ಯಾದ ವೈದ್ಯರ ಬಳಿಗೆ ಹೋಗುವ ಹಾಗಿದೆ. ಈ ಭಕ್ತರ ಬೇಡಿಕೆಗಳು ಅವರ ಶ್ರದ್ಧೆಯಿಂದಾಗಿ ನೆರವೇರುತ್ತವೆ ಎಂಬುದು ಕೃಷ್ಣನ ಹೇಳಿಕೆ.

ಮೂಲಭೂತವಾಗಿ ಇದು ಶರಣಾಗತಿ ಆಗಿದೆ. ಈ ಉದಾಹರಣೆ ಶ್ರದ್ಧೆಯನ್ನು ವಿವರಿಸುತ್ತದೆ. ಅಕ್ಕ ಪಕ್ಕದಲ್ಲಿ ಜಮೀನು ಹೊಂದಿದ ಎರಡು ಜನ ರೈತರು ತಮ್ಮ ಜಮೀನಿಗೆ ನೀರುಣಿಸಲು ಒಂದು ಬಾವಿ ತೆಗೆಯಲು ನಿರ್ಣಯಿಸುತ್ತಾರೆ. ಮೊದಲನೆಯ ರೈತನು ಒಂದೆರಡು ದಿನ ಬಾವಿ ತೆಗೆದು ನೀರು ಸಿಗದೇ ಇದ್ದಾಗ ಹೊಸದಾಗಿ ಬೇರೆ ಕಡೆ ಬಾವಿ ತೆಗೆಯಲು ಪ್ರಾರಂಭಿಸುತ್ತಾನೆ. ಎರಡನೇ ರೈತನು ಒಂದೇ ಸ್ಥಳದಲ್ಲಿ ಸತತವಾಗಿ ಬಾವಿ ತೆಗೆಯುತ್ತಿರುತ್ತಾನೆ. ಸುಮಾರು ಒಂದು ತಿಂಗಳು ಕೊನೆಗೆ ಮೊದಲನೇ ರೈತನ ಜಮೀನಿನಲ್ಲಿ ಎಲ್ಲಿ ನೋಡಿದಲ್ಲಿ ಹೊಂಡಗಳೇ ಕಾಣುತ್ತವೆ. ಆದರೆ ಎರಡನೇ ರೈತನ ಜಮೀನಿನಲ್ಲಿ ಒಂದು ಕಡೆ ಬಾವಿ ಪೂರ್ಣವಾಗಿ ನೀರು ತುಂಬಿರುತ್ತದೆ. ನಮ್ಮ ಇಂದ್ರಿಯಗಳಿಗೆ ಪ್ರತ್ಯಕ್ಷವಾಗಿ ಏನು ಕಾಣದಿದ್ದರೂ (ಈ ಸಂದರ್ಭದಲ್ಲಿ ನೀರಿನ ಹಾಗೆ) ಎರಡನೇ ರೈತನ ವಿಷಯದಲ್ಲಿ ಆದ ಹಾಗೆ ಆಂತರಿಕ ಶ್ರದ್ಧೆಯು ನಮ್ಮ ಕೆಲಸವನ್ನು ಮುಂದುವರಿಸುವಂತೆ ಮಾಡುತ್ತದೆ. ಶ್ರದ್ಧೆಯು ನಿರ್ಭಯ ಶಕ್ತಿ ಹಾಗೂ ಅದು ಸಂದೇಹ ರಹಿತವಾಗಿರುತ್ತದೆ.

ಯಶಸ್ಸಿನಲ್ಲಿ ಕೊನೆಗೊಳ್ಳಬಹುದಾದ ಶ್ರದ್ಧೆಯ ಹಿಂದೆ ತಾನು ಇರುತ್ತೇನೆ ಎಂದು ಕೃಷ್ಣ ಹೇಳುತ್ತಾನೆ. ಶ್ರದ್ಧೆಯಿಂದಾಗಿ ನಾವು ನಮ್ಮ ಸಂಬಂಧಗಳಲ್ಲಿ ಕೌಟುಂಬಿಕ ಬಂಧನದಲ್ಲಿ ಹಾಗೂ ವೃತ್ತಿಯಲ್ಲಿ ಪವಾಡಗಳನ್ನು ಸಾಧಿಸಬಹುದು. ಮೂರನೇ ಬಗೆಯ ಭಕ್ತನು ಆಸೆಗಳ ಮಿತಿಯನ್ನು ದಾಟುವು ದರಲ್ಲಿರುತ್ತಾನೆ. ಅವನು ಕುತೂಹಲ ಕಾರಿಯಾಗಿದ್ದು ಆತ್ಮ ಜ್ಞಾನದ ಶೋಧನೆಯಲ್ಲಿರುತ್ತಾನೆ. ನಾಲ್ಕನೇ ಬಗೆಯ ಭಕ್ತನು ಜ್ಞಾನಿ ಹಾಗೂ ಅವನು ಆಸೆಗಳ ಗಡಿಯನ್ನು ದಾಟಿರುತ್ತಾನೆ. ಅವನು ಪ್ರತಿಯೊಂದರಲ್ಲಿ, ಪ್ರತಿ ಸ್ಥಳದಲ್ಲಿ ಭಗವಂತನನ್ನು ಕಾಣುತ್ತಾನೆ ಹಾಗೂ ಭಗವಂತನಲ್ಲಿ ಏಕತೆ ಹೊಂದಿರುತ್ತಾನೆ.

ಪದಬಂಧ

1		■	2		3	■	4	5
	■	■		■		■	■	
6	7			■	8		9	
■		■	10	11		■		■
12			■		■	13		
■		■	14		15	■		■
16				■	17			18
	■	■		■		■	■	
19		■	20			■	21	

ಎಡದಿಂದಬಲಕ್ಕೆ:
1. ಕಪ್ಪಾಗಿರುವ ಆನೆ (2)
2. ಮೂರಕ್ಷರದ ದಿನ (3)
4. ಮುಖದ ಮೇಲಿರಬೇಕಾದ ನಗು (2)
6. ಲೆಕ್ಕವನ್ನು ಬರೆಯುವವನು ಕಣಿ ಹೇಳುವುದಿಲ್ಲ (4)
8. ಯುಧಿಷ್ಠಿರ ಅಥವಾ ಯಮ ಆರಂಭದಲ್ಲಿ ದೀರ್ಘವಾಗಿದ್ದಾನೆ (4)
10. ರುಚಿ ತಿಳಿಸುವ ನಾಲಗೆ (3)
12. ಬುಟ್ಟಿ, ಹೆಡಿಗೆ (3)
13. ಬೆನ್ನೆಲುಬು ಕರುವಿನ ಮಧ್ಯೆ ಇದೆ (3)
14. ಒರಟು ಅಥವಾ ಒಂದು ಬಗೆಯ ಸುಡುಮದ್ದು (3)
16. ಬೇಲೂರಿನ ಹತ್ತಿರವಿರುವ ಇನ್ನೊಂದು ಶಿಲ್ಪಕಲೆಗಳ ತವರೂರು (4)
17. ಸಪ್ತಾಹದ ರಜಾ ದಿನ ಕೊನೆಗೆ ಅಸ್ತವ್ಯಸ್ತವಾಗಿ ಬಂದಿದೆ (4)
19. ಬರಹದ ಚಿಹ್ನೆಯಿದು (2)
20. ಕಡೆಗೆ ತಿರುಗಿ ಬಂದ ಸಮುದ್ರದ ಒಂದು ಬಗೆಯ ಚಿಪ್ಪು (3)
21. ಅಗ್ಗ ಎಂದರ್ಥ (2)

ಮೇಲಿನಿಂದಕೆಳಕ್ಕೆ:
1. ಚಿನ್ನದ ಇನ್ನೊಂದು ಹೆಸರು (3)
2. ಮತ್ತೊಂದು ಕೈಯನ್ನು ಕಟ್ಟಿಕೊಂಡಿರುವ ಸೂರ್ಯ (4)
3. ಸಂತೈಕೆ ಅಥವಾ ನೆಮ್ಮದಿ (4)
5. ನೈಜವಾದ ಅಥವಾ ಸ್ವಾಭಾವಿಕ (3)
7. ಸಮರದ ಆರಂಭದಲ್ಲಿ ಊದುವ ಕಹಳೆ (5)
9. ಅರಸರಲ್ಲಿ ಶ್ರೇಷ್ಠನಾದವನು (5)
11. ಕೈಯಿಂದ ನೇವರಿಸು (3)
14. ಬಂಧನದಿಂದ ಮುಕ್ತಿ (4)
15. ದೇವತೆಗಳ ಪ್ರಪಂಚ (4)
16. ಕೂಲಿಯ ಕೆಲಸಕ್ಕೆ ಹೀಗೆನ್ನಬಹುದು (3)
18. ಸರಸ್ವತಿಗೆ ಮತ್ತೊಂದು ಹೆಸರು (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಪತಾಕೆ 2. ಬಾಯಿಚಪಲ 5. ಪ್ರಾಣ 6. ಕೀಚಕ 8. ಚರಕ 10. ವಾಮ 11. ಸೂರ್ಯ 12. ಅಣಕ 14. ರಸೀತಿ 16. ಹುತ್ತ 17. ವಸ್ತ್ರ 19. ರುಮಾಲು 21. ತನುಜ 23. ಹತ್ತಿ 24. ವರ್ಗೀಕರಣ 25. ವಕ್ತಾರ

ಮೇಲಿನಿಂದಕೆಳಕ್ಕೆ: 1.ಪರಕೀಯ 2. ಬಾಣ 3. ಚಮತ್ಕಾರ 4. ಲಜ್ಜೆ 7. ಕಬ್ಬಿಣ 8. ಚಮರ 9. ಕಸೂತಿ 12. ಅತ್ತರು 13. ಕವಲು 15. ಸೀಮಂತ 18. ಅಜಗರ 20. ಮಾರಕ 22. ಮಾವ 23. ಹಣ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಭೂಮಿ ಮುಚ್ಚುವ ಬಂಗಾರ

ಇವತ್ತಿಗೆ ಏನಿಲ್ಲವೆಂದರೂ 10 ಗ್ರಾಂ ಬಂಗಾರಕ್ಕೆ 80 ಸಾವಿರ ರುಪಾಯಿ ಇರಬಹುದು. ಭಾರತದಲ್ಲಿ ಎಂಥ ಬಡವನ ಮನೆಗೆ ಹೋದರೂ ಸ್ವಲ್ಪನಾದರೂ ಚಿನ್ನ ಇದ್ದೇ ಇರುತ್ತೆ. ಹೆಂಗಸರಿಗೂ ಅಷ್ಟೇ ಮನೆಯಲ್ಲಿ ಎಷ್ಟು ಚಿನ್ನವಿದ್ದರೂ ಮತ್ತಷ್ಟು ಆಭರಣವನ್ನು ಕೊಳ್ಳುವ ಆಸೆಯೂ ಇದೆ. ಇನ್ನೂ

ಕೆಜಿಎಫ್ 2 ಚಿತ್ರದಲ್ಲಿ ಯಶ್ ತೆಗೆದುಕೊಂಡು ಹೋಗುವ ಬಂಗಾರದ ಗಟ್ಟಿಗಳನ್ನು ನೋಡಿದ ಮೇಲಂತೂ, ಅಷ್ಟು ಬಂಗಾರ ನಮ್ಮ ಹತ್ತಿರ ಇದ್ದರೆ ಹೇಗಿರುತ್ತಿತ್ತು ಎಂದು ಚಿಂತಿಸುವವರಿದ್ದಾರೆ. ಬಂಗಾರದ ಗಣಿಯಿಂದಲೇ ಖ್ಯಾತವಾಘಿದ್ದ ಕೆಜಿಎಫ್‌ನಲ್ಲಿ ಈಗ ಅಷ್ಟೊಂದು ಬಂಗಾರವೂ ಇಲ್ಲ. ಆದರೆ ಎಂದಾದರೂ ಯೋಚಿಸಿದ್ದೀರಾ? ಭೂಮಿಯ ಮೇಲೆ, ಭೂಮಿಯ ಪದರಗಳಲ್ಲಿ ಎಷ್ಟು ಬಂಗಾರವಿದೆ ಎಂದು? ಡಿಸ್ಕವರ್ ಮ್ಯಾಗಜೀನ್‌ನ ರಿಪೋರ್ಟ್‌ಗಳ ಪ್ರಕಾರ, ಸರಾಸರಿ 99 ರಷ್ಟು ಚಿನ್ನ ಭೂ ಮಧ್ಯಭಾಗದಲ್ಲಿ ಅಡಗಿದೆ ಅಂತೆ, ಅದು ಎಷ್ಟಾಗಬಹುದು ಎಂದರೆ, ಎಲ್ಲ ಚಿನ್ನವನ್ನು ಸೇರಿಸಿದರೆ, 1.5 ಫೀಟ್ ದಪ್ಪದ ಚಿನ್ನದ ಹೊದಿಕೆಯನ್ನು ಭೂಮಿಯ ಮೇಲೆ ಹಾಕಿಸಬಹುದಂತೆ. ಅದು ನಿಜವಾದರೆ, ಚಿನ್ನದ ರೋಡ್‌ಗಳ ಮೇಲೆ ವಾಹನಗಳನ್ನು ತೆಗೆದುಕೊಂಡು ಹೋಗುವ ದಿನ ದೂರವಿಲ್ಲ ಎಂದೆನಿಸುತ್ತದೆ!

ಸಮಾಚಾರ ಸಣ್ಣದಲ್ಲ

ವಿಶೇಷ ಚೇತನರ ಕುಂದು ಕೊರತೆ ಸಭೆ

ಕೊಟ್ಟೂರು: ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಬುಧವಾರ ವಿಶೇಷ ಚೇತನರ ಸಪ್ತಾಹ ಹಾಗೂ ವಿಶೇಷ ಚೇತನರ ಕುಂದು ಕೊರತೆ ಸಭೆ ಕಾರ್ಯನಿರ್ವಾಹಕ ಅಧಿಕಾರಿ ಡಾ.ಬಿ. ಆನಂದಕುಮಾರ್ ಸಮ್ಮುಖದಲ್ಲಿ ಜರುಗಿತು. ಸಭೆಯಲ್ಲಿ ತಾಲೂಕಿನ ವಿಶೇಷಚೇತನರಿಗೆ ನಿಯಮಾನುಸಾರ ಉದ್ಯೋಗ ಚೀಟಿ ನೀಡುವುದು, ಮಾಹಿತಿ ಸಲ್ಲಿಸುವುದು, ವಿಶೇಷ ಚೇತನರ ಸಂಘ ರಚನೆ ಮಾಡುವ ಬಗ್ಗೆ ಮಾಹಿತಿ ನೀಡಲಾಯಿತು. ಹಾಗೆಯೇ ಗ್ರಾಮೀಣ ಭಾಗದಲ್ಲಿ ವಿಶೇಷ ಚೇತನರಿಗೆ ಸಾಧನ, ಸಲಕರಣೆ ತಲುಪಿಸುವ ನಿಟ್ಟಿನಲ್ಲಿ ಕೆಲಸ ಮಾಡುವಂತೆ ವಿಶೇಷ ಚೇತನರ ಪ್ರತಿನಿಧಿಗಳಿಗೆ ತಿಳಿಸಿದರು. ಸಭೆಯಲ್ಲಿ ಮಾನ್ಯ ಸಹಾಯಕ ನಿರ್ದೇಶಕರು (ಗ್ರಾ.ಉ) ಶ್ರೀ.ಎಚ್.ವಿಜಯಕುಮಾರ್, ತಾಲೂಕು ಪಂಚಾಯಿತಿಯ ಅಧಿಕಾರಿಗಳು, ಸಿಬ್ಬಂದಿ, ಎಲ್ಲಾ ಗ್ರಾಮ ಪಂಚಾಯಿತಿಯ ವಿಆರ್ ಡಬ್ಲ್ಯು, ವಿಶೇಷ ಚೇತನರ ಸ್ವಸಹಾಯ ಸಂಘದ ಪ್ರತಿನಿಧಿಗಳು, ಗ್ರಾಮ ಪಂಚಾಯಿತಿಯ ವಿಶೇಷಚೇತರು ಭಾಗವಹಿಸಿದ್ದರು. ಎಂಆರ್ ಡಬ್ಲ್ಯು ಪ್ರಭಾರ ಲಕ್ಷ್ಮೀ ತೆಗ್ಗಿನಕೇರಿ ನಿರೂಪಿಸಿದರು. ನಿಂಬಳಗೇರಿ ಗ್ರಾಪಂನ ಪ್ರೇಮಾ ಸ್ವಾಗತಿಸಿದರು.

ಸಮಾಲೋಚಕರ ಹುದ್ದೆ ಆಕ್ಷೇಪಣೆಗೆ ಆಹ್ವಾನ

ಹೊಸಪೇಟೆ: ರಾಷ್ಟ್ರೀಯ ಆರೋಗ್ಯ ಅಭಿಯಾನ ಮತ್ತು ರಾಷ್ಟೀಯ ನಗರ ಆರೋಗ್ಯ ಅಭಿಯಾನ ಯೋಜನೆಗಳಡಿ ಆರೋಗ್ಯ ಇಲಾಖೆಯಿಂದ ಆಹ್ವಾನಿಸಿದ್ದ ಜಿಲ್ಲೆಯ ಆಪ್ತ ಸಮಾಲೋಚಕರ ಹುದ್ದೆಯ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಿದ್ದು ಆಕ್ಷೇಪಣೆಗೆ ಆಹ್ವಾನಿಸಲಾಗಿದೆ. ಆಕ್ಷೇಪಣೆಗಳನ್ನು ಡಿ.13ರ ಸಂಜೆ 5.30ರೊಳಗಾಗಿ ಸಲ್ಲಿಸಬಹುದು. ಈ ನೇಮಕಾತಿಯ ಒಟ್ಟು ಅರ್ಜಿ ಸಲ್ಲಿಸಿದವರ ಪಟ್ಟಿ, ತಾತ್ಕಾಲಿಕ ಆಯ್ಕೆ ಪಟ್ಟಿ, ಕಾಯ್ದಿರಿಸಿದ ಆಯ್ಕೆ ಪಟ್ಟಿ ತಿರಸ್ಕೃತ ಅರ್ಜಿಗಳ ಪಟ್ಟಿಗಳನ್ನು ಜಿಲ್ಲಾ ಆರ್.ಸಿ.ಎಚ್ ಅಧಿಕಾರಿಗಳ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಯಾವುದಾದರೂ ಆಕ್ಷೇಪಣೆಗಳಿದ್ದಲ್ಲಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಕಚೇರಿಯ ಸಮಯದಲ್ಲಿ ಲಿಖಿತ ರೂಪದಲ್ಲಿ ಆಕ್ಷೇಪಣೆ ಸಲ್ಲಿಸಬಹುದಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದ ಉಪಾಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಪ್ಪಿಸಿಕೊಂಡು ಹೋದ ಆರೋಪಿಗೆ ದಂಡ, ಶಿಕ್ಷೆ

ಹರಪನಹಳ್ಳಿ: ಸುಮಾರು 6 ವರ್ಷಗಳ ಹಿಂದೆ ಹರಪನಹಳ್ಳಿ ಪೊಲೀಸ್ ಠಾಣೆಯಲ್ಲಿ ಭಾರತೀಯ ದಂಡ ಸಂಹಿತೆ ಕಲಂ.225(ಬಿ) ರ ಅಡಿಯಲ್ಲಿ ಪ್ರಕರಣ ದಾಖಲಾಗಿದ್ದು, ಸದರಿ ಪ್ರಕರಣದ ದೋಷರೋಪಣ ಪಟ್ಟಿ ಮಾನ್ಯ ಘನ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಸಿ.ಸಿ.131, 2018 ಎಂದು, ಪ್ರಕರಣ ದಾಖಲಾಗಿರುತ್ತದೆ. ಅಬಕಾರಿ ಇಲಾಖೆಯ ಪೊಲೀಸ್‌ರ ವಶದಿಂದ ತಪ್ಪಿಸಿಕೊಂಡ ಹೋದ ಆರೋಪಿತನ ವಿರುದ್ಧ ಭಾರತಿಯ ದಂಡ ಸಂಹಿತೆ ಕಾಯ್ದೆ ಕಲಂ.225(ಬಿ) ರ ಅಡಿಯಲ್ಲಿ ಪ್ರಕರಣ ದಾಖಲಾಗಿದ್ದು, ಸರಕಾರದ ಪರವಾಗಿ ಸರಕಾರಿ ಅಭಿಯೋಜಕಿ ಮೀನಾಕ್ಷಿ. ಎನ್. ವಾದ ಮಂಡಿಸಿದರು ವಾದ ವಿವಾದ ಆಲಿಸಿದ ಹರಪನಹಳ್ಳಿ ಜೆ.ಎಂ.ಎಫ್.ಸಿ.ನ್ಯಾಯಾಲಯದ ನ್ಯಾಯಾಧೀಶ ಮನು ಶರ್ಮ. ಎಸ್.ಪಿ. ಆರೋಪಿತನಿಗೆ ಒಂದು ತಿಂಗಳು ಶಿಕ್ಷೆ ಮತ್ತು 2000 ರು. ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಆರೋಪಿಗೆ 1ತಿಂಗಳುಗಳ ಕಾಲ ಸಾದಾ ಸೆರೆವಾಸ ಮತ್ತು 2000 ರು. ದಂಡ ವಿಧಿಸಲಾಗಿದೆ. ದಂಡ ಪಾವತಿಸಲು ತಪ್ಪಿದ್ದಲ್ಲಿ ಸಾದಾ ಸೆರೆವಾಸ ಅನುಭವಿಸಬೇಕೆಂದು ಆದೇಶಿಸಲಾಗಿದೆ. ಎಂದು ಸರಕಾರಿ ಅಭಿಯೋಜಕಿ ಮೀನಾಕ್ಷಿ. ಎನ್.ಪತ್ರಿಕಾ ಪ್ರಕಟಣೆಗೆ ತಿಳಿಸಿದ್ದಾರೆ.

5ಕ್ಕೇರಿದ ಬಾಣಂತಿಯರ ಸಾವಿನ ಸರಣಿ

ಬಳ್ಳಾರಿ: ಜಿಲ್ಲಾಸ್ಪತ್ರೆಯಲ್ಲಿ ಬಾಣಂತಿಯರ ಸಾವಿನ ಸರಣಿ ಮುಂದುವರಿದಿದೆ. ಬಿಮ್ಸ್ ಆಸ್ಪತ್ರೆಯಲ್ಲಿ ಸಿಸೇರಿಯನ್ ಮಾಡಿಸಿಕೊಂಡ ಬಳಿಕ ಮತ್ತೋರ್ವ ಬಾಣಂತಿ ಸಾವನ್ನಪ್ಪಿದ್ದಾರೆ. ಸುಮಯಾ (25) ಮೃತ ಬಾಣಂತಿ. ಈಕೆ ಕಳೆದ 23 ದಿನಗಳಿಂದ ಬಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. (ಡಿ.5) ಚಿಕಿತ್ಸೆ ಫಲಿಸದೇ ಮೃತಪಟ್ಟಿದ್ದಾರೆ. ಈ ಪೈಕಿ ಮೃತ ಬಾಣಂತಿಯರ ಸಂಖ್ಯೆ 5ಕ್ಕೇರಿದೆ. ಸಿಸೇರಿಯನ್ ಮಾಡಿಸಿಕೊಂಡ ಬಳಿಕ ಸುಮಯಾ ಆರೋಗ್ಯದಲ್ಲಿ ಏರುಪೇರಾಗಿತ್ತು. ಹೀಗಾಗಿ ನವೆಂಬರ್ 12 ರಂದು ಸುಮಾಯ ಅವರನ್ನ ಬಿಮ್ಸ್‌ಗೆ ರವಾನೆ ಮಾಡಲಾಗಿತ್ತು. ಈ ನಡುವೆ ಕಿಡ್ನಿ ವೈಫಲ್ಯವಾಗಿ ಸತತ ಡಯಾಲಿಸಿಸ್ ಮಾಡಲಾಗ್ತಿತ್ತು. ಆದರೂ ಚಿಕಿತ್ಸೆ ಫಲಕಾರಿಯಾಗದೇ 23 ದಿನಗಳ ಬಳಿಕ ಸುಮಯಾ ಸಾವನ್ನಪ್ಪಿದ್ದಾರೆ. ಆರೋಗ್ಯವಾಗಿದ್ದ ಹಸುಗೂಸು ಏಕಾಏಕೀ ಸಾವು: ಗುರುವಾರ (ಡಿ.5) ಮಧ್ಯಾಹ್ನ ಬಿಮ್ಸ್ ಆಸ್ಪತ್ರೆಯಲ್ಲೇ ನವಜಾತ ಶಿಶುವೊಂದು ಸಾವನ್ನಪ್ಪಿತ್ತು. ಹೆರಿಗೆ ಬಳಿಕ ಆರೋಗ್ಯವಾಗಿದ್ದ ಮಗು ಏಕಾಏಕೀ ಮೃತಪಟ್ಟಿತ್ತು. ಈ ಬೆನ್ನಲ್ಲೇ ಓರ್ವ ಬಾಣಂತಿ ಸಾವನ್ನಪ್ಪಿರುವ ಘಟನೆ ಸಾರ್ವಜನಿಕರ ಆತಂಕಕ್ಕೆ ಕಾರಣವಾಗಿದೆ.

{ಬಿ.ಎಸ್.ಯಡಿಯೂರಪ್ಪ} ಮಾಜಿ ಸಿಎಂ

ನಮ್ಮ ಹೋರಾಟ ಕಾಂಗ್ರೆಸ್ ವಿರುದ್ಧವೇ ಹೊರತು, ನಾವು ನಾವೇ ಬಡಿದಾಡಿಕೊಳ್ಳುವುದಲ್ಲ. ಇದು ಹೆಚ್ಚು ಶಕ್ತಿಯನ್ನು ನೀಡುವುದಿಲ್ಲ. ಅದಕ್ಕಾಗಿ ಎಲ್ಲವನ್ನೂ ಮರೆತು ಒಟ್ಟಾಗಿ ಹೋಗಬೇಕು. ಅಧಿವೇಶನವನ್ನು ಯಾವುದೇ ಗೊಂದಲವಿಲ್ಲದೆ ನಾವೆಲ್ಲ ಒಟ್ಟಾಗಿ ಎದುರಿಸುತ್ತೇವೆ.

ಮಕ್ಕಳೊಂದಿಗೆ ಮುಕ್ತ ಸಂವಾದ | ಮಕ್ಕಳಿಗೆ ಸಂಬಂಧಿಸಿದ ಕಾಯಿದೆಗಳ ಕುರಿತು ಜಾಗೃತಿ ಕಾರ್ಯಕ್ರಮ | ಶಸಿಧರ್ ಕೋಸಂಬೆ ಭಾಗಿ

ಸಹಾಯವಾಣಿಗೆ ಕರೆ ಬಂದರೆ ಮಕ್ಕಳ ರಕ್ಷಣೆ ಸಾಧ್ಯ

ಹೊಸಪೇಟೆ: ಮಗುವಿಗೆ ಸಹಪಾಠಿ ಹಾಗೂ ಸ್ನೇಹಿತರು ಇದ್ದೇ ಇರುತ್ತಾರೆ. ಸಂಕಷ್ಟದಲ್ಲಿರುವವರನ್ನು ಕಂಡಾಗ ಪೋಷಕರಿಗೆ ಅಥವಾ ಶಿಕ್ಷಕರಿಗೆ, ಪೊಲೀಸ್ ಇಲಾಖೆ ಅಥವಾ ಮಕ್ಕಳ ಸಹಾಯವಾಣಿಗೆ ಕರೆ ಮಾಡಿ ಮಾಹಿತಿ ನೀಡಿ ಸಹಾಯ ಮಾಡಿದರೆ ಮಾತ್ರ ಮಕ್ಕಳ ರಕ್ಷಣಾ ಕಾಯಿದೆಗಳ ಪೂರಕ ಅನುಷ್ಠಾನ ಸಾಧ್ಯವಾಗಲಿದೆ ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಸಿಧರ್ ಕೋಸಂಬೆ ಹೇಳಿದರು.

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಬೆಂಗಳೂರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಇತರೆ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಮಕ್ಕಳೊಂದಿಗೆ ಮುಕ್ತ ಸಂವಾದ ಹಾಗೂ ಮಕ್ಕಳಿಗೆ ಸಂಬಂಧಿಸಿದ ಕಾಯಿದೆಗಳ ಕುರಿತು ಜಾಗೃತಿ ಕಾರ್ಯಕ್ರಮದಲ್ಲಿ ಮಕ್ಕಳ ಪ್ರಶ್ನೆಗಳಿಗೆ ಉತ್ತರಿಸಿದರು.

ಮಕ್ಕಳು ತಮ್ಮ ಹಕ್ಕುಗಳ ಬಗ್ಗೆ ತಿಳಿದಿರಬೇಕು. ಮಕ್ಕಳಿಗಾಗಿ ರೂಪಿಸಿರುವ ಕಾನೂನುಗಳಾದ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಅಧಿನಿಯಮ 2009, ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ)

ಹೊಸಪೇಟೆ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಕ್ಕಳೊಂದಿಗೆ ಮುಕ್ತ ಸಂವಾದ ಹಾಗೂ ಮಕ್ಕಳಿಗೆ ಸಂಬಂಧಿಸಿದ ಕಾಯಿದೆ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡಿದ್ದರು.

ಅಧಿನಿಯಮ, 2015, ಮತ್ತು ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ, ಶೋಷಣೆ, ಮತ್ತು ಲೈಂಗಿಕ ಕಿರುಕುಳದಿಂದ ಮಕ್ಕಳನ್ನು ರಕ್ಷಿಸಲು ಜಾರಿಮಾಡಿರುವ ಪೋಕ್ಸೋ ಕಾಯಿದೆ 2012ರ ಸಂಪೂರ್ಣ ಅರಿವು ಮಕ್ಕಳಿಗಿರಬೇಕು. ಒಬ್ಬ ವಿದ್ಯಾರ್ಥಿ ಕಾನೂನುಗಳ ಬಗ್ಗೆ ತಿಳಿದುಕೊಂಡರೆ ಒಂದು ಕುಟುಂಬ ಪರಿವರ್ತನೆಯಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ಹೆಣ್ಣು ಮಕ್ಕಳು ದೌರ್ಜನ್ಯಕ್ಕೆ ಒಳಗಾದರೆ ಏನೆಲ್ಲ ಕ್ರಮಗಳನ್ನು ಕೈಗೊಳ್ಳಬೇಕು. ಶಾಲೆಗಳಲ್ಲಿ ಸರಿಯಾದ ಶೌಚಾಲಯ, ಕುಡಿಯುವ ನೀರು, ಶಾಲೆಗೆ ಕಾಂಪೌಂಡ್ ಗಳು, ಶಾಲೆಗಳಿಗೆ ಹೋಗಲು ಬಸ್ ಸೌಕರ್ಯದ ವ್ಯವಸ್ಥೆಗಳಿಲ್ಲ ಎಂದು ಮತ್ತು ಹೆಣ್ಣು ಭ್ರೂಣ ಹತ್ಯೆ, ಬಾಲ ನ್ಯಾಯ, ಪೋಕ್ಸೋ ಕಾಯಿದೆಯ ಬಗ್ಗೆ ಹಾಗೂ ಮಕ್ಕಳ ಹಕ್ಕುಗಳ ರಕ್ಷಣೆಗೆ ಇರುವ ಕಾನೂನುಗಳ ಬಗ್ಗೆ ತಿಳಿಯಲು ವಿದ್ಯಾರ್ಥಿಗಳು ವಿಧ ವಿದವಾದ ಪ್ರಶ್ನೆಯ ಸುರಿಮಳೆಗೈದರು.

ಮಕ್ಕಳ ಹಕ್ಕುಗಳ ನಿರ್ದೇಶನಾಲಯದ ನಿರ್ದೇಶಕ ಡಾ.ಎಂ.ಆರ್ ರವಿ ಮಕ್ಕಳ ಪ್ರಶ್ನೆಗಳಿಗೆ ಉತ್ತರಿಸಿ, ಮಕ್ಕಳು ಯಾವಾಗ ಎಲ್ಲ ರಂಗದಲ್ಲಿ ಭಾಗವಹಿಸಿ ಅದರ ಬಗ್ಗೆ ಪ್ರಶ್ನೆಗಳನ್ನು ಕೇಳುತ್ತಾರೋ ಅವಾಗ ಮಾತ್ರ ಅವರಿಗೆ ಸಂಪೂರ್ಣ ಜ್ಞಾನಾರ್ಜನೆಯಾಗುತ್ತದೆ. ಮಕ್ಕಳು ಸಮಾಜದಲ್ಲಿನ ಸಂಕಷ್ಟ ಎದುರಿಸಿ, ಉತ್ತಮ ವಿದ್ಯಾಭ್ಯಾಸ ಪಡೆಯಲು, ಕಾಯಿದೆ ಕಾನೂನು ಮಾಡಿರುವುದು ಎಂದರು.

> **ಮಕ್ಕಳ ಮೇಲೆ ಆಗುವ ಲೈಂಗಿಕ ದೌರ್ಜನ್ಯಗಳು ಹೆಚ್ಚಾಗಿ ಮನೆಯಲ್ಲಿ ಅಥವಾ ಅಕ್ಕ ಪಕ್ಕದ ಪಕ್ಕದವರಿಂದ ಆಗುತ್ತವೆ ಎಂದು ವರದಿಗಳು ಹೇಳುತ್ತವೆ. ಮಕ್ಕಳು ದೌರ್ಜನ್ಯಕ್ಕೆ ಒಳಗಾದರೆ ಹತ್ತಿರದ ಪೊಲೀಸ್ ಠಾಣೆಗೆ ಹೋಗಿ ದೂರು ದಾಖಲಿಸಬೇಕು. ಮಕ್ಕಳ ರಕ್ಷಣೆಗಾಗಿಯೇ ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕ ಪೊಲೀಸ್ ರಿರುತ್ತಾರೆ. ಅವರಲ್ಲಿ ನಿಮ್ಮ ದೂರನ್ನು ದಾಖಲಿಸಬಹುದು.**
> **-ಶಸಿಧರ್ ಕೋಸಂಬೆ,** ರಕ್ಷಣಾ ಆಯೋಗದ ಸದಸ್ಯ

ಹೆಣ್ಣು ಮಕ್ಕಳು ಲೈಂಗಿಕ ದೌರ್ಜನ್ಯಕ್ಕೆ ಒಳಗಾದರೆ ಅಥವಾ ಒಳಗಾದ ತಮ್ಮ ಸ್ನೇಹಿತರ ಬಗ್ಗೆ ತಿಳಿದರೆ ಕೂಡಲೆ ಮಕ್ಕಳ ಸಹಾಯವಾಣಿಗೆ ಅಥವಾ ಪೊಲೀಸ್ ಇಲಾಖೆಗೆ ಮಾಹಿತಿ ನೀಡಬೇಕು. ಹೆಣ್ಣು ಮಕ್ಕಳು ಗುಡ್ ಟಚ್ ಮತ್ತು ಬ್ಯಾಡ್ ಟಚ್ ಬಗ್ಗೆ ತಿಳಿದಿರಬೇಕು. ಮಕ್ಕಳ ರಕ್ಷಣಾ ಮತ್ತು ಸಂರಕ್ಷಣಾ ಕಾಯಿದೆ 2006 ರ ಪ್ರಕಾರ ಹುಡುಗಿಯ ಮನಸ್ಸಿಗೆ ವಿರುದ್ಧವಾಗಿ ಮದುವೆ ಮಾಡಿದರೆ ಅದನ್ನು ಆಸಿಂಧು ಎಂದು ಪರಿಗಣಿಸಲಾಗುವುದು ಎಂದು ಹೇಳಿದರು.

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ಮಾತನಾಡಿ, ಯಾವ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳು ಇಲ್ಲವೋ, ಅಂತಹ ಶಾಲೆಗಳಲ್ಲಿ ಅದಾಷ್ಟು ಬೇಗ ಎಲ್ಲ ಸೌಕರ್ಯ ಕಲ್ಪಿಸಲಾಗುವುದು. ಸಮಾಜದಲ್ಲಿ ಹೆಣ್ಣು ಭ್ರೂಣ ಹತ್ಯೆ, ಬಾಲ್ಯ ವಿವಾಹಗಳು ಇಂದಿಗೂ ಸಮಾಜಿಕ ಪಿಡುಗಾಗಿವೆ. ಅವುಗಳನ್ನು ಹೋಗಲಾಡಿಸಲು ಕಾನೂನು ಜತೆ ಸಮಾಜವು ಸಹಕರಿಸಬೇಕು. ಈ ಬಗ್ಗೆ ವಿದ್ಯಾವಂತ ಮಕ್ಕಳು ಪೋಷಕರಿಗೆ ತಿಳಿಸಬೇಕು ಎಂದು ಮಕ್ಕಳಿಗೆ ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿ ಬಾಬು ಬಿ.ಎಲ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಎಸ್.ಶ್ವೇತಾ, ಡಿಡಿಪಿಐ ವೆಂಕಟೇಶ ರಾಮಚಂದ್ರಪ್ಪ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸುದೀಪ್ ಕುಮಾರ ಉಂಕಿ ಹಾಗೂ ಇನ್ನಿತರ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಬಾಲಕರ ವಸತಿ ನಿಲಯ ಉದ್ಘಾಟನೆ

ಸರಕಾರಿ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯವನ್ನು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ದಿವಾಕರ್ ಉದ್ಘಾಟಿಸಿದರು.

ಸಿರುಗುಪ್ಪ: ಮಕ್ಕಳು ಈ ದೇಶದ ಆಸ್ತಿಯಾಗಿದ್ದು, ಅವರ ಉಜ್ವಲ ಭವಿಷ್ಯ ಉತ್ತಮವಾಗಬೇಕಾದರೆ ಮೂಲಭೂತ ಸೌಲಭ್ಯ ಒದಗಿಸಿದಾಗ ಮಾತ್ರ ಸಾಧ್ಯವಾಗುತ್ತದೆ. ಆದ್ದರಿಂದ ಪ್ರತಿಯೊಬ್ಬ ತಂದೆತಾಯಿಯು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕೆಂದು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ದಿವಾಕರ್ ತಿಳಿಸಿದರು.

ನಗರದ ಹೊರವಲಯದಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ 3ಕೋಟಿ ರು.ವೆಚ್ಚದಲ್ಲಿ ನಿರ್ಮಿಸಲಾದ ಸರಕಾರಿ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯ ಉದ್ಘಾಟಿಸಿ ಮಾತನಾಡಿದರು. ಸರಕಾರ ವಿದ್ಯಾರ್ಥಿಗಳ ಶೈಕ್ಷಣಿಕ ಕ್ಷೇತ್ರಕ್ಕೆ ಅನೇಕ ಯೋಜನೆ ರೂಪಿಸಿದೆ. ಹಳ್ಳಿಯ ರೈತರ ಮಕ್ಕಳು ಸಹ ಉತ್ತಮ ಶಿಕ್ಷಣ ಪಡೆಯಬೇಕಾದರೆ ವಿದ್ಯಾರ್ಥಿ ನಿಲಯಗಳು ಸುಸಜ್ಜಿತ ಕಟ್ಟಡ ಹೊಂದಿರಬೇಕು. ಆಗ ಉತ್ತಮ ಫಲಿತಾಂಶ ಬರಲು ಸಾಧ್ಯವಾಗುತ್ತದೆ. ಗುಣಮಟ್ಟದ ಶಿಕ್ಷಣ ಪಡೆಯಲು ವಿದ್ಯಾರ್ಥಿಗಳಿಗೆ ವಸತಿ ನಿಲಯಗಳ ಅವಶ್ಯಕತೆ ಮುಖ್ಯವಾಗಿರುತ್ತದೆ.

ವಸತಿ ನಿಲಯದಲ್ಲಿರುವ ವಿದ್ಯಾರ್ಥಿಗಳು ಇದನ್ನು ತಮ್ಮ ಮನೆ ಎಂದು ಭಾವಿಸಿಕೊಂಡು ಸ್ವಚ್ಛವಾಗಿಟ್ಟುಕೊಳ್ಳಬೇಕು. ಅಲ್ಲದೆ ಓದಲು ಉತ್ತಮ ಪರಿಸರ ನಿರ್ಮಾಣ ಮಾಡಿಕೊಳ್ಳಬೇಕೆಂದು ಹೇಳಿದರು. ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ತಾಲೂಕು ಅಧಿಕಾರಿ ರಾಘವೇಂದ್ರ ವರ್ಮಾ, ನಿಲಯಪಾಲಕ ಟಿ.ಪರಮೇಶ, ಶರಣಪ್ಪ, ಮಹೇಶ್ ಕುಮಾರ್, ಶಶಿಧರ್ ಪಾಟೀಲ್, ಅಮರೇಶ್ವರಿ ಮತ್ತು ಸಿಬ್ಬಂದಿ ಇದ್ದರು.

ಜಿಲ್ಲಾ ಯುವಜನೋತ್ಸವಕ್ಕೆ ಸ್ಪರ್ಧಿಗಳ ಸಂಖ್ಯೆ ಕಡಿಮೆ !

ಹೊಸಪೇಟೆ: ನಗರದ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಯುವಜನೋತ್ಸವ ಉತ್ಸಾಹದಿಂದ ಮತ್ತು ಅಚ್ಚುಕಟ್ಟಾಗಿ ನಡೆಯಿತಾದರೂ ಸ್ಪರ್ಧಿಗಳ ಸಂಖ್ಯೆ ಕಡಿಮೆ ಇತ್ತು. ಕಲ್ಯಾಣ ಕರ್ನಾಟಕದ ಇತರ ಜಿಲ್ಲೆಗಳಿಗೆ ಹೋಲಿಸಿದರೆ ಇಲ್ಲೇ ಅತ್ಯುತ್ತಮ ರೀತಿಯಲ್ಲಿ ಕಾರ್ಯಕ್ರಮ ನಡೆಯಿತು.

ಜನಪದ ನೃತ್ಯಕ್ಕೆ ನಾಲ್ಕು ತಂಡಗಳಷ್ಟೇ ಇದ್ದವು. ಕವಿತೆ ಬರೆಯುವವರ ಸಂಖ್ಯೆಯೂ ಕಡಿಮೆ ಇತ್ತು. ಪೇಂಟಿಂಗ್‌ನಲ್ಲಿ 15 ಮಂದಿ, ಫೋಟೋಗ್ರಫಿ ಸ್ಪರ್ಧೆಯಲ್ಲಿ 11 ಮಂದಿ ಇದ್ದರು. ಇದ್ದುದರಲ್ಲಿ ಹೆಚ್ಚು ಸ್ಪರ್ಧಿಗಳನ್ನು ಕಂಡಿದ್ದು ಇದೇ ವಿಭಾಗಗಳಲ್ಲಿ. ಅಂತೂ ಮಧ್ಯಾಹ್ನ 1 ಗಂಟೆಗೆ ಆರಂಭವಾದ ಸ್ಪರ್ಧೆಗಳು ಸಂಜೆಯೊಳಗೆ ಕೊನೆಗೊಂಡು ಯುವಜನೋತ್ಸವ ಕೊನೆಗೊಂಡಿತು.

ರಾಜ್ಯ ಮಟ್ಟದ ಯುವಜನೋತ್ಸವ ಸ್ಪರ್ಧೆಗೆ ದಿನಾಂಕ ಹತ್ತಿರವಾಗುತ್ತಿದೆ. ಆದರೆ ಕಲಬುರ್ಗಿ, ಬೀದರ್, ಯಾದಗಿರಿ ಜಿಲ್ಲೆಗಳಲ್ಲಿ ಇನ್ನೂ ಜಿಲ್ಲಾ ಮಟ್ಟದ ಯುವಜನೋತ್ಸವ ನಡೆದಿಲ್ಲ, ಕೊಪ್ಪಳದಲ್ಲಿ ನಡೆದ ಯುವಜನೋತ್ಸವದಲ್ಲಿ ವಿಜಯನಗರ ಜಿಲ್ಲೆಯ ಅರ್ಧದಷ್ಟು ಸ್ಪರ್ಧಿಗಳೂ ಇರಲಿಲ್ಲ, ಇದೆಲ್ಲವನ್ನೂ ಗಮನಿಸಿದಾಗ ಈ ಬಾರಿ ವಿಜಯನಗರ ಜಿಲ್ಲೆಯಲ್ಲಿ ತಕ್ಕಮಟ್ಟಿಗೆ ಯಶಸ್ವಿಯಾಗಿ ಉತ್ಸವ ನಡೆದಿದೆ ಎಂದು ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟದ ಕಲಬುರ್ಗಿ ವಿಭಾಗೀಯ ಸಂಚಾಲಕ ಮಂಜುನಾಥ ಜಿ.ಗೊಂಡಬಾಳ ತಿಳಿಸಿದರು.

ಕಲಬುರ್ಗಿ ವಿಭಾಗ ಮಟ್ಟದ ಪದವಿಪೂರ್ವ ಕಾಲೇಜುಗಳ ಉತ್ಸವ ಸಹ ಬುಧವಾರವೇ ನಗರದ ವಿಎನ್‌ಸಿ ಕಾಲೇಜ್‌ನಲ್ಲಿ ನಡೆಯಿತು. ಸ್ಪರ್ಧೆಗಳು ಸ್ವಲ್ಪ ಕಡಿಮೆ ಆಗಲು ಇದೂ ಕಾರಣವಾಗಿರಬಹುದು. ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಚ್.ಎನ್.ಎಫ್.ಮೊಹಮ್ಮದ್ ಇಮಾಮ್ ನಿಯಾಜಿ ಉದ್ಘಾಟಿಸಿದರು. ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟದ ಅಧ್ಯಕ್ಷ ಎಸ್. ಬಾಲಾಜಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಕೆ. ಗ್ರೇಸಿ, ನೆಹರೂ ಯುವ ಕೇಂದ್ರದ ಜಿಲ್ಲಾ ಅಧಿಕಾರಿ ಮೋಂಟು ಪತ್ತಾರ, ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟದ ಜಿಲ್ಲಾ ಘಟಕದ ಅಧ್ಯಕ್ಷ ಗುಂಡಿ ರಮೇಶ, ಚಲನಚಿತ್ರ ಸಂಗೀತ ನಿರ್ದೇಶಕ ಸ್ಯಾಮಸನ್ ಪೆಂಡಮ್, ಕಲಾವಿದ ಪಿ.ಅಂಜು, ಭಾರತಿ ಗುಂಡಿ, ಉಮೇಶ ಸುರ್ವೆ ಇತರರು ಪಾಲ್ಗೊಂಡಿದ್ದರು.

ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮವನ್ನು ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಚ್.ಎನ್.ಎಫ್.ಮೊಹಮ್ಮದ್ ಇಮಾಮ್ ನಿಯಾಜಿ ಉದ್ಘಾಟಿಸಿದರು.

ರಾಜ್ಯಮಟ್ಟಕ್ಕೆ ಆಯ್ಕೆಯಾದ ವಿಜೇತರು

ಜಿಲ್ಲಾ ಮಟ್ಟದ ಯುವಜನೋತ್ಸವದಲ್ಲಿ ಮೊದಲ ಸ್ಥಾನ ಪಡೆದವರು ಮಾತ್ರ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಫಲಿತಾಂಶ: ಭಾಷಣ: ಅಂಕೇಶ್ ಎಚ್., ನಾಗರಾಜ, ಅನಿಲ್ ಎಚ್. ಕವಿತೆ ರಚನೆ: ಗಂಟಿ ಸಂತೋಷ್, ನಾಗರಾಜ್, ಕಮ್ಮಾರ್ ಗಣೇಶ್. ಕಥೆ: ಜ್ಯೋತಿ, ಸಂಜನಾ, ಶ್ರದ್ಧಾ. ಛಾಯಾಗ್ರಹಣ: ಶ್ರೀನಿವಾಸ ಗೌಡ, ಸುದೀಪ್ ಕೆ.ಎಸ್, ಪ್ರಿಯಾಂಕಾ ವಿ. ಪೇಂಟಿಂಗ್:ಜಿಯಾ ಅಹ್ಮದ್ ಖಾದ್ರಿ, ನವೀನ್‌ಕುಮಾರ್ ಎಚ್, ನಿವೇದಿತಾ ಸಿ.ಎ. ಜಾನಪದ ಗೀತೆ (ಏಕವ್ಯಕ್ತಿ): ಪಿ.ಕಾವ್ಯ, ಅನಿಲ್ ಎಚ್., ನೇಹಾ ಪಿ.ಬಿ. ಜಾನಪದ ಗೀತೆ (ಗುಂಪು): ಜ್ಯೋತಿ, ಅಂಕೇಶ್, ನೇಹಾ ಪಿ.ಬಿ. ಜಾನಪದ ನೃತ್ಯ (ವೈಯಕ್ತಿಕ): ಅಮೃತಾ ಪಿ.ಎಸ್, ಅಪೂರ್ವ ಜಿ.,3.ಎ.ಸ್ನೇಹಾ. ಜಾನಪದ ನೃತ್ಯ (ಗುಂಪು): ಗಂಗಾಶ್ರೀ ಮತ್ತು ತಂಡ, ಕೆ.ಕಾವ್ಯ ಮತ್ತು ತಂಡ, ನಾಗರಾಜ ಮತ್ತು ತಂಡ.

ಬಜೆಟ್‌ನಲ್ಲಿ ಕಡಿತ: ವಿಶೇಷ ಚೇತನರ ಆಕ್ರೋಶ

ಬಳ್ಳಾರಿ: ರಾಜ್ಯ ಸರಕಾರ 2024-25 ನೇ ಸಾಲಿನ ಬಜೆಟ್‌ನಲ್ಲಿ ವಿಶೇಷಚೇತನರ ಅಭಿವೃದ್ಧಿಯ 7 ಯೋಜನೆಗಳಿಗೆ 54 ಕೋಟಿ ರು. ನೀಡಬೇಕಾದ್ದನ್ನು ಕೇವಲ 10 ಕೋಟಿ ರು.ನೀಡಿ ಅಂದಾಜು ಶೇ. 80 ರಷ್ಟು ಕಡಿತಗೊಳಿಸಿರುವುದು, ಸರಕಾರ ವಿಕಲಚೇತನರ ಆಕ್ರೋಶಕ್ಕೆ ಗುರಿಯಾಗಿದೆ ಎಂದು ವಿಶೇಷಚೇತನರು ತಿಳಿಸಿದರು.

ವಿಧಾನಪರಿಷತ್ ಸದಸ್ಯ ವೈ.ಎಂ. ಸತೀಶ್ ಅವರಿಗೆ ಮನವಿ ಸಲ್ಲಿಸಿ ಮಾತನಾಡಿದ ಸಂಘದ ಪ್ರಮುಖರು ಬಜೆಟ್‌ನಲ್ಲಿ ಕಡಿತಗೊಂಡಿರುವ 44 ಕೋಟಿ ರು. ಅನುದಾನವನ್ನು ಪೂರಕ ಅಂದಾಜಿ ನಲ್ಲಿ ಮರು ಮಂಜೂರು ಮಾಡಲಾಗುತ್ತದೆ ಎಂದು ಹೇಳುವ ಮೂಲಕ ಆಕ್ರೋಶಗೊಂಡಿದ್ದ, ನಾಡಿನ ವಿಕಲಚೇತನರನ್ನು ಸಮಾಧಾನಪಡಿಸಲು ಯತ್ನಿಸಿದ್ದಾರೆ ಎಂದರು.

ಆಂಧ್ರಪ್ರದೇಶ-ತೆಲಂಗಾಣ ಹಾಗೂ ದೇಶದ ಇತರೆ ರಾಜ್ಯಗಳನ್ನು ಗಮನಿಸಿದಾಗ, ಕರ್ನಾಟಕದಲ್ಲಿ ವಿಕಲಚೇತನರಿಗೆ ಪಾವತಿಸುತ್ತಿರು ವ ಪಿಂಚಣಿ ಮೊತ್ತವು ತೀರ ಕಡಿಮೆ. ಈ ಮೊತ್ತವನ್ನು 5 ರಿಂದ 10 ಪಟ್ಟು ಹೆಚ್ಚಿಸಲೇಬೇಕು. ವಿಕಲಚೇತನರಲ್ಲಿ 21 ವಿಧಗಳಿವೆ. ಈ ಪೈಕಿ 5 ರೀತಿಯ ವಿಕಲಚೇತನರ ಆರೈಕೆದಾರರನ್ನು 'ಕೇರ್‌ಗಿವರ್'ಗಳೆಂದು ಪರಿಗಣಿಸಿರುವ ಕರ್ನಾಟಕ ಸರಕಾರ ಪ್ರತಿ ತಿಂಗಳು 1 ಸಾವಿರ ರು. ಗೌರವ ಧನ ನೀಡುವ ಯೋಜನೆ ಜಾರಿ ಮಾಡಿದೆ.

ವಿಕಲಚೇತರ ಮನವಿ ಸ್ವೀಕರಿಸಿದ ವಿಧಾನಪರಿಷತ್ ಸದಸ್ಯ ವೈ.ಎಂ. ಸತೀಶ್ ಮಾತನಾಡಿ, ನಾನು ಎಂದೆಂದಿಗೂ ನಿಮ್ಮೊಂದಿಗಿರುವೆ. ನಿಮ್ಮೆಲ್ಲಾ ಬೇಡಿಕೆಗಳ ಕುರಿತು ಪರಿಷತ್ ನಲ್ಲಿ ಧ್ವನಿಯಾಗುವೆ ಎಂದು ಹೇಳಿ, ಪ್ರತಿಭಟನಾ ನಿರತರಿಗೆ ಆತ್ಮಸ್ಥೈರ್ಯ ತುಂಬಿದ್ದಾರೆ. ಆದರೆ, ಸೌಜನ್ಯಕ್ಕಾಗಿ ಆದರೂ, ಸಚಿವ ಸಂಪುಟದ ಯಾವೊಬ್ಬ ಸಚಿವರು, ಸಂಬಂಧಿಸಿದ ಇಲಾಖೆಯ ಹಿರಿಯ ಅಧಿಕಾರಿಗಳು ಭೇಟಿ ನೀಡಿ, ಪ್ರತಿಭಟನಾ ನಿರತರ ಅಹವಾಲನ್ನು ಸ್ವೀಕರಿಸದೇ ಇರುವುದು ವಿಷಾಧನೀಯ ಎಂದಿದ್ದಾರೆ.

ಬೆಳಗಾವಿಯ ಸುವರ್ಣಸೌಧದಲ್ಲಿ ಡಿಸೆಂಬರ್ 9 ರಿಂದ ಪ್ರಾರಂಭವಾಗುವ ಚಳಿಗಾಲದ ಅಧಿವೇಶನದಲ್ಲಿ ಪ್ರತಿಭಟನಾ ನಿರತ ವಿಕಲಚೇತರನ ಬೇಡಿಕೆಗಳಿಗೆ ಸ್ಪಂದಿಸಲಿ. ವಿಕಲಚೇತನರ ಬದುಕಿಗೆ ಮನ್ನಣೆ ಸಿಗಲಿ ಎಂದಿದ್ದಾರೆ.

ವಿಕಲಚೇತನರ ತಂಡ ವಿಧಾನಪರಿಷತ್ ಸದಸ್ಯ ವೈ.ಎಂ. ಸತೀಶ್ ಅವರಿಗೆ ಮನವಿ ಸಲ್ಲಿಸಿದರು.

ಒಟ್ಟು 5299.78 ಲಕ್ಷ ರು.ಗಳ ಅನುದಾನ

ಸರಕಾರ 2023-24 ರಲ್ಲಿ ಮೋಟಾರು ದ್ವಿಚಕ್ರ ವಾಹನಗಳಿಗಾಗಿ 3980 ಲಕ್ಷ ರು. ಶ್ರವಣದೋಷ ಇರುವವರಿಗೆ ಹೊಲಿಗೆ ಯಂತ್ರಗಳ ವಿತರಣೆಗಾಗಿ 44.47 ಲಕ್ಷ ರು. ದೃಷ್ಟಿವಿಕಲಚೇತನ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಲು 397.43 ಲಕ್ಷ ರು. ಬ್ರೈಲ್‌ಕಿಟ್‌ಗಾಗಿ 45.75 ಲಕ್ಷ ರು. ಬ್ಯಾಟರಿ ವಿಶೇಷಚೇತನರಿಗಾಗಿ 499.20 ಲಕ್ಷ ರು. ಸಾಧನಗಳಿಗಾಗಿ 187.59 ಲಕ್ಷ ರು. ಸಾಧನ ಸಲಕರಣೆಗಳಿಗಾಗಿ 145.34 ಲಕ್ಷ ರು. ಸೇರಿ ಒಟ್ಟು 5299.78 ಲಕ್ಷ ರು.ಗಳ ಅನುದಾನ ನೀಡಿತ್ತು.

ಇಂದು, ನಾಳೆ ಪಿಡಿಒ ಪರೀಕ್ಷೆ, ಸಕಲ ಸಿದ್ಧತೆ

ಹೊಸಪೇಟೆ: ಕರ್ನಾಟಕ ಲೋಕಸೇವಾ ಆಯೋಗದಿಂದ ಉಳಿಕೆ ಮೂಲವೃಂದದ ಪಿಡಿಒ 150 ಹುದ್ದೆಗಳ ಆಯ್ಕೆಗೆ ಡಿ.7 ಮತ್ತು 8 ರಂದು ನಡೆಯುವ ಪರೀಕ್ಷೆಯನ್ನು ಅಚ್ಚು ಕಟ್ಟಾಗಿ ನಡೆಸಿ ಯಾವುದೇ ಅವ್ಯವಹಾರಗಳು ನಡೆಯದಂತೆ ನೋಡಿಕೊಂಡು ಪರೀಕ್ಷೆ ನಡೆಸುವಂತೆ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆದ ಉಳಿಕೆ ಮೂಲ ವೃಂದದ ಪಿಡಿಒ ಹುದ್ದೆ ನೇಮಕಾತಿ ಪರೀಕ್ಷೆಯ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಪರೀಕ್ಷಾ ಕರ್ತವ್ಯಕ್ಕೆ ನಿಯೋಜಿಸಿದ ಅಧಿಕಾರಿಗಳು ಸೂಕ್ಷ್ಮ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಕೆಲಸ ನಿರ್ವಹಿಸಬೇಕು. ಮತ್ತು ಡಿಸೆಂಬರ್ 8 ರಂದು ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಯ ಮೊದಲ ಪತ್ರಿಕೆ ಬೆಳಿಗ್ಗೆ 10 ರಿಂದ 11.30 ರವರೆಗೆ ಮತ್ತು ಪೇಪರ್-2 ಮಧ್ಯಾಹ್ನ 2 ರಿಂದ 4 ಗಂಟೆಯ ವರೆಗೆ ನಡೆಯಲಿದ್ದು, ಜಿಲ್ಲೆಯಲ್ಲಿ ಒಟ್ಟು 12,036 ಅಭ್ಯರ್ಥಿಗಳು ಪರೀಕ್ಷೆಯನ್ನು ತೆಗೆದುಕೊಂಡಿದ್ದಾರೆ ಎಂದು ಸಭೆಗೆ ಮಾಹಿತಿ ನೀಡಿದರು.

ಮೂಲಭೂತ ಸೌಕರ್ಯಗಳಾದ ಆಸನಗಳು, ಕುಡಿಯುವ ನೀರು, ಗಾಳಿ-ಬೆಳಕಿನ ವ್ಯವಸ್ಥೆ ಇತ್ಯಾದಿಗಳನ್ನು ಒದಗಿಸಿರುವ ಬಗ್ಗೆ ಪರಿಶೀಲಿಸಬೇಕು. ಪರೀಕ್ಷಾ ದಿನದಂದು ವಿದ್ಯಾರ್ಥಿಗಳ ನೋಂದಣಿ, ಹಾಜರಿ ಮತ್ತು ಗೈರು ಹಾಜರಿಯ ಕುರಿತು ಮತ್ತು ಪರೀಕ್ಷೆಯಲ್ಲಿ ಏನಾದರೂ ಅಹಿತಕರ ಘಟನೆಗಳು ಸಂಭವಿಸಿದರೆ ಅಂತಹ ವಿವರಗಳ ವರದಿಯನ್ನು ಪರೀಕ್ಷಾ ಕೇಂದ್ರದ ಲಾಗಿನ್ ಮೂಲಕ ಅಪ್ ಲೋಡ್ ಮಾಡಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಉಳಿಕೆ ಮೂಲ ವೃಂದದ ಪಿಡಿಒ ಹುದ್ದೆ ನೇಮಕಾತಿ ಪರೀಕ್ಷೆಯ ಪೂರ್ವ ಸಿದ್ಧತಾ ಸಭೆಯಲ್ಲಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಮಾತನಾಡಿದರು.

> **ಜಿಲ್ಲೆಯಲ್ಲಿ ಡಿ.7, 8 ರಂದು ನಡೆಯುವ ಕಡ್ಡಾಯ ಕನ್ನಡ ಪರೀಕ್ಷೆಯು ಮಧ್ಯಾಹ್ನ 2 ರಿಂದ ಸಂಜೆ 4 ಗಂಟೆಯವರೆಗೆ ನಡೆಯಲಿದೆ. ಈ ಪರೀಕ್ಷೆಗೆ ಹೊಸಪೇಟೆಯಲ್ಲಿ 11, ಹಗರಿಬೊಮ್ಮನಹಳ್ಳಿಯಲ್ಲಿ 5 ಹಾಗೂ ಕೂಡ್ಲಿಗಿಯಲ್ಲಿ 3 ಒಟ್ಟು ಕೇಂದ್ರಗಳು ಸೇರಿ 19 ಪರೀಕ್ಷಾ ಕೇಂದ್ರಗಳಿದ್ದು, 8,283 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.**
> -ಎಂ.ಎಸ್.ದಿವಾಕರ, ಜಿಲ್ಲಾಧಿಕಾರಿ

ಸಭೆಯಲ್ಲಿ ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕ ವರಿಷ್ಠಾಧಿಕಾರಿ ಸಲೀಂ ಪಾಷ, ಹೊಸಪೇಟೆ ಸಹಾಯಕ ಆಯುಕ್ತರಾದ ಪಿ. ವಿವೇಕಾನಂದ, ಮುಖ್ಯ ಯೋಜನಾಧಿಕಾರಿ ಅನ್ನದಾನ ಸ್ವಾಮಿ, ಹೊಸಪೇಟೆ ತಹಸೀಲ್ದಾರ ಶೃತಿ ಎಂ.ಎಂ. ಸೇರಿದಂತೆ ವಿವಿಧ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಜಿಲ್ಲಾ ಮಟ್ಟದ ಸಿರಿಧಾನ್ಯ ನಡಿಗೆ 10ಕ್ಕೆ

ಹೊಸಪೇಟೆ: ಸಿರಿಧಾನ್ಯ ಮತ್ತು ಸಾವಯವ ಅಂತಾರಾಷ್ಟ್ರೀಯ ವಾಣಿಜ್ಯ ಮೇಳ-2025ರ ಅಂಗವಾಗಿ ವಿಜಯನಗರ ಜಿಲ್ಲೆಯ ಜಿಲ್ಲಾ ಮಟ್ಟದ ಸಿರಿಧಾನ್ಯ ನಡಿಗೆ (ರೋಡ್ ಶೋ) ಡಿಸೆಂಬರ್ 10 ರಂದು ಬೆಳಿಗ್ಗೆ 7.00 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಸಿರಿಧಾನ್ಯ ನಡಿಗೆಯು ನಗರದ ಎ.ಪಿ.ಎಂ.ಸಿ ವೃತ್ತದಿಂದ ಪ್ರಾರಂಭಿಸಿ ತರಕಾರಿ ಮಾರುಕಟ್ಟೆ, ದರ್ಗಾ ಮಸೀದಿ, ಬಸ್ ನಿಲ್ದಾಣ, ಶಾನಭಾಗ ವೃತ್ತ ಮಾರ್ಗವಾಗಿ ವಿಜಯನಗರ ಕಾಲೇಜ್ ಮೈದಾನದವರೆಗೆ ಸಾಗಲಿದೆ. ಈ ಕಾರ್ಯಕ್ರಮದಲ್ಲಿ ವಿಜಯನಗರ ಜಿಲ್ಲೆಯ ಸಾರ್ವಜನಿಕರು ಹಾಗೂ ಸಂಘ ಸಂಸ್ಥೆಗಳು ಭಾಗವಹಿಸಿ ಕಾರ್ಯಕ್ರಮ ಯಶ್ವಸಿಗೊಳಿಸಬೇಕು ಎಂದು ಕೃಷಿ ಜಂಟಿ ನಿರ್ದೇಶಕ ಶರಣಪ್ಪ ಬಿ.ಮುದಗಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ಷಯರೋಗ ಪತ್ತೆ ಅಭಿಯಾನ ನಾಳೆ

ಬಳ್ಳಾರಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮ ಇವರ ಸಂಯುಕ್ತಾಶ್ರಯದಲ್ಲಿ ಕ್ಷಯರೋಗ ಪತ್ತೆ ಮತ್ತು ಚಿಕಿತ್ಸೆ-100 ದಿನಗಳ ಅಭಿಯಾನ ಅಂಗವಾಗಿ ಡಿ.7 ರಂದು ಮಧ್ಯಾಹ್ನ 1.30 ಗಂಟೆಗೆ ಜಿಪಂನ ಅಬ್ದುಲ್ ನಜೀರ್‌ಸಾಬ್ ಸಭಾಂಗಣದಲ್ಲಿ ಕ್ಷಯಮುಕ್ತ ಗ್ರಾಮ ಪಂಚಾಯಿತಿ, ನಿಕ್ಷಯ ಮಿತ್ರದಡಿ ದಾನಿಗಳಿಗೆ ಸನ್ಮಾನ ಮತ್ತು ನಿಕ್ಷಯ್ ವಾಹನ ಚಾಲನಾ ಉದ್ಘಾಟನಾ ಸಮಾರಂಭ ಆಯೋಜಿಸಲಾಗಿದೆ. ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಕಾರ್ಯಕ್ರಮ ಉದ್ಘಾಟಿಸುವರು. ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅಧ್ಯಕ್ಷತೆ ವಹಿಸುವರು.ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಹಾಗೂ ಶಾಸಕ ಜೆ.ಎನ್ ಗಣೇಶ್, ಸಂಸದ ಈ.ತುಕಾರಾಂ, ಕೆ.ರಾಜಶೇಖರ ಬಸವರಾಜ ಹಿಟ್ನಾಳ್, ಡಾ.ಸೈಯದ್ ನಾಸೀರ್ ಹುಸೇನ್, ಶಾಸಕ ಬಿ.ನಾಗೇಂದ್ರ, ಈ.ಅನ್ನಪೂರ್ಣ, ಶಾಸಕ ಡಾ.ಚಂದ್ರಶೇಖರ್, ಶಶೀಲ್ ನಮೋಶಿ, ವೈ.ಎಂ.ಸತೀಶ್, ಡಾ.ಬಾಬು ಜಗಜೀವನ್‌ರಾಮ್ ಅಧ್ಯಕ್ಷ ಮುಂಡರಗಿ ನಾಗರಾಜ, ಮಹಾನಗರ ಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾ ರಾಣಿವಿ.ಜೆ ಉಪಸ್ಥಿತರಿರುವರು.



ಬಳ್ಳಾರಿ ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ 68ನೇ ವರ್ಷದ ಮಹಾ ಪರಿನಿರ್ವಾಣ ದಿನ ಅಂಗವಾಗಿ ನಗರದ ಕೌಲ್ ಬಜಾರ್‌ನ 1ನೇ ಗೇಟ್ ಹತ್ತಿರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿನ ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿಗೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಗೌರವ ನಮನ ಸಲ್ಲಿಸಿದರು. ಈ ವೇಳೆ ಅಪರ ಜಿಲ್ಲಾಧಿಕಾರಿ ಮಹಮ್ಮದ್.ಎನ್ ಝುಬೇರ್, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಬಿ.ಮಲ್ಲಿಕಾರ್ಜುನ ಸೇರಿದಂತೆ ಜನಪ್ರತಿನಿಧಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು, ವಿವಿಧ ಸಂಘ-ಸಂಸ್ಥೆಗಳ ದಲಿತ ಮುಖಂಡರು, ಪದಾಧಿಕಾರಿಗಳು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

ಎಲ್ಲ ವರ್ಗಕ್ಕೂ ಅವಕಾಶ ಕಲ್ಪಿಸಿದ ಡಾ.ಅಂಬೇಡ್ಕರ್

ಬಳ್ಳಾರಿ: ಸಂವಿಧಾನದ ಆಶಯಗಳನ್ನು ಪಾಲಿಸಲು ಎಲ್ಲ ವರ್ಗಕ್ಕೂ ಅವಕಾಶ ಕಲ್ಪಿಸಿದ ಮಹಾನ್ ಚೇತನ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರು ಎಂದು ವಿಜಯಪುರದ ಸಾಮಾಜಿಕ ಹೋರಾಟಗಾರ್ತಿ ಅಕ್ಷತಾ.ಕೆ.ಸಿ ಹೇಳಿದರು. ಸ್ಥಳೀಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಅಂಬೇಡ್ಕರ್ ಸಭಾಭವನದಲ್ಲಿ ಶುಕ್ರವಾರ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 68ನೇ ಮಹಾಪರಿನಿರ್ವಾಣ ದಿನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು. ನಿರ್ಲಕ್ಷ್ಯ ಹಾಗೂ ತಾತ್ಸಾರಕ್ಕೆ ಒಳಗಾಗಿದ್ದ ಮಹಿಳೆಯರ ಪರವಾಗಿ ಧ್ವನಿ ಎತ್ತಿದವರು ಅಂಬೇಡ್ಕರ್ ಅವರು. ಶೋಷಿತ ವರ್ಗದ ಏಳ್ಗೆಗಾಗಿ ಜೀವನ ಮುಡಿಪಾಗಿಟ್ಟ ಬಾಬಾ ಸಾಹೇಬರು, ಸಂವಿಧಾನದ ಪ್ರತಿ ಪುಟದಲ್ಲೂ ಇಂದಿಗೂ ಜೀವಿಸುತ್ತಿದ್ದಾರೆ ಎಂದರು. ವಿವಿಯ ಸಿಂಡಿಕೇಟ್ ಸದಸ್ಯ ಜಯಲಕ್ಷ್ಮೀ ನಾಯಕ್‌ಮಾತನಾಡಿ, ಕೇವಲ ನಿಯಮಗಳನ್ನು ರೂಪಿಸುವುದು, ನಿಯಮಗಳನ್ನು ಪಾಲಿಸುವುದು ವಿಶ್ವವಿದ್ಯಾಲಯದ ಕೆಲಸವಾಗದೇ ಮಾನವೀಯ ಮೌಲ್ಯಗಳನ್ನು ರೂಪಿಸುವ ಕೇಂದ್ರವಾಗಬೇಕು ಎಂಬುದು ಬಾಬಾಸಾಹೇಬರ ಕನಸಾಗಿತ್ತು ಎಂದರು. ಕುಲಪತಿ ಪ್ರೊ. ಎಂ.ಮುನಿರಾಜು ಮಾತನಾದರು. ಕುಲಸಚಿವ ರುದ್ರೇಶ್.ಎಸ್. ಎನ್., ಮೌಲ್ಯಮಾಪನ ಕುಲಸಚಿವ ಪ್ರೊ.ರಮೇಶ್ ಓಲೇಕಾರ್, ಕಾರ್ಯಕ್ರಮ ಸಂಯೋಜಕ ಪ್ರೊ.ಗೌರಿ ಮಾಣಿಕ್ ಮಾನಸ ವೇದಿಕೆಯಲ್ಲಿದ್ದರು. ಡಾ.ಕವಿತಾ ಸಾಗರ್ ನಿರೂಪಿಸಿ, ವಂದಿಸಿದರು.

ಸಮಾಚಾರ ಸಣ್ಣದಲ್ಲ

ಹ್ಯೂಸ್, ಇಯಾನ್‌ಗೆ ಆಸೀಸ್ ಶೋಕಾಚರಣೆ

ಅಡಿಲೇಡ್: ಇಲ್ಲಿ ನಡೆಯುತ್ತಿರುವ ಭಾರತ-ಆಸೀಸ್ ಕ್ರಿಕೆಟ್ ಟೆಸ್ಟ್‌ನ ಮೊದಲ ದಿನವಾದ ಶುಕ್ರವಾರ ಆಸ್ಟ್ರೇಲಿಯಾ ಫೀಲ್ಡರ್‌ಗಳು ಫೀಲ್ಡಿಂಗ್ ನಡೆಸುತ್ತಿದ್ದಾಗ ಎಲ್ಲರೂ ತಮ್ಮ ಶರ್ಟಿನ ತೋಳುಗಳಲ್ಲಿ ಕಪ್ಪು ಪಟ್ಟಿಯನ್ನು ಕಟ್ಟಿಕೊಂಡಿದ್ದಾರೆ. ಹತ್ತು ವರ್ಷಗಳ ಹಿಂದೆ ಫಿಲ್ ಹ್ಯೂಸ್ ಎಂಬ ಆಸ್ಟ್ರೇಲಿಯಾದ ಪ್ರತಿಭಾವಂತ ಬ್ಯಾಟರ್‌ನ ದುರ್ಮರಣಕ್ಕೀಡಾಗಿದ್ದರು. ಅಷ್ಟೇ ಅಲ್ಲದೇ ಆಸ್ಟ್ರೇಲಿಯಾದ ಮಾಜಿ ಆಟಗಾರ ಇಯಾನ್ ರಿಚೀ ರಿಡ್ ಪಾತ್ ಅವರು ಡಿಸೆಂಬರ್ 1ರಂದು ನಿಧನರಾದರು. ಈ ಎರಡೂ ಶೋಕಾಚರಣೆಗೆ ಆಸ್ಟ್ರೇಲಿಯಾ ತಂಡ ಕಪ್ಪು ಪಟ್ಟಿ ಧರಿಸಿ ಆಡಿದೆ. 2014ರ ನವೆಂಬರ್ 25ರಂದು ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ ಶೆಫೀಲ್ಡ್ ಶೀಲ್ಡ್ ಟೂರ್ನಿಯ ಪಂದ್ಯ ನಡೆಯುತ್ತಿತ್ತು. ದಕ್ಷಿಣ ಆಸ್ಟ್ರೇಲಿಯಾ ಪರ ಬ್ಯಾಟಿಂಗ್ ನಡೆಸುತ್ತಿದ್ದ ಫಿಲ್ ಹ್ಯೂಸ್ ಕತ್ತಿಗೆ ವೇಗಿ ಸೀನ್ ಅಬಾಟ್ ಎಸೆದ ಬೌನ್ಸರ್ ಬಡಿಯಿತು. ಹೆಲ್ಮೆಟ್ ಧರಿಸಿದ್ದರೂ ಚೆಂಡು ಹೆಲ್ಮೆಟ್‌ನ ಒಳನುಸುಳಿ ಹ್ಯೂಸ್ ಗೆ ಮೇಲೇಳಲಾರದಷ್ಟು ದೊಡ್ಡ ಹೊಡೆತ ಉಂಟಾಗಿತ್ತು. ಮೈದಾನದಲ್ಲಿ ಕುಸಿದು ಬಿದ್ದ ಅರನ್ನು ಆಸ್ಪತ್ರೆಗೆ ಸಾಗಿಸಲಾಯಿತಾದರೂ ಯಾವುದೇ ರೀತಿಯ ಪ್ರಯೋಜನ ಆಗಲಿಲ್ಲ. ಬ್ರೈನ್ ಹ್ಯೂಮರೇಜ್ ಆದ ಅವರು 2014, ನವೆಂಬರ್ 27ರಂದು ಕೊನೆಯುಸಿರೆಳೆದರು. ಅದೂ ಅವರ 25ವರ್ಷದ ಹುಟ್ಟುಹಬ್ಬಕ್ಕೆ ಕೇವಲ 1 ದಿನ ಮೊದಲು. ಆಸ್ಟ್ರೇಲಿಯಾ ಮಾತ್ರವಲ್ಲ, ಇಡೀ ಜಗತ್ತೇ ಹ್ಯೂಸ್ ಬದುಕಿ ಬರಲಿ ಎಂದು ಪ್ರಾರ್ಥಿಸಿಕೊಂಡದ್ದೂ ವ್ಯರ್ಥವಾಯಿತು.

ಶಾಮಿ ಸಿಲ್ವ ಎಸಿಸಿ ಮುಖ್ಯಸ್ಥ

ಕೊಲಂಬೊ: ಶ್ರೀಲಂಕಾದ ಕ್ರಿಕೆಟ್ ಕೌನ್ಸಿಲ್‌ನ ಮುಖ್ಯಸ್ಥರಾಗಿರುವ ಶಾಮಿ ಸಿಲ್ವ ಏಷ್ಯನ್ ಕ್ರಿಕೆಟ್ ಕೌನ್ಸಿಲ್ (ಎಸಿಸಿ) ಮುಖ್ಯಸ್ಥರಾಗಿ ಶುಕ್ರವಾರ ಅಧಿಕಾರ ಸ್ವೀಕರಿಸಿಕೊಂಡರು. ಇದು ವರೆಗೂ ಆ ಹುದ್ದೆಯಲ್ಲಿದ್ದ ಜಯ್ ಶಾ ಅಂತಾರಾಷ್ಟ್ರ ಕ್ರಿಕೆಟ್ ಕೌನ್ಸಿಲ್‌ನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಹಿನ್ನೆಲೆಯಲ್ಲಿ ಅವರಿಂದ ತೆರವಾದ ಆ ಹುದ್ದೆಗೆ ಶಾಮಿ ಸಿಲ್ವ ಆಯ್ಕೆಯಾಗಿದ್ದರು. 'ಎಸಿಸಿ ಮುಖ್ಯಸ್ಥನಾಗಿ ಅಧಿಕಾರ ಸ್ವೀಕರಿಸಿದ ಬಗ್ಗೆ ನನಗೆ ನಿಜಕ್ಕೂ ಹೆಮ್ಮೆ ಇದೆ. ಏಷ್ಯಾದ ವಿವಿಧ ಕ್ರಿಕೆಟ್ ದೇಶಗಳಲ್ಲಿ ಕ್ರಿಕೆಟ್ ಬಹಳ ಮಹತ್ವವನ್ನು ಪಡೆದುಕೊಂಡಿದೆ. ತಾನು ಈ ಹುದ್ದೆಗೇರಲು ಸಹಕಾರ ನೀಡಿದ ಜಯ್ ಶಾ ಅವರಿಗೆ ನನ್ನ ಕೃತಜ್ಞತೆಗಳು' ಎಂದು ಶಾಮಿ ಸಿಲ್ವ ತನ್ನ ಸಂತಸವನ್ನು ವ್ಯಕ್ತಪಡಿಸಿದ್ದಾರೆ.

ಗವಾಸ್ಕರ್-ಬಾರ್ಡರ್ ಟ್ರೋಫಿ ದ್ವಿತೀಯ ಟೆಸ್ಟ್ | ಭಾರತೀಯರ ನೀರಸ ಪ್ರದರ್ಶನ | ಮೊದಲ ದಿನ ಆಸೀಸ್‌ಗೆ ಮೇಲುಗೈ

ಸ್ಟಾರ್ಕ್ ದಾಳಿಗೆ ಕುಸಿದ ಭಾರತ: 180 ರನ್‌ಗೆ ಆಲೌಟ್

ಅಡಿಲೇಡ್: ಆಸೀಸ್ ವೇಗಿ ಮಿಚೆಲ್ ಸ್ಟಾರ್ಕ್ ಅವರ ಘಾತಕ ಬೌಲಿಂಗ್ ದಾಳಿಗೆ ನಲುಗಿದ ಟೀಮ್ ಇಂಡಿಯಾ ಶುಕ್ರವಾರ ಇಲ್ಲಿ ಆರಂಭಗೊಂಡ ಪಿಂಕ್ ಬಾಲ್ ಟೆಸ್ಟ್ ಪಂದ್ಯದಲ್ಲಿ 180 ರನ್‌ಗೆ ಸರ್ವಪತನ ಕಂಡಿದೆ. ಆಸ್ಟ್ರೇಲಿಯ ವೇಗಿ ಮೈಕಲ್ ಸ್ಟಾರ್ಕ್ 48 ರನ್‌ಗೆ 6 ವಿಕೆಟ್ ಕಿತ್ತು ಭಾರತದ ಕುಸಿತಕ್ಕೆ ಕಾರಣರಾದರು.

ಓವಲ್ ಮೈದಾನದಲ್ಲಿ ಆರಂಭವಾದ ಈ ಟೆಸ್ಟ್ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಭಾರತಕ್ಕೆ ಖಾತೆ ತೆರೆಯುವ ಮುನ್ನವೇ ಸ್ಟಾರ್ಕ್ ಮೊದಲ ಎಸೆತದಲ್ಲೇ ಆಘಾತ ನೀಡಿದರು. ಯಶಸ್ವಿ ಜೈಸ್ವಾಲ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿ ಪೆವಿಲಿಯನ್‌ಗೆ ಅಟ್ಟುವ ಮೂಲಕ ಮೊದಲ ಪಂದ್ಯದಲ್ಲಿ ಕೆಣಕಿದ್ದ ಸೇಡನ್ನು ತೀರಿಸಿಕೊಂಡರು.

ಬಳಿಕ ನಿಧಾನ ಗತಿಯಲ್ಲಿ ಬ್ಯಾಟಿಂಗ್ ನಡೆಸಿದ ಕೆ.ಎಲ್. ರಾಹುಲ್, ಬೋಲ್ಯಾಂಡ್ ಎಸೆದ ನೋ ಬಾಲ್‌ನಿಂದ ಜೀವದಾನ ಪಡೆದು 21 ಎಸೆತದ ಬಳಿಕ ಖಾತೆ ತೆರೆದರು. ಮೂರು ರನ್ ಗಳಿಸಿದ ವೇಳೆ ಖವಾಜಾ ಕೈಚೆಲ್ಲಿದ ಕ್ಯಾಚ್‌ನಿಂದ ಮತ್ತೊಂದು ಜೀವದಾನ ಪಡೆದರು. ಆ ಬಳಿಕ ಕೊಂಚ ಬಿರುಸಿನ ಬ್ಯಾಟಿಂಗ್ ನಡೆಸಿ 37 ರನ್ ಗಳಿಸಿದ ವೇಳೆ ಮಿಚೆಲ್ ಸ್ಟಾರ್ಕ್ ಅವರ ಬೌನ್ಸರ್ ಎಸೆತವನ್ನು ಬಾರಿಸುವ ಯತ್ನದಲ್ಲಿ ಕ್ಯಾಚ್ ನೀಡಿ ವಿಕೆಟ್ ಕಳೆದುಕೊಂಡರು, ಆ ಬಳಿಕ ಬಂದ ಕೊಹ್ಲಿ ಒಂದೇ ಬೌಂಡರಿಗೆ ಸೀಮಿತರಾಗಿ 7 ರನ್‌ಗೆ ತನ್ನ ಆಟ ಮುಗಿಸಿದರು, ಆ ವಿಕೆಟ್ ಕೂಡ ಸ್ಟಾರ್ಕ್ ಪಾಲಾಯಿತು.

ರಾಹುಲ್ ಜತೆ ಉತ್ತಮವಾಗಿ ಆಡುತ್ತಿದ್ದ ಶುಭಮನ್ ಗಿಲ್ ಕೂಡ ಡ್ರಿಂಕ್ಸ್ ಬ್ರೇಕ್ ಬಳಿಕ ವಿಕೆಟ್ ಕಳೆದುಕೊಂಡರು. ಅವರ ಗಳಿಕೆ 31. ಆರಂಭಿಕ ಸ್ಥಾನ ಬಿಟ್ಟು ಕೊಟ್ಟು 6ನೇ ಕ್ರಮಾಂಕದಲ್ಲಿ ಆಡಲಿಳಿದ ನಾಯಕ ರೋಹಿತ್ 23 ಎಸೆತ ಎದುರಿಸಿದರೂ, ಗಳಿಸಿದ್ದು ಕೇವಲ 3 ರನ್ ಮಾತ್ರ. ರೋಹಿತ್ ವಿಕೆಟ್ ಬೀಳುತ್ತಿದ್ದಂತೆ ಭಾರತ ಕೇವಲ 18 ರನ್ ಅಂತರದಲ್ಲಿ ನಾಲ್ಕು ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ರಿಶಬ್ ಪಂತ್ ಕೂಡ ಹೆಚ್ಚು ಹೊತ್ತು ಕ್ರೀಸ್ ಆಕ್ರಮಿಸಿಕೊಳ್ಳಲು ವಿಫಲರಾದರು, 2 ಬೌಂಡರಿಗೆ ಸೀಮಿತರಾಗಿ 21 ರನ್ ಬಾರಿಸಿದರು ಅವರೂ ಔಟಾದರು.

ಅಶ್ವಿನ್ ಮತ್ತು ಆಲ್‌ರೌಂಡರ್ ನಿತೀಶ್ ರೆಡ್ಡಿ ಕೆಳ ಕ್ರಮಾಂಕದಲ್ಲಿ ತೋರಿಸಿದ ಬ್ಯಾಟಿಂಗ್ ಹೋರಾಟದ ನೆರವಿನಿಂದ ಭಾರತ ತಂಡವು 150ರ ಗಡಿ ದಾಟಿತು. ಅಶ್ವಿನ್ 22 ರನ್ ಬಾರಿಸಿದರೆ, ನಿತೀಶ್ ರೆಡ್ಡಿ ಬಿರುಸಿನ ಬ್ಯಾಟಿಂಗ್ ನಡೆಸಿ ತಲಾ 3 ಸಿಕ್ಸರ್ ಮತ್ತು ಬೌಂಡರಿ ಬಾರಿಸಿ 42 ರನ್ ಗಳಿಸಿದರು. ಅವರದ್ದೇ ಭಾರತ ತಂಡದ ಪರ ಗರಿಷ್ಠ ಮೊತ್ತ. ಹರ್ಷಿತ್ ರಾಣಾ ಮತ್ತು ಜಸ್‌ಪ್ರೀತ್ ಬುಮ್ರಾ ಶೂನ್ಯಕ್ಕೆ ಔಟ್ ಆದರು. ಒಟ್ಟು ಮೂವರು ಈ ಪಂದ್ಯದಲ್ಲಿ ಸೂನ್ಯ ಸಂಕಟಕ್ಕೆ ಸಿಲುಕಿದರು. ಆಸೀಸ್ ಪರ 14.1 ಓವರ್ ಎಸೆದ ಅನುಭವಿ ವೇಗದ ಬೌಲರ್ ಮಿಚೆಲ್ ಸ್ಟಾರ್ಕ್ 2 ಮೇಡನ್ ಓವರ್ ಸಹಿತ 48 ರನ್ ನೀಡಿ ಭಾರತದ ಪ್ರಮುಖ 6 ವಿಕೆಟ್ ಕಿತ್ತು ಮೊದಲ ದಿನ ಆಸೀಸ್‌ಗೆ ಮೇಲುಗೈ ತಂದುಕೊಟ್ಟರು. ಉಳಿದಂತೆ ನಾಯಕ ಪ್ಯಾಟ್ ಕಮಿನ್ಸ್ ಮತ್ತು ಸ್ಕಾಟ್ ಬೋಲ್ಯಾಂಡ್ ತಲಾ 2 ವಿಕೆಟ್ ಉರುಳಿಸಿದರು.

ಮೊದಲ ದಿನವೇ ತನ್ನ ಇನ್ನಿಂಗ್ ಆರಂಭಿಸಿದ ಆಸ್ಟ್ರೇಲಿಯಾ ತಂಡವು ದಿನದಾಂತ್ಯಕ್ಕೆ ಒಂದು ವಿಕೆಟ್ ಕಳೆದುಕೊಂಡು 86 ರನ್ ಗಳಿಸಿದೆ. ಆರಂಭಿಕ ಆಟಗಾರ ಉಸ್ಮಾನ್ ಖವಜಾರವರ ವಿಕೆಟ್ ಅನ್ನು ಬೂಮ್ರಾ ಪಡೆದುಕೊಂಡರು. ದಿನದಾಂತ್ಯಕ್ಕೆ ಆಸ್ಟ್ರೇಲಿಯಾ ಆಟಗಾರರಾದ ಮಾರ್ನಸ್ ಲಬುಶೇನ್ (20) ಹಾಗೂ ನಾಥನ್ ಮೆಕ್‌ಸ್ವೀನಿ (38) ಕ್ರೀಸ್‌ನಲ್ಲಿದ್ದು ಆಸ್ಟ್ರೇಲಿಯಾದ ಮೊತ್ತ ಒಂದು ವಿಕೆಟ್‌ಗೆ 86 ರನ್. ಭಾರತದ ಪ್ರಥಮ ಇನ್ನಿಂಗ್ಸ್ ಮೊತ್ತ ಬೆನ್ನಟ್ಟಲು ಆಸೀಸ್‌ಗೆ ಇನ್ನು ಬೇಕಿರುವುದು 94 ರನ್.

ಕ್ಯಾಲೆಂಡರ್ ವರ್ಷ: 50 ಟೆಸ್ಟ್ ವಿಕೆಟ್ ಕಿತ್ತ ಬುಮ್ರಾ

ಟೀಮ್ ಇಂಡಿಯಾದ ವೇಗಿ ಜಸ್‌ಪ್ರೀತ್ ಬುಮ್ರಾ 2024ರ ಕ್ಯಾಲೆಂಡರ್ ವರ್ಷದಲ್ಲಿ 50 ಟೆಸ್ಟ್ ವಿಕೆಟ್ ಕಿತ್ತ ಸಾಧನೆ ಮಾಡಿದ್ದಾರೆ. ಅಡಿಲೇಡ್ ಓವಲ್ ಮೈದಾನದಲ್ಲಿ ನಡೆಯುತ್ತಿರು ಆಸೀಸ್ ವಿರುದ್ಧದ ಪಿಂಕ್ ಬಾಲ್ ಟೆಸ್ಟ್‌ನಲ್ಲಿ ಉಸ್ಮಾನ್ ಖವಾಜ ವಿಕೆಟ್ ಕೀಳುವ ಮೂಲಕ ಈ ಸಾಧನೆಗೈದರು. ಕ್ಯಾಲೆಂಡರ್ ವರ್ಷದಲ್ಲಿ 50 ವಿಕೆಟ್ ಕಿತ್ತ ಮೂರನೇ ಭಾರತೀಯ ಎನಿಸಿಕೊಳ್ಳುವ ಮೂಲಕ ದಿಗ್ಗಜ ಕಪಿಲ್ ದೇವ್ ಮತ್ತು ಜಹೀರ್ ಖಾನ್ ಜತೆ ಎಲೈಟ್ ಪಟ್ಟಿಗೆ ಸೇರ್ಪಡೆಗೊಂಡರು. ಕಪಿಲ್ ದೇವ್ ಅವರು 1979 ಮತ್ತು 1983 ರಲ್ಲಿ 2 ಬಾರಿ 50 ವಿಕೆಟ್ ಕಿತ್ತ ಸಾಧನೆ ಮಾಡಿದ್ದರು. ಜಹೀರ್ ಖಾನ್ 2002ರಲ್ಲಿ ಈ ಸಾಧನೆ ಮಾಡಿದ್ದರು. 2024ರಲ್ಲಿ 11 ಪಂದ್ಯಗಳನ್ನಾಡಿರುವ ಬುಮ್ರಾ, 15.14 ರ ಅದ್ಭುತ ಸರಾಸರಿ ಮತ್ತು 3.00 ರ ಎಕಾನಮಿ ರೇಟ್ ಮೂಲಕ ಸ್ಥಿರ ಬೌಲಿಂಗ್ ದಾಳಿ ನಡೆಸಿದ್ದಾರೆ.

ಯಶಸ್ವಿ ಜೈಸ್ವಾಲ್: ಕೆಟ್ಟ ದಾಖಲೆಗಳ ಸರದಾರ

ಪರ್ತ್‌ನಲ್ಲಿ ಗೆಲುವಿನ ಶತಕ ಬಾರಿಸಿದ್ದ ಯಶಸ್ವಿ ಜೈಸ್ವಾಲ್ ಇದೀಗ ಅಡಿಲೇಡ್‌ನ ಡೇ-ನೈಟ್ ಟೆಸ್ಟ್‌ನಲ್ಲಿ ಮೊದಲ ಎಸೆತದಲ್ಲಿಯೇ ಗೋಲ್ಡನ್ ಡಕ್‌ಗೆ ಬಲಿಯಾಗಿದ್ದಾರೆ. ಇದು ಅವರ ಟೆಸ್ಟ್ ವೃತ್ತಿಜೀವನದ ಮೊದಲ ಗೋಲ್ಡನ್ ಡಕ್. ಇದರೊಂದಿಗೆ ಜೈಸ್ವಾಲ್ ಪಿಂಕ್ ಬಾಲ್ ಟೆಸ್ಟ್‌ನಲ್ಲಿ ಮೊದಲ ಎಸೆತದಲ್ಲಿ ಔಟಾದ ವಿಶ್ವದ ಮೂರನೇ ಮತ್ತು ಭಾರತದ ಮೊದಲ ಆಟಗಾರ ಎನಿಸಿ ಕೊಂಡಿದ್ದಾರೆ. ಇಲ್ಲಿಯವರೆಗೆ, ಚೇತೇಶ್ವರ ಪೂಜಾರ, ಪೃಥ್ವಿ ಶಾ, ಅಜಿಂಕ್ಯ ರಹಾನೆ, ಮೊಹಮ್ಮದ್ ಶಮಿ, ಇಶಾಂತ್ ಶರ್ಮಾ, ಅಶ್ವಿನ್, ಉಮೇಶ್ ಯಾದವ್ ಸೇರಿದಂತೆ 8 ಭಾರತೀಯ ಆಟಗಾರರು ಪಿಂಕ್ ಬಾಲ್ ಟೆಸ್ಟ್‌ನಲ್ಲಿ ಶೂನ್ಯಕ್ಕೆ ಔಟಾಗಿದ್ದಾರೆ. ಇದೀಗ ಈ ಪಟ್ಟಿಗೆ ಯಶಸ್ವಿ ಜೈಸ್ವಾಲ್ ಕೂಡ ಸೇರಿ ಕೊಂಡಿದ್ದಾರೆ. ಯಶಸ್ವಿ ಜೈಸ್ವಾಲ್ ಅವರು ಪಿಂಕ್ ಬಾಲ್ ಟೆಸ್ಟ್‌ನಲ್ಲಿ ಮೊದಲ ಎಸೆತದಲ್ಲಿ ಔಟಾದ ವಿಶ್ವದ ಮೂರನೇ ಆರಂಭಿಕ ಆಟಗಾರ ಮತ್ತು ಭಾರತದ ಮೊದಲ ಆಟಗಾರ ಎನಿಸಿಕೊಂಡಿದ್ದಾರೆ.

ಚಾಂಪಿಯನ್ಸ್ ಟ್ರೋಫಿ: ಹೈಬ್ರಿಡ್ ಮಾಡೆಲ್ ಫೈನಲ್

ದುಬೈ: ತೀವ್ರ ಕುತೂಹಲ ಮೂಡಿಸಿರುವ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯನ್ನು ಹೈಬ್ರಿಡ್ ಮಾದರಿಯಲ್ಲಿ ನಡೆಸುವ ಸಂಬಂಧ ಕೊನೆಗೂ ಅಂತಾರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಒಮ್ಮತದ ನಿರ್ಣಯ ಕೈಗೊಂಡಿದೆ. ಮುಂದಿನ ವರ್ಷ ಪಾಕಿಸ್ತಾನದಲ್ಲಿ ನಡೆಯಲಿರುವ ಟ್ರೋಫಿಯಲ್ಲಿ ತನ್ನೆಲ್ಲಾ ಪಂದ್ಯಗಳನ್ನು ದುಬೈನಲ್ಲಿ ಆಡುವುದಕ್ಕೆ ಭಾರತಕ್ಕೆ ಐಸಿಸಿ ಅನುಮತಿ ನೀಡಿದೆ. ಹಾಗೆಯೇ ಬಹು ರಾಷ್ಟ್ರೀಯ ಟೂರ್ನಿಗಳಲ್ಲಿ ಈ ವ್ಯವಸ್ಥೆ 2027ರವರೆಗೂ ಮುಂದುವರಿಯಲಿದೆ. ಆದರೆ ಪಾಕಿಸ್ತಾನಕ್ಕೆ ಯಾವ ಕಾರಣಕ್ಕೂ ಪ್ರಯಾಣಿಸುವುದಿಲ್ಲ ಎಂದು ಪಟ್ಟು ಹಿಡಿದಿರುವ ಭಾರತೀಯ ಕ್ರಿಕೆಟ್ ಮಂಡಳಿ ಭಾರಿ ಬೆಲೆ ತೆರುವಂತಾಗಲಿದೆ.

ಐಸಿಸಿ ನೂತನ ಅಧ್ಯಕ್ಷ ಜಯ್ ಶಾ ಹಾಗೂ ಪಾಕಿಸ್ತಾನ ಸೇರಿ ದಂತೆ ನಿರ್ದೇಶಕರ ಮಂಡಳಿಯು ದುಬೈನಲ್ಲಿನ ಕೇಂದ್ರ ಕಚೇರಿಯಲ್ಲಿ ನಡೆದ ಅನೌಪಚಾರಿಕ ಸಭೆಯಲ್ಲಿ ಈ ತೀರ್ಮಾನವನ್ನು ಬಹುತೇಕ ಅಂತಿಮಗೊಳಿಸಲಾಗಿದೆ ಎಂದು ಐಸಿಸಿಯ ಉನ್ನತ ಮೂಲಗಳು ತಿಳಿಸಿವೆ. ಶೀಘ್ರದಲ್ಲಿಯೇ ಚಾಂಪಿಯನ್ಸ್ ಟ್ರೋಫಿ ವೇಳಾಪಟ್ಟಿ ಪ್ರಕಟ ವಾಗಲಿದ್ದು, 2025ರ ಫೆಬ್ರವರಿ-ಮಾರ್ಚ್‌ನಲ್ಲಿ ಟೂರ್ನಿ ನಡೆಯಲಿದೆ. ಹೈಬ್ರಿಡ್ ಮಾದರಿಗೆ ತಾನು ಸುತಾರಾಂ ಒಪ್ಪುವುದಿಲ್ಲ ಎಂದು ಕಳೆದ ವಾರ ಹಠ ಹಿಡಿದಿದ್ದ ಪಾಕಿಸ್ತಾನ, ಬಹಿಷ್ಕಾರದ ಬೆದರಿಕೆಯನ್ನು ಹಿಂಪಡೆದು, ಹೈಬ್ರಿಡ್ ಮಾದರಿಗೆ ಒಪ್ಪಿಕೊಂಡಿದೆ.

ಸ್ಟಾರ್ ಸ್ಪೋರ್ಟ್ಸ್‌ಗೆ ಸಂಕಷ್ಟ

ಚಾಂಪಿಯನ್ಸ್ ಟ್ರೋಫಿ ಪಂದ್ಯಗಳು ಸ್ಟಾರ್ ಸ್ಪೋರ್ಟ್ಸ್ ವಾಹಿನಿಯಲ್ಲಿ ಪ್ರಸಾರವಾಗಲಿದ್ದು, ಚಾನೆಲ್ ಮತ್ತು ಅಭಿಮಾನಿಗಳು ಐಸಿಸಿಯ ಅಂತಿಮ ನಿರ್ಧಾರಕ್ಕೆ ಸುದೀರ್ಘ ಸಮಯದಿಂದ ಕಾದಿದ್ದರು. ಐಸಿಸಿ ಹಾಗೂ ಪ್ರಸಾರಕರ ನಡುವಿನ ಒಪ್ಪಂದದ ಅನ್ವಯ, ಕ್ರಿಕೆಟ್ ಮಂಡಳಿಯು ಟೂರ್ನಿ ಆರಂಭವಾಗುವ ಕನಿಷ್ಠ 90 ದಿನಗಳ ಮುನ್ನ ಅದರ ವೇಳಾಪಟ್ಟಿಯನ್ನು ಪ್ರಸಾರಕರಿಗೆ ನೀಡಬೇಕು, ಆದರೆ ಆ ಗಡುವು ಈಗಾಗಲೇ ಮುಗಿದು ಹೋಗಿದೆ. ಹೈಬ್ರಿಡ್ ಮಾಡೆಲ್‌ಗಾಗಿ ಭಾರತ ಇಟ್ಟಿರುವ ಬೇಡಿಕೆಯನ್ನು ಈಡೇರಿಸಲು ವಾರ್ಷಿಕ ಆದಾಯ ಸಂಗ್ರಹಣೆಯಲ್ಲಿ ದೊಡ್ಡ ಮೊತ್ತದ ಪಾಲಿಗಾಗಿ ಪಾಕಿಸ್ತಾನ ಈ ಹಿಂದೆ ಬೇಡಿಕೆ ಇರಿಸಿತು. ಆ ಕುರಿತು ಚರ್ಚೆ ನಡೆಸಲು ಸ್ಟಾರ್ ಸ್ಪೋರ್ಟ್ಸ್ ಪ್ರತಿನಿಧಿಗಳು ದುಬೈಗೆ ತೆರಳಿದ್ದು, ಜಯ್ ಶಾ ಜತೆ ಸಭೆ ನಡೆಸಬೇಕಿತ್ತು. ಆದರೆ ಅವರ ಸಭೆ ಶುಕ್ರವಾರಕ್ಕೆ ಮುಂದೂಡಿಕೆಯಾಗಿದೆ. ಈ ಅಲ್ಪಾವಧಿಯಲ್ಲಿ ಎರಡೂ ಕಡೆ ನಡೆಯುವ ಪಂದ್ಯಗಳ ನೇರ ಪ್ರಸಾರಕ್ಕೆ ವ್ಯವಸ್ಥೆ ಮಾಡುವುದು ವಾಹಿನಿಗೆ ದೊಡ್ಡ ಸವಾಲಾಗಿದೆ.

ಅಂಡರ್-19 ಏಷ್ಯಾ ಕಪ್ ಟೂರ್ನಿ | ಭಾನುವಾರ ಫೈನಲ್: ಭಾರತ-ಬಾಂಗ್ಲಾ

ವೈಭವ್ ಸೂರ್ಯವಂಶಿ ಅರ್ಧಶತಕ

ಶಾರ್ಜಾ: ಅಂಡರ್ 19 ಏಷ್ಯಾಕಪ್ ಟೂರ್ನಿಯಲ್ಲಿ ಭಾರತೀಯ ಬ್ಯಾಟರ್ ವೈಭವ್ ಸೂರ್ಯವಂಶಿ ಅದ್ಭುತ ಪ್ರದರ್ಶನ ನೀಡುವ ಮೂಲಕ ಮತ್ತೊಮ್ಮೆ ಎಲ್ಲರ ಗಮನ ಸೆಳೆದು ಸೆಮಿಫೈನಲ್ ಪಂದ್ಯದಲ್ಲಿ ಶ್ರೀಲಂಕಾ ಬೌಲರ್‌ಗಳಿಗೆ ಬೆವರಿಳಿಸಿದ್ದಾರೆ. ಈ ಪಂದ್ಯದಲ್ಲಿ ವೈಭವ್ ಸೂರ್ಯವಂಶಿ ಕೇವಲ 36 ಎಸೆತಗಳಲ್ಲಿ 67 ರನ್‌ಗಳನ್ನು ಸಿಡಿಸಿ ಭಾರತ ತಂಡ ನಿರಾಯಾಸವಾಗಿ ಫೈನಲ್‌ಗೆ ತಲುಪುವಲ್ಲಿ ಪ್ರಧಾನ ಪಾತ್ರ ವಹಿಸಿದರು.

ಶುಕ್ರವಾರ ಶ್ರೀಲಂಕಾ ನೀಡಿದ್ದ 174 ರನ್‌ಗಳ ಗುರಿಯನ್ನು ಹಿಂಬಾಲಿಸಿದ ಭಾರತ ತಂಡಕ್ಕೆ ಆಯುಷ್ ಮ್ಹಾತ್ರೆ ಮತ್ತು ವೈಭವ್ ಸೂರ್ಯವಂಶಿ ತಮ್ಮ ಸ್ಫೋಟಕ ಬ್ಯಾಟಿಂಗ್ ಮೂಲಕ ಭರ್ಜರಿ ಆರಂಭ ತಂದುಕೊಟ್ಟರು. ವೈಭವ್ ಸೂರ್ಯವಂಶಿ ಎರಡನೇ ಎಸೆತದಲ್ಲಿಯೇ ಸಿಕ್ಸರ್ ಬಾರಿಸಿದರು.

ಅವರು ಎರಡನೇ ಓವರ್‌ನಲ್ಲಿ ಟೀಮ್ ಇಂಡಿಯಾದ ಸ್ಕೋರ್ ಅನ್ನು 40ಕ್ಕೆ ದಾಟಿಸಿದರು. ಸ್ಫೋಟಕ ಶೈಲಿಯಲ್ಲಿ ಬ್ಯಾಟ್ ಮಾಡಿದ ಸೂರ್ಯವಂಶಿ, ಕೇವಲ 24 ಎಸೆತಗಳಲ್ಲಿ 5 ಸಿಕ್ಸರ್‌ಗಳ ನೆರವಿನಿಂದ ಅರ್ಧಶತಕ ಪೂರೈಸಿ ದರು. ವೈಭವ್ ಆಯುಷ್ ಜೊತೆಗೂಡಿ 51 ಎಸೆತಗಳಲ್ಲಿ 91 ರನ್‌ಗಳ ಜೊತೆಯಾಟ ನಡೆಸಿ ಶ್ರೀಲಂಕಾವನ್ನು ಮಣಿಸುವಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸಿದರು.

ಪಾಕ್ ತಂಡವನ್ನು ಬಗ್ಗು ಬಡಿದ ಬಾಂಗ್ಲಾ: ಇನ್ನೊಂದು ಪಂದ್ಯದಲ್ಲಿ ಬಾಂಗ್ಲಾ ತಂಡವು ಪಾಕಿಸ್ಥಾನ ತಂಡವನ್ನು ಏಳು ವಿಕೆಟ್‌ಗಳಿಂದ ಸೋಲಿಸಿ ಫೈನಲ್‌ಗೆ ಲಗ್ಗೆ ಇಟ್ಟಿದೆ. ಮೊದಲು ಬ್ಯಾಟ್ ಮಾಡಿದ ಪಾಕ್ ತಂಡವು 37 ಓವರ್‌ಗಳಲ್ಲಿ ಬರೀ 116 ರನ್‌ಗಳಿಗೆ ಸರ್ವ ಪತನ ಕಂಡಿತು. ಆ ಗುರಿಯನ್ನು ಬೆಂಬೆತ್ತಿದ ಬಾಂಗ್ಲಾ ತಂಡವು 22.1 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ ಗುರಿ ತಲುಪಿತು.

ಭಾನುವಾರ ಫೈನಲ್ ಪಂದ್ಯ

ಅಂಡರ್ 19 ಏಷ್ಯಾಕಪ್ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯವು ಇದೇ ರವಿವಾರ (ಡಿ.8) ನಡೆಯಲಿದೆ. ದುಬೈನಲ್ಲಿ ನಡೆಯುವ ಫೈನಲ್ ಪಂದ್ಯದಲ್ಲಿ ಭಾರತ ತಂಡವು ಬಾಂಗ್ಲಾವನ್ನು ಎದುರಿಸಲಿದೆ.

ಚಿತ್ರೀಕರಣ ಮುಗಿಸಿದ 45

ಕರುನಾಡ ಚಕ್ರವರ್ತಿ ಶಿವರಾಜಕುಮಾರ್, ರಿಯಲ್ ಸ್ಟಾರ್ ಉಪೇಂದ್ರ, ಹಾಗೂ ರಾಜ್ ಬಿ ಶೆಟ್ಟಿ ಪ್ರಮುಖಪಾತ್ರದಲ್ಲಿ ನಟಿಸಿರುವ, ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಚೊಚ್ಚಲ ನಿರ್ದೇಶನದ ಹಾಗೂ ಎಂ. ರಮೇಶ್ ರೆಡ್ಡಿ ಯವರು ತಮ್ಮ ಸೂರಜ್ ಪ್ರೊಡಕ್ಷನ್ ಬ್ಯಾನರ್ ನಲ್ಲಿ ನಿರ್ಮಿಸುತ್ತಿರುವ ಕನ್ನಡದ ಬಹುನಿರೀಕ್ಷಿತ ಚಿತ್ರ 45 ಆರಂಭದಿಂದಲೂ ಸಾಕಷ್ಟು ಸದ್ದು ಮಾಡುತ್ತಿದೆ.

ಇತ್ತೀಚಿಗೆ ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದ್ದು, ಪೋಸ್ಟ್ ಪ್ರೊಡಕ್ಷನ್ ವರ್ಕ್ ಬಿರುಸಿನಿಂದ ಸಾಗಿದೆ. ಅಪಾರವೆಚ್ಚದಲ್ಲಿ ಅದ್ದೂರಿಯಾಗಿ ಮೂಡಿಬರುತ್ತಿರುವ ಈ ಚಿತ್ರಕ್ಕೆ ಹಾಲಿವುಡ್‌ನ ನೂರ ಐವತ್ತಕ್ಕೂ ಅಧಿಕ ಚಿತ್ರಗಳಿಗೆ ಗ್ರಾಫಿಕ್ಸ್ ಕೆಲಸ ಮಾಡಿ, ಆಸ್ಕರ್ ಗೆ ನಾಮಿನೇಟ್ ಆಗಿದ್ದ ಟೊರೊಂಟೊದ ಮಾರ್ಚ್ ವಿ ಎಫ್ ಎಕ್ಸ್ ಕಂಪನಿ ಗ್ರಾಫಿಕ್ಸ್ ಕೆಲಸ ಮಾಡುತ್ತಿದೆ. ಇದು ಈ ಖ್ಯಾತ ಕಂಪನಿ ಗ್ರಾಫಿಕ್ಸ್ ಕೆಲಸ ಮಾಡುತ್ತಿರುವ ಭಾರತದ ಅದರಲ್ಲೂ, ಕನ್ನಡದ ಮೊದಲ ಚಿತ್ರ 45 ಹಾಲಿವುಡ್ ನ ಹೆಸರಾಂತ ತಂತ್ರಜ್ಞರಾದ ಮಿಸ್ಟರ್ ರಾಫೆಲ್ ಹಾಗೂ ಮಿಸ್ಟರ್ ಜಸ್ಟಿನ್ ಅವರ ನೇತೃತ್ವದಲ್ಲಿ ಗ್ರಾಫಿಕ್ಸ್ ಕಾರ್ಯ ನಡೆಯುತ್ತಿದೆ. ಇತ್ತೀಚಿಗೆ 45 ಚಿತ್ರದ ಗ್ರಾಫಿಕ್ಸ್ ಕೆಲಸದ ನಿಮಿತ್ತವಾಗಿ ಟೊರಾಂಟೋದ ಮಾರ್ಚ್ ವಿ ಎಫ್ ಎಕ್ಸ್ ಕಂಪನಿಗೆ ಭೇಟಿ ನೀಡಿದ ಚಿತ್ರಗಳನ್ನು ನಿರ್ದೇಶಕ ಅರ್ಜುನ್ ಜನ್ಯ ಹಂಚಿಕೊಂಡಿದ್ದಾರೆ.

ವಿಟಾಕೀಸ್

ವಿಷ್ಣು ಶಶಿ ಶಂಕರ್ ನಿರ್ದೇಶನದ ಮಲಯಾಳಂ ಹಾರರ್-ಫ್ಯಾಂಟಸಿ ಸಿನಿಮಾ ಸುಮತಿ ವಲವು. ಅರ್ಜುನ್ ಅಶೋಕನ್ ಮತ್ತು ಮಾಳವಿಕಾ ಮನೋಜ್ ಮುಖ್ಯ ಪಾತ್ರಗಳಲ್ಲಿ ಈ ಸಿನಿಮಾದಲ್ಲಿದ್ದಾರೆ. ಅಭಿಲಾಷ್ ಪಿಳ್ಳೈ ಚಿತ್ರಕಥೆ ಬರೆದಿರುವ ಈ ಹಾರರ್ ಥ್ರಿಲ್ಲರ್ ಸಿನಿಮಾ ನವೆಂಬರ್ 30ರಿಂದ ಶೂಟಿಂಗ್ ಆರಂಭಿಸಿದೆ. ಈ ಹಿಂದೆ ಮಲಯಾಳಂನಲ್ಲಿ ಮಲ್ಲಿಕಾಪುರಂ ಸಿನಿಮಾ ನಿರ್ದೇಶನದ ಅನುಭವ ಹೊಂದಿರುವ ವಿಷ್ಣು ಶಶಿ ಇದೀಗ ಈ ವಿಶೇಷ ಸಿನಿಮಾದ ಜತೆಗೆ ಆಗಮಿಸುತ್ತಿದ್ದಾರೆ.

ವಾಟರ್‌ಮ್ಯಾನ್ ಫಿಲ್ಮ್ಸ್ ಎಲ್‌ಎಲ್‌ಪಿ, ಥಿಂಕ್ ಸ್ಟುಡಿಯೋಸ್‌ನ ಸಹಯೋಗದೊಂದಿಗೆ, ತನ್ನ ಮುಂಬರುವ ಚಿತ್ರ ಸುಮತಿ ವಲವು ಚಿತ್ರೀಕರಣದ ಪ್ರಾರಂಭವನ್ನು ಹೆಮ್ಮೆಯಿಂದ ಘೋಷಿಸುತ್ತದೆ. ಈ ಬಹು ನಿರೀಕ್ಷಿತ ಯೋಜನೆಯು ಭಯಾನಕ ಮತ್ತು ಹಾಸ್ಯದ ಅಂಶಗಳನ್ನು ಸಂಯೋಜಿಸುತ್ತದೆ, ಪ್ರೇಕ್ಷಕರಿಗೆ ರೋಮಾಂಚಕ ಮತ್ತು ನಗು ತುಂಬಿದ ಸಿನಿಮೀಯ ಅನುಭವವನ್ನು ನೀಡುತ್ತದೆ. ಚಿತ್ರವು ನವೆಂಬರ್ 30, 2024 ರಂದು ಅದರ ಚಿತ್ರೀಕರಣವನ್ನು ಪ್ರಾರಂಭಿಸಿತು, ಇದು ರೋಮಾಂಚಕಾರಿ ಪ್ರಯಾಣದ ಆರಂಭವನ್ನು ಸೂಚಿಸುತ್ತದೆ.

ಹಾರರ್ ಕಾಮಿಡಿ ಸಿನಿಮಾ

ಸುಮತಿ ವಳವು ಸಿನಿಮಾ ಹಾರರ್ ಕಾಮಿಡಿ ಸಿನಿಮಾ. ನೋಡುಗರನ್ನು ಸೀಟಿನ ತುದಿಗೆ ತಂದು ಕೂರಿಸುವಷ್ಟು ಕಥೆಯನ್ನು ಬಿಗಿಯಾಗಿ ಹೆಣೆಯಲಾಗಿದೆ ಎಂಬುದು ಚಿತ್ರತಂಡದ ಭರವಸೆಯ ಮಾತು. ವಾಟರ್‌ಮ್ಯಾನ್ ಫಿಲ್ಮ್ಸ್ ಎಲ್‌ಎಲ್‌ಪಿ ಮತ್ತು ಥಿಂಕ್ ಸ್ಟುಡಿಯೋಸ್‌ನ ಸಹಯೋಗದಲ್ಲಿ ಸುಮತಿ ವಳವು ಸಿನಿಮಾ ನಿರ್ಮಾಣವಾಗುತ್ತಿದೆ.

ಪಾತ್ರಧಾರಿಗಳು ಯಾರಿದ್ದಾರೆ

ಸುಮತಿ ವಳವು ಸಿನಿಮಾದಲ್ಲಿ ಸ್ಟಾರ್ ಕಲಾವಿದರ ದಂಡೇ ಇದೆ. ಅರ್ಜುನ್ ಅಶೋಕನ್, ಬಾಲು ವರ್ಗೀಸ್, ಗೋಕುಲ್ ಸುರೇಶ್, ಸೈಜು ಕುರುಪ್, ಸಿದ್ಧಾರ್ಥ್ ಬರತನ್, ಮಾಳವಿಕಾ ಮನೋಜ್, ಶ್ರೀಪಥ್ ಯಾನ್, ದೇವಾನಂದ, ಶ್ರವಣ್ ಮುಖೇಶ್, ಗೋಪಿಕಾ ಮುಖೇಶ್, ಅನಿಲ್, ಶಿವದಾ, ಸಿಜಾ ರೋಸ್, ಜಸ್ನ್ಯಾ, ಜಯದೀಶ್ ಚಿತ್ರದಲ್ಲಿದ್ದಾರೆ.

ತಾಂತ್ರಿಕ ಬಳಗ ಹೀಗಿದೆ...

ಸುಮತಿ ವಳವು ಸಿನಿಮಾದ ನಿರ್ದೇಶನದ ಚುಕ್ಕಾಣಿ ಹಿಡಿದವರು ಸೂಪರ್ ಹಿಟ್ ಮಲಿಕಪ್ಪುರಂ ಸಿನಿಮಾ ಮೂಲಕ ಮೆಚ್ಚುಗೆ ಪಡೆದ ನಿರ್ದೇಶಕ ವಿಷ್ಣು ಶಶಿ ಶಂಕರ್. ಮಲ್ಲಿಕಾಪುರಂ ಸೇರಿ ಕ್ಯಾಡವರ್ ಮತ್ತು ಆನಂದ್ ಶ್ರೀಬಾಲಾ ಸಿನಿಮಾಕ್ಕೂ ಕಥೆ ಬರೆದಿದ್ದ ಅಭಿಲಾಷ್ ಪಿಳ್ಳೈ ಸುಮತಿ ವಳವು ಚಿತ್ರಕ್ಕೂ ಕಥೆ ಬರೆದಿದ್ದಾರೆ. ಶಂಕರ್ ಪಿ.ವಿ ಅವರ ಛಾಯಾಗ್ರಾಹಣ, ರಂಜಿನ್ ರಾಜ್ ಸಂಗೀತ, ಶಫೀಕ್ ಮೊಹಮ್ಮದ್ ಅಲಿ ಸಂಕಲನ ಚಿತ್ರಕ್ಕಿದೆ. ಅಜಯ್ ಮಂಗಡ್ ಕಲಾ ನಿರ್ದೇಶಕರಾಗಿ ಕಾರ್ಯನಿರ್ವಹಿಸಲಿದ್ದಾರೆ.

ಮಲ್ಲಿಕಾಪುರಂನಲ್ಲಿ ಸುಮತಿ

ವಾಟರ್ ಮ್ಯಾನ್ ಫಿಲಂಸ್, ಥಿಂಕ್ ಸ್ಟುಡಿಯೋಸ್ ಸಹಯೋಗದಲ್ಲಿ ನಿರ್ಮಾಣ

ಪುಣ್ಯ ಪಾದಕ್ಕೆ ಮುರುಳಿ ಶರಣು

ದಾರಿ ಯಾವುದಯ್ಯ ವೈಕುಂಠಕ್ಕೆ ಚಿತ್ರದ ಖ್ಯಾತಿಯ ನಿರ್ದೇಶಕರಾದ ಸಿದ್ದು ಪೂರ್ಣಚಂದ್ರರವರು ಕಥೆ, ಚಿತ್ರಕಥೆ ಸಂಭಾಷಣೆ ಬರೆದು ನಿರ್ದೇಶನ ಮಾಡಿರುವ ಮತ್ತೊಂದು ಚಿತ್ರ ಪಾದ ಪುಣ್ಯಪಾದ ಇತ್ತೀಚಿಗೆ ಈ ಚಿತ್ರದ ಮೊದಲ ಪೋಸ್ಟರ್ ಅನ್ನು ರೋರಿಂಗ್ ಸ್ಟಾರ್ ಶ್ರೀ ಮುರಳಿ ಅವರು ಬಿಡುಗಡೆ ಮಾಡಿ ಇಡೀ ತಂಡಕ್ಕೆ ಶುಭ ಹಾರೈಸಿದರು.

ಇದೊಂದು ಆನೆ ಕಾಲು ರೋಗಿಯ ಕಥೆ ಯಾಧಾರಿತ ಚಿತ್ರವಾಗಿರುವುದರಿಂದ ಪ್ರತಿಯೊಬ್ಬ ಪ್ರೇಕ್ಷಕನಗೂ ಕೂಡ ಹೊಸ ಆಯಾಮದಲ್ಲಿ ಈ ಚಿತ್ರ ಎಂಬು ಆಶಯ. ಪ್ರತಿಯೊಬ್ಬ ಮನುಷ್ಯನಿಗೂ ಒಂದಲ್ಲ ಒಂದು ರೀತಿಯ ಖಾಯಿಲೆಗಳು ಸಂಭವಿಸಿದಾಗ ಆ ರೋಗಕ್ಕಿಂತ ಮಾನಸಿಕವಾಗಿಯೇ ಯಾತನೆ ಪಡುವುದು ಜಾಸ್ತಿ ಆಗಿರುತ್ತದೆ. ಯಾವುದೇ ರೋಗ ಬಂದರೂ ಕೂಡ ನಾವು ಎದೆಗುಂದದೆ ತಾಳ್ಮೆಯಿಂದ ಅದನ್ನು ಎದುರಿಸಬೇಕು ಎಂಬುದೇ ಈ ಚಿತ್ರದ ಕಥೆಯಾಗಿದೆ. ಈ ಕಥೆಯನ್ನು ಹಲವು ವರ್ಷಗಳಿಂದ ಅಧ್ಯಯನ ಮಾಡಿ ಒಂದು ಚಿತ್ರಕಥೆಯ ರೂಪು ರೇಷೆಗಳನ್ನು ಸಿದ್ಧಪಡಿಸಿ ಆನಂತರ ಇದನ್ನು ಚಿತ್ರವಾಗಿಸಿದ್ದಾರೆ. ಯಾವುದೇ ರೋಗ ಬಂದಿರುವ ವ್ಯಕ್ತಿಯನ್ನು ಯಾವ ರೀತಿ ಪ್ರೀತಿಯಿಂದ ನೋಡಿಕೊಳ್ಳಬೇಕು, ಸಾಂತ್ವನ ಹೇಳಬೇಕು ಎಂಬುದು ಈ ಚಿತ್ರದ ಮುಖಾಂತರ ಕಾಣಿಸುತ್ತದೆ. ಜೊತೆಗೆ ಸಾಮಾಜಿಕ ಪರಿಣಾಮ ಬೀರುವಂತಹ ಚಿತ್ರಗಳು ಇತ್ತೀಚೆಗೆ ಕಡಿಮೆಯಾಗಿರುವುದರಿಂದ ಇಂತಹ ಚಿತ್ರಕ್ಕೆ ಪ್ರೋತ್ಸಾಹ ಕೊಡಬೇಕೆಂಬುದು ಇಡೀ ಚಿತ್ರತಂಡದ ಆಶಯ ಆಗಿದೆ. ಆ ಕಾರಣಕ್ಕಾಗಿಯೇ ಶ್ರೀಮುರಳಿ ಅವರು ಈ ನಿಟ್ಟಿನಲ್ಲಾದರೂ ಹೊಸಬರಿಗೆ ಪ್ರೋತ್ಸಾಹ ನೀಡಬೇಕು ಹೊಸಬರಿಗೆ ದಾರಿಯಾಗಬೇಕು. ಹಾಗಾಗಿ ನಾನು ಈ ಚಿತ್ರದ ಪೋಸ್ಟರ್ ಅನ್ನು ಬಿಡುಗಡೆಗೊಳಿಸುತ್ತಾ ಇದ್ದೀನಿ. ನೀವು ಕೂಡ ಈ ಚಿತ್ರವನ್ನು ನೋಡಬೇಕು ಅನ್ನುವ ಅವರ ಮನದಾಳದ ಮಾತುಗಳನ್ನು ಹಂಚಿಕೊಂಡರು.

ಈ ಚಿತ್ರಕ್ಕೆ ನಾಯಕ ನಟರಾಗಿ ಆಟೋ ನಾಗರಾಜ್ ರವರು ಈ ಪಾತ್ರವನ್ನು ನಿಭಾಯಿಸಿದ್ದಾರೆ. ಈ ಹಿಂದೆ ಅವರು ಆಟೋ ಪ್ರಮೋಷನ್ ಅನ್ನು ಕಳೆದ 18 ವರ್ಷ ಗಳಿಂದಲೂ ಮಾಡಿದಂತವರು, ಅವರು ಮೊದಲ ಬಾರಿಗೆ ನಾಯಕ ನಟರಾಗಿ ಈ ಪಾತ್ರವನ್ನು ನಿರ್ವಹಿಸಿದ್ದಾರೆ. ನಂತರ ರಶ್ಮಿ, ಚೈತ್ರ, ಪ್ರಮೀಳಾ ಸುಬ್ರಹ್ಮಣ್ಯ, ಮನೋಜ್, ಹರೀಶ್ ಕುಂದೂರು, ಬೇಬಿ ರಿದಿ, ಪವಿತ್ರ, ಬಾಲರಾಜ್ ವಾಡಿ, ರೋಹಿಣಿ, ಶಂಕರ್ ಭಟ್, ಪ್ರೀತಿ, ಮೀಸೆ ಮೂರ್ತಿ ಇನ್ನೂ ಮುಂತಾದವರು ಈ ಚಿತ್ರದಲ್ಲಿ ಅಭಿನಯಿಸಿ ದ್ದಾರೆ. ಈ ಚಿತ್ರಕ್ಕೆ ಸಂಗೀತ ಮತ್ತು ಹಿನ್ನೆಲೆ ಸಂಗೀತವನ್ನು ಅನಂತ ಆರ್ಯನ್‌ರವರು ನೀಡಿದ್ದಾರೆ. ಕಲೆ ಬಸವರಾಜ್ ಆಚಾರ್, ವಸ್ತ್ರಾಲಂಕಾರ ನಾಗರತ್ನ ಕೆ. ಎಚ್., ಶಬ್ದ ವಿನ್ಯಾಸ ಶ್ರೀರಾಮ್, ಕಲರಿಂಗ್ ಗಗನ್ ಆರ್, ಸಂಕಲನ ದೀಪು ಸಿ ಎಸ್ ನಿರ್ವಹಿಸಿದ್ದಾರೆ. ಈ ಚಿತ್ರ ಈಗಾಗಲೇ ಸೆನ್ಸಾರ್ ಮಂಡಳಿಯಿಂದ ಯು ಸರ್ಟಿಫಿಕೇಟ್ ಪಡೆದಿದೆ. ಈ ಚಿತ್ರವು ಹಲವಾರು ಚಲನಚಿತ್ರೋತ್ಸವಗಳಿಗೆ ಸ್ಪರ್ಧಿಸಲು ರೆಡಿಯಾಗಿದೆ.

ಕನ್ನಡದ ನೆಲದಲ್ಲಿ ಸೋತ ಪುಷ್ಪ

ಪ್ಯಾನ್ ಇಂಡಿಯಾ ಸಿನಿಮಾವಾಗಿ ಮೂಡಿಬಂದ ಪುಷ್ಪ ಕರುನಾಡಿನಲ್ಲಿ ಮಂಡಿಯೂರಿದೆ. ಪುಷ್ಪ 2 ರಿಲೀಸ್ ಆದಾಗ ಎಲ್ಲರಿಗೂ ನಿರೀಕ್ಷೆ ಹೆಚ್ಚಿತ್ತು. ಅಂತೆಯೇ ಕರುನಾಡಿನ ಪ್ರೇಕ್ಷಕರ ಮನಸೂರೆಗೊಂಡಿದ್ದಾರೆ. ರಶ್ಮಿಕಾ ಮಂದಣ್ಣ ಶ್ರೀವಲ್ಲಿಯಾಗಿ ಮನಗೆದ್ದಿದ್ದು, ತಾರಕ್ ಪೊನ್ನಪ್ಪ ಖದರ್ ಖಳನಾಗಿ ಮನಗಿದ್ದಿದ್ದಾರೆ.

ಪುಷ್ಪ 2ನಲ್ಲಿ ಬಹುತೇಕ ಕನ್ನಡಿಗರೇ ಗಮನಸೆಳೆದಿದ್ದಾರೆ. ಹಾಗಾಗಿಯೇ ಪುಷ್ಪ 2 ಕರುನಾಡಿನಲ್ಲಿ ಉತ್ತಮ ಗಳಿಕೆ ಕಂಡಿದೆ. ಉಳಿದಂತೆ ಪುಷ್ಪ 2 ಹೀರೋಇಸಂಗೆ ಒತ್ತು ನೀಡಿದ್ದು ಮತ್ತೆ ಅದೇ ಹಳೇ ಬೂಟಾಟಿಕೆ ಮುಂದುವರಿಸಿದೆ. ನಾಯಕನಿಗೆ ಹೆಚ್ಚು ಒತ್ತು ನೀಡಿರುವ ಪುಷ್ಪ 2 ಬಿಲ್ಡಪ್‌ಗೆ ಸೀಮಿತವಾಗಿದೆ. ಮೂರು ಗಂಟೆಯ ಸಿನಿಮಾ ಪ್ರೇಕ್ಷಕರಿಕೆ ಬೋರ್ ಹೊಡಿಸಿದೆ. ಹಾಗಾಗಿಯೇ ಕನ್ನಡ ಸಿನಿಮಾ ಮುಂದೆ ಮಂಡಿಯೂರಿದೆ. ಕನ್ನಡ ಸಿನಿಮಾ ಧೀರ ಭಗತ್ ರಾಯ್ ಮುಂದೆ ಪುಷ್ಪ ಮಂಡಿಯೂರಿದೆ.